ಅನುಮತಿ:
† **ಅತೀ ವಂ. ಡಾ॥ ಟಿ. ಅಂತೋಣಿ ಸ್ವಾಮಿ**
ಧರ್ಮಾಧ್ಯಕ್ಷರು,
ಚಿಕ್ಕಮಗಳೂರು ಧರ್ಮಕ್ಷೇತ್ರ

ಕೃತಿ ಪರಿಶೀಲನೆ :
**ವಂ. ಸ್ವಾಮಿ ಎಂ.ಎಫ್. ಡೇವಿಡ್‌ಪ್ರಕಾಶ್,** M.A.,PGDHRM.,
ಸಂಪಾದಕರು - ಪ್ರಕಾಶಕರು
ಸ್ನೇಹ ಜ್ಯೋತಿ ಮಾಸ ಪತ್ರಿಕೆ
ಜ್ಯೋತಿ ನಿಲಯ, ಜ್ಯೋತಿ ನಗರ,
ಚಿಕ್ಕಮಗಳೂರು - 577 102

ಪ್ರಥಮ ಮುದ್ರಣ : ಮಾರ್ಚ್ 2013
ಪುಟಗಳು : 140 + 4
ಪ್ರತಿಗಳು : 2000
ಬೆಲೆ : ರೂ. 50/-

© ಹಕ್ಕುಗಳನ್ನು ಕಾದಿರಿಸಲಾಗಿದೆ.

# ವ್ಯಾಟಿಕನ್ ಡೈಜೆಸ್ಟ್

## (ಪರಿಷ್ಕೃತ ಆವೃತ್ತಿ)

ಕನ್ನಾಡಾನುವಾದ :

**ವಂ. ಜಾ. ಡಿಸೋಜ಼,**

ಶಿವಮೊಗ್ಗ

ಪ್ರಕಾಶನ :

**ಅಮರವಾಣಿ**

ಜ್ಯೋತಿನಿಲಯ, ಜ್ಯೋತಿನಗರ,
ಚಿಕ್ಕಮಗಳೂರು ಧರ್ಮಕ್ಷೇತ್ರ

# ಪರಿವಿಡಿ


| | | | |
|---|---|---|---|
| I | ಪವಿತ್ರ ದೈವಾರಾಧನಾ ವಿಧಿ (ಸಂವಿಧಾನ) | - | 1 |
| II | ಸಾಮಾಜಿಕ ಸಂಪರ್ಕ ಮಾಧ್ಯಮ (ಶಾಸನ) | - | 10 |
| III | ಧರ್ಮಸಭೆ (ಧರ್ಮಶಾಸ್ತ್ರೀಯ ಸಂವಿಧಾನ) | - | 14 |
| IV | ಪ್ರಾಚ್ಯ ಕಥೋಲಿಕ ಧರ್ಮಸಭೆಗಳು (ಶಾಸನ) | - | 27 |
| V | ಕ್ರೈಸ್ತ ಒಗ್ಗಟ್ಟು (ಶಾಸನ) | - | 32 |
| VI | ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರ ಪಾಲನಾ ಅಂತಸ್ತು (ಶಾಸನ) | - | 40 |
| VII | ಧಾರ್ಮಿಕ ಜೀವನದಲ್ಲಿ ಹೊಂದಾಣಿಕೆ ಮತ್ತು ನವೀಕರಣ (ಶಾಸನ) | - | 46 |
| VIII | ಯಾಜಕತ್ವದ ತರಬೇತಿ (ಶಾಸನ) | - | 54 |
| IX | ಕ್ರೈಸ್ತ ಶಿಕ್ಷಣ (ಪ್ರಕಟಣೆ) | - | 60 |
| X | ಕ್ರೈಸ್ತೇತ ಧರ್ಮಗಳೊಂದಿಗೆ ಧರ್ಮಸಭೆಯ ಸಂಬಂಧ (ಪ್ರಕಟಣೆ) | - | 66 |
| XI | ದೈವೀ ಪ್ರಕಟಣೆ (ಸಂವಿಧಾನ) | - | 69 |
| XII | ಶ್ರೀ ಸಾಮಾನ್ಯರ ಪ್ರೇಷಿತತ್ವ (ಶಾಸನ) | - | 77 |
| XIII | ಧಾರ್ಮಿಕ ಸ್ವಾತಂತ್ರ್ಯ (ಪ್ರಕಟಣೆ) | - | 84 |
| XIV | ಯಾಜಕರ ಜೀವನ ಮತ್ತು ಸೇವಾವೃತ್ತಿ (ಶಾಸನ) | - | 90 |
| XV | ಧರ್ಮಸಭೆಯ ಧರ್ಮಪ್ರಸಾರ ಕಾರ್ಯ (ಶಾಸನ) | - | 98 |
| XVI | ಆಧುನಿಕ ಪ್ರಪಂಚದಲ್ಲಿ ಧರ್ಮಸಭೆ (ಪಾಲನಾ ಸಂವಿಧಾನ) | - | 106 |


# ಸಂದೇಶ

ಧರ್ಮಸಭೆಯ ಚರಿತ್ರೆಯಲ್ಲಿ ಹಾಗೂ ಜೀವನದಲ್ಲಿ 1962 ರಿಂದ 1965 ರವರೆಗೆ ರೋಮ್ ನಗರದ ವ್ಯಾಟಿಕನ್‌ನಲ್ಲಿ ನಡೆದ **"ದ್ವಿತೀಯ ವ್ಯಾಟಿಕನ್ ಮಹಾ ಸಮ್ಮೇಳನ"** ಒಂದು ಮಹತ್ತರ ಮೈಲಿಗಲ್ಲಾಗಿದೆ. ಧರ್ಮಸಭೆಯ ವಿವಿಧ ಕ್ಷೇತ್ರಗಳಲ್ಲಿ ಹಾಗೂ ಸ್ಥಳಗಳಲ್ಲಿ ಬದಲಾವಣೆ-ಸುಧಾರಣೆಯನ್ನು ತರಲು ವ್ಯಾಟಿಕನ್ ಸಮ್ಮೇಳನ ದಿಕ್ಸೂಚಿಯಾಯಿತು. ಗುರು-ಕನ್ಯಾಸ್ತ್ರೀಯರು ತಮ್ಮ ತರಬೇತಿಯ ವೇಳೆಯಲ್ಲಿ ಇದರ ಅಧ್ಯಯನವನ್ನು ಸ್ವಲ್ಪ ಮಟ್ಟಿಗಾದರೂ ಮಾಡಿರುತ್ತಾರೆ. ಅದರ ಬಗ್ಗೆ ಅಲ್ಪ-ಸ್ವಲ್ಪ ಜ್ಞಾನ-ತಿಳುವಳಿಕೆಯನ್ನು ಗಳಿಸಿಕೊಂಡಿರುತ್ತಾರೆ. ಆದರೆ ಶ್ರೀ ಸಾಮಾನ್ಯರಿಗೆ ಈ ಸಮ್ಮೇಳನದ ಅರ್ಥ, ಇದರ ಗುರಿ-ಧ್ಯೇಯೋದ್ದೇಶಗಳ ಬಗ್ಗೆ, ಇದರ ಸಂವಿಧಾನ-ಶಾಸನಗಳ ಬಗ್ಗೆ ಅಷ್ಟಾಗಿ ತಿಳಿದಿರುವುದಿಲ್ಲ. ಅಷ್ಟೇಕೆ ಈ ವ್ಯಾಟಿಕನ್ ಸಮ್ಮೇಳನಕ್ಕೆ ನಾವು ಅಪರಿಚಿತರು ಎಂದೇಳಿದರೆ ಅತೀಶಯೋಕ್ತಿಯಾಗಲಾರದು. 1966 ರಲ್ಲಿ ಬೆಂಗಳೂರು ಮಹಾಧರ್ಮಕ್ಷೇತ್ರ ಕರ್ನಾಟಕ ಧರ್ಮಸಭೆಯಲ್ಲಿ ಪ್ರಪ್ರಥಮವಾಗಿ ವ್ಯಾಟಿಕನ್ ಮಹಾ ಸಮ್ಮೇಳನದಲ್ಲಿ ಚರ್ಚಿತಗೊಂಡ 16 ಶಾಸನಗಳ ಸಂಕ್ಷಿಪ್ತ ನಿರೂಪಣೆಯನ್ನು ಕನ್ನಡ ಹಾಗೂ ಇಂಗ್ಲೀಷಿನಲ್ಲಿ ಪ್ರಕಟಿಸಿತ್ತು. ಆದರೆ ಈಗ ಅದರ ಪ್ರತಿಗಳು ಶ್ರೀ ಸಾಮಾನ್ಯರಿಗೆ ಲಭ್ಯವಾಗುತ್ತಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ವರ್ಷ ತಾಯಿ ಧರ್ಮಸಭೆ ವಿಶ್ವಾಸ ವರ್ಷದೊಂದಿಗೆ ದ್ವಿತೀಯ ವ್ಯಾಟಿಕನ್ ಮಹಾ ಸಮ್ಮೇಳನದ 50ನೇ ವರ್ಷದ ಸುವರ್ಣೋತ್ಸವ ಸ್ಮರಣೆಯನ್ನು ಮಾಡುತ್ತಿದೆ. ಈ ನಿಟ್ಟಿನಲ್ಲಿ ಇಂಗ್ಲೀಷಿನ **'ವ್ಯಾಟಿಕನ್ ಡೈಜೆಸ್ಟ್'** ಪುಸ್ತಕವನ್ನು ಭಾಷಾಂತರಿಸಿ, ಕನ್ನಡದ 2ನೇ ಪರಿಷ್ಕೃತ ಆವೃತ್ತಿಯನ್ನು, ಚಿಕ್ಕಮಗಳೂರು ಧರ್ಮಕ್ಷೇತ್ರದ **'ಅಮರವಾಣಿ'** ಪ್ರಕಾಶನ ಸಂಸ್ಥೆ ಹೊರತರುತ್ತಿದೆ. ಇದನ್ನು ಕನ್ನಡಕ್ಕೆ ಭಾಷಾಂತರಿಸಿ, ಮತ್ತೊಮ್ಮೆ ಕರ್ನಾಟಕ ಧರ್ಮಸಭೆಯ ದೈವಪ್ರಜೆಗೆ ನೀಡುತ್ತಿದ್ದಾರೆ **ಅತೀ ವಂ. ಜಾರ್ಜ್ ಡಿಸೋಜ಼.** ಇವರಿಗೆ ನನ್ನ ಮನಃಪೂರ್ವಕ ಅಭಿನಂದನೆಗಳು. ಇವರ ಕ್ರೈಸ್ತ ಸಾಹಿತ್ಯ ಸೇವೆಗೆ ನಾನು ಅಭಿವಂದನೆಗಳನ್ನು, ದೇವರ ಆಶೀರ್ವಾದಗಳನ್ನು ಅರ್ಪಿಸುತ್ತೇನೆ. ಈ ಸುಸಂದರ್ಭದಲ್ಲಿ ಈ ಪುಸ್ತಕವನ್ನು ಹೊರ ತರುತ್ತಿರುವ **"ಅಮರವಾಣಿ ಪ್ರಕಾಶನ ಸಂಸ್ಥೆಗೆ"** ಹಾಗೂ ಅದರ ನಿರ್ದೇಶಕರಾಗಿರುವ **ವಂ. ಸ್ವಾಮಿ ಮೋಸೆಸ್** ರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**"ವ್ಯಾಟಿಕನ್ ಡೈಜೆಸ್ಟ್"** ಈ ಪುಸ್ತಕ ಸರ್ವ ಓದುಗರಿಗೆ ನೆರವಾಗಲಿ. ಧರ್ಮಸಭೆಯ ಗುರಿ-ಧ್ಯೇಯೋದ್ದೇಶಗಳನ್ನು ಒದಿ, ಮನನ ಮಾಡಿ, ದೇವರ ಸಾಮ್ರಾಜ್ಯವನ್ನು ಕಟ್ಟಲು, ಯೇಸು ಕ್ರಿಸ್ತರಿಗೆ ಯೋಗ್ಯ ಸಾಕ್ಷಿಗಳಾಗಿ ಬಾಳಲು ಈ ಪುಸ್ತಕ ಸತ್ಪ್ರೇರಣೆಯಾಗಲಿ.

ತ್ರೈಯೇಕ ದೇವರ ಅನಂತ ಕೃಪಾಶೀರ್ವಾದಗಳೊಂದಿಗೆ,

ಕ್ರಿಸ್ತರಲ್ಲಿ ನಿಮ್ಮ ತಂದೆ,
**† ಅತಿ ವಂ. ಡಾ॥ ಟಿ. ಅಂತೋಣಿ ಸ್ವಾಮಿ**
ಚಿಕ್ಕಮಗಳೂರು ಧರ್ಮಾಧ್ಯಕ್ಷರು
ಹಾಗೂ ಪ್ರಾಂತೀಯ ದೈವಾರಾಧನಾ ವಿಧಿ ಆಯೋಗದ ಅಧ್ಯಕ್ಷರು

# I ಪವಿತ್ರ ದೈವಾರಾಧನಾ ವಿಧಿ

## (ಸಂವಿಧಾನ)

## ಪೀಠಿಕೆ

ನಾವು ನೈಜ್ಯ, ಚೇತನಭರಿತ ಮತ್ತು ಸಂಪೂರ್ಣ ಕ್ರೈಸ್ತರಾಗಬೇಕಾದರೆ ದೈವಾರಾಧನಾ ವಿಧಿಯ ಬಗ್ಗೆ ಒಲವನ್ನು ತೋರಬೇಕು. ದ್ವಿತೀಯ ವ್ಯಾಟಿಕನ್ ಸಮ್ಮೇಳನದ ದೃಷ್ಠಿಯಲ್ಲಿ ಅದು ಕ್ರೈಸ್ತತ್ವವನ್ನು ನಮ್ಮಲಿ ತುಂಬುವ ಪ್ರಮುಖ ಸಂಪನ್ಮೂಲವಾಗಿದೆ. ಅದು ವಿಶ್ವಾಸದ ಬಾಳನ್ನು ಜೀವಿಸುವ ಪ್ರಮುಖ ಮಾಧ್ಯಮವಾಗಿದೆ ಮತ್ತು ಕ್ರಿಸ್ತರಿಗೆ ಸಾಕ್ಷಿ ಕೊಡುವ ಸಾಧನವಾಗಿದೆ. ಆದುದರಿಂದ ದೈವಾರಾಧನಾ ವಿಧಿಯ ನವೀಕರಣ ಮತ್ತು ಪ್ರೋತ್ಸಾಹ ಸಮ್ಮೇಳನದ ಕಾಳಜಿಯಾಗಿತ್ತು. ಈ ವಿಧಿಗೆ ಹೊಸ ಚೇತನ ತುಂಬಿ ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಅದನ್ನು ನವೀಕರಿಸುವ ಉದ್ದೇಶವನ್ನು ಹೊಂದಿತ್ತು. ಇದೇ ಪವಿತ್ರ ದೈವಾರಾಧನಾ ವಿಧಿಯ ಬಗ್ಗೆ ಸಂವಿಧಾನದ ಪ್ರಾರಂಭದ ಹೆಜ್ಜೆ.

# I ಸಾಮಾನ್ಯ ವಿಧಿ ನಿಯಮಗಳು :

## ದೈವಾರಾಧನಾ ವಿಧಿಯ ಲಕ್ಷಣ ಮತ್ತು ಪ್ರಾಮುಖ್ಯತೆ :

ಎಲ್ಲ ಜನರ ರಕ್ಷಣೆಯನ್ನು ಅಪೇಕ್ಷಿಸುವ ದೇವರು ತಮ್ಮ ಪುತ್ರನನ್ನು ನಮ್ಮಂತೆಯೇ ಒಬ್ಬ ಮಾನವನಾಗಲು ಕಳುಹಿಸಿದರು. ಅವರು ದೇವರೂ ಮಾನವರೂ ಆಗಿ ದೇವರಿಗೂ ಮನುಷ್ಯರಿಗೂ ನಡುವೆ ಮಧ್ಯಸ್ಥರಾಗಲೆಂದು ಇಚ್ಛಿಸಿದರು. ಅವರು ತಮ್ಮ ಜೀವನ, ಮರಣ, ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಮುಖಾಂತರ ನಮ್ಮನ್ನು ದೇವರೊಡನೆ ಸಂಧಾನಗೊಳಿಸಿದರು. ಜೊತೆಗೆ ನಮ್ಮ ಪರವಾಗಿ ದೇವರಿಗೆ ಪರಿಪೂರ್ಣ ಆರಾಧನೆಯನ್ನು ಸಲ್ಲಿಸಿದರು. ದೇವರನ್ನು ಆರಾಧಿಸುವ ಮತ್ತು ಮಾನವರನ್ನು ಪಾವನಗೊಳಿಸುವ ಇಮ್ಮಡಿ ಸೇವೆಯಲ್ಲಿ ನಾವು ಭಾಗಿಗಳಾಗಬೇಕೆಂದು ಕ್ರಿಸ್ತರು ತಮ್ಮ ಧರ್ಮಸಭೆಯನ್ನು ಸ್ಥಾಪಿಸಿದರು. ಅವರು ರಕ್ಷಣಾ ಶುಭ ಸಂದೇಶವನ್ನು ಸರ್ವ ಸೃಷ್ಟಿಗಳಿಗೂ ಸಾಕಲು ತಮ್ಮ ಪ್ರೇಷಿತರನ್ನು ಕಳುಹಿಸಿದರು. ಪಾಸ್ಕ ರಹಸ್ಯವನ್ನು ಎಲ್ಲ ಯುಗಗಳಲ್ಲೂ, ಸ್ಥಳಗಳಲ್ಲೂ ಪ್ರತ್ಯಕ್ಷ ಮತ್ತು ವಾಸ್ತವಗೊಳಿಸಲು ಸಂಸ್ಕಾರಗಳನ್ನು ಸ್ಥಾಪಿಸಿದರು. ಅವು ನಾವು ಪಾಪ ಮತ್ತು ಮರಣದಿಂದ ಅವರಲ್ಲಿಗೆ ಹಾದು ಹೋಗುವ ಮಾರ್ಗಗಳಾಗಿವೆ. ಇದೇ ದೈವಾರಾಧನಾ ವಿಧಿ: ದೈವ ಪ್ರಜೆಯಾದ ನಾವೆಲ್ಲರೂ ಜೊತೆಗೂಡಿ ಶುಭಸಂದೇಶವನ್ನು ಸಾರುತ್ತೇವೆ ಮತ್ತು ಕ್ರಿಸ್ತರ ರಕ್ಷಣಾ ಮತ್ತು ಆರಾಧನಾ ಕ್ರಿಯೆಯಲ್ಲಿ ಇಲ್ಲೇ ಮತ್ತು ಈಗಲೇ ಸಹಭಾಗಿಗಳಾಗುತ್ತೇವೆ.

ಈ ಕ್ರಿಯೆಯನ್ನು ಸಾಧ್ಯವಾಗುವಂತೆ ಮಾಡಲು ಕ್ರಿಸ್ತರು ಧರ್ಮಸಭೆಯಲ್ಲಿ ನಿರಂತರ ವಿಶೇಷವಾಗಿ ದೈವಾರಾಧನಾ ವಿಧಿಗಳಲ್ಲಿ ಪ್ರತ್ಯಕ್ಷವಾಗಿದ್ದಾರೆ. ಅವರು ದಿವ್ಯ ಬಲಿಪೂಜೆಯಲ್ಲಿ ತಮ್ಮ ಯಾಜಕರಲ್ಲಿ ಮತ್ತು ಪ್ರತ್ಯೇಕವಾಗಿ ರೊಟ್ಟಿ ಮತ್ತು ದ್ರಾಕ್ಷಾರಸದ ರೂಪದಲ್ಲಿ ಇದ್ದಾರೆ. ಇತರ ಸಂಸ್ಕಾರಗಳಲ್ಲಿ ಕ್ರಿಸ್ತರು ಕ್ರಿಯಾತ್ಮಕವಾಗಿದ್ದಾರೆ. ಪವಿತ್ರ ಗ್ರಂಥದ ಪಠಣವಾಗುತ್ತಿರುವಾಗ ಅವರೇ ನಮ್ಮೊಡನೆ ಮಾತನಾಡುತ್ತಾರೆ. ಅವರ ಹೆಸರಿನಲ್ಲಿ ಜನರು ಪ್ರಾರ್ಥಿಸಲು ಜೊತೆಗೂಡಿರುವಾಗ ಅವರು ನಿಸ್ಸಂದೇಹವಾಗಿ ಪ್ರತ್ಯಕ್ಷವಾಗಿರುತ್ತಾರೆ.



ಪ್ರತಿಯೊಂದು ದೈವಾರಾಧನಾ ವಿಧಿ ಕ್ರಿಸ್ತರ ಮತ್ತು ಧರ್ಮಸಭೆಯ ಕ್ರಿಯೆಯಾಗಿದ್ದು, ಬೇರೆ ಯಾವ ಕಾರ್ಯವೂ ಅದಕ್ಕೆ ಸರಿಸಮಾನವಾಗುವುದಿಲ್ಲ. ಅಂದರೆ ಇತರ ಚಟುವಟಿಕೆಗಳು ಅನಗತ್ಯವೆಂದಲ್ಲ. ಜನರು ದೈವಾರಾಧನೆಯಲ್ಲಿ ಭಾಗವಹಿಸಲು ಬರುವ ಮೊದಲು ಅವರು ವಿಶ್ವಾಸಿಸುವವರೂ, ಮನಪರಿವರ್ತನೆ ಹೊಂದಿದವರೂ ಆಗಿರಬೇಕು. ದೈವಾರಾಧನಾ ವಿಧಿ ಧರ್ಮಸಭೆಯ ಚಟುವಟಿಕೆಗಳ ಗುರಿಯೂ ಅದರ ಸರ್ವಶಕ್ತಿಯ ಮೂಲವೂ ಆಗಿರುತ್ತದೆ. ಮಾನವರು ದೇವರ ಮಕ್ಕಳಾಗಿ ತಮ್ಮ ತಂದೆಯನ್ನು ಸ್ತುತಿಸಲು, ದಿವ್ಯಬಲಿಪೂಜೆಯಲ್ಲಿ ಪಾಲ್ಗೊಳ್ಳಲು, ಪ್ರಭು ಭೋಜನವನ್ನು ಭುಜಿಸಲು ಸಭೆ ಸೇರಬೇಕು. ಹೀಗೆ ಅವರು ವಿಶ್ವಾಸದಿಂದ ಸ್ವೀಕರಿಸಿದ್ದನ್ನು ತಮ್ಮ ದೈನಂದಿನ ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು. ಇದೇ ಎಲ್ಲಾ ಪ್ರೇಷಿತ ಕಾರ್ಯಗಳ ಗುರಿ ಉದ್ದೇಶ.

ನಮ್ಮ ಆಧ್ಯಾತ್ಮಿಕ ಜೀವನ ಕೇವಲ ದೈವಾರಾಧನಾ ಪ್ರಾರ್ಥನೆಗೆ ಸೀಮಿತವಾಗಿಲ್ಲ. ಕ್ರಿಸ್ತ ಭಕ್ತನು ತನ್ನ ಸಹೋದರರೊಡನೆ ಸೇರಿ ಪ್ರಾರ್ಥಿಸಲು ಕರೆಯಲ್ಪಟ್ಟಿದ್ದಾನೆ ಎಂಬುದು ನಿಜ. ಆದರೆ ಅವನು ತನ್ನ ಒಳಕೊಠಡಿಯೊಳಗೆ ಹೋಗಿ ಅಲ್ಲಿ ತಂದೆ ದೇವರಲ್ಲಿ ಗುಪ್ತವಾಗಿ ಪ್ರಾರ್ಥಿಸುವುದು ಅಗತ್ಯ. ಅವನು ತನ್ನ ಇಡೀ ಬಾಳನ್ನು ಆರಾಧನಾ ಶೈಲಿಯಲ್ಲಿ ನಡೆಸಬೇಕು. ಅಂಗೀಕೃತ ಜನಪ್ರಿಯ ಭಕ್ತಿ ಕಾರ್ಯಗಳು ಅಮೂಲ್ಯವಾಗಿದ್ದು ಅವು ಆರಾಧನಾ ವಿಧಿಯಿಂದ ಹೊರಹೊಮ್ಮಿ ಆರಾಧನಾ ವಿಧಿಗೇ ನಮ್ಮನ್ನು ಕರೆದೊಯ್ಯುವಂತಿರಬೇಕು.

## ದೈವಾರಾಧನಾ ವಿಧಿಯ ಅನುಷ್ಠಾನ

ಎಲ್ಲಾ ದೈವಾರಾಧನಾ ವಿಧಿಗಳಲ್ಲಿ ಪೂರ್ಣ ಜ್ಞಾನ ಮತ್ತು ಬುದ್ಧಿಯಿಂದ ತಾನು ಮಾಡುತ್ತಿರುವುದು ಏನೆಂದು ಗ್ರಹಿಸಿಕೊಂಡು ಅವುಗಳಲ್ಲಿ ಭಾಗವಹಿಸುವುದು ದೀಕ್ಷಾಸ್ನಾನ ಪಡೆದ ಪ್ರತಿ ಕ್ರೈಸ್ತನ ಹಕ್ಕು ಮತ್ತು ಕರ್ತವ್ಯ. ಆರಾಧನಾ ವಿಧಿಯಲ್ಲಿ ಮಾನವನು ದೇವರನ್ನು ಎದುರುಗೊಳ್ಳುತ್ತಾನೆ. ಇದು ನೈಜ್ಯ ಕ್ರೈಸ್ತ ಮನೋಭಾವವನ್ನು ಬೆಳೆಸಿಕೊಳ್ಳಲು ಇರುವ ಪ್ರಮುಖ ಮತ್ತು ಪರ್ಯಾಯವಿಲ್ಲದ ಬುಗ್ಗೆ. ಈ ಪ್ರಕ್ರಿಯೆಯನ್ನು ನಾವು ಪೂರ್ಣ ಪ್ರಜ್ಞೆ ಮತ್ತು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವುದು ಎನ್ನುತ್ತೇವೆ. ಎಲ್ಲಾ ಪಾಲನಾ ಮತ್ತು ದೈವಾರಾಧನಾ ವಿಧಿಯ ನವೀಕರಣದ ಪ್ರಥಮ ಉದ್ದೇಶ ಇದೇ.

## ದೈವಾರಾಧಾನಾ ವಿಧಿಯ ಸುಧಾರಣೆ

ಪ್ರತಿಯೊಬ್ಬರೂ ದೈವಾರಾಧನಾ ವಿಧಿಯಲ್ಲಿ ಅರ್ಥವರಿತು ಸಕ್ರಿಯ ಪಾತ್ರಧಾರಿಯಾಗಬೇಕಾದರೆ ವಿಧಿವಿಧಾನಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು ಅನಿವಾರ್ಯವಾಗುತ್ತದೆ. ಈ ವಿಧಿಗಳಲ್ಲಿ ಕೆಲವು ಅಂಶಗಳು ದೈವೀ ಮೂಲವನ್ನು ಹೊಂದಿರುವುದರಿಂದ ಬದಲಿಸಲಾಗುವುದಿಲ್ಲ. ಆದರೆ ಇತರ ಕೆಲವು ಅಂಶಗಳನ್ನು ಮಾರ್ಪಡಿಸಲು ಸಾಧ್ಯ ಮತ್ತು ಮಾರ್ಪಡಿಸುವುದು ಅಗತ್ಯ. ಏಕೆಂದರೆ ಅವು ಆರಾಧನಾ ವಿಧಿಯ ಒಳ ಅರ್ಥಕ್ಕೆ ಅನುಗುಣವಾಗಿಲ್ಲ, ಆದುದರಿಂದ ಈ ಬದಲಾವಣೆಯನ್ನು ಕಂಡು ನಾವು ಬೆರಗಾಗಬೇಕಿಲ್ಲ. ಭಯಪಡಬೇಕಿಲ್ಲ. ಅವು ಆರಾಧನಾ ವಿಧಿಯನ್ನು ನಾಶಗೊಳಿಸದೆ ನಿಚ್ಚಳವೂ ಅರ್ಥಭರಿತವೂ ಆಗುವಂತೆ ಮಾಡುತ್ತವೆ. ಈ ಬದಲಾವಣೆಗಳನ್ನು ಧರ್ಮಸಭೆಯ ಅಧಿಕಾರಿಗಳಾದ ಜಗದ್ಗುರುಗಳು ಮತ್ತು ಧರ್ಮಾಧ್ಯಕ್ಷರುಗಳು ಮಾಡುವುದರಿಂದ ಅವುಗಳನ್ನು ಸಂತೋಷದಿಂದ ಸ್ವಾಗತಿಸಬೇಕು.

ಬೈಬಲ್ ಪ್ರಾರ್ಥನಾ ವಿಧಿಗಳನ್ನು ಗುರುಗಳಿಲ್ಲದ ಸಂದರ್ಭಗಳಲ್ಲಿ ವಿಶೇಷವಾಗಿ ಪ್ರೋತ್ಸಾಹಿಸತಕ್ಕದ್ದು. ಈ ಪ್ರಾರ್ಥನಾ ಕೂಟದ ನೇತೃತ್ವವನ್ನು ಸೇವಾದರ್ಶಿ ಅಥವಾ ಧರ್ಮಾಧ್ಯಕ್ಷರಿಂದ ಅಧಿಕಾರ ಪಡೆದ ವ್ಯಕ್ತಿ ವಹಿಸಿಕೊಳ್ಳತಕ್ಕದ್ದು.

ಸ್ಥಳೀಯ ಭಾಷೆಯನ್ನು ಬಲಿಪೂಜೆಯಲ್ಲಿ ಸಾಧ್ಯವಾದ ಮಟ್ಟಿಗೆ ಸೂಕ್ತ ಅಧಿಕಾರಿಗಳ ಆದೇಶದಂತೆ ಬಳಸಬೇಕು. ಅದರ ಬಳಕೆಯನ್ನು ಇತರ ಸಂಸ್ಕಾರಗಳ ಆಚರಣೆಗೂ ವಿಸ್ತರಿಸಬೇಕು.

## ಸ್ಥಳೀಯ ಸಂಪ್ರದಾಯ ಮತ್ತು ಸಂಸ್ಕೃತಿಗಳ ಅಳವಡಿಕೆ

ಕಟ್ಟುನಿಟ್ಟಿನ ಏಕರೂಪತೆ ಆರಾಧನಾ ವಿಧಿಗೆ ತಕ್ಕುದಲ್ಲ. ವಿಧಿಯನ್ನು ವಿವಿಧ ಗುಂಪು ಪ್ರದೇಶ ಮತ್ತು ಜನರಿಗೆ ಅನುಗುಣವಾಗಿದ್ದು ಸಾಧ್ಯವಾದಂತೆ ಸ್ಥಳೀಯ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಪ್ರತಿರೂಪಿಸುವಂತಿರಬೇಕು. ಈ ದಿಸೆಯಲ್ಲಿ ಮೂಲಭೂತ ಬದಲಾವಣೆಗಳೂ ಅಗತ್ಯವೆನಿಸಬಹುದು. ಅಂಥಹ ಬದಲಾವಣೆಗಳನ್ನು ಧರ್ಮಾಧ್ಯಕ್ಷರು ಮಾತ್ರ ಪವಿತ್ರ ಪೀಠದ ಅನುಮತಿಯಿಂದ ಜಾರಿಗೊಳಿಸಬಹುದು.

## ಧರ್ಮಕ್ಷೇತ್ರ ಮತ್ತು ಕೇಂದ್ರದಲ್ಲಿ ಆರಾಧನಾ ವಿಧಿಯ ಘೋಷಣೆ

ತಮ್ಮ ಮುಂದೆಯ ಪಾಲಕರಾದ ಧರ್ಮಾಧ್ಯಕ್ಷರ ಸುತ್ತ ದೈವ ಪ್ರಜೆಯು ಸಭೆ ಸೇರಿರುವಾಗ ಧರ್ಮಸಭೆ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಬಿಂಬಿಸುತ್ತದೆ. ಧರ್ಮಾಧ್ಯಕ್ಷರು ತಮ್ಮ ಪ್ರಧಾನ ದೇವಾಲಯದಲ್ಲಿ ಗುರು ಮತ್ತು ಭಕ್ತರೊಂದಿಗೆ ಭಾನುವಾರದ ಬಲಿಪೂಜೆಯನ್ನು ಅರ್ಪಿಸಿದಾಗ ಸಾಕ್ಷಾತ್ಕಾರಗೊಳ್ಳುತ್ತದೆ. ಪ್ರಧಾನ ದೇವಾಲಯ ಧರ್ಮಕ್ಷೇತ್ರದಲ್ಲಿ ದೈವಾರಾಧನೆಯ ಕೇಂದ್ರವಾಗಿದೆ.

ಇಂಥಹ ಅವಕಾಶಗಳು ಅಗಿಂದಾಗ್ಗೆ ಲಭ್ಯವಾಗುವುದಿಲ್ಲ. ಆದುದರಿಂದ ಸಮುದಾಯ ಪ್ರಜ್ಞೆ, ಧರ್ಮಾಧ್ಯಕ್ಷರೊಂದಿಗೆ ಅನ್ಯೋನ್ಯತೆಯನ್ನು ಅವರ ಪ್ರತಿನಿಧಿಗಳಾದ ಧರ್ಮಕೇಂದ್ರದ ಗುರುಗಳು ಭಾನುವಾರದಲ್ಲಿ ಭಕ್ತರೊಂದಿಗೆ ಪೂಜಾರ್ಪಣೆ ಮಾಡುವುದರ ಮುಖಾಂತರ ವ್ಯಕ್ತಪಡಿಸಬಹುದು. ಹೀಗೆ ಧರ್ಮಕೇಂದ್ರದ ದೇವಾಲಯ ಆ ಕೇಂದ್ರದ ಆರಾಧನಾ ವಿಧಿಯ ಪ್ರಮುಖ ಸ್ಥಳವಾಗುತ್ತದೆ. ಧರ್ಮಕೇಂದ್ರದ ಗುರುಗಳು ತಂದೆಯ ಸ್ಥಾನದಲ್ಲಿದ್ದು ಕೇಂದ್ರದ ಜನರಲ್ಲಿ ಕುಟುಂಬ ಸಂಬಂಧವನ್ನು ಪೋಷಿಸುತ್ತಾರೆ.

ಧರ್ಮಕ್ಷೇತ್ರ ಮತ್ತು ಧರ್ಮಕೇಂದ್ರಗಳಲ್ಲಿ ಕ್ರೈಸ್ತ ಶ್ರೀ ಸಾಮಾನ್ಯರು ದೈವಾರಾಧನಾ ವಿಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು. ಪವಿತ್ರಾತ್ಮರ ಪ್ರತ್ಯಕ್ಷತೆಯೇ ಈ ಸಂಚಲನದ ನೇತಾರರು ಎನ್ನಬಹುದು.



ಪವಿತ್ರ ಗ್ರಂಥವೇ ದೈವಾರಾಧನಾ ವಿಧಿಯ ಆಧಾರ. ಅದರಿಂದಲೇ ವಾಚನ, ಕೀರ್ತನೆ, ಕ್ರಿಯೆ ಮತ್ತು ಚಿಹ್ನೆಗಳನ್ನು ಆರಿಸಿಕೊಳ್ಳಲಾಗಿದೆ. ಈ ಕಾರಣ ನಾವು ಪವಿತ್ರ ಗ್ರಂಥಕ್ಕೆ ಪ್ರಾಮುಖ್ಯತೆಯನ್ನು ಕೊಟ್ಟು ಅದರ ಬಗ್ಗೆ ಉಜ್ವಲ ಮತ್ತು ಸಜೀವ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು.

## ದೈವಾರಾಧನಾ ವಿಧಿ ಸಾಮೂಹಿಕ ಆರಾಧನೆ

ಪ್ರತಿ ಆರಾಧನಾ ಸೇವೆ ಸಮುದಾಯಕ ಆಚರಣೆಯಾಗಿದೆ. ಅದರಲ್ಲಿ ದೈವ ಪ್ರಜೆ ಪಿತೃ ಸಮಾನ ಧರ್ಮಾಧ್ಯಕ್ಷರು ಅಥವಾ ಅವರ ಪ್ರತಿನಿಧಿಯೊಂದಿಗೆ ಐಕ್ಯಗೊಳ್ಳುತ್ತದೆ. ಅಲ್ಲಿ ಹಾಜರಿರುವ ಪ್ರತಿ ಸದಸ್ಯನೂ ವೈಯಕ್ತಿಕವಾಗಿ ಅದರಲ್ಲಿ ಪಾಲುಗಾರನಾಗಬೇಕು. ಈ ವಿಧಿಯ ನಿರ್ವಹಣೆಗೆಂದು ಪ್ರತ್ಯೇಕ ಪಾತ್ರವನ್ನು ಹೊಂದಿದ ಪುರೋಹಿತರು, ಸೇವಾದರ್ಶಿ, ಪೀಠ ಸೇವಕ, ವಾಚಕ, ವ್ಯಾಖ್ಯಾನಕಾರ, ಅಥವಾ ಗಾಯನ ವೃಂದದ ಸದಸ್ಯರು ಇತ್ಯಾದಿ ತಮ್ಮ ಜವಾಬ್ದಾರಿಯನ್ನು ನೈಜ್ಯ ಭಕ್ತಿಯಿಂದಲೂ ಉಚ್ಚ ಘನತೆಯಿಂದಲೂ ನಿರ್ವಹಿಸಬೇಕು. ಎಲ್ಲಾ ಪಾತ್ರಧಾರಿಗಳು ಸೂಕ್ತ ತರಬೇತಿಯನ್ನು ಪಡೆದೇ ತಮ್ಮ ಜವಾಬ್ದಾರಿಯನ್ನು ನೆರವೇರಿಸಬೇಕು.

ಅಧಿಕ ಜನರನ್ನು ಒಳಗೊಂಡ ಸಾಮುದಾಯಿಕ ಆಚರಣೆಗಳಿಗೆ ನಾವು ಪ್ರಾಶಸ್ತ್ಯ ಕೊಡಬೇಕೇ ವಿನ: ಖಾಸಗಿ ಕಾರ್ಯಕ್ರಮಗಳಿಗಲ್ಲ. ಅವುಗಳಲ್ಲಿ ಎಲ್ಲಾ ಭಕ್ತವಿಶ್ವಾಸಿಗಳು ಅಧಿಕ ಅಭಿಮಾನದಿಂದ ಹಾಡುಗಾರಿಕೆ, ಶ್ಲೋಕಕ್ಕೆ ಪ್ರತಿಶ್ಲೋಕ, ಅಂಗವಿನ್ಯಾಸ, ಸೂಕ್ತ ಸಮಯದಲ್ಲಿ ಗಂಭೀರ ಮೌನದೊಂದಿಗೆ ಭಾಗವಹಿಸಬೇಕು. ದೈವಾರಾಧನಾ ಆಚರಣೆಯಲ್ಲಿ ಯಾವ ವ್ಯಕ್ತಿಯೂ ಪ್ರತ್ಯೇಕ ಸ್ಥಾನಮಾನಗಳನ್ನು ಕೋರಬಾರದು.

## ಆರಾಧನಾವಿಧಿ ಬೋಧನಾ ಮಾಧ್ಯಮ

ದೈವಾರಾಧನಾವಿಧಿಯಲ್ಲಿ ದೇವರ ವಾಕ್ಯವಿದ್ದು ಅದು ನಮ್ಮ ಬೋಧನೆಗೆ ಯಕ್ತವಾಗಿದೆ. ಅದು ಯೇಸುಕ್ರಿಸ್ತರಲ್ಲಿ ನಮ್ಮ ರಕ್ಷಣೆಯನ್ನು ಘೋಷಿಸುವುದರಿಂದ ಈ ವಾಚನಗಳನ್ನು ಗೌರವದಿಂದ ಆಲಿಸಬೇಕು ಮಾತ್ರವಲ್ಲ ಭಕ್ತಿಭಾವದಿಂದ ಪ್ರತಿಸ್ಪಂದಿಸಬೇಕು.

ಆರಾಧನಾ ವಿಧಿಯ ಬೋಧನಾ ಭಾಗದಿಂದ ಪೂರ್ಣಫಲವನ್ನು ಪಡೆಯಬೇಕಾದರೆ ವಿಧಿವಿಧಾನಗಳು ಸಂಕ್ಷಿಪ್ತವಾಗಿರಬೇಕು, ನಿಚ್ಚಳವಾಗಿರಬೇಕು, ಸುಲಭ ಸಾಧ್ಯವಾಗಿದ್ದು, ಅರ್ಥಮಾಡಿಕೊಳ್ಳುವಂತಿರಬೇಕು. ಅನಗತ್ಯ ಪುನರಾವರ್ತನೆಗಳನ್ನು ತ್ಯಜಿಸಬೇಕು. ಪವಿತ್ರ ಗ್ರಂಥದ ಅಧಿಕ ವಾಚನಗಳ ಆಯ್ಕೆಯಲ್ಲೂ ವೈವಿಧ್ಯತೆ ಇರಬೇಕು.

ಪ್ರಬೋಧನೆ ಅಥವಾ ಪ್ರವಚನ ಆರಾಧನಾ ವಿಧಿಯ ಅವಿಭಾಜ್ಯ ಅಂಗ. ಅದನ್ನು ಬಲಿಪೂಜೆಯ ಸಂದರ್ಭದಲ್ಲಿ ಮಾತ್ರವಲ್ಲದೆ ಆರಾಧನಾ ವಿಧಿಯು ಸೂಚಿಸುವಾಗಲೆಲ್ಲಾ ನೀಡುವುದು ಉಪಯುಕ್ತ. ಪ್ರಬೋಧನೆಯ ವಸ್ತು ವಿಷಯಗಳನ್ನು ಪವಿತ್ರ ಗ್ರಂಥ ಮತ್ತು ಆರಾಧನಾ ವಿಧಿಯಿಂದ ಆಯ್ದುಕೊಳ್ಳಬೇಕು. ಮಾನವ ರಕ್ಷಣಾ ಚರಿತ್ರೆಯಲ್ಲಿ ದೇವರು ಎಸಗಿರುವ ಮಹತ್ಕಾರ್ಯಗಳನ್ನು ಅದು ಸಾರುವಂತಿರಬೇಕು. ಬಲಿಪೂಜೆಯಲ್ಲಿ ಅದು ಕ್ರಿಸ್ತರ ಸಜೀವ ಮತ್ತು ಸಕ್ರಿಯ ಪ್ರತ್ಯಕ್ಷತೆಯನ್ನು ವಿವಿಧ ಸಂದರ್ಭಗಳಲ್ಲಿ ಘೋಷಿಸುವಂತಿರಬೇಕು. ಗಂಭೀರ ಕಾರಣವಿಲ್ಲದೆ ಭಾನುವಾರಗಳಲ್ಲಿ ಪ್ರಬೋಧನೆಯನ್ನು ರದ್ದು ಮಾಡಲಾಗದು.

# II ಸಾಮಾನ್ಯ ವಿಧಿ ನಿಯಮಗಳ ಅಳವಡಿಕೆ

## ಪರಮ ಪ್ರಸಾದದ ರಹಸ್ಯ

ನಮ್ಮ ಪ್ರಭು ಮತ್ತು ರಕ್ಷಕರಾದ ಕ್ರಿಸ್ತರು ಕಟ್ಟಕಡೆಯ ಭೋಜನದ ಸಂದರ್ಭದಲ್ಲಿ ಪರಮ ಪ್ರಸಾದವನ್ನು ಸ್ಥಾಪಿಸಿದರು. ಪ್ರಸ್ತುತ ಕಾಲದಲ್ಲೂ ಅವರ ರಕ್ಷಣಾ ಕಾರ್ಯ ಮತ್ತು ಆರಾಧನೆಯಲ್ಲಿ ನಾವು ಭಾಗಿಗಳಾಗುವಂತೆ ತಮ್ಮ ಮರಣ ಮತ್ತು ಪುನರುತ್ಥಾನವನ್ನು ಕಾಲಾಂತ್ಯದ ವರೆಗೆ ಅಂದರೆ ಅವರ ಪುನರಾಗಮನದವರೆಗೆ ನಿರಂತರಗೊಳಿಸಲು ಈ ಸಂಸ್ಕಾರವನ್ನು ಸ್ಥಾಪಿಸಿದರು. ಈ ಪರಮ ಪ್ರಸಾದ ಅವರ ಮರಣ ಮತ್ತು ಪುನರುತ್ಥಾನದ ಸ್ಮಾರಕವಾಗಿದ್ದು, ಅವರ ಪ್ರೀತಿಯ ಸಂಸ್ಕಾರವೂ, ಐಕ್ಯತೆಯ ಸಂಕೇತವೂ ಪ್ರೀತಿಯ ಬಂಧನವೂ ಆಗಿದೆ. ಅದು ಪಾಸ್ಕ ಭೋಜನವಾಗಿದ್ದು ಸ್ವರ್ಗೀಯ ಮಹಿಮೆಯ ಮುನ್ಸೂಚಿಯಾಗಿದೆ.

ಪರಮ ಪ್ರಸಾದ ಕ್ರೈಸ್ತ ಬಾಳಿನ ಕೇಂದ್ರವಾಗಿದೆ. ಅದರ ಆಚರಣೆಯಲ್ಲಿ ನಾವು ಪೂರ್ಣ ಪ್ರಜ್ಞೆಯಿಂದಲೂ ಕ್ರಿಯಾತ್ಮಕವಾಗಿಯೂ ನಾವು ಏನನ್ನು ಮಾಡುತ್ತಿದ್ದೇವೆ ಎಂಬ ತಿಳುವಳಿಕೆಯಿಂದ ಪಾಲ್ಗೊಳ್ಳಬೇಕು. ಕೇವಲ ಬಾಹ್ಯ ಪಾಲ್ಗೊಳ್ಳುವಿಕೆಯಲ್ಲೇ ತೃಪ್ತರಾಗಬಾರದು. ಯೇಸುಸ್ವಾಮಿಯ ಸ್ವಅರ್ಪಣೆಯಲ್ಲಿ ನಾವು ಭಾಗಿಗಳಾಗಿ ಏಕೈಕ ಮಧ್ಯಸ್ಥರಾದ ಅವರ ಮುಖಾಂತರ ತಂದೆಯಾದ ದೇವರಿಗೆ ನಮ್ಮನ್ನೇ ಸಮರ್ಪಿಸಿ ಕೃತಜ್ಞತೆಯನ್ನು ಸಲ್ಲಿಸಬೇಕು. ಹೀಗಾದರೆ ಮಾತ್ರ ದೇವರೊಂದಿಗೆ ಮತ್ತು ನೆರೆಹೊರೆಯವರೊಂದಿಗೆ ದಿನದಿಂದ ದಿನಕ್ಕೆ ಅಧಿಕ ಅಧಿಕವಾಗಿ ಆಕರ್ಷಿತರಾಗಿ ಒಮ್ಮನಸ್ಸುಳ್ಳವರಾಗುತ್ತೇವೆ. ಹೀಗೆ ಕಟ್ಟಕಡೆಗೆ ದೇವರು ಸರ್ವದರಲ್ಲೂ ಸರ್ವಸ್ವವಾಗುವುದು.

ಇದುವರೆಗೆ ಮಾಡಿರುವ ಮತ್ತು ಇನ್ನು ಮುಂದೆ ಮಾಡಲಿರುವ ಬದಲಾವಣೆಗಳ ಉದ್ದೇಶವೇನೆಂದರೆ ದಿವ್ಯಬಲಿಯ ಎಲ್ಲಾ ಭಾಗಗಳನ್ನು ಜನರು ಅರ್ಥಮಾಡಿಕೊಂಡು ಅದರಲ್ಲಿ ಪಾಲ್ಗೊಳ್ಳುವುದು. ಪೂಜೆಯ ಮೊದಲನೆಯ ಭಾಗವಾದ ದೈವವಾಕ್ಯ ವಿಧಿಯಿಂದ ಯಾರೂ ತಪ್ಪಿಸಿಕೊಳ್ಳಬಾರದು. ಇಲ್ಲಿ ನಾವು ವಾಚನಗಳ ಮುಖಾಂತರ ದೇವರ ವಾಕ್ಯವನ್ನು ಆಲಿಸುತ್ತೇವೆ. ಅದು ನಮ್ಮ ಬಾಳಿಗೆ ಹೇಗೆ ಅನ್ವಯವಾಗುತ್ತದೆ ಎಂಬುದನ್ನು ಪ್ರಬೋಧನೆ ತಿಳಿಸುತ್ತದೆ. ವಿಶ್ವಾಸಿಗಳ ಪ್ರಾರ್ಥನೆಯೊಂದಿಗೆ ಈ ಭಾಗ ಮುಕ್ತಾಯಗೊಳ್ಳುತ್ತದೆ. ಈ ಪ್ರಾರ್ಥನೆಯನ್ನು ಧರ್ಮಸಭೆಯ, ಸರ್ಕಾರದ, ಸ್ಥಳೀಯ ಸಮುದಾಯದ ಮತ್ತು ಎಲ್ಲಾ ಜನಾಂಗಗಳ ಹಲವಾರು ಅಗತ್ಯಗಳಿಗೆ ಇಡೀ ದೈವಪ್ರಜೆ ಮಾಡುವ ಸಾರ್ವಜನಿಕ ಪ್ರಾರ್ಥನೆ ಎಂದು ಭಾವಿಸಬೇಕು.

ಬಲಿಪೂಜೆಯ ಎರಡನೆಯ ಭಾಗವಾದ ಪರಮ ಪ್ರಸಾದ ವಿಧಿಯಲ್ಲಿ ಪರಮ ಪ್ರಸಾದ ಸ್ವೀಕಾರವು ನಮ್ಮ ಸಂಪೂರ್ಣ ಪಾಲ್ಗೊಳ್ಳುವಿಕೆಯನ್ನು ಸಹಜವಾಗಿ ಸೂಚಿಸುತ್ತದೆ. ಆದುದರಿಂದ ಪ್ರತಿಯೊಬ್ಬರೂ ಅದನ್ನು ಸ್ವೀಕರಿಸಲು ಪ್ರಯತ್ನಿಸಬೇಕು. ಈ ಸಂಪೂರ್ಣ ಪಾಲ್ಗೊಳ್ಳುವಿಕೆಯ ಪ್ರಾಮುಖ್ಯತೆಯನ್ನು ತೋರ್ಪಡಿಸಲು ಕೆಲವು ಸಂದರ್ಭಗಳಲ್ಲಿ, ಉದಾ: ವಧುವರರು ವಿವಾಹದ ವಿಧಿಯಲ್ಲಿ, ಪರಮಪ್ರಸಾದವನ್ನು ರೊಟ್ಟಿ ಮತ್ತು ದ್ರಾಕ್ಷಾರಸದ ರೂಪದಲ್ಲಿ ಸ್ವೀಕರಿಸುವ ಅವಕಾಶವಿದೆ.



ಅಂತೆಯೇ ಸಂಪೂರ್ಣ ಪಾಲ್ಗೊಳ್ಳುವಿಕೆಗೆ ಪರಮ ಪ್ರಸಾದದ ಸ್ವೀಕಾರ ಮುಖ್ಯ ಎಂಬುದನ್ನು ದೃಢೀಕರಿಸಲು ಕ್ರಿಸ್ತ ಜಯಂತಿ ಮತ್ತು ಪಾಸ್ಕ ಹಬ್ಬದ ಸಂದರ್ಭದಲ್ಲಿ ಪರಮ ಪ್ರಸಾದವನ್ನು ಮಧ್ಯರಾತ್ರಿ ಪೂಜೆಯಲ್ಲಿ ಸ್ವೀಕರಿಸಿದ್ದರೂ ಹಗಲಿನ ಪೂಜೆಯಲ್ಲಿ ಪುನ: ಸ್ವೀಕರಿಸಲು ಅನುಮತಿ ಕೊಡಲಾಗಿದೆ.

ಪ್ರಾಚೀನ ಕಾಲದಲ್ಲಿ ಹಲವಾರು ಗುರುಗಳು ಜೊತೆಗೂಡಿ ಸಹಬಲಿ ಪೂಜಾರ್ಪಣೆಯನ್ನು ಮಾಡುತ್ತಿದ್ದರು. ಈ ಸಂಪ್ರದಾಯವನ್ನು ಪುನ: ಚಾಲನೆಗೆ ತರಲಾಗಿದೆ. ಅದರ ಉದ್ದೇಶ ಪರಮ ಪ್ರಸಾದ ಸಮಾರಂಭಕ್ಕೆ ಸಂಭ್ರಮವನ್ನು ತರುವುದು ಮಾತ್ರವಲ್ಲದೆ ಪ್ರಧಾನ ಮತ್ತು ಏಕೈಕ ಯಾಜಕರಾದ ಯೇಸುಕ್ರಿಸ್ತರ ಯಾಜಕತ್ವದಲ್ಲಿ ಎಲ್ಲ ಗುರುಗಳು ಐಕ್ಯವಾಗಿದ್ದಾರೆ ಎಂಬ ಅಂಶಕ್ಕೆ ಒತ್ತು ಕೊಡುವುದು.

## ಇತರ ಸಂಸ್ಕಾರಗಳು ಮತ್ತು ಸಂಸ್ಕರಣಗಳು

ಸಂಸ್ಕಾರಗಳ ಉದ್ದೇಶವೇನೆಂದರೆ ಮಾನವರನ್ನು ಪುನೀತರನ್ನಾಗಿ ಮಾಡುವುದು. ಧರ್ಮಸಭೆಯನ್ನು ಕಟ್ಟುವುದು ಮತ್ತು ದೇವರನ್ನು ಆರಾಧಿಸುವುದು. ಇವು ಕ್ರಿಸ್ತರ ರಕ್ಷಣಾ ಚಟುವಟಿಕೆ ಮತ್ತು ಮಾನವನ ವಿಶ್ವಾಸದ ಪ್ರತ್ಯುತ್ತರದ ಸಂಕೇತಗಳಾಗಿವೆ. ಇವು ವ್ಯಕ್ತವಾಗುವುದು ಆರಾಧನೆ ಮತ್ತು ಪರಪ್ರೀತಿಯಲ್ಲಿ. ಯೇಸುಸ್ವಾಮಿ ನಮಗೆ ಕೊಟ್ಟ ಈ ಸಂಕೇತಗಳನ್ನು ವಿಭಿನ್ನ ಜನಾಂಗಗಳಿಗೆ ಅರ್ಥಭರಿತವೂ ಉಚಿತವೂ ಆಗುವಂತೆ ಮಾಡಬೇಕು. ಆದುದರಿಂದಲೇ ಎಲ್ಲ ಸಂಸ್ಕಾರಗಳ ವಿಧಿ ನಿಯಮಗಳನ್ನು ಪುನ: ಪರಿಶೀಲಿಸಿ ಸಂಸ್ಕಾರಗಳಲ್ಲಿ ಅತ್ಯುನ್ನತ ಪರಮ ಪ್ರಸಾದ ಸಂಸ್ಕಾರಕ್ಕೆ ಸಂಬಂಧಿತವಾಗುವಂತೆ ನಿಚ್ಚಳಗೊಳಿಸಬೇಕು.

ದೀಕ್ಷಾಸ್ನಾನ, ದೃಢೀಕರಣ, ಪಶ್ಚಾತ್ತಾಪ ಮತ್ತು ಯಾಜಕಾಭಿಷೇಕ ಸಂಸ್ಕಾರಗಳ ವಿಧಿವಿಧಾನಗಳು ಬದಲಾಯಿಸಲಾಗುವುದು.ವ್ಯಾದಿಸ್ಥರ ಅಭ್ಯಂಗವನ್ನು ಮರಣದ ಅವಸ್ಥೆಯಲ್ಲಿರುವವರಿಗೆ ಕೊಡುವ ಅಂತಿಮ ಅಭ್ಯಂಗವೆಂದು ಪರಿಗಣಿಸದೆ, ರೋಗಗ್ರಸ್ಥರ ಸ್ವಸ್ತತಾ ಸಂಸ್ಕಾರವೆಂದು ತಿಳಿಯಬೇಕು. ಕಾಯಿಲೆಯಿಂದಿರುವ ಅಥವಾ ವೃದ್ಧಾಪ್ಯದಲ್ಲಿರುವ ವ್ಯಕ್ತಿ ಮರಣದ ಅಪಾಯ ತಲುಪುವನು ಎಂದು ತಿಳಿದಾಕ್ಷಣ ಕೊಡಬೇಕಾದ ಸಂಸ್ಕಾರವಿದು. ಮರಣಪಾಯ ಗಳಿಗೆಯ ತನಕ ಅದನ್ನು ತಡೆಹಿಡಿಯುವ ಅಗತ್ಯವಿಲ್ಲ.

ವಿವಾಹ ಸಂಸ್ಕಾರದ ವಿಧಿ ವಿಧಾನಗಳನ್ನು ಪುನ: ಪರಿಷ್ಕರಿಸಬೇಕು, ಉತ್ತಮಗೊಳಿಸಬೇಕು. ಅವು ಸಂಸ್ಕಾರದ ವರಪ್ರಸಾದವನ್ನು ನಿಚ್ಚಳವಾಗಿ ಸೂಚಿಸಿ, ವಧುವರರಿಬ್ಬರು ತಮ್ಮ ಜವಾಬ್ದಾರಿಯನ್ನು ಮನವರಿಕೆಯಾಗುವಂತೆ ತಿಳಿಸಬೇಕು. ಈ ಹೊಸ ವಿಧಿಯ ಸ್ಥಳೀಯ ಸ್ತುತ್ಯಾರ್ಹ ಪದ್ಧತಿ ಮತ್ತು ಸಂಪ್ರದಾಯಗಳಿಗೆ ಅವಕಾಶ ಮಾಡಿಕೊಡುತ್ತದೆ.

ಧರ್ಮಸಭೆ ನೀಡುವ ಸಂಸ್ಕರಣಗಳು ಅದರ ಸೇವೆಯ ಮುಖಾಂತರ ನಮಗೆ ಲಭಿಸುವ ರಕ್ಷಣೆಯ ಸಂಕೇತಗಳಾಗಿದ್ದು, ಅವು ನಮ್ಮನ್ನು ಪುನೀತಗೊಳಿಸುತ್ತವೆ. ಸಂಸ್ಕಾರಗಳ ಸ್ವೀಕಾರಕ್ಕೆ ಸಜ್ಜುಗೊಳಿಸುತ್ತವೆ. ಅವು ನಮ್ಮ ದೈನಂದಿನ ಜೀವನದ ಹಲವಾರು ಸಂದರ್ಭಗಳನ್ನು ಪಾವನಗೊಳಿಸುತ್ತವೆ. ಈ ಸಂಸ್ಕರಣಗಳಲ್ಲಿ ಕೆಲವನ್ನು ನಾವು ಇಲ್ಲಿ ಉದಾಹರಿಸಬಹುದು: ತೀರ್ಥದ ಬಳಕೆ, ವ್ಯಕ್ತಿ ಮತ್ತು ವಸ್ತುಗಳ ಆಶೀರ್ವಚನ, ವಸತಿ, ವಾಹನ, ಹೊಲಗದ್ದೆಗಳ

ಪವಿತ್ರೀಕರಣ, ವಿಭೂತಿ, ಬುಧವಾರದಂದು ವಿಭೂತಿಯನ್ನು ಗರಿಗಳ ಹಬ್ಬದಂದು ಗರಿಗಳನ್ನು ಪವಿತ್ರೀಕರಿಸುವುದು; ಧಾರ್ಮಿಕ ವ್ಯಕ್ತಿಗಳ ವ್ರತ ವಾಗ್ದಾನಗಳ ಸ್ವೀಕಾರ ಮತ್ತು ದಿವಂಗತರ ಶವಸಂಸ್ಕಾರ. ಶವಸಂಸ್ಕಾರದ ನವೀಕೃತ ವಿಧಿ, ಮರಣದ ಮೇಲೆ ಜಯಗಳಿಸುವ ಅಂಶವನ್ನು ಸ್ಪಷ್ಟವಾಗಿ ತಿಳಿಸಬೇಕು. ಸೂಕ್ತ ಸ್ಥಳೀಯ ಸಂಪ್ರದಾಯಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗುವುದು.

## ಧರ್ಮಸಭೆಯ ಪ್ರಾರ್ಥನೆ

ಆದಿ ಕಾಲದಿಂದಲೂ ಕ್ರೈಸ್ತ ಭಕ್ತರು ಜೊತೆಗೂಡಿ ದೇವರನ್ನು ಸ್ತುತಿಸುತ್ತಾ ಹಗಲು ರಾತ್ರಿಯನ್ನು ಪವಿತ್ರೀಕರಿಸಿದ್ದಾರೆ. ಧರ್ಮಸಭೆಯ ಪ್ರಾರ್ಥನೆಯನ್ನು ಯಾಜಕರು ಮತ್ತು ಇತರರು ವಿಧಿಯುಕ್ತವಾಗಿ ಪ್ರಾರ್ಥಿಸಿದಾಗ ಕ್ರಿಸ್ತರೇ ಧರ್ಮಸಭೆಯೊಂದಿಗೆ ಸೇರಿ ತಮ್ಮ ತಂದೆಯೊಂದಿಗೆ ಮಾತನಾಡುತ್ತಾರೆ.

ಗುರುಗಳು ಮತ್ತು ಧಾರ್ಮಿಕ ವ್ಯಕ್ತಿಗಳು ಧರ್ಮಸಭೆಯ ಪರವಾಗಿ ದೇವರಿಗೆ ಈ ಅದ್ಭುತಕರ ಸ್ತುತಿ ಗೀತೆಯನ್ನು ಹಾಡಲು ನಿಯೋಜಿತರಾಗಿದ್ದಾರೆ. ಅವರು ಭಕ್ತರ ಹೆಸರಿನಲ್ಲಿ ವಿನಂತಿಸಲೂ ನಿಯಮಿತರಾಗಿದ್ದಾರೆ. ಶ್ರೀ ಸಾಮಾನ್ಯರು ಸಹ ಅದರಲ್ಲಿ ಭಾಗವಹಿಸಲು ಅಥವಾ ಅವುಗಳಲ್ಲಿ ಕೆಲವು ಭಾಗಗಳನ್ನಾದರೂ ಒಂಟಿಯಾಗಿ ಪ್ರಾರ್ಥಿಸಲು ಆಮಂತ್ರಿತರಾಗಿದ್ದಾರೆ. ಈ ಅಧಿಕೃತ ಪ್ರಾರ್ಥನೆ ಭಕ್ತಿಯ ಮಹಾ ಬುಗ್ಗೆಯಾಗಿದೆ. ಅದರಲ್ಲಿ ಪಾಲ್ಗೊಳ್ಳುವುದರ ಮುಖಾಂತರ ನಮ್ಮ ವೈಯಕ್ತಿಕ ಮತ್ತು ಏಕಾಂತ ಪ್ರಾರ್ಥನೆಯನ್ನು ಫಲಪ್ರದಗೊಳಿಸಬಹುದು. ಭಾನುವಾರದ ಸಂಧ್ಯಾ ಪ್ರಾರ್ಥನೆಯನ್ನು ಧರ್ಮಕೇಂದ್ರದ ದೇವಾಲಯದಲ್ಲಿ ಏರ್ಪಡಿಸುವುದರಿಂದ ಶ್ರೀ ಸಾಮಾನ್ಯರನ್ನು ಈ ಬಹಿರಂಗ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಆಕರ್ಷಿಸಬಹುದು.

## ದೈವಾರಾಧನಾ ವರ್ಷ

ಧರ್ಮಸಭೆಯು ಪ್ರತಿ ಯುಗದಲ್ಲಿ ಕ್ರಿಸ್ತರ ರಕ್ಷಣಾ ಕಾರ್ಯವನ್ನು ಎರಡು ವಿಧದಲ್ಲಿ ನವೀಕರಿಸುತ್ತದೆ. ಭಾನುವಾರದ ಆಚರಣೆ ಮತ್ತು ದೈವಾರಾಧನಾ ವರ್ಷದ ಪಂಚಾಂಗದ ಮೂಲಕ ಈ ಆಚರಣೆ ನೆರವೇರುತ್ತದೆ. ವಾರಕ್ಕೊಮ್ಮೆ ಪ್ರಭುವಿನ ದಿನವೆಂದು ಕರೆಯಲಾಗುವ ಭಾನುವಾರದಂದು ಪ್ರಭುವಿನ ಪುನರುತ್ಥಾನವನ್ನು ಸ್ಮರಿಸುತ್ತೇವೆ, ಸಂಭ್ರಮಿಸುತ್ತೇವೆ. ವರ್ಷಕ್ಕೊಮ್ಮೆ ಪಾಸ್ಕ ಹಬ್ಬದ ಸಂದರ್ಭದಲ್ಲಿ ವಿಶೇಷ ವೈಭವದೊಂದಿಗೆ ಈ ದಿನವನ್ನು ಆಚರಿಸುತ್ತೇವೆ.

ಪ್ರತಿ ಭಾನುವಾರ ಭಕ್ತರು ಪ್ರಭುವಿನ ಪುನರುತ್ಥಾನವನ್ನು ಧರ್ಮಕೇಂದ್ರದ ದೇವಾಲಯದಲ್ಲಿ ಪುನ: ಆಚರಿಸಲು ಸಭೆ ಸೇರುತ್ತಾರೆ. ಪ್ರಭು ಪುನರುತ್ಥಾನದಿಂದ ಹೊರ ಹೊಮ್ಮುವ ಕೃತಜ್ಞತೆ, ಆನಂದ ಮತ್ತು ಸ್ವಾತಂತ್ರ್ಯವನ್ನು ಸಂಭ್ರಮಿಸಲು ನಾವು ಆ ದಿನದಲ್ಲಿ ಪ್ರಯತ್ನಿಸಬೇಕು.

ತಪಸ್ಸುಕಾಲ ಎರಡು ಉದ್ದೇಶಗಳನ್ನು ಹೊಂದಿದೆ: ಮೊದಲನೆಯದಾಗಿ ನಾವು "ಪಾಪಕ್ಕೆ ಸತ್ತು" ಕ್ರಿಸ್ತರ ಮರಣದಲ್ಲಿ ಪಾಲುಗಾರರಾಗಲು ನಮ್ಮನ್ನು ಆಹ್ವಾನಿಸುತ್ತದೆ. ಪಾಸ್ಕ ಜಾಗರಣೆಯ ಸಂದರ್ಭದಲ್ಲಿ ನಾವು ದೀಕ್ಷಾಸ್ನಾನದ ವಾಗ್ದಾನಗಳನ್ನು ನವೀಕರಿಸುವಾಗ ಈ ಪಾಲ್ಗೊಳ್ಳುವಿಕೆಯನ್ನು ನಾಟಕೀಯವಾಗಿ ಅಭಿನಯಿಸುತ್ತೇವೆ. ಆದುದರಿಂದಲೇ ನಾವು ತಪಸ್ಸು ಕಾಲದಲ್ಲಿ ಸಾಮಾನ್ಯವಾಗಿ ತಪಶ್ಚರ್ಯೆಯಲ್ಲಿ ಮಗ್ನರಾಗುತ್ತೇವೆ. ಎರಡನೆಯದಾಗಿ ತಪ್ಪಸ್ಸು ಕಾಲ ನವೀಕೃತ, ಪರಿಪೂರ್ಣ



ಕ್ರಿಸ್ತೀಯ ಜೀವನಕ್ಕೆ ಸಿದ್ಧತೆಯಾಗಿದೆ. ಕ್ರಿಸ್ತರ ಪುನರುತ್ಥಾನದ ಆನಂದದಲ್ಲಿ ನಾವು ಮುಳುಗಿ ಹೊಸದಾಗಿ ಉದಯಿಸುವಂತೆ ಅದು ನಮ್ಮನ್ನು ಸಿದ್ಧಗೊಳಿಸುತ್ತದೆ.

ಪಂಚಾಂಗದ ವಿವಿಧ ಕಾಲಗಳು ನಮ್ಮ ರಕ್ಷಣಾ ಚರಿತ್ರೆಯನ್ನು ಪ್ರತಿ ವರ್ಷವೂ ತನ್ನ ಸೌರಭವನ್ನು ನಮ್ಮ ಮುಂದೆ ತೆರೆದಿಡುತ್ತದೆ. ಅದು ಕ್ರಿಸ್ತರೊಡನೆ ಪ್ರತಿ ರಕ್ಷಣಾ ಕಾರ್ಯವನ್ನು ಪುನ: ಬೋಧಿಸಲು ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಆದುದರಿಂದ ಸಂತರ ಹಬ್ಬಗಳ ಮೇಲೆ ಆರಾಧನಾ ಪಂಚಾಂಗದಲ್ಲಿ ನಮೂದಿತ ಕಾಲ ಪ್ರಾಮುಖ್ಯತೆಯನ್ನು ಹೊಂದಿದೆ. ಸಂತರು ಈ ರಕ್ಷಣಾ ಜೀವನವನ್ನು ಸಮರ್ಪಕವಾಗಿ ಬಾಳಿದ್ದರಿಂದ ನಾವು ಅವರನ್ನು ಸನ್ಮಾನಿಸುತ್ತೇವೆ. ಅವರಿಗಿಂತಲೂ ಮಿಗಿಲಾಗಿ ವಿಶೇಷ ವಾತ್ಸಲ್ಯದಿಂದ ನಾವು ದೇವಮಾತೆ ಮರಿಯಮ್ಮನವರನ್ನು ಗೌರವಿಸುತ್ತೇವೆ. ಇವರು ತಮ್ಮ ಪುತ್ರನ ರಕ್ಷಣಾ ಕಾರ್ಯದ ಅವಿಭಾಜ್ಯ ಅಂಗವಾಗಿದ್ದರು.

## ಪವಿತ್ರ ಸಂಗೀತ

ಸಂಗೀತವು ಆದಿಯಿಂದಲೂ ದೈವಾರಾಧನಾ ವಿಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾ ಬಂದಿದೆ. ಅದು ಪ್ರಾರ್ಥನೆಗೆ ಮಾಧುರ್ಯವನ್ನು ತುಂಬುವುದಲ್ಲದೆ ಜನರನ್ನು ಒಂದು ಸಮುದಾಯವನ್ನಾಗಿ ಬಂಧಿಸುತ್ತದೆ. ಅದು ಆರಾಧನಾ ವಿಧಿಗೆ ಸೊಬಗನ್ನು ಕೊಡುತ್ತದೆ. ಈ ಕಾರಣ ಎಲ್ಲರೂ ಪವಿತ್ರ ಸಂಗೀತದಲ್ಲಿ ಪಾಲ್ಗೊಳ್ಳುವುದು ಅಗತ್ಯ.

ಆರಾಧನಾ ವಿಧಿಯಲ್ಲಿ ಬಳಸಲಾಗುವ ಸಂಗೀತವು ಸಭಿಕರ ವಿಶ್ವಾಸ ಮತ್ತು ಹೃನ್ಮನಗಳನ್ನು ಚೇತನಗೊಳಿಸುವಂತೆ ಸೂಕ್ತವಾದ ಸ್ಥಳೀಯ ಸಂಪ್ರದಾಯವನ್ನೂ, ಆಧುನಿಕ ಸಾಧನಗಳನ್ನೂ ಜೊತೆಗೂಡಿಸಿಕೊಳ್ಳಬೇಕು. ಸರ್ವೇ ಸಾಮಾನ್ಯವಾಗಿ ಸಂಗೀತವು ಸರಳವಾಗಿರಬೇಕು. ಹಾಗಾದರೆ ಎಲ್ಲ ಸಭಿಕರು ಸುಲಭವಾಗಿ ಹಾಡಲು ಶಕ್ತರಾಗುತ್ತಾರೆ. ಗಾಯನ ವೃಂದವನ್ನು ಹೆಚ್ಚು ಗಮನವಿಟ್ಟು ಸಿದ್ಧಮಾಡಬೇಕು. ಅವರು ದೇವಾಲಯದ ಸಮುದಾಯವನ್ನು ಹಾಡುಗಾರಿಕೆಯಲ್ಲಿ ನಡೆಸುವಂತಿರಬೇಕು.

## ಪವಿತ್ರ ಕಲೆ

ಧರ್ಮಸಭೆಯು ಕಲೆಯ ಮುಖಾಂತರವೂ ದೇವರನ್ನು ಸ್ತುತಿಸುತ್ತದೆ. ಕಲೆಯು ದೈವಿಕ ಸತ್ಯಗಳನ್ನು ಚಿಹ್ನೆ, ಸಂಕೇತಗಳ ಮುಖಾಂತರ ವ್ಯಕ್ತ ಪಡಿಸುವಂತಿರಬೇಕು. ಈ ಕಲೆ ಭಕ್ತ ವಿಶ್ವಾಸಿಗಳನ್ನು ರಂಜಿಸುವಂತಿರಬೇಕು. ಅದು ದೈವಾರಾಧನೆಯಲ್ಲಿ ಭಾಗವಹಿಸಲು ಪ್ರೇರಕವಾಗಿರಬೇಕು. ಧರ್ಮಸಭೆಯ ಕೆಲ ಸರಳ ಸಭ್ಯವೂ, ಘನ ಗಂಭೀರರ್ಯವುಳ್ಳದ್ದಾಗಿ ವಿಶಿಷ್ಟ ಸೌಂದರ್ಯವನ್ನು ಬಿಂಬಿಸುತ್ತಿರಬೇಕು. ಪುರಾತನ ಕಲೆಯನ್ನು ಬಳಸುತ್ತಿರುವಂತೆ ಸ್ಥಳೀಯ ಕಲಾಸಿರಿಯನ್ನು ಆಧುನಿಕ ಮನೋಭಾವದೊಂದಿಗೆ ಸಮ್ಮಿಳಿತಗೊಳಿಸಿರಬೇಕು.

ಧರ್ಮಾಧ್ಯಕ್ಷರುಗಳು ಸ್ವರೂಪಗಳ ಸಂಖ್ಯೆಯನ್ನು ಮೊಟಕುಗೊಳಿಸಬೇಕು. ಅಂತೆಯೇ ಮಿತಿಮೀರಿದ ಅಲಂಕಾರಕ್ಕೆ ತಡೆಹಾಕಿ ದೈವಾರಾಧನಾ ವಿಧಿಗೆ ಮತ್ತು ಆಕರ್ಷಣೆಗೆ ಮಾರಕವಾದುದನ್ನು ತೆಗೆದು ಹಾಕಬೇಕು. ಈ ಕಾರಣಕ್ಕಾಗಿಯೇ ಯಾಜಕರ ಪೂಜಾವಸ್ತ್ರಗಳು ಸಹ ಗೌರವಾನ್ವಿತವೂ ಸರಳವೂ ಆಗಿರಬೇಕು. ಅವು ಆರೋಗ್ಯಕರವೂ ಹವಾಗುಣಕ್ಕೆ ಅನುಗುಣವಾಗಿಯೂ ಇರುವುದು ಅಗತ್ಯ.

ಭಕ್ತರು ಆರಾಧನಾ ವಿಧಿಯಲ್ಲಿ ಸಮರ್ಪಕವಾಗಿ ಭಾಗವಹಿಸಲು ಸಾಧ್ಯವಾಗುವಂತೆ ದೇವಾಲಯದ ಕಟ್ಟಡಗಳ ವಿನ್ಯಾಸ ಸಿದ್ಧಮಾಡಬೇಕು. ದಿವ್ಯ ಬಲಿಪೀಠ; ಪ್ರಭು ಭೋಜನದ ವೇದಿಕೆ, ದೈವಪ್ರಜೆ ಈ ಪೀಠದ ಸುತ್ತಲೂ ಸಭೆ ಸೇರುವವರು ಎಂಬ ಅಂಶವನ್ನು ಗಮನಕ್ಕೆ ತಂದುಕೊಂಡು ಅದರ ಆಕಾರ, ವಿನ್ಯಾಸ ರೂಪಿತವಾಗಿರಬೇಕು.

ಪರಮ ಪ್ರಸಾದದ ಪ್ರತಿಷ್ಠಾಪನೆ ಪ್ರಧಾನ ಪೀಠದಲ್ಲಿ ಮಾಡದಿದ್ದರೂ ಅದರ ಸಂಪುಟ ಪ್ರಮುಖ ಸ್ಥಳದಲ್ಲಿದ್ದು ಜನರ ಆರಾಧನೆ, ಪ್ರಾರ್ಥನೆಗೆ ಪೋಷಕವಾಗಿರಬೇಕು. ದೈವವಾಕ್ಯವನ್ನು ಸಾರಲು ಬಳಸುವ ವಾಚಕ ಸೂಕ್ತ ಸ್ಥಳದಲ್ಲಿದ್ದು, ವಾಚಕರನ್ನು ಮತ್ತು ಬೋಧಕರನ್ನು ನೋಡಲೂ ಕೇಳಲೂ ಸಾಧ್ಯವಾಗುವಂತಿರಬೇಕು.

ದೀಕ್ಷಾಸ್ನಾನದ ಘನತೆಯನ್ನು ಎತ್ತಿ ಹಿಡಿಯಲು ದೀಕ್ಷಾ ತೊಟ್ಟಿಯನ್ನು ಆ ಸಂಸ್ಕಾರವನ್ನು ನೆರವೇರಿಸಲು ಪೋಷಕವಾಗುವಂತೆ ಪ್ರಮುಖ ಸ್ಥಾನದಲ್ಲಿ ಕಟ್ಟುವುದು ಅಗತ್ಯ.

### ಸಮಾಪ್ತಿ

ದೈವಾರಾಧನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುವಂತೆ ಮಾಡುತ್ತಿರುವ ಬದಲಾವಣೆಗಳು ವಿಚಾರ ವಿನ: ಅಥವಾ ನಿಷ್ಕಾರಣವಾಗಿ ಮಾಡುವಂಥಹುದಲ್ಲ. ಅವನ್ನು ಅನುಷ್ಠಾನಕ್ಕೆ ತರುವ ಉದ್ದೇಶವೇನೆಂದರೆ : ದೈವ ಪ್ರಜೆಯನ್ನು ಗಾಢ, ವಿಶ್ವಾಸ ಭರಿತ, ನಿಸ್ವಾರ್ಥ ಮತ್ತು ಕ್ರಿಯಾತ್ಮಕ ಪ್ರೀತಿಯಲ್ಲಿ ಒಂದುಗೂಡಿಸುವುದು. ಭಕ್ತರು ಪ್ರಭು ಕ್ರಿಸ್ತರ ಇಚ್ಛಾನುಸಾರ ಅವರ ಸಂರಕ್ಷಣಾ ಮತ್ತು ಆರಾಧನಾ ಕಾರ್ಯದಲ್ಲಿ ಭಾಗಿಯಾಗಬೇಕು.



# II ಸಾಮಾಜಿಕ ಸಂಪರ್ಕ ಮಾಧ್ಯಮ

## (ಶಾಸನ)

## ಪೀಠಿಕೆ

### ಆಧುನಿಕ ಸಂಪರ್ಕ ಮಾಧ್ಯಮದಲ್ಲಿ ಆಧ್ಯಾತ್ಮಿಕ ಪ್ರಾಮುಖ್ಯತೆ

ಧರ್ಮಸಭೆಯು ದೃಷ್ಟಿ-ಶ್ರವಣ, ತಂತ್ರ ವಿಧಾನಗಳ ಪತ್ರಿಕೆ, ರೇಡಿಯೋ, ಚಲನಚಿತ್ರ, ದೂರದರ್ಶನ ಇತ್ಯಾದಿಗಳನ್ನು ಸ್ವಾಗತಿಸುತ್ತದೆ ಮತ್ತು ಪ್ರೋತ್ಸಾಹಿಸುತ್ತದೆ. ಅವುಗಳನ್ನು ಸಾಮೂಹಿಕ ಮಾಧ್ಯಮ ಅಥವಾ ಸಾಮಾಜಿಕ ಸಂಪರ್ಕ ಮಾಧ್ಯಮಗಳೆಂದು ಕರೆಯಲಾಗಿದೆ. ಈ ಸಾಧನಗಳು ಜನ ಸಮೂಹವನ್ನು ಸ್ಪರ್ಶಿಸಿ ಅವರ ಮನೋಭಾವ ಮತ್ತು ಸಂಪ್ರದಾಯಗಳನ್ನು ಪರಿವರ್ತಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಅವು ಮನೋರಂಜನೆ ಮತ್ತು ಶಿಕ್ಷಣ ನೀಡುವುದರಲ್ಲಿ ಮಾತ್ರವಲ್ಲ ದೇವರ ಸಾಮ್ರಾಜ್ಯವನ್ನು ಸಾರುವುದರಲ್ಲಿಯೂ ಮಹತ್ತರ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ಧರ್ಮಸಭೆ ಅಂಗೀಕರಿಸುತ್ತದೆ. ಈ ಸಾಧನಗಳನ್ನು ಸಮರ್ಪಕವಾಗಿ ಬಳಸದಿದ್ದರೆ ಅವುಗಳಿಂದಾಗುವ ಹಾನಿಕರ ಪರಿಣಾಮಗಳ ಬಗ್ಗೆಯೂ ಧರ್ಮಸಭೆಗೆ ತಿಳಿದಿದೆ. ಆದುದರಿಂದ ಇವುಗಳ ಬಗ್ಗೆ ಕ್ರೈಸ್ತರ ಅನಂತ ಕಲ್ಯಾಣ ಮಾತ್ರವಲ್ಲ ಇಡೀ ಮಾನವ ಜನಾಂಗದ ಪ್ರಗತಿಗಾಗಿ ಕೆಲವು ಮಾರ್ಗದರ್ಶಿ ನಿರ್ದೇಶನಗಳನ್ನು ನೀಡಲು ಧರ್ಮಸಭೆ ಅಪೇಕ್ಷಿಸುತ್ತದೆ.

### 1 ಧರ್ಮಸಭೆಯ ಬೋಧನೆ

ಧರ್ಮಸಭೆಯು ಶುಭಸಂದೇಶವನ್ನು ಬೋಧಿಸುವ ಜವಾಬ್ದಾರಿಯನ್ನು ಹೊಂದಿದೆ. ಅದನ್ನು ನಿರ್ವಹಿಸುವಾಗ ಆಧುನಿಕ ಸಂಪರ್ಕ ಸಾಧನಗಳನ್ನು ಬಳಸುವ ಹಕ್ಕು ಮಾತ್ರವಲ್ಲ ಕರ್ತವ್ಯವೂ ಅದಕ್ಕಿದೆ. ಆದುದರಿಂದ ಧಾರ್ಮಿಕ ಪಾಲಕರು ಈ ವಿಷಯಗಳ ಬಗ್ಗೆ ತಮ್ಮ ಮಂದೆಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅದರಲ್ಲೂ ಶ್ರೀ ಸಾಮಾನ್ಯರು ಈ ಸಾಧನಗಳಲ್ಲಿ ಮಾನವೀಯ ಮತ್ತು ಕ್ರಿಸ್ತೀಯ ಮನೋಭಾವವನ್ನು ತುಂಬಲು ಪ್ರಯತ್ನಿಸಬೇಕು. ಅವನ್ನು ಸೂಕ್ತ ರೀತಿಯಲ್ಲಿ ಬಳಸಲು ವ್ಯಕ್ತಿಯು ಅವಕ್ಕೆ ಸಂಬಂಧ ಪಟ್ಟ ನೈತಿಕ ನಿಯಮಗಳನ್ನು ತಿಳಿದಿರಬೇಕು ಮಾತ್ರವಲ್ಲ, ಪ್ರತಿಯೊಂದು ಮಾಧ್ಯಮವೂ ಹೇಗೆ ಕೆಲಸ ಮಾಡುತ್ತದೆ ಮತ್ತು ವಿವಿಧ ಸಂದರ್ಭಗಳಲ್ಲಿ ಅದರ ಪರಿಣಾಮವೇನು ಎಂಬುದನ್ನು ಅರಿತು ಅದನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲು ಶಕ್ತನಾಗಿರಬೇಕು.

ಸಮಾಜ ಕಲ್ಯಾಣದ ಬಗ್ಗೆ ಉಪಯುಕ್ತ ಮತ್ತು ಅಗತ್ಯ ವಿಚಾರಗಳನ್ನು ತಿಳಿದುಕೊಳ್ಳುವ ಹಕ್ಕು ಜನರಿಗಿದೆ. ಆದುದರಿಂದ ಸುದ್ದಿ ಸಮಾಚಾರಗಳನ್ನು ಅರಸುವ ಮತ್ತು ವರದಿ ಮಾಡುವ ಕಾರ್ಯದಲ್ಲಿ ಸತ್ಯ, ನ್ಯಾಯ, ಪರಪ್ರೀತಿ, ಪ್ರಾಮಾಣಿಕತೆ ಮತ್ತು ಸಭ್ಯತೆ ಇರಬೇಕು. ಅದು ಮಾನವ ಹಕ್ಕು ಮತ್ತು ಘನತೆಯನ್ನು ಗೌರವಿಸುವಂತಿರಬೇಕು. ಕಲೆಯ ಕ್ಷೇತ್ರದಲ್ಲೂ ನೈತಿಕ ನಿಯಮಗಳಿಗೆ ಪ್ರಾಮುಖ್ಯತೆಯನ್ನು ನೀಡಬೇಕು. ಏಕೆಂದರೆ ಅದರ ವಿನ: ಮಾನವನು ತನ್ನ ಉನ್ನತ ಗುರಿಯನ್ನು ತಲುಪುವುದಿಲ್ಲ ಮತ್ತು ಜೀವನದಲ್ಲಿ ಪರಿಪೂರ್ಣತೆ ಮತ್ತು ಪರಮಾನಂದವನ್ನು ಪಡೆಯುವುದಿಲ್ಲ.

ನೈತಿಕ ಕೆಡುಕುಗಳನ್ನು ಚಿತ್ರಿಸುವುದರಿಂದ ಮಾನವ ಸ್ವಭಾವದ ಬಗ್ಗೆ ಅಧಿಕ ತಿಳಿವಳಿಕೆ ಮೂಡಿಸಿ ಸತ್ಯ ಮತ್ತು ಒಳಿತಿನ ಭವ್ಯತೆಯನ್ನು ಬೆಳೆಗಿಸಬಹುದು. ಆದರೆ ಇಂತಹ ಬಣ್ಣನೆಯಲ್ಲಿ ಗೌರವ ಮತ್ತು ನೈತಿಕ ಸಂಯಮ ಇರುವುದು ಅಗತ್ಯ. ಇಲ್ಲದಿದ್ದ ಪಕ್ಷದಲ್ಲಿ ಈ ಕ್ರಿಯೆಯಿಂದ ಒಳಿತಿಗಿಂತ ಕೆಡುಕೇ ಅಧಿಕವಾಗಬಹುದು. ಸಮಾಜದ ಪ್ರತೀ ಸದಸ್ಯನು ಒಳ್ಳೆಯ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಬೇಕು ಮತ್ತು ಅದನ್ನು ಬಿತ್ತರಿಸಬೇಕು. ಏಕೆಂದರೆ ಬಾಳಿನ ಪ್ರತಿಯೊಂದು ಕ್ಷೇತ್ರದಲ್ಲೂ ಇದರ ಪ್ರಭಾವ ಅಧಿಕವಾಗಿರುತ್ತದೆ.

ಓದುವವರು, ವೀಕ್ಷಿಸುವವರು ಮತ್ತು ಕೇಳುವವರು ನೈತಿಕತೆ, ಮಾಹಿತಿ, ಕಲೆ ಮತ್ತು ತಾಂತ್ರಿಕತೆಯ ದೃಷ್ಟಿಯಿಂದ ಅಸಾಧಾರಣ ಪ್ರತಿಭೆಯುಳ್ಳ ಪ್ರದರ್ಶನ, ನಿರೂಪಣೆಯನ್ನು ಮೆಚ್ಚುವುದರಲ್ಲಿ ಅನುಮಾನವಿಲ್ಲ. ಈ ಪ್ರಕ್ರಿಯೆ ಧಾರ್ಮಿಕ ದೃಷ್ಟಿಯಲ್ಲಿ ಹಾನಿಕರವಾದುದನ್ನು ತ್ಯಜಿಸಬೇಕು ಮತ್ತು ಈ ವಿಷಯದಲ್ಲಿ ದಕ್ಷ ಪರಿಣತರ ಮಾರ್ಗದರ್ಶನವನ್ನು ಪಾಲಿಸಬೇಕು.

ಯುವ ಜನರು ಮುಖ್ಯವಾಗಿ ಈ ಸಾಧನಗಳನ್ನು ಸಂಯಮದಿಂದ ಬಳಸಬೇಕು. ತಾವು ನೋಡುವುದನ್ನು ಕೇಳುವುದನ್ನು ಮತ್ತು ಓದುವುದನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕು. ಈ ವಿಷಯಗಳನ್ನು ಅವರು ಶಿಕ್ಷಕರೊಡನೆ ಮತ್ತು ಪರಿಣತರೊಡನೆ ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಬೇಕು. ಹಾನಿಕರ ಪ್ರದರ್ಶನ ಮತ್ತು ಪ್ರಕಟಣೆಗಳಿಂದ ತಮ್ಮ ಮಕ್ಕಳನ್ನು ಸಂರಕ್ಷಿಸುವ ಗುರುತರ ಜವಾಬ್ದಾರಿ ಜನ್ಮದಾತರಿಗಿದೆ.

ಎಲ್ಲಕ್ಕಿಂತ ಮಿಗಿಲಾಗಿ ಈ ಹೊಣೆಗಾರಿಕೆ ಸಾಧನಗಳನ್ನು ನಿರ್ಮಿಸುವ ಮತ್ತು ಪ್ರಸಾರ ಮಾಡುವ ವ್ಯಕ್ತಿಗಳ ಮೇಲಿದೆ. ಇವರು ತಮ್ಮ ಆರ್ಥಿಕ, ರಾಜಕೀಯ, ಕಲಾ ಮತ್ತು ತಾಂತ್ರಿಕ ಲಾಭಕ್ಕಿಂತ ಸಾರ್ವತ್ರಿಕ ಬಳಕೆಗೆ ಆದ್ಯತೆಯನ್ನು ನೀಡಬೇಕು. ಈ ಉದ್ದೇಶವನ್ನು ಕಾರ್ಯಗತ ಗೂಡಿಸಲು ನೈತಿಕ ವ್ಯವಸ್ಥೆಯನ್ನು ಮಾನ್ಯ ಮಾಡುವ ವೃತ್ತಿ ಸಂಘಗಳನ್ನು ಸೇರುವುದು ಶ್ರೇಯಸ್ಕರ.

ಕಟ್ಟಕಡೆಗೆ ಸುದ್ಧಿ ಸಮಾಚಾರವನ್ನು ಸಾರುವ ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುವ ಜವಾಬ್ದಾರಿ ಸರಕಾರಕ್ಕಿದೆ. ಆಧ್ಯಾತ್ಮಿಕ ಮೌಲ್ಯಗಳನ್ನು, ಸಾಂಸ್ಕೃತಿಕ ಮತ್ತು ಕಲೆಯನ್ನು ಯುವಜನರ ಕಾರ್ಯಕ್ರಮಗಳಲ್ಲಿ ರೂಪಿಸಬೇಕು. ಸರಕಾರ ಈ ಕಾರ್ಯವನ್ನು ಮಾಡದಿದ್ದರೆ ಸಮೂಹ ಮಾಧ್ಯಮ ಸಾರ್ವಜನಿಕ ನೀತಿಗೆ ಹಾನಿಕರವಾಗುವ, ಮಾರಕ ಸಾಧನಗಳನ್ನು ಬಿತ್ತರಿಸಬಹುದು.

## 2 ಧರ್ಮಸಭೆಯ ಕಾರ್ಯಗಳು

ಎಲ್ಲಾ ಶ್ರೀ ಸಾಮಾನ್ಯರು, ಯಾಜಕ ವರ್ಗ ಮತ್ತು ಗೃಹಸ್ಥರು ಪ್ರಭು ಕ್ರಿಸ್ತರಿಗೆ ಸಾಕ್ಷಿಗಳಾಗಿರಬೇಕು. ಅವರು ಸಂಪರ್ಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಬೇಕು. ಅವರು ತಮ್ಮ ಪ್ರತಿಭೆ ಮತ್ತು ಗುಣಲಕ್ಷಣಗಳನ್ನು ಧರ್ಮಸಭೆಯ ಸೇವೆಗೆ ಮೀಸಲಾಗಿಡಬೇಕು.

ಕಥೋಲಿಕ ಜನಾಭಿಪ್ರಾಯವನ್ನು ರೂಪಿಸಲು ಮೊಟ್ಟಮೊದಲನೆಯದಾಗಿ ಉತ್ತಮ ದರ್ಜೆಯ ಕಥೋಲಿಕ ಪತ್ರಿಕೆಗಳನ್ನು ಪ್ರಾರಂಭಿಸಿ ಅವುಗಳನ್ನು ಪ್ರೋತ್ಸಾಹಿಸಬೇಕು. ಧರ್ಮಸಭೆಯ ಕಾರ್ಯಚಟುವಟಿಕೆಗಳ ಬಗ್ಗೆ ಈ ಪತ್ರಿಕೆಗಳು ಸುದ್ಧಿಯನ್ನು ಪ್ರಕಟಿಸಿ ವಾಚಕರಲ್ಲಿ ನೈಜ್ಯ ಅಭಿಪ್ರಾಯ ಮೂಡುವಂತೆ ಮಾಡಬೇಕು. ಉತ್ತಮ ಚಲನಚಿತ್ರಗಳನ್ನು ವಿಶೇಷವಾಗಿ ಯುವಜನರಿಗೆ



ಉಪಯುಕ್ತವಾಗುವ ಚಿತ್ರಗಳನ್ನು ನಿರ್ಮಿಸಲು ಪ್ರೋತ್ಸಾಹ ನೀಡಬೇಕು. ರೇಡಿಯೋ ಮತ್ತು ದೂರದರ್ಶನ ಕಾರ್ಯಕ್ರಮಗಳಿಗೆ ನಾಟಕ ಪ್ರದರ್ಶನಗಳಿಗೆ ಉತ್ತೇಜನ ನೀಡಬೇಕು. ಇವು ಕಥೋಲಿಕ ಮೌಲ್ಯಗಳನ್ನು ಸಾರುವಂತಿರಬೇಕು.

ಈ ಮಾಧ್ಯಮ ಸಾಧನಗಳನ್ನು ಪ್ರೇಷಿತತ್ವದಲ್ಲಿ ಅಳವಡಿಸಲು ದಕ್ಷ ಯಾಜಕರು, ಧಾರ್ಮಿಕ ವ್ಯಕ್ತಿಗಳು ಮತ್ತು ಶ್ರೀ ಸಾಮಾನ್ಯರನ್ನು ನೇಮಿಸಬೇಕು. ಶ್ರೀ ಸಾಮಾನ್ಯರಿಗೆ ಈ ವೃತ್ತಿಯಲ್ಲಿ ಸಮಗ್ರ ತರಬೇತಿಯನ್ನು ನೀಡುವ ಮತ್ತು ನೈತಿಕ ಹಾಗೂ ತಾಂತ್ರಿಕ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಬೇಕಾದ ವಿಮರ್ಶಕರನ್ನು ಸಿದ್ಧಗೊಳಿಸುವ ಕಥೋಲಿಕ ಸಂಸ್ಥೆಗಳನ್ನು ಸ್ಥಾಪಿಸಬೇಕು.

ಈ ಸಾಧನಗಳನ್ನು ಸೂಕ್ತ ರೀತಿಯಲ್ಲಿ ಬಳಕೆ ಮಾಡುವುದರ ಬಗ್ಗೆ ಕಥೋಲಿಕ ಶಾಲೆ, ಗುರು ತರಬೇತಿ ಮಂದಿರ, ಶ್ರೀ ಸಾಮಾನ್ಯರ ಪ್ರೇಷಿತ ತಂಡಗಳಿಗೆ ಹಂತ ಹಂತವಾಗಿ ತರಬೇತಿಯನ್ನು ಹಮ್ಮಿಕೊಳ್ಳಬೇಕು. ವಾಸ್ತವವಾಗಿ ಈ ಸಾಧನಗಳು ಅಧಿಕ ವೆಚ್ಚದ್ದಾಗಿರುತ್ತದೆ. ಆದರೆ ರಕ್ಷಣಾ ಸಂದೇಶವನ್ನು ಪಸರಿಸಲು ಹಣ ಕಾಸಿನ ಅಂಶ ಅಡ್ಡಿಯಾಗದಂತೆ ಕಥೋಲಿಕರು ಗಮನ ವಹಿಸಬೇಕು. ಆದುದರಿಂದ ಕಥೋಲಿಕ ಪತ್ರಿಕೆಗಳು, ಚಲನಚಿತ್ರಗಳು, ರೇಡಿಯೋ ಕಾರ್ಯಕ್ರಮಗಳು ಅವಿರತವಾಗಿ ಸಾಗುವಂತೆ ಅವುಗಳಿಗೆ ಬೆಂಬಲ ಕೊಡುವುದು ಅಗತ್ಯ.

ಈ ಉದ್ದೇಶಕ್ಕಾಗಿಯೇ ಪ್ರತಿಯೊಂದು ಧರ್ಮಕ್ಷೇತ್ರದಲ್ಲೂ ವರ್ಷದಲ್ಲಿ ಒಂದು ದಿನವನ್ನು ಗೊತ್ತು ಮಾಡಬೇಕು. ಆ ದಿನದಲ್ಲಿ ಭಕ್ತಾದಿಗಳಿಗೆ ಈ ವಿಷಯದ ಬಗ್ಗೆ ಮಾಹಿತಿ ಕೊಟ್ಟು ಅವರ ಹೊಣೆಗಾರಿಕೆಯ ಬಗ್ಗೆ ತಿಳಿಸಬೇಕು. ಸರ್ವರೂ ಜಪತಪವನ್ನು ಅರ್ಪಿಸಿ ತಮ್ಮ ಕಾಣಿಕೆಯನ್ನು ಈ ಉದ್ದೇಶಕ್ಕಾಗಿ ಕೊಡುವಂತೆ ವ್ಯವಸ್ಥೆ ಮಾಡಬೇಕು.

ಈ ಪಾಲನಾ ಜವಾಬ್ದಾರಿಯನ್ನು ಇಡೀ ಧರ್ಮಸಭೆಗೆ ನೀಡುವಲ್ಲಿ ಜಗದ್ಗುರುಗಳಿಗೆ ನೆರವಾಗುವಂತೆ ಒಂದ ವಿಶೇಷ ಕಾರ್ಯಕಾರಿ ಇಲಾಖೆ ಇದೆ. ಈ ಇಲಾಖೆಯಲ್ಲಿ ವಿವಿಧ ದೇಶದ ತಜ್ಞರೂ, ಗೃಹಸ್ಥ ಪರಿಣತರಿಗೂ ಅವಕಾಶವಿರಬೇಕು ಎಂಬುದು ವ್ಯಾಟಿಕನ್ ಸಮ್ಮೇಳನದ ಸದಸ್ಯರ ಆಶಯ.

ಆಯಾಯ ಧರ್ಮಕ್ಷೇತ್ರಗಳಲ್ಲಿ ಧರ್ಮಾಧ್ಯಕ್ಷರು ವಿವಿಧ ಆಧುನಿಕ ಪ್ರೇಷಿತತ್ವಗಳನ್ನು ಪ್ರಾರಂಭಿಸಿ, ಪೋಷಿಸುತ್ತಾರೆ. ಇದು ಅವರ ಹೊಣೆಗಾರಿಕೆಯಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಯೋಜನೆ, ಎಲ್ಲಾ ಪ್ರತಿಭೆ ಕುಶಲತೆಯನ್ನು ರಾಷ್ಟ್ರೀಯ ಕಛೇರಿಯಲ್ಲಿ ಕೇಂದ್ರೀಕರಿಸಬೇಕು. ಅವುಗಳ ಮೇಲ್ವಿಚಾರಣೆಯನ್ನು ಒಬ್ಬರು ಅಥವಾ ಅಧಿಕ ಧರ್ಮಾಧ್ಯಕ್ಷರು ಆಯಾ ವೃತ್ತಿಯಲ್ಲಿ ಪರಿಣತರಾದವರ ನೆರವಿನಿಂದ ನೋಡಿಕೊಳ್ಳಬೇಕು.

ಈ ರಾಷ್ಟ್ರೀಯ ಕಛೇರಿಗಳು ತಮ್ಮ ತಮ್ಮೊಡನೆ ಸಹಕರಿಸಬೇಕು. ಅವರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಇತರ ಕಥೋಲಿಕ ಸಂಸ್ಥೆಗಳೊಂದಿಗೂ ವ್ಯವಹರಿಸಬೇಕು.

## ಸಮಾಪ್ತಿ

ಪವಿತ್ರ ಸಿನೋಡ್ ಸಮಿತಿಯ ಅಪೇಕ್ಷೆ ಏನೆಂದರೆ : ರೋಂ ನಗರದಲ್ಲಿರುವ ಕೇಂದ್ರೀಯ ಕಾರ್ಯಕಾರಿ ಇಲಾಖೆ ನಾನಾ ದೇಶಗಳ ಪರಿಣತರ ಸಹಕಾರದಿಂದ ಒಂದು ಪಾಲನಾ ಪತ್ರವನ್ನು ಹೊರಡಿಸಬೇಕು. ಅದರ ಸೂಚನೆ ಮತ್ತು ಆದೇಶಗಳನ್ನು ಧರ್ಮಸಭೆಯ ಮಕ್ಕಳೆಲ್ಲರೂ ಸಂತೋಷದಿಂದ ಬರಮಾಡಿಕೊಂಡು ಧಾರ್ಮಿಕ ನಿಷ್ಠೆಯಿಂದ ಪಾಲಿಸುವರು ಎಂಬ ವಿಶ್ವಾಸವಿದೆ.

"ಈ ಸಿನೋಡ್ ಸಭೆಯು ಎಲ್ಲಾ ಸುಮನಸ್ಕರನ್ನೂ ವಿಶೇಷವಾಗಿ ಈ ಸಂಪರ್ಕ ಸಾಧನಗಳ ಮೇಲ್ವಿಚಾರಣೆಯನ್ನು ಹೊಂದಿರುವವರನ್ನೂ ಸಮಾಜದ ಒಳಿತಿಗಾಗಿ ಬಳಸಲು ಶ್ರಮಿಸಬೇಕೆಂದು ವಿನಂತಿಸುತ್ತದೆ. ಏಕೆಂದರೆ ಸಮಾಜದ ಒಳಿತು–ಕೆಡುಕು ಅಧಿಕ ಅಧಿಕವಾಗಿ ಅವುಗಳ ಸೂಕ್ತ ಬಳಕೆಯನ್ನು ಅವಲಂಬಿಸಿದೆ. ಹೀಗೆ ಪ್ರಾಚೀನ ಕಲಾಕೃತಿಗಳಲ್ಲಿ ಮೂಡಿರುವಂತೆ ಈ ನೂತನ ಅನ್ವೇಷಣೆಗಳ ಮುಖಾಂತರ ಪ್ರಭುವಿನ ನಾಮ ಮಹಿಮೆ ಉದ್ದೀಪನೆಗೊಳ್ಳಲಿ. ಪ್ರೇಷಿತ ವಾಣಿಯು ಯೇಸುಕ್ರಿಸ್ತರು ನಿನ್ನೆ ಇದ್ದ ಹಾಗೆಯೇ ಎಂದೆಂದೂ ಇದ್ದಾರೆ " ಎಂದು ಘೋಷಿಸಲ್ಪಡಲಿ.



# III ಧರ್ಮಸಭೆ

## (ಧರ್ಮಶಾಸ್ತ್ರೀಯ ಸಂವಿಧಾನ)

### ಪೀಠಿಕೆ

"ಪ್ರಭು ಕ್ರಿಸ್ತರು ಜನಾಂಗಗಳ ಜ್ಯೋತಿ" ಈ ಶಿರೋನಾಮೆಯೊಂದಿಗೆ ದ್ವಿತೀಯ ವ್ಯಾಟಿಕನ್ ಸಮ್ಮೇಳನ ಧರ್ಮಸಭೆಯ ಬಗ್ಗೆ ಸಂವಿಧಾನವನ್ನು ಆರಂಭಿಸಿದೆ. ಈ ಪತ್ರದ ಮುಖಾಂತರ ಸಮ್ಮೇಳನದ ಪಿತೃಗಳು ಎರಡು ಪ್ರಮುಖ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರಗಳು ಧರ್ಮಸಭೆಯ ಮತ್ತು ಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ. ಅವು ಯಾವುವೆಂದರೆ : ಪ್ರಥಮ, ಕಥೋಲಿಕ ಧರ್ಮಸಭೆ ಎಂದರೇನು? ದ್ವಿತೀಯ, ಇಂದಿನ ಲೋಕದಲ್ಲಿ ಧರ್ಮಸಭೆಯ ನಿಯೋಗವೇನು? ಈ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಡುವುದು ಸುಲಭವಲ್ಲ. ಇಲ್ಲಿ ನಾವು ದೈವಿಕ ಮತ್ತು ಮಾನುಷಿಕ ಸತ್ಯಗಳ ಬಗ್ಗೆ ವಿಚಾರ ವಿನಿಮಯ ಮಾಡುತ್ತಿದ್ದೇವೆ ಎಂಬುದು ಸರ್ವರಿಗೂ ಮನವರಿಕೆಯಾಗಬೇಕು.

### ಧರ್ಮಸಭೆಯ ರಹಸ್ಯ

ಎಲ್ಲಾ ಮಾನವರ ರಕ್ಷಣೆಗಾಗಿ ಅನಂತ ದೇವರು ರೂಪಿಸಿದ ಯೋಜನೆಯಲ್ಲಿ ಧರ್ಮಸಭೆಯ ಉಗಮ ಅಡಕವಾಗಿದೆ. ತಮ್ಮ ಸುಜ್ಞಾನ ಮತ್ತು ಒಳಿತಿನಿಂದ ಅನಂತ ದೇವರು ಈ ವಿಶ್ವವನ್ನು ಸೃಷ್ಟಿಸಿ ತಮ್ಮ ದೈವಿಕ ಜೀವನದಲ್ಲಿ ಭಾಗಿಯಾಗುವಂತೆ ಮಾಡಿದರು. ಮಾನವನು ಪಾಪಿಯಾದರೂ ದೇವರ ಯೋಜನೆ ಮಾತ್ರ ಅವಿರತವಾಗಿ ಸಾಗಬೇಕಿತ್ತು. ಈ ಯೋಜನೆಯನ್ನು ಈಡೇರಿಸಲು ಅವರು ತಮ್ಮ ಪುತ್ರನನ್ನು ಈ ಲೋಕಕ್ಕೆ ಕಳುಹಿಸಿದರು. ಅವರು ತಮ್ಮ ಜೀವನ, ಮರಣ ಮತ್ತು ಪುನರುತ್ಥಾನದಿಂದ ಧರ್ಮಸಭೆಯನ್ನು ಸ್ಥಾಪಿಸಿ ಇಡೀ ಸೃಷ್ಟಿಯ ಜೇಷ್ಠ ಪುತ್ರರಾದರು. ಅವರಲ್ಲಿ ಭಕ್ತ ವಿಶ್ವಾಸಿಗಳು ಸ್ವರ್ಗೀಯ ತಂದೆಯ ಮಕ್ಕಳಾಗುತ್ತಾರೆ. ಪ್ರಭು ಕ್ರಿಸ್ತರು ಎಲ್ಲಾ ಮಾನವರನ್ನು ರಕ್ಷಿಸಲು ಬಂದರು. ಆದುದರಿಂದ ಎಲ್ಲರೂ ಧರ್ಮಸಭೆಯನ್ನು ಸೇರಲು ಆಹ್ವಾನವನ್ನು ಪಡೆದಿದ್ದಾರೆ.

ಪರಮ ಪ್ರಸಾದವು ಧರ್ಮಸಭೆಯ ಜೀವನದ ಕೇಂದ್ರವಾಗಿದೆ. ಅದರ ಮುಖಾಂತರ ಪ್ರಭು ಕ್ರಿಸ್ತರು ರಕ್ಷಣಾ ಕಾರ್ಯವನ್ನು ಮುಂದುವರಿಸುತ್ತಾರೆ (ನೋಡಿ : ದೈವಾರಾಧನಾ ವಿಧಿಯ ಬಗ್ಗೆ ಸಂವಿಧಾನ). ಹೀಗೆ ತಮ್ಮ ಧರ್ಮಸಭೆಯೊಂದಿಗೆ ಸದಾ ಪ್ರಸನ್ನರಾಗಿದ್ದು ಎಲ್ಲಾ ಮಾನವರನ್ನು ತಮ್ಮೊಡನೆ ಒಂದಾಗಿಸಲು ಆಹ್ವಾನಿಸುತ್ತಾರೆ. ಅವರು ಲೋಕದ ಬೆಳಕಾಗಿದ್ದಾರೆ. ಅವರಿಂದ ನಾವು ಜನಿಸುತ್ತೇವೆ. ಅವರಲ್ಲಿ ನಾವು ಜೀವಿಸುತ್ತೇವೆ ಮತ್ತು ಅವರಿಗಾಗಿ ಹಾತೊರೆಯುತ್ತೇವೆ.

ಪ್ರಭು ಯೇಸು ತಂದೆ ದೇವರು ತಮಗೆ ಕೊಟ್ಟ ಕೆಲಸವನ್ನು ಮುಗಿಸಿದ ನಂತರ ಪವಿತ್ರಾತ್ಮರನ್ನು ಕಳುಹಿಸಿದರು. ಅವರು ದೇವರ ಕೊಡುಗೆ, ವರದಾನ. ಅವರು ಧರ್ಮಸಭೆಯಲ್ಲಿದ್ದು ಕ್ರಿಸ್ತರ ನಿಯೋಗವನ್ನು ಮುಂದುವರಿಸುತ್ತಾರೆ. ಎಲ್ಲರನ್ನು ಐಕ್ಯಗೊಳಿಸುವುದು, ಪವಿತ್ರೀಕರಿಸುವುದು ಮತ್ತು ಅನಂತ ಜೀವನಕ್ಕೆ ನಡೆಸುವುದರಲ್ಲಿ ಅವರ ಪಾತ್ರ ಅಡಕವಾಗಿದೆ. ಹೀಗೆ ಅಖಿಲ ಧರ್ಮಸಭೆ ಪಿತ, ಸುತ ಮತ್ತು ಪವಿತ್ರಾತ್ಮರೊಡನೆ ಐಕ್ಯವಾಗುತ್ತದೆ ಮತ್ತು ಧರ್ಮಸಭೆ ಪರಮ ತ್ರಿತ್ವದ ರಹಸ್ಯವನ್ನೇ ಪ್ರವೇಶಿಸುತ್ತದೆ.

ಧರ್ಮಸಭೆಯಲ್ಲಿ ದೇವರ ಸಾಮ್ರಾಜ್ಯ ಈಗಾಗಲೇ ಈ ಧರೆಗಿಳಿದಿದೆ. ಪ್ರಭು ಕ್ರಿಸ್ತರ ಮಾತು, ಕ್ರಿಯೆ ಮತ್ತು ಪ್ರತ್ಯಕ್ಷತೆಯಿಂದ ದೇವರ ಸಾಮ್ಯಾಜ್ಯದ ಉದ್ಘಾಟನೆಯಾಗಿದೆ. ಇದು ಪ್ರೀತಿ ಸೇವೆಯ ರಾಜ್ಯ ಸರ್ವರಿಗೂ ಸಂರಕ್ಷಣೆಯನ್ನು ತರುವ ಸಾಮ್ರಾಜ್ಯ. ಅಂತಿಮ ಕಾಲದಲ್ಲಿ ಧರ್ಮಸಭೆಯು ತನ್ನ ಸಂಪೂರ್ಣತೆಯನ್ನು ಸಾಧಿಸುವಾಗ ಅದು ಮಹಿಮಾ ಅರಸನೊಡನೆ ಪರಿಪೂರ್ಣವಾಗಿ ಒಂದಾಗಿರುತ್ತದೆ.

ಧರ್ಮಸಭೆಯ ರಹಸ್ಯದ ಬಗ್ಗೆ ಪ್ರಸ್ತಾಪಿಸುವಾಗ ಪವಿತ್ರ ಗ್ರಂಥದ ಅನೇಕ ರೂಪಕಗಳ ಬಳಕೆಯಾಗಿದೆ. ಅವುಗಳಲ್ಲಿ ಕೆಲವನ್ನು ಪ್ರಭು ಕ್ರಿಸ್ತರು ನಿರೂಪಿಸಿದರು. ಧರ್ಮಸಭೆಯನ್ನು "ಕುರಿಮಂದೆ" "ದ್ರಾಕ್ಷಾಬಳ್ಳಿ" "ದೇವರ ಮನೆ" "ದೇವರ ಕುಟುಂಬ" "ದೇವರ ಪವಿತ್ರ ಆಲಯ" "ಹೊಸ ಜೆರುಸಲೇಮ್" ಮತ್ತು "ಪತ್ನಿ". ಸಂತ ಪೌಲರ ಅಭಿಪ್ರಾಯದಲ್ಲಿ ಧರ್ಮಸಭೆಯು "ಕ್ರಿಸ್ತರ ಶರೀರ". ಎಲ್ಲ ಭಕ್ತ ವಿಶ್ವಾಸಿಗಳು ಕ್ರಿಸ್ತರೊಡನೆ ಒಂದಾಗಿದ್ದು ಪವಿತ್ರಾತ್ಮರು ಶಿರಸ್ಸು ಮತ್ತು ಅವಯವಗಳಲ್ಲಿ ಹರಡಿದ್ದು ಇಡೀ ದೇಹವನ್ನು ನವೀಕರಿಸುತ್ತಾರೆ, ಸಜೀವಗೊಳಿಸುತ್ತಾರೆ ಮತ್ತು ಪವಿತ್ರೀಕರಿಸುತ್ತಾರೆ.

ನಾವು ಧರ್ಮಸಭೆಯ ರಹಸ್ಯದ ಬಗ್ಗೆ ಮಾತನಾಡುವಾಗ ನಾವು ಅಸಹಜವಾದ ವಿಚಾರವನ್ನು ಪ್ರಸ್ಥಾಪಿಸುವುದಿಲ್ಲ. ಧರ್ಮಸಭೆ ಈ ಲೋಕದಲ್ಲಿ ಪ್ರಭು ಕ್ರಿಸ್ತರಂತೆ ವಾಸ್ತವಿಕತೆಯನ್ನು ನೈಜತೆಯನ್ನು ಹೊಂದಿದೆ. ಅದು ಗೋಚರ ಮತ್ತು ಅಗೋಚರ, ಮಾನುಷಿಕ ಮತ್ತು ದೈವಿಕ, ಭೌತಿಕ ಮತ್ತು ಪಾರಮಾರ್ಥಿಕ, ಅದಕ್ಕೆ ಈ ಲೋಕದಲ್ಲಿ ಅಸ್ತಿತ್ವವಿದೆ. ಅದು ಒಂದು ಸಮಾಜವಾಗಿ ಈ ಲೋಕದಲ್ಲಿ ಸುವ್ಯವಸ್ಥಿತವಾಗಿ ಸ್ಥಾಪಿತವಾಗಿದೆ. ಈ ವಾಸ್ತವಿಕತೆಯನ್ನು ಕಥೋಲಿಕ ಧರ್ಮಸಭೆಯಲ್ಲಿ ನಾವು ಕಾಣಬಹುದು. ಅದನ್ನು ಜಗದ್ಗುರುಗಳು ಮತ್ತು ಧರ್ಮಾಧ್ಯಕ್ಷರುಗಳು ಪರಿಪಾಲಿಸುತ್ತಿದ್ದಾರೆ. ಧರ್ಮಸಭೆ ಏಕ, ಪವಿತ್ರ, ಕಥೋಲಿಕ ಮತ್ತು ಪ್ರೇಷಿತ ಎಂಬುದು ಗಮನಾರ್ಹ.

ಈ ಭೂಲೋಕದಲ್ಲಿರುವ ಧರ್ಮಸಭೆ ತನ್ನ ಶಿರಸ್ಸೂ ದಣಿಯೂ ಆದ ಯೇಸುಕ್ರಿಸ್ತರನ್ನು ಅನುಸರಿಸುವ ಕರೆಯನ್ನು ಹೊಂದಿದೆ. ತನ್ನ ಪ್ರಭುವಿನಂತೆ ಅದು ದಾರಿದ್ರ್ಯ ಮತ್ತು ಯಾತನೆಯನ್ನು ಅನುಭವಿಸುತ್ತಿರುವುದರಿಂದ ಅದು ಪ್ರತ್ಯೇಕವಾಗಿ ಬಡವರನ್ನು ಕೊರತೆ ಮತ್ತು ಕಷ್ಟದಲ್ಲಿರುವವರನ್ನು ಪ್ರೀತಿಸುತ್ತದೆ. ಧರ್ಮಸಭೆ ಪುನೀತವಾದರೂ ಅದರ ವಕ್ಷ ಸ್ಥಳದಲ್ಲಿ ತನ್ನದೇ ಆದ ಪಾಪಿಗಳಿದ್ದಾರೆ. ಹೀಗೆ ಆಕೆ ಸತತ ಶುದ್ಧೀಕರಣದ ಅಗತ್ಯದಲ್ಲಿದ್ದಾಳೆ. ಸದಾ ಆಕೆ ಪ್ರಾಯಶ್ಚಿತ್ತ ಮಾಡುತ್ತಾ ನವೀಕರಣವನ್ನು ಎದುರು ನೋಡುತ್ತಾಳೆ. ವಾಗ್ದತ್ತ ನಾಡಾದ ಸ್ವರ್ಗ ಸಾಮ್ರಾಜ್ಯದೆಡೆಗೆ ಆಕೆಯ ಪಯಣ ಅಥವಾ ತೀರ್ಥಯಾತ್ರೆ ನಡೆಯುತ್ತಾ ಇದೆ. ಪುನರುತ್ಥಾನಿ ಪ್ರಭು ಜೊತೆಯಲ್ಲಿರುವುದರಿಂದ ಆಕೆ ಎಲ್ಲ ಕಷ್ಟ ಕೋಟಲೆಗಳನ್ನು ಎದುರಿಸಲು ಶಕ್ತಳಾಗಿದ್ದಾಳೆ. ಪ್ರಭು ಯೇಸು ಮಹಿಮಾನ್ವಿತರಾಗಿ ಪುನರಾಗಮಿಸುವವರೆಗೆ ನಿಗೂಢವಾಗಿರುವ ರಹಸ್ಯಗಳನ್ನು ಆಕೆ ಹಂತ ಹಂತವಾಗಿ ನಿಷ್ಠೆಯಿಂದ ಪ್ರಕಟಿಸುತ್ತಾಳೆ.



## ದೈವಪ್ರಜೆ

ಯಾವ ಮನುಷ್ಯನೇ ಆಗಲಿ ಅವನು ದೇವರಿಗೆ ಭಯಪಟ್ಟು ಸತ್ಪುರುಷನಾಗಿ ಬಾಳುತ್ತಿದ್ದರೆ ಅವನು ದೇವರ ಮೆಚ್ಚುಗೆಗೆ ಪಾತ್ರನಾಗುತ್ತಾನೆ (ಪ್ರೇ.ಕಾ. 10:35). ಆದರೂ ಮಾನವರನ್ನು ಒಂದು ಜನಾಂಗವನ್ನಾಗಿ ಒಗ್ಗೂಡಿಸಿ, ಅವರನ್ನು ಪವಿತ್ರೀಕರಿಸಿ ರಕ್ಷಿಸಬೇಕು ಎಂಬುದು ಅವರ ಇಚ್ಛೆಯಾಗಿದೆ. ದೇವರು ಇಸ್ರಯೇಲರೊಂದಿಗೆ ಹೇಗೆ ನಡೆದುಕೊಂಡರು ಎಂಬುದನ್ನು ಹಳೆಯ ಒಡಂಬಡಿಕೆ ತಿಳಿಸುತ್ತದೆ. ಆ ಪುಣ್ಯ ಕಥನದಲ್ಲೇ ಅವರ ಭವಿಷ್ಯದ ಯೋಜನೆ ಸಿದ್ಧವಾಗಿ ಅದನ್ನು ಮುನ್ಸೂಚಿಸಲಾಯಿತು. ಪ್ರಭು ಕ್ರಿಸ್ತರು ತಮ್ಮ ಮರಣ ಮತ್ತು ಪುನರುತ್ಥಾನದಿಂದ ದೇವರಿಗೂ ಅವರ ಪ್ರಜೆಗಳಿಗೂ ಮಧ್ಯೆ ಹೊಸ ಮತ್ತು ಅನಂತ ಒಡಂಬಡಿಕೆಯನ್ನು ಭದ್ರಪಡಿಸಿದರು. ಆದುದರಿಂದ ಅವರು ದೇವರ ಹೊಸ ಪ್ರಜೆಗಳಾಗಲೂ ಪವಿತ್ರಾತ್ಮರಲ್ಲಿ ಒಂದಾಗಿರಲು ಆಹ್ವಾನಿತರಾಗಿದ್ದಾರೆ. ದೇವರ ಈ ಹೊಸ ಪ್ರಜೆಯ ಧರ್ಮಸಭೆ, ಈ ಪ್ರಜೆಯೇ "ದೇವರು ಆರಿಸಿಕೊಂಡ ಜನಾಂಗ, ರಾಜಯಾಜಕರು, ಪವಿತ್ರ ಪ್ರಜೆ, ದೇವರ ಸ್ವಕೀಯ ಜನ" (1 ಪೇತ್ರ 2:10). ಇವರು ಲೋಕದ ಬೆಳಕೂ ಭೂಮಿಯ ಉಪ್ಪು ಆಗಿದ್ದಾರೆ.

ದೈವಪ್ರಜೆಯ ಸರ್ವಸದಸ್ಯರು ಪ್ರಧಾನ ಯಾಜಕ ಕ್ರಿಸ್ತರ ಯಾಜಕತ್ವದಲ್ಲಿ ಭಾಗಿಯಾಗುತ್ತಾರೆ. ಯಾಜಕಾಭಿಷೇಕವನ್ನು ಸ್ವೀಕರಿಸಿದವರೆಲ್ಲರೂ ಧರ್ಮಸಭೆಯಲ್ಲಿ ವಿಶಿಷ್ಠ ಸೇವೆಯನ್ನು ಸಲ್ಲಿಸುತ್ತಾರೆ. ಆದರೆ ಶ್ರೇಣಿಯುತ ಅಧಿಕಾರದಲ್ಲಿರುವವರು ಭಕ್ತ ವಿಶ್ವಾಸಿಗಳೊಂದಿಗೆ ದೇವರ ಒಂದೇ ಯಾಜಕ ಪ್ರಜೆಯಾಗಿದ್ದಾರೆ. ತಮ್ಮ ಸಂಸ್ಕಾರಗಳು ಪ್ರತ್ಯೇಕವಾಗಿ ದೀಕ್ಷಾಸ್ನಾನ ಮತ್ತು ದೃಢೀಕರಣದ ಮುಖಾಂತರ ಪ್ರಭು ಕ್ರಿಸ್ತರು ಭಕ್ತ ವಿಶ್ವಾಸಿಗಳನ್ನು ತಮ್ಮ ಪವಿತ್ರಾತ್ಮರಿಂದ ಅಭ್ಯಂಗಿಸುತ್ತಾರೆ. ಹೀಗೆ ಅಭಿಷಿಕ್ತರಾದ ಭಕ್ತ ವಿಶ್ವಾಸಿಗಳು ತಮ್ಮ ಪವಿತ್ರಾತ್ಮರಿಂದ ಅಭ್ಯಂಗಿಸುತ್ತಾರೆ. ಹೀಗೆ ಅಭಿಷಿಕ್ತರಾದ ಭಕ್ತವಿಶ್ವಾಸಿಗಳು ವಿಶೇಷವಾಗಿ ಬಲಿಪೂಜೆಯಲ್ಲಿ ಪಾಲ್ಗೊಳ್ಳುತ್ತಾ ತಮ್ಮ ಯಾಜಕತ್ವವನ್ನು ವಿಶಿಷ್ಠ ರೀತಿಯಲ್ಲಿ ಚಲಾಯಿಸುತ್ತಾರೆ. ಪವಿತ್ರಾತ್ಮರು ತಂದೆ ದೇವರು ಅವರಿಂದ ಅಪೇಕ್ಷಿಸುವ ಪರಮ ಪಾವನತೆಗೆ ಒಗೊಡುವಂತೆ ಮಾಡುತ್ತಾರೆ.

ದೈವಪ್ರಜೆ ಪ್ರಭು ಕ್ರಿಸ್ತರ ಯಾಜಕ ಪದದಲ್ಲಿ ಅವರನ್ನು ಸತ್ಯದ ಆತ್ಮದಲ್ಲಿ ಅಭ್ಯಂಗಿಸಿರುವುದರಿಂದ ಭಾಗಿಗಳಾಗುತ್ತಾರೆ. ಆದುದರಿಂದ ಭಕ್ತ ವಿಶ್ವಾಸಿಗಳು ಒಂದೇ ಶರೀರವಾಗಿದ್ದು ತಮ್ಮ ವಿಶ್ವಾಸದಲ್ಲಿ ತಪ್ಪಿ ನಡೆಯಲು ಸಾಧ್ಯವಿಲ್ಲ. ಇದೇ ಪವಿತ್ರಾತ್ಮರು ಎಲ್ಲಾ ಅಂತಸ್ತಿನ ಭಕ್ತವಿಶ್ವಾಸಿಗಳಿಗೆ ವಿಶೇಷ ವರಪ್ರಸಾದಗಳನ್ನು ಹಂಚಿ ಕೊಡುತ್ತಾರೆ. ಆದುದರಿಂದ ಅವರು ಧರ್ಮಸಭೆಯ ನವೀಕರಣ ಮತ್ತು ಅಭಿವೃದ್ಧಿಗೆ ತಮ್ಮ ಅಂತಸ್ತಿಗೆ ಅನುಗುಣವಾಗಿ ನೆರವಾಗುತ್ತಾರೆ. ಧರ್ಮಸಭೆಯಲ್ಲಿ ನಿರ್ದಿಷ್ಟ ಅಧಿಕಾರಕ್ಕೆ ಆಯ್ಕೆಯಾದವರು ಇವರನ್ನು ಪರಿಶೀಲಿಸಿ ಮಾರ್ಗದರ್ಶನ ಮಾಡಬೇಕು. ಅವರು ಪವಿತ್ರಾತ್ಮರ ಪ್ರತ್ಯಕ್ಷತೆಯನ್ನು ನಂದಿಸದಂತೆ ಎಚ್ಚರಿಕೆ ವಹಿಸಬೇಕು. ಅವರು ಎಲ್ಲವನ್ನು ಲಕ್ಷವಿಟ್ಟು ಪರಿಶೀಲಿಸಿ ಒಳಿತಾದುದನ್ನು ಸಂರಕ್ಷಿಸಬೇಕು (ನೋಡಿ: ಶ್ರೀ ಸಾಮಾನ್ಯರ ಪ್ರೇಷಿತತ್ವ, ಶಾಸನ).

ದೇವರ ಹೊಸ ಪ್ರಜೆಯ ಸಮುದಾಯವನ್ನು ಸೇರಲು ಎಲ್ಲರಿಗೂ ಕರೆಯೋಣವಿದೆ. ದೇವರ ಏಕ ಪ್ರಜೆಯಾಗಿರುವ ಧರ್ಮಸಭೆಯ ಈ ಲೋಕದ ಎಲ್ಲಾ ರಾಷ್ಟಗಳಲ್ಲೂ ಪ್ರತ್ಯಕ್ಷವಾಗಿದೆ. ಇದರ ಸದಸ್ಯರು ಎಲ್ಲಾ ಜನಾಂಗಳಿಂದ ಆಯ್ಕೆಯಾದವರು. ಆದರೆ ಇವರ ರಾಜ್ಯ ಆರ್ಥಿಕವಲ್ಲ,

ಪಾರಮಾರ್ಥಿಕ, ಸ್ವರ್ಗೀಯ ಸಾಮ್ರಾಜ್ಯ. ದೈವೀಪ್ರಜೆ ಈ ಲೋಕಕ್ಕೆ ಸೇರಿದವರಲ್ಲ ಪರಲೋಕಕ್ಕೆ ಸೇರಿದವರು. ಈ ಪ್ರಜೆ ಭೂಲೋಕದ ಎಲ್ಲಡೆಗಳಲ್ಲಿ ಹರಡಿಕೊಂಡಿದ್ದು ಎಲ್ಲರಿಗೂ ಸೇರಿದವರು. ಈ ಧರ್ಮಸಭೆ ಯುವ ಜನಾಂಗದ ಲೌಕಿಕ ಹಿತಾಸಕ್ತಿಗಳನ್ನು ಕಿತ್ತುಕೊಳ್ಳುವುದಿಲ್ಲ. ಪ್ರತಿಯಾಗಿ ಆ ಜನಾಂಗಗಳ ಸಂಪ್ರದಾಯ ಸಂಸ್ಕೃತಿಯ ಮಾಲ್ಯವನ್ನರಿತು ಅದನ್ನು ಪ್ರೋತ್ಸಾಹಿಸುತ್ತದೆ ಮತ್ತು ಅಳವಡಿಸಿಕೊಳ್ಳುತ್ತದೆ. ಹೀಗೆ ಅದು ಇಡೀ ಮಾನವ ಜನಾಂಗವನ್ನು ಅದರ ಸಮಸ್ತ ಐಸಿರಿಯೊಂದಿಗೆ ಶಿರಸ್ಸಾದ ಪ್ರಭು ಕ್ರಿಸ್ತರ ಪಾದಕ್ಕೆ ಪವಿತ್ರಾತ್ಮರ ಐಕ್ಯದಲ್ಲಿ ತರುತ್ತದೆ. (ನೋಡಿ ಶಾಸನ, ಸಮುದಾಯ ಸಂಪರ್ಕಸಾಧನ, ಪಾಲನಾ ಸಂವಿಧಾನ, ಆಧುನಿಕ ಪ್ರಪಂಚದಲ್ಲಿ ಧರ್ಮಸಭೆ).

ಈ ಏಕ ಮತ್ತು ಸಾರ್ವತ್ರಿಕ ದೈವಪ್ರಜೆಗೆ ಸೇರ್ಪಡೆಯಾಗಿರುವವರು ಮತ್ತು ವಿವಿಧ ರೀತಿಯಲ್ಲಿ ಸಂಬಂಧಪಟ್ಟವರು ಯಾರೆಂದರೆ, ಕಥೋಲಿಕ ವಿಶ್ವಾಸಿಗಳು, ಇತರೆ ಕ್ರೈಸ್ತರು ಮತ್ತು ಎಲ್ಲಾ ಜನರು (ನೋಡಿ ಪ್ರಕಟಣೆ; ಕ್ರೈಸ್ತ ಒಗ್ಗಟ್ಟು, ಶಾಸನ, ಪ್ರಾಚ್ಯ ಕಥೋಲಿಕ ಧರ್ಮಸಭೆ, ಪ್ರಕಟಣೆ, ಕ್ರೈಸ್ತೇತ ಧರ್ಮಗಳೊಂದಿಗೆ ಧರ್ಮಸಭೆಯ ಸಂಬಂಧ ಮತ್ತು ಪ್ರಕಟಣೆ, ಧಾರ್ಮಿಕ ಸ್ವಾತಂತ್ರ್ಯ). ಧರ್ಮಸಭೆಯು ರಕ್ಷಣೆಯಾಗುವುದು ಒಬ್ಬ ಮಧ್ಯಸ್ಥರಾದ ಪ್ರಭು ಕ್ರಿಸ್ತರ ಮುಖಾಂತರ ಮಾತ್ರ. ದೇವರಿಂದ ಯೇಸುಕ್ರಿಸ್ತರ ಮೂಲಕ ಕಥೋಲಿಕ ಧರ್ಮಸಭೆಯ ಸ್ಥಾಪನೆಯಾಗಿದೆ. ಈ ಧರ್ಮಸಭೆ ಆತ್ಮರಕ್ಷಣೆಗೆ ಅತ್ಯಗತ್ಯ. ಈ ಸತ್ಯವನ್ನು ಅರಿತು ಅದನ್ನು ಸೇರಲು ಅಥವಾ ಅದರಲ್ಲಿದ್ದು ಅದನ್ನು ನಿರಾಕರಿಸುವವರು ರಕ್ಷಣೆಯನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಸ್ವಂತ ತಪ್ಪಿಲ್ಲದೆ ಪ್ರಭು ಕ್ರಿಸ್ತರ ಸಂದೇಶ ಮತ್ತು ಅವರ ಧರ್ಮಸಭೆಯ ಬಗ್ಗೆ ಆರಿಯದೆ ಇರುವವರ ವಿಚಾರ ಭಿನ್ನವಾದುದು. ಅವರು ನಿಷ್ಠೆಯಿಂದ ದೇವರನ್ನು ಅರಸುತ್ತಾ ಮನಸಾಕ್ಷಿಗೆ ತಕ್ಕಂತೆ ದೈವಚಿತ್ತವನ್ನು ಕಂಡು ಅದನ್ನು ಈಡೇರಿಸಲು ಪ್ರಯತ್ನಿಸುವವರಿಗೆ ನಿತ್ಯ ರಕ್ಷಣೆ ಖಂಡಿತ ಸಾಧ್ಯ.

ದೇವರ ಪರಾಮರಿಕೆ ಯಾರೊಬ್ಬರಿಗೂ ಆತ್ಮರಕ್ಷಣೆಗೆ ಅಗತ್ಯವಾದ ನೆರವನ್ನು ನಿರಾಕರಿಸುವುದಿಲ್ಲ. ಆದರೆ ಮಾನವರು ದುಷ್ಟಶಕ್ತಿಯಿಂದ ಸುಲಭವಾಗಿ ಮೋಸ ಹೋಗಬಹುದು. ಆದುದರಿಂದಲೇ ಧರ್ಮಸಭೆಯು ಬೋಧನಾ ನಿಯೋಗಗಳನ್ನು ಅತ್ಯಾಸಕ್ತಿಯಿಂದ ಪ್ರೋತ್ಸಾಹಿಸುತ್ತದೆ. ಅದು ದೇವರ ಮಹಿಮೆಯನ್ನು ಘೋಷಿಸಲು ಎಲ್ಲಾ ಮಾನವರ ರಕ್ಷಣೆಗೆ ಆದ್ಯತೆಯನ್ನು ಕೊಡುತ್ತದೆ. ಅದು ಪ್ರಭು ಕೊಟ್ಟ ಆಜ್ಞೆಯನ್ನು "ಶುಭ ಸಂದೇಶವನ್ನು ಸರ್ವಸಷ್ಟಿಗೂ ಬೋಧಿಸಿರಿ" ಹೃದಯ ಪೂರ್ವಕವಾಗಿ ಗಮನಿಸುತ್ತದೆ (ಮಾರ್ಕ 16:16).

ಪಿತ ದೇವರು ಸುತ ಯೇಸುವನ್ನು ಕಳುಹಿಸಿದಂತೆ, ಸುತನು ಅನುಕ್ರಮವಾಗಿ ಪ್ರೇಷಿತರನ್ನು ಕಳುಹಿಸಿದಂತೆ, ಪ್ರೇಷಿತರು ಪ್ರಭುವಿನ ಗಹನ ಕಟ್ಟಳೆಯನ್ನು ಧರ್ಮಸಭೆಗೆ ಹಸ್ತಾಂತರಿಸಿದರು. ಧರ್ಮಸಭೆಗೆ ದೇವರ ರಕ್ಷಣೆಯ ಸುವಾರ್ತೆಯನ್ನು ಭೂಲೋಕದ ಕಟ್ಟಕಡೆಯವರಿಗೂ ಕೊಂಡೊಯ್ಯುವ ಜವಾಬ್ದಾರಿಯಿದೆ. ಈ ಸುವಾರ್ತಾ ಪ್ರಸಾರ ಕಾರ್ಯವನ್ನು ಈಡೇರಿಸುವಂತೆ ಪವಿತ್ರಾತ್ಮರು ಅದನ್ನು ಒತ್ತಾಯ ಪಡಿಸುತ್ತದೆ. ದೇವರ ಪ್ರಜೆಯಾದ ಪ್ರತಿಯೊಬ್ಬನಿಗೂ ಒಂದು ಕರ್ತವ್ಯವಿದೆ: ಎಲ್ಲಾ ಜನಾಂಗಗಳನ್ನು ದೇವರ ಏಕ ಪ್ರಜೆಯನ್ನಾಗಿ ಒಗ್ಗೂಡಿಸುವ ದೈವ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತನ್ನ ಕೈಯಲ್ಲಾದುದನ್ನು ಅವನು ಮಾಡಲೇಬೇಕು.



ಧರ್ಮಸಭೆಯು ತನ್ನದೇ ಆದ ರೀತಿಯಲ್ಲಿ ಸರ್ವಸೃಷ್ಟಿಗಾಗಿ ಪ್ರಾರ್ಥಿಸುತ್ತದೆ ಮತ್ತು ಅದಕ್ಕಾಗಿ ಶ್ರಮಿಸುತ್ತದೆ. ಇದರ ಪರಿಣಾಮವಾಗಿ ಎಲ್ಲಾ ಸೃಷ್ಟಿಯು ದೈವ ಪ್ರಜೆಯಾಗಿ, ಕ್ರಿಸ್ತರ ಶರೀರವಾಗಿ ಮತ್ತು ಪವಿತ್ರಾತ್ಮರ ಆಲಯವಾಗಬೇಕು ಎಂಬುದೇ ಅದರ ಹಂಬಲ. ಹೀಗಾದರೆ ಸೃಷ್ಟಿಕರ್ತರೂ ವಿಶ್ವದ ಪಿತನೂ ಆದ ದೇವರಿಗೆ ಮಾನವ ಕುಲದ ಶಿರಸ್ಸಾದ ಕ್ರಿಸ್ತರಲ್ಲಿ ಸರ್ವ ಗೌರವವೂ ಮಹಿಮೆಯೂ ಸಲ್ಲುವುದು. (ನೋಡಿ : ಶಾಸನ, ಧರ್ಮಸಭೆ ಧರ್ಮಪ್ರಸಾದ ಚಟುವಟಿಕೆ).

## ಧರ್ಮಸಭೆಯ ಶ್ರೇಣಿಯುತ ಅಧಿಕಾರ ವರ್ಗ

ದೈವಪ್ರಜೆಯ ಪೋಷಣೆ ಮತ್ತು ಅದರ ಅವಿರತ ಬೆಳವಣಿಗೆಗೆಂದು ಧರ್ಮಸಭೆಯಲ್ಲಿ ವಿಶೇಷ ವ್ಯವಸ್ಥೆ ಇದೆ. ಅದನ್ನು ಶ್ರೇಣಿಯುತ ಅಧಿಕಾರ ವರ್ಗವೆಂದು ಕರೆಯುತ್ತೇವೆ. ಇದರಲ್ಲಿ ದೈವ ಪ್ರಜೆಯ ಕೆಲವು ಸದಸ್ಯರು ಇತರರ ಮೇಲೆ ಪವಿತ್ರ ಅಧಿಕಾರವನ್ನು ಪಡೆದು ಕೊಂಡಿರುತ್ತಾರೆ. ಈ ಅಧಿಕಾರದ ಹಂಚಿಕೆಯಲ್ಲಿ ವಿವಿಧ ಅಂತಸ್ತುಗಳು ಹಂತಗಳೂ ಇವೆ. ಆದರೂ ಸೇವಾ ನಿಯೋಗವನ್ನು ಪಡೆದಿರುವ ಪವಿತ್ರಾಧಿಕಾರಿಗಳು ಸಹೋದರ ಸದಸ್ಯರ ಸೇವೆಯಲ್ಲಿ ಸದಾ ತೊಡಗಿರುತ್ತಾರೆ. ಹೀಗೆ ದೈವ ಪ್ರಜೆಗೆ ಸೇರಿದವರೆಲ್ಲರೂ ಸಾರ್ವತ್ರಿಕ ಗುರಿ ಮುಟ್ಟಲು ಶ್ರಮಿಸುತ್ತಾ ರಕ್ಷಣೆಯನ್ನು ಹೊಂದುತ್ತಾರೆ.

ಈ ಶ್ರೇಣಿಯುತ ಅಧಿಕಾರ ವರ್ಗದಲ್ಲಿ ಪ್ರಥಮ ಸ್ಥಾನ ಜಗದ್ಗುರುಗಳಿಗೆ ಸೇರುತ್ತದೆ. ಸಂತ ಪೇತ್ರರ ಉತ್ತರಾಧಿಕಾರಿಯಾದ ಇವರು ನಿಜವಾಗಿ ದೇವರ ಸೇವಕರ ಸೇವಕರು. ಅವರು ಇಡೀ ಧರ್ಮಸಭೆಯ ಮೇಲೆ ಅತ್ಯುಚ್ಚ ಮತ್ತು ಸಾರ್ವತ್ರಿಕ ಅಧಿಕಾರವನ್ನು ಹೊಂದಿರುತ್ತಾರೆ. ಪ್ರಭು ಕ್ರಿಸ್ತರ ಪ್ರತಿನಿಧಿಯಾದ ಇವರು ಧರ್ಮಸಭೆಯ ಗೋಚರ ಶಿರಸ್ಸಾಗಿದ್ದಾರೆ.

ಧರ್ಮಾಧ್ಯಕ್ಷರುಗಳು ಪ್ರೇಷಿತರ ಉತ್ತರಾಧಿಕಾರಿಗಳಾಗಿ ಜಗದ್ಗುರುಗಳೊಂದಿಗೆ ಒಂದು ಸ್ಥಾಯಿ ಸಮಿತಿಯನ್ನು ಸ್ಥಾಪಿಸುತ್ತಾರೆ. ಈ ಮಂಡಲಿ ಜಗದ್ಗುರುಗಳು ಅದರ ಶಿರಸ್ಸಾಗಿ ವಿಶ್ವವ್ಯಾಪಿ ಧರ್ಮಸಭೆಯ ಮೇಲೆ ಸಂಪೂರ್ಣ ಮತ್ತು ಸರ್ವೋಚ್ಚ ಅಧಿಕಾರವನ್ನು ಹೊಂದಿದೆ. ಇದನ್ನು ಸಹಯೋಗಿತ್ವ ಧರ್ಮತತ್ವ ಎನ್ನುತ್ತಾರೆ. ಪೇತ್ರ ಮತ್ತು ಇತರ ಪ್ರೇಷಿತರು ಪ್ರೇಷಿತ ಮಂಡಲಿಯ ನೇತಾರರು. ನಮ್ಮ ಪ್ರಭು, ಜಗದ್ಗುರು ಮತ್ತು ಧರ್ಮಾಧ್ಯಕ್ಷರೊಂದಿಗೆ ಈ ವ್ಯವಸ್ಥೆಯನ್ನು ಮುಂದುವರಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿದರು.

ಧರ್ಮಾಧ್ಯಕ್ಷ ದೀಕ್ಷೆಯೊಂದಿಗೆ ಧರ್ಮಾಧ್ಯಕ್ಷರು ಈ ಮಂಡಲಿಯ ಸದಸ್ಯರಾಗುತ್ತಾರೆ. ಈ ಸಂಸ್ಕಾರ ಅವರ ಮೇಲೆ ಯಾಜಕತ್ವದ ಸಂಪೂರ್ಣತೆಯನ್ನು ಪ್ರದಾನ ಮಾಡುತ್ತದೆ. ಧರ್ಮಸಭೆ ಎಂಬ ಕ್ರಿಸ್ತರ ಸಂಪೂರ್ಣ ಶರೀರದ ಮೇಲೆ ಧರ್ಮಾಧ್ಯಕ್ಷರುಗಳಿಗೆ ಒಂದು ಸಾಮಾನ್ಯ ಜವಾಬ್ದಾರಿ ಇದೆ. ಅವರು ಇಡೀ ದೈವಪ್ರಜೆಯ ಸೇವೆಯಲ್ಲಿ ತಮ್ಮನ್ನೇ ತೊಡಗಿಸಿಕೊಳ್ಳಬೇಕು. ತಮ್ಮ ವಶಕ್ಕೆ ಕೊಟ್ಟ ಧರ್ಮಕ್ಷೇತ್ರ ಅಖಿಲ ಧರ್ಮಸಭೆಯ ಭಾಗವೆಂಬುದನ್ನು ಅರಿತು ಕ್ರಿಸ್ತರ ಇಡೀ ಆತ್ಮಿಕ ಶರೀರದ ಅಭಿವೃದ್ಧಿಗಾಗಿ ಅವರು ಸಕ್ರಿಯವಾಗಿ ದುಡಿಯಬೇಕು. ಧರ್ಮಾಧ್ಯಕ್ಷ ಮಂಡಲಿ ಅನೇಕ ಧರ್ಮಾಧ್ಯಕ್ಷರಿಂದ ರೂಪಿತಗೊಂಡಿದ್ದು, ಅದು ದೈವಪೂಜೆಯ ವೈವಿಧ್ಯತೆಯಲ್ಲಿ ಸಾರ್ವತ್ರಿಕತೆಯನ್ನು ವ್ಯಕ್ತಪಡಿಸುತ್ತದೆ. ಅದು ಒಂದೇ ಶಿರಸ್ಸಿನ ನೇತೃತ್ವದಲ್ಲಿ

## ಶ್ರೀ ಸಾಮಾನ್ಯರು

ಶ್ರೇಣಿಯುತ ಅಧಿಕಾರ ವರ್ಗದ ಕರ್ತವ್ಯಗಳನ್ನು ಪ್ರಸ್ತಾಪಿಸಿದ ನಂತರ ವ್ಯಾಟಿಕನ್ ಸಮ್ಮೇಳನ ಶ್ರೀ ಸಾಮಾನ್ಯರೆಂದು ಕರೆಯಲಾದ ಕ್ರೈಸ್ತ ವಿಶ್ವಾಸಿಗಳತ್ತ ತನ್ನ ಗಮನವನ್ನು ಹರಿಸಿದೆ. ದೈವ ಪ್ರಜೆಯ ಬಗ್ಗೆ ಹೇಳಿರುವುದೆಲ್ಲವು ಶ್ರೀಸಾಮಾನ್ಯರಾದ ಸ್ತ್ರೀ ಪುರುಷರಿಗೂ ಧಾರ್ಮಿಕ ವ್ಯಕ್ತಿಗಳಿಗೂ ಯಾಜಕ ವರ್ಗಕ್ಕೂ ಅನ್ವಯಿಸುತ್ತದೆ. ಪ್ರಸ್ತುತ ಕಾಲದಲ್ಲಿ ಪ್ರಭು ಕ್ರಿಸ್ತರ ಆತ್ಮಿಕ ಶರೀರದ ಬೆಳವಣಿಗೆಗಾಗಿ ದುಡಿಯುವುದು ಅತ್ಯಗತ್ಯ.

ಶ್ರೀ ಸಾಮಾನ್ಯರು ಎಂದರೆ ಪವಿತ್ರ ಅಭಿಷೇಕ ಮತ್ತು ಸನ್ಯಾಸ ವರ್ಗಕ್ಕೆ ಸೇರದೆ ಇರುವ ಭಕ್ತರು. ಇವರು ದೈವಪ್ರಜೆಯ ಪೂರ್ಣ ಸದಸ್ಯರಾಗಿದ್ದು ಧರ್ಮಸಭೆಯ ಸೇವಾ ನಿಯೋಗದಲ್ಲಿ ಪೂರ್ಣ ಭಾಗಿದಾರರು. ಲೌಕಿಕ ವ್ಯವಹಾರಗಳಲ್ಲಿ ಅವರು ಕಲೆತಿರುವುದು ಶ್ರೀಸಾಮಾನ್ಯರ ವಿಶೇಷ ಗುಣಲಕ್ಷಣ. ಅವರು ಈ ಲೋಕದಲ್ಲಿ ಜೀವಿಸುತ್ತಿದ್ದು ವಿವಿಧ ಪ್ರಾಪಂಚಿಕ ವೃತ್ತಿ ಉದ್ದೇಶಗಳಲ್ಲಿ ತಮ್ಮನ್ನೆ ತೊಡಗಿಸಿಕೊಂಡಿರುತ್ತಾರೆ. ಕುಟುಂಬ ಜೀವನ ಮತ್ತು ಸಾಮಾಜಿಕ ಬಾಳು ಅವರ ವಾಸ್ತವತೆಯಾಗಿದೆ. ಲೌಕಿಕ ವ್ಯವಹಾರಗಳಲ್ಲಿ ತಮ್ಮನ್ನೆ ತೊಡಗಿಸಿಕೊಂಡಿರುವ ಇವರು ಅದನ್ನು ಕ್ರಮಬದ್ಧ ಪಡಿಸಿಕೊಂಡು ಅದರಲ್ಲೇ ದೇವರ ಚಿತ್ತಕ್ಕೆ ಅನುಗುಣವಾಗಿ ದೈವೀ ರಾಜ್ಯವನ್ನು ಅರಸಬೇಕಾಗಿದೆ. ಶುಭ ಸಂದೇಶದ ಭಾವನೆಗಳಿಂದ ಪ್ರೇರಿತರಾದ ಇವರು ಈ ಲೋಕದಲ್ಲಿ ಹುದುಗಿನಂತೆ ಆಂತರಿಕವಾಗಿ ಕ್ರಿಯಾತ್ಮಕರಾಗಬೇಕು. ದೈವೀಪ್ರಜೆಯಲ್ಲಿ ಅಧಿಕಾರವರ್ಗ ಮತ್ತು ಶ್ರೀ ಸಾಮಾನ್ಯರು ಅಂತಸ್ತು ಮತ್ತು ಚಟುವಟಿಕೆಗಳಲ್ಲಿ ನಿಜವಾಗ್ಯೂ ಸರಿಸಮಾನರು. ಏಕೆಂದರೆ ಇವರೆಲ್ಲರೂ ಪ್ರಭು ಕ್ರಿಸ್ತರ ಆತ್ಮಿಕ ಶರೀರವನ್ನು ಬೆಳೆಸುವ ಕ್ರೈಸ್ತ ವಿಶ್ವಾಸಿಗಳು. ಇವರೆಲ್ಲರೂ ಒಂದೇ ಶರೀರದ ಅಂಗಗಳಾಗಿ ದುಡಿಯುವವರು. ಇವರೆಲ್ಲರೂ ದೇವರನ್ನು ತಂದೆ ಹಾಗೂ ಪ್ರಭು ಕ್ರಿಸ್ತರನ್ನು ಜೇಷ್ಠ ಸಹೋದರರನ್ನಾಗಿ ಪಡೆದಿದ್ದಾರೆ. ಆದುದರಿಂದ ಎಲ್ಲರೂ ಸಹೋದರ ಸಹೋದರಿಯರಂತಿರಬೇಕು. ಈ ಮನೋಭಾವದಿಂದಲೇ ಶ್ರೀ ಸಾಮಾನ್ಯರು ತಮ್ಮ ಪಾಲಕರೊಂದಿಗೆ ಮತ್ತು ಬೋಧಕರೊಂದಿಗೆ ಸಹಕರಿಸಲು ಸಿದ್ಧರಾಗುವರು.

ಶ್ರೀಸಾಮಾನ್ಯರ ಪ್ರೇಷಿತತ್ವ ಪ್ರಭು ಕ್ರಿಸ್ತರ ಮತ್ತು ಧರ್ಮಸಭೆಯ ನಿಯೋಗದೊಂದಿಗೆ ಭಾಗವಹಿಸುವುದರಲ್ಲಿ ಅಡಕವಾಗಿದೆ. ದೀಕ್ಷಾಸ್ನಾನ ಮತ್ತು ದೃಢೀಕರಣ ಸಂಸ್ಕಾರಗಳ ಮುಖಾಂತರ ಪ್ರಭು ಕ್ರಿಸ್ತರೇ ಎಲ್ಲರನ್ನು ಈ ಪ್ರೇಷಿತತ್ವಕ್ಕೆ ಆದೇಶಿಸುತ್ತಾರೆ. ಎಲ್ಲ ಪ್ರೇಷಿತತ್ವದ ಕೇಂದ್ರವಾಗಿರುವ ಪರಮ ಪ್ರಸಾದದ ಮುಖಾಂತರ ಅವರನ್ನು ಪ್ರಭು ಪ್ರೀತಿಯಿಂದ ಪೋಷಿಸುತ್ತಾರೆ. ಎಲ್ಲರೂ ಅವರಿದ್ದ ಪರಿಸರದಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಧರ್ಮಸಭೆಯನ್ನು ಪ್ರತ್ಯಕ್ಷಗೊಳಿಸಬೇಕು. ಶ್ರೀಸಾಮಾನ್ಯ ಸ್ತ್ರೀ ಪುರುಷರ ಮುಖಾಂತರ ಮಾತ್ರ ಧರ್ಮಸಭೆಯು ನಿಜವಾಗಿ ಭೂಮಿಯ ಉಪ್ಪಾಗಲು ಸಾಧ್ಯ.

ಶ್ರೀಸಾಮಾನ್ಯ ಸ್ತ್ರೀ ಪುರುಷರು ತಮ್ಮ ದಿನ ನಿತ್ಯದ ಬಾಳಿನ ಪ್ರತಿ ಕಾರ್ಯಕಲಾಪಗಳಲ್ಲಿ ತಮ್ಮ ಯಾಜಕತ್ವವನ್ನು ಚಲಾಯಿಸಬಹುದು. ಅವರ ಎಲ್ಲಾ ಕೆಲಸ ಕಾರ್ಯಗಳಲ್ಲಿ ಅಂದರೆ ಪ್ರಾರ್ಥನೆ ಮತ್ತು ಪ್ರೇಷತತ್ವ ಕಾರ್ಯ, ಅವರ ದಾಂಪತ್ಯ ಜೀವನ ಮತ್ತು ಕುಟುಂಬ ಬಾಳ್ವೆ, ದೈನಂದಿನ ಕೆಲಸಕಾರ್ಯ, ಮಾನಸಿಕ ಮತ್ತು ದೈಹಿಕ ಮನರಂಜನೆ, ಬಾಳಿನ ಬೇನೆ ಬವಣೆಯಲ್ಲೂ ಸಮಸ್ತವನ್ನು ದೇವರ ಮಹಿಮೆ ಮತ್ತು ಮಾನವರ ರಕ್ಷಣೆಗಾಗಿ ತಮ್ಮನ್ನೆ ಸಮರ್ಪಿಸಿ ಕೊಳ್ಳಬಹುದು. ಹೀಗೆ ಅವರು ಈ ಲೋಕವನ್ನು ಪವಿತ್ರೀಕರಿಸಬಹುದು.



ಪ್ರಭು ಕ್ರಿಸ್ತರ ಮಂದೆಯ ಐಕ್ಯತೆಯನ್ನು ವ್ಯಕ್ತ ಪಡಿಸುತ್ತದೆ. ಪ್ರತಿಯೊಬ್ಬ ಧರ್ಮಾಧ್ಯಕ್ಷರು ತಮ್ಮ ಸ್ಥಳೀಯ ಧರ್ಮಸಭೆಯನ್ನು ಪ್ರತಿನಿಧಿಸುತ್ತಾರೆ. ಎಲ್ಲಾ ಧರ್ಮಾಧ್ಯಕ್ಷರು ಜಗದ್ಗುರುಗಳೊಂದಿಗೆ ಜೊತೆಗೂಡಿ ಶಾಂತಿ, ಪ್ರೀತಿ, ಐಕ್ಯಮತ್ಯದಿಂದ ಒಂದಾಗಿರುವ ಅಖಿಲ ಧರ್ಮಸಭೆಯನ್ನು ಪ್ರತಿಬಿಂಬಿಸುತ್ತಾರೆ.

ಧರ್ಮಾಧ್ಯಕ್ಷರು ಗುರುಗಳು ಮತ್ತು ಸೇವಾದರ್ಶಿಗಳ ನೆರವನ್ನು ಪಡೆದು ದೈವಪ್ರಜೆಯ ಸೇವೆಯಲ್ಲಿ ಮಗ್ನರಾಗುತ್ತಾರೆ. ಗುರುಗಳು ಮತ್ತು ಸೇವಾದರ್ಶಿಗಳು ಧರ್ಮಾಧ್ಯಕ್ಷರ ಅಧಿಕಾರದಲ್ಲಿ ಸಹಭಾಗಿಗಳಾಗುತ್ತಾರೆ. ಧರ್ಮಾಧ್ಯಕ್ಷರು ದೇವರ ಸ್ಥಾನದಲ್ಲಿದ್ದು ಕ್ರಿಸ್ತರ ವ್ಯಕ್ತಿತ್ವವನ್ನು ಧರಿಸಿ ತಮ್ಮ ವಶದಲ್ಲಿರುವ ಮಂದೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಅವರೇ ಮಂದೆಯ ಪಾಲಕರು, ಸತ್ಯವನ್ನು ಕಲಿಸುವ ಬೋಧಕರು, ದೈವಾರಾಧನೆಯನ್ನು ಮಾಡುವ ಪುರೋಹಿತರು, ಆಡಳಿತವನ್ನು ನಡೆಸುವ ಮುಖಂಡರು. ಧರ್ಮಾಧ್ಯಕ್ಷರ ವ್ಯಕ್ತಿತ್ವದಲ್ಲಿ ಭಕ್ತವಿಶ್ವಾಸಿಗಳು ಪ್ರಭು ಕ್ರಿಸ್ತರನ್ನು ಕಾಣಬಹುದು. ಅವರು ಈ ಸಮುದಾಯದ ಪಾಲಕರು. ಧರ್ಮಾಧ್ಯಕ್ಷರು ತಮ್ಮ ಪ್ರಜೆಯ ಅಧಿಕೃತ ಬೋಧಕರು. ಅವರು ಪವಿತ್ರೀಕರಿಸುವ ಪುರೋಹಿತರಾಗಿದ್ದು ಪರಮ ಪ್ರಸಾದವನ್ನು ಪ್ರತಿಷ್ಠಾಪಿಸುತ್ತಾರೆ. ಇದನ್ನು ಕ್ರಿಸ್ತರ ಪ್ರತಿನಿಧಿ ಮತ್ತು ರಾಯಭಾರಿಯಾಗಿ ನಿರ್ವಹಿಸುತ್ತಾರೆ. ಅವರು ಪಾಲಕರಾಗಿ ತಮ್ಮ ವಶದಲ್ಲಿರುವ ಕ್ರೈಸ್ತರನ್ನು ಮಾತ್ರವಲ್ಲ, ಕ್ರಿಸ್ತರನ್ನು ಅರಿಯದ ಇತರರನ್ನು ಈ ಮಂದೆಗೆ ತರಲು ಪ್ರಯತ್ನಿಸುತ್ತಾರೆ. ಹೀಗೆ ಅವರು ಪ್ರಭುವಿನ ಆದೇಶ ಕಾರ್ಯಗತಗೊಳಿಸುವ ಹೊಣೆಗಾರಿಕೆಯನ್ನು ಹೊಂದಿದ್ದಾರೆ. ಭಕ್ತ ವಿಶ್ವಾಸಿಗಳು, ಧರ್ಮಸಭೆ ಕ್ರಿಸ್ತರನ್ನು ಅವಲಂಭಿಸುವಂತೆ, ಧರ್ಮಾಧ್ಯಕ್ಷರೊಂದಿಗೆ ಹೊಂದಿಕೊಂಡಿರಬೇಕು (ನೋಡಿ ಶಾಸನ: ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರ ಪಾಲನಾ ಪದ).

ಯಾಜಕರು ತಮ್ಮ ಧರ್ಮಾಧ್ಯಕ್ಷರ ಮುಖಾಂತರ ಪ್ರಭು ಕ್ರಿಸ್ತರ ಯಾಜಕತ್ವದಲ್ಲಿ ಪಾಲ್ಗೊಳ್ಳುತ್ತಾರೆ. ಈ ಯಾಜಕತ್ವವನ್ನು ಅವರು ಎಲ್ಲಕ್ಕೂ ಮಿಗಿಲಾಗಿ ಯೇಸುಕ್ರಿಸ್ತರ ವ್ಯಕ್ತಿತ್ವದಲ್ಲಿ ಪರಮ ಪ್ರಸಾದ ಪ್ರತಿಷ್ಠಾಪನೆಯಲ್ಲಿ ಮತ್ತು ಇತರ ಸಂಸ್ಕಾರಗಳ ವಿತರಣೆಯಲ್ಲಿ ಕಾರ್ಯಗತಗೊಳಿಸುತ್ತಾರೆ. ಧರ್ಮಾಧ್ಯಕ್ಷರೊಂದಿಗೆ ಸಹ ಕಾರ್ಮಿಕರಾಗಿ ಅವರು ಯಾಜಕ ಮಂಡಲಿಯಾಗುತ್ತಾರೆ. ಅವರು ಧರ್ಮಕೇಂದ್ರದಲ್ಲಿ ಒಂದಲ್ಲ ಇನ್ನೊಂದು ರೀತಿಯಲ್ಲಿ ಧರ್ಮಾಧ್ಯಕ್ಷರನ್ನು ಪ್ರತ್ಯಕ್ಷಗೊಳಿಸುತ್ತಾರೆ. ಹೀಗೆ ಸಾರ್ವತ್ರಿಕ ಧರ್ಮಸಭೆ ಪ್ರತಿ ಸ್ಥಳೀಯ ಧರ್ಮಕೇಂದ್ರದಲ್ಲಿ ಗೋಚರವಾಗುತ್ತದೆ. ಗುರುಗಳು ಪ್ರಭು ಕ್ರಿಸ್ತರ ಆಧ್ಯಾತ್ಮಿಕ ಶರೀರದ ಬೆಳವಣಿಗೆಗೆ ಸಕ್ರಿಯವಾಗಿ ನೆರವಾಗುತ್ತಾರೆ. ಅವರು ಧರ್ಮಾಧ್ಯಕ್ಷರನ್ನು ತಮ್ಮ ತಂದೆಯೆಂದೂ ಇತರ ಗುರುಗಳನ್ನು ಸಹೋದರರೆಂದು ಪರಿಗಣಿಸಿ ಅವರೊಂದಿಗೆ ಸಹಕರಿಸಬೇಕು. ದೈವಪ್ರಜೆಯ ಯೋಗಕ್ಷೇಮವೇ ಅವರ ಏಕೈಕ ಕಾಳಜಿಯಾಗಿರಬೇಕು. ಈ ಕಾಳಜಿ ಅವರನ್ನು ದೇವರು ತಮ್ಮ ವಶಕ್ಕೆ ನೀಡಿದ ಪ್ರಜೆಯನ್ನು ಪ್ರೀತಿಸುವಂತೆ ಮಾಡುತ್ತದೆ. (ನೋಡಿ : ಶಾಸನ, ಯಾಜಕರ ಜೀವನ ಮತ್ತು ಸೇವಾ ವೃತ್ತಿ ಮತ್ತು ಶಾಸನ : ಯಾಜಕತ್ವದ ತರಬೇತಿ).

ಕ್ರೈಸ್ತ ಶ್ರೀ ಸಾಮಾನ್ಯರು ತಮ್ಮ ಸಾಕ್ಷ್ಯ ಜೀವನ ಮತ್ತು ಕ್ರಿಸ್ತೀಯ ವಿಚಾರ ವಿನಿಮಯದ ಮುಖಾಂತರ ಪ್ರಭು ಕ್ರಿಸ್ತರನ್ನು ಪ್ರಚಾರ ಪಡಿಸುತ್ತಾ ತಮ್ಮ ಪ್ರವಾದನಾ ಪದವನ್ನು ಚಲಾಯಿಸಬಹುದು. ಆದುದರಿಂದ ದೇವರು ಪ್ರಕಟಗೊಳಿಸಿರುವ ಸತ್ಯಗಳ ಬಗ್ಗೆ ಅವರು ಆಳವಾದ ಜ್ಞಾನವನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು. (ನೋಡಿ : ಸಂವಿಧಾನ, ದೈವೀ ಪ್ರಕಟಣೆ) ವಿಶೇಷ ಸಂಸ್ಕಾರದಿಂದ ಪುನೀತಗೊಂಡ ಶ್ರೀಸಾಮಾನ್ಯರು ತಮ್ಮ ಕುಟುಂಬ ಜೀವನದಲ್ಲೇ ಪ್ರೇಷಿತತ್ವವನ್ನು ಚಲಾಯಿಸುತ್ತಾರೆ. ಪತಿ ಪತ್ನಿಯರು ಪರಸ್ಪರರಿಗೆ ಮತ್ತು ತಮ್ಮ ಮಕ್ಕಳಿಗೆ ವಿಶ್ವಾಸ ಮತ್ತು ಕ್ರಿಸ್ತ ಪ್ರೀತಿಯ ಸಾಕ್ಷಿಗಳಾಗಿರಬೇಕು.

ದೇವರ ಸಾಮ್ರಾಜ್ಯ ಸತ್ಯ ಮತ್ತು ಜೀವನ, ಪಾವಿತ್ರ್ಯತೆ ಮತ್ತು ವರಪ್ರಸಾದ, ನೀತಿ ಪ್ರೀತಿ ಮತ್ತು ಶಾಂತಿಯ ರಾಜ್ಯವಾಗಿದ್ದು, ಎಲ್ಲ ಜನರನ್ನು ಮತ್ತು ವಸ್ತುಗಳನ್ನು ಒಳಗೊಂಡಿರಬೇಕು. ಈ ಸಾಮ್ರಾಜ್ಯವನ್ನು ಶ್ರೀ ಸಾಮಾನ್ಯರು ಹರಡಬೇಕು. ಶ್ರೀಸಾಮಾನ್ಯರು ಪ್ರಭು ಕ್ರಿಸರ್ತ ಅರಸು ಪದದಲ್ಲಿ ಪಾಲ್ಗೊಳ್ಳುತ್ತಾರೆ. ಎಲ್ಲ ಜನರನ್ನು ಮತ್ತು ಎಲ್ಲ ವಸ್ತುಗಳನ್ನು ದೇವರ ಮಹಿಮೆ ಮತ್ತು ರಕ್ಷಣೆಗಾಗಿ ಹೇಗೆ ನಿಯೋಜಿಸಬಹುದು ಎಂಬುದನ್ನು ಕಂಡುಕೊಳ್ಳಲು ಈ ಅರಸುಪದ ಅವರನ್ನು ಆಮಂತ್ರಿಸುತ್ತದೆ. ಅವರು ತಮ್ಮ ಶಕ್ತ್ಯಾನುಸಾರ ಈ ಸೃಷ್ಟಿ ವಸ್ತುಗಳನ್ನು ಮಾನವ ದುಡಿಮೆ, ಕಲಾಕೌಶಲ್ಯ ಮತ್ತು ಸಾಮಾಜಿಕ ಸಂಸ್ಕೃತಿಯಿಂದ ಉತ್ತಮಗೊಳಿಸಲು ಪ್ರಯತ್ನಿಸಬೇಕು. ಈ ಎಲ್ಲಾ ವಸ್ತುಗಳು ಸರ್ವರಿಗೂ ಸಮಾನವಾಗಿ ಹಂಚಿಕೆಯಾಗಿವೆಯೇ ಎಂಬುದನ್ನು ನೋಡಬೇಕು. ಆಗ ಪ್ರಭು ಕ್ರಿಸ್ತರು ತಮ್ಮ ರಕ್ಷಣಾ ಜ್ಯೋತಿಯಿಂದ ಮಾನವ ಸಮಾಜವನ್ನು ಬೆಳಗಿಸುವರು. ಸಮಾಜದ ಸದಸ್ಯರು, ಧರ್ಮಸಭೆಯ ಅಂಗಾಂಗಗಳಾಗಿರುವ ಶ್ರೀ ಸಾಮಾನ್ಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಒಂದುಗೂಡಿಸಲು ಆಸಕ್ತರಾಗಬೇಕು. ಲೌಕಿಕ ವ್ಯವಹಾರಗಳಲ್ಲಿ ಮಗ್ನರಾಗಿರುವ ಪ್ರತಿಯೊಬ್ಬ ವಿಶ್ವಾಸಿಗೆ ಕ್ರೈಸ್ತ ಮನಸ್ಸಾಕ್ಷಿ ಅವನಿಗೆ ಬೆಳಕು ಮತ್ತು ಮಾರ್ಗದರ್ಶಿಯಾಗಿರಬೇಕು. ಏಕೆಂದರೆ ದೇವರೇ ಈ ಎಲ್ಲಾ ವಸ್ತುಗಳ ಒಡೆಯರು.

ಅಧಿಕಾರ ವರ್ಗ ಮತ್ತು ಶ್ರೀಸಾಮಾನ್ಯರು ತಾವು ಒಂದೇ ದೈವಪ್ರಜೆಗೆ ಸೇರಿದವರು ಎಂಬುದನ್ನು ಮನಗಾಣಬೇಕು. ಅವರು ಒಂದೇ ಕುಟುಂಬದಂತೆ ಇರುವುದರಿಂದ ಪ್ರತಿಯೊಬ್ಬರೂ ಇಡೀ ಕುಟುಂಬದ ಯೋಗಕ್ಷೇಮದ ಬಗ್ಗೆ ಕಾಳಜಿವಹಿಸಬೇಕು. ಇಂತಹ ಭಾವನೆ ಅವರಲ್ಲಿರುವಾಗ ಧರ್ಮಸಭೆಯ ಒಳಿತಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಹೊಂದಿದ್ದಾರೆ ಮಾತ್ರವಲ್ಲ ಕೆಲವು ಸಂದರ್ಭಗಳಲ್ಲಿ ಅದು ಅವರ ಕರ್ತವ್ಯವೂ ಆಗಿರುತ್ತದೆ. ಆದರೆ ಪ್ರಭು ಕ್ರಿಸ್ತರ ಪ್ರತಿನಿಧಿಗಳಾಗಿರುವ ಪಾಲಕರು ಕೊಡುವ ತೀರ್ಮಾನಗಳನ್ನು ಸಿದ್ಧ ಮನಸ್ಸಿನಿಂದ ಸ್ವೀಕರಿಸಲು ಶಕ್ತರಾಗಿರಬೇಕು. ಪಾಲಕರು ಶ್ರೀ ಸಾಮಾನ್ಯರ ಹೊಣೆಗಾರಿಕೆಗೆ ಮಾನ್ಯತೆಯನ್ನು ಕೊಟ್ಟು ಅದನ್ನು ಪ್ರೋತ್ಸಾಹಿಸುವ ಬುದ್ಧಿಮಾತಿನ ಪ್ರಯೋಜನೆ ಪಡೆದುಕೊಳ್ಳಲು ಸಿದ್ಧರಾಗಿರಬೇಕು. ದೈವ ಪ್ರಜೆಯ ಸದಸ್ಯರು ಶಕ್ತಿಯನ್ನು ಕ್ರೋಢಿಕರಿಸಿದರೆ ಧರ್ಮಸಭೆ ತನ್ನ ಸೇವಾ ನಿಯೋಗವನ್ನು ಭೂಲೋಕದ ಒಳಿತಿಗೆ ಫಲಪ್ರದಗೊಳಿಸಬಹುದು. (ನೋಡಿ: ಶಾಸನ, ಶ್ರೀ ಸಾಮಾನ್ಯರ ಪ್ರೇಷಿತತ್ವ).



## ಪಾವನತೆಗೆ ಸಾರ್ವತ್ರಿಕ ಕರೆ

ವ್ಯಾಟಿಕನ್ ಸಮ್ಮೇಳನ ಧರ್ಮಸಭೆಯ ರಹಸ್ಯವನ್ನು ಗುರುತಿಸಿ ಅದರ ಏಕತೆ, ಕಥೋಲಿಕತೆ ಮತ್ತು ಪ್ರೇಷಿತತೆಯನ್ನು ಎತ್ತಿ ಹಿಡಿದಿದೆ. ದೇವಪುತ್ರ ಪ್ರಭು ಕ್ರಿಸ್ತರ ಆತ್ಮಿಕ ಶರೀರವಾಗಿರುವುದರಿಂದ ಧರ್ಮಸಭೆ ಪುನೀತವಾಗಿದೆ. ಅವರು ಅದನ್ನು ಪವಿತ್ರಾತ್ಮರ ವರದಾನಗಳಿಂದ ತುಂಬಿರುವರು. ಆದುದರಿಂದ ಧರ್ಮಸಭೆಯಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ಅಧಿಕಾರ ವರ್ಗ ಅಥವಾ ಅವರ ಪಾಲನೆಗೆ ಒಳಪಟ್ಟವರು ಪಾವನತೆಯ ಕರೆಯನ್ನು ಹೊಂದಿದ್ದಾರೆ. ದೇವರಿಂದ ಕರೆಯನ್ನು ಪಡೆದು ಪ್ರಭು ಯೇಸುವಿನಿಂದ ನೀತಿಗೆ ಪಾತ್ರರಾಗಿ ದೀಕ್ಷಾಸ್ನಾನದ ಮುಖಾಂತರ ದೇವರ ಮಕ್ಕಳಾಗಿ ದೈವಿಕ ಜೀವನದಲ್ಲಿ ಪಾಲುದಾರರಾಗಿದ್ದಾರೆ. ಹೀಗೆ ಅವರು ಯಥಾರ್ಥವಾಗಿ ಪುನೀತರಾಗಿದ್ದಾರೆ. ದೇವರ ಕೊಡುಗೆಯಾಗಿರುವ ಈ ಪಾವನತೆಯಲ್ಲಿ ಅವರು ಪೂರ್ಣ ಪ್ರಮಾಣದಲ್ಲಿ ಜೀವಿಸಬೇಕು. ಅವರು ಯಾವ ಸ್ಥಾನಮಾನ ಅಂತಸ್ತಿನಲ್ಲಿದ್ದರೂ ಎಲ್ಲಾ ವಿಶ್ವಾಸಿಗಳು ಕ್ರಿಸ್ತೀಯ ಜೀವನದ ಪೂರ್ಣತೆ ಮತ್ತು ಕ್ರಿಸ್ತೀಯ ಜೀವನದ ಪರಸ್ನೇಹದ ಪರಿಪೂರ್ಣತೆಗೆ ಕರೆಯನ್ನು ಹೊಂದಿದ್ದಾರೆ. ಈ ಪಾವನತೆ ಲೌಕಿಕ ಸಮಾಜದ ಪರಿಸ್ಥಿತಿಯನ್ನು ಉತ್ತಮಗೊಳಿಸಿ ಸಮಾಜದ ಬೆಳವಣಿಗೆಗೆ ನೆರವಾಗುತ್ತದೆ. ಧರ್ಮಾಧ್ಯಕ್ಷರು, ಗುರುಗಳು ಮತ್ತು ಕನಿಷ್ಠ ದರ್ಜೆಯ ಸೇವಾಕರ್ತರು ಅವರವರು ಪಡೆದ ಕೊಡುಗೆ ಮತ್ತು ಕರ್ತವ್ಯಗಳಿಗೆ ಅನುಗುಣವಾಗಿ ನಡೆಯುತ್ತಾ ಪಾವನತೆಯ ಮಾರ್ಗದಲ್ಲಿ ಮುಂದಾಳುಗಳಾಗಬೇಕು. ವ್ಯಾಟಿಕನ್ ಸಮ್ಮೇಳನ ಎಲ್ಲ ವರ್ಗದ ಜನರನ್ನು ಅಂದರೆ ವಿವಾಹಿತರನ್ನು ಬಾಲಕಾರ್ಮಿಕರನ್ನು ವ್ಯಾದಿಸ್ಥರನ್ನು, ಸಂಕಟದಲ್ಲಿರುವವರನ್ನು, ಬಡವರನ್ನು ಮತ್ತು ಎಲ್ಲಾ ವಿಧದ ಲೌಕಿಕ ಉದ್ಯೋಗಗಳಲ್ಲಿ ಮಗ್ನರಾಗಿರುವವರನ್ನು ಗುರುತಿಸಿ ಇವರೆಲ್ಲರೂ ಪಾವನತೆಗೆ ಕರೆಯನ್ನು ಹೊಂದಿದ್ದಾರೆ ಎಂದು ಎಚ್ಚರಿಸುತ್ತದೆ.

ಧರ್ಮಸಭೆಯ ಜೀವನದಲ್ಲಿ ಪಾವನತೆಯ ಮಾರ್ಗ ಮತ್ತು ಅದನ್ನು ಗಳಿಸುವ ರೀತಿ ಸ್ಪಷ್ಟವಾಗಿ ಗುರುತಿಸಲಾಗಿದೆ. ಪರಸ್ನೇಹಕ್ಕೆ ಪ್ರಥಮ ಸ್ಥಾನ ನೀಡಲಾಗಿದೆ. ಈ ಪರಸ್ನೇಹ ಬೆಳೆಯಬೇಕಾದರೆ ಪ್ರತಿಯೊಬ್ಬರೂ ಪೂರ್ಣ ಮನಸ್ಸಿನಿಂದ ದೇವರ ವಾಕ್ಯವನ್ನು ಆಲಿಸಬೇಕು ಮತ್ತು ದೈವಚಿತ್ತವನ್ನು ಅವರ ವರಪ್ರಸಾದದ ನೆರವಿನಿಂದ ನೆರವೇರಿಸಬೇಕು. ಪಾವನತೆಯ ಸಾಧನಗಳಲ್ಲಿ ವ್ಯಾಟಿಕನ್ ಸಮ್ಮೇಳನ ಸಂಸ್ಕಾರಗಳಲ್ಲಿ ವಿಶೇಷವಾಗಿ ಪರಮ ಪ್ರಸಾದವನ್ನೂ ಪ್ರಾರ್ಥನೆ, ಸ್ವಪರಿತ್ಯಾಗ, ಸೋದರ ಸೇವೆಯನ್ನು ಹೆಸರಿಸುತ್ತದೆ.

ಪಾವನತೆಯ ಗಳಿಕೆಗೆ ಈ ಸಾಮಾನ್ಯ ಸಾಧನಗಳಲ್ಲದೆ ಇತರೆ ವಿಶೇಷ ಸಾಧನಗಳು ಇವೆ. ಧರ್ಮಾಬಲಿಯಾಗುವುದು, ಎಲ್ಲಾ ಕ್ರೈಸ್ತರಿಗೆ ಶುಭ ಸಂದೇಶ ಸೂಚಿಸುವ ಸವರ್ತೋಪದೇಶಗಳಾದ ಕನ್ಯಾವ್ರತ, ಅಥವಾ ದಾಂಪತ್ಯ ವಿರಕ್ತತ್ವ, ಬಡತನ ಮತ್ತು ಪ್ರಭು ಕ್ರಿಸ್ತರ ಜೀವನಕ್ಕೆ ಅನುಗುಣವಾದ ವಿಧೇಯತೆ. ಎಲ್ಲಾ ವಿಶ್ವಾಸಿಗಳು ತಮ್ಮ ಜೀವನದ ಅಂತಸ್ತಿಗೆ ಸರಿಯಾಗಿ ಪಾವನತೆ ಮತ್ತು ಪರಿಪೂರ್ಣತೆಯನ್ನು ಗಳಿಸಲು ಆಹ್ವಾನವನ್ನು ಪಡೆದಿದ್ದಾರೆ ಕರ್ತವ್ಯವನ್ನೂ ಹೊಂದಿದ್ದಾರೆ.

## ಧಾರ್ಮಿಕ ವ್ಯಕ್ತಿಗಳು

ಧರ್ಮಸಭೆಯ ವಿನ್ಯಾಸ ದೈವಿಕ ಮತ್ತು ಶ್ರೇಣಿಯುತ ಅಧಿಕಾರಯುತವಾಗಿದೆ. ಎಲ್ಲರೂ ಒಂದೇ ದೈವ ಪ್ರಜೆಗೆ ಸೇರಿದವರಾಗಿದ್ದು ಸಮಾನವಾಗಿ ಪಾವಿತ್ರತೆಗೆ ಕರೆಯನ್ನು ಹೊಂದಿದ್ದಾರೆ. ವ್ಯಾಟಿಕನ್ ಸಮ್ಮೇಳನ ಧಾರ್ಮಿಕ ವ್ಯಕ್ತಿಗಳನ್ನು ಅಧಿಕಾರ ವರ್ಗ ಮತ್ತು ಶ್ರೀ ಸಾಮಾನ್ಯ ವರ್ಗವೆಂದು ಪ್ರತ್ಯೇಕವಾಗಿ ಪ್ರಸ್ಥಾಪಿಸಿದರೂ, ಅದನ್ನು ಈ ಎರಡು ವರ್ಗಗಳ ತ್ರಿಶಂಕು ಅಂತಸ್ತೆಂದು ಪರಿಗಣಿಸಬಾರದು. ಯಾಜಕ ಮತ್ತು ಶ್ರೀಸಾಮಾನ್ಯ ವರ್ಗದಿಂದ ದೇವರು ಭಕ್ತ ವಿಶ್ವಾಸಿಗಳನ್ನು ಕರೆದು ಅವರಿಗೆ ಧರ್ಮಸಭೆಯಲ್ಲಿ ಧಾರ್ಮಿಕ ವ್ಯಕ್ತಿಗಳಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬ ಧಾರ್ಮಿಕ ವ್ಯಕ್ತಿ ತನ್ನ ಶಕ್ತ್ಯಾನುಸಾರ ಧರ್ಮಸಭೆಯ ರಕ್ಷಣಾ ನಿಯೋಗಕ್ಕೆ ನೆರವನ್ನು ನೀಡುತ್ತಾನೆ.

ಶುಭ ಸಂದೇಶದ ವಾಕ್ಯೋಪದೇಶವನ್ನು ಅಥವಾ ಪವಿತ್ರ ವ್ರತಗಳನ್ನು ಅನುಸರಿಸುವ ಹೊಣೆಗಾರಿಕೆಯನ್ನು ಹೊತ್ತುಕೊಂಡ ಧಾರ್ಮಿಕ ವ್ಯಕ್ತಿ ತನ್ನನ್ನೇ ದೇವರಿಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾನೆ. ಹೀಗೆ ಅ ವ್ಯಕ್ತಿ ದೇವರ ಸೇವೆಗೆ ಅತಿ ನಿಕಟವಾಗಿ ಪ್ರತಿಷ್ಠಾಪಿತನಾಗುತ್ತಾನೆ. ಧಾರ್ಮಿಕ ವ್ಯಕ್ತಿಯಲ್ಲಿ ಆಧ್ಯಾತ್ಮಿಕ ಜೀವನ ಇಡೀ ಧರ್ಮಸಭೆಯ ಕಲ್ಯಾಣಕ್ಕೆ ಮೀಸಲಾಗಿರುತ್ತದೆ. ಆದುದರಿಂದಲೇ ಧರ್ಮಸಭೆಯು ವಿಭಿನ್ನ ಧಾರ್ಮಿಕ ಸಂಸ್ಥೆಗಳ ವಿಶಿಷ್ಟ ಗುಣ ಲಕ್ಷಣಗಳನ್ನು ಸಂರಕ್ಷಿಸುತ್ತದೆ.

ಧಾರ್ಮಿಕ ಜೀವನಾಂತಸ್ತು ಧರ್ಮಸಭೆಯ ನೈಜ್ಯ ಸ್ವಭಾವವನ್ನು ವ್ಯಕ್ತಪಡಿಸುತ್ತದೆ. ಅದು ಐಹಿಕವಲ್ಲ ದೈವೀಸಾಮ್ರಾಜ್ಯ ಸಂಬಂಧಿತವೆಂಬುದೇ ಈ ಸತ್ಯ. ಅದು ಎಲ್ಲಾ ಲೌಕಿಕ ವಸ್ತುಗಳಿಗಿಂತ ಬಿನ್ನವಾಗಿದ್ದು ಇಹಲೋಕವನ್ನು ದೃಷ್ಠಿಸದೆ ಬರಲಿರುವ ಮರುಲೋಕವನ್ನು ನಿರೀಕ್ಷಿಸುತ್ತದೆ. ಈ ಅಂಶ ಧರ್ಮಸಭೆಯ ಜೀವನದ ಪೂರ್ಣ ಭಾಗವಾಗಿದ್ದು ಅದರ ಪಾವಿತ್ರತೆಯ ಅಂಗವಾಗಿದೆ.

ಧಾರ್ಮಿಕ ಜೀವನ ಧರ್ಮಸಭೆಯ ಜೀವನದ ಭಾಗವಾದುದರಿಂದ ಅದರ ಅಧಿಕಾರಕ್ಕೆ ಒಳಪಡುತ್ತದೆ. ಪ್ರಭು ಕ್ರಿಸ್ತರ ಆತ್ಮಿಕ ಶರೀರದ ಒಳಿತಿಗಾಗಿ ಧರ್ಮಸಭೆ ವಿವಿಧ ಧಾರ್ಮಿಕ ಸಂಸ್ಥೆಗಳನ್ನು ಎಚ್ಚರಿಕೆಯಿಂದ ವೀಕ್ಷಿಸುತ್ತದೆ ಮತ್ತು ಸಂರಕ್ಷಿಸುತ್ತದೆ. ಈ ಧಾರ್ಮಿಕ ಸಂಸ್ಥೆಗಳು ತಮ್ಮ ಸಂಸ್ಥಾಪಕರ ಮನೋಭಾವಕ್ಕೆ ತಕ್ಕಂತೆ ಬೆಳೆಯುವಂತೆ, ಫಲಪ್ರದವಾಗುವಂತೆ ಎಚ್ಚರ ವಹಿಸುತ್ತದೆ.

ಪ್ರಭು ಕ್ರಿಸ್ತರನ್ನು ಕ್ರೈಸ್ತ ಮತ್ತು ಕ್ರೈಸ್ತೇತರರಿಗೆ ಅವರ ಮುಖಾಂತರ ವ್ಯಕ್ತ ಪಡಿಸಲು ವ್ಯಾಟಿಕನ್ ಸಮ್ಮೇಳನ ಧಾರ್ಮಿಕ ವರ್ಗವನ್ನು ಹುರಿದುಂಬಿಸುತ್ತದೆ. ಬೆಟ್ಟದ ಮೇಲೆ ಧ್ಯಾನಮಗ್ನರಾದ ಪ್ರಭು ಕ್ರಿಸ್ತರನ್ನು, ದೇವರ ಸಾಮ್ರಾಜ್ಯವನ್ನು ಜನಸ್ತೋಮಕ್ಕೆ ಸಾರಿದ ಪ್ರಭು ಕ್ರಿಸ್ತರನ್ನು, ರೋಗಿಗಳನ್ನು ಸ್ವಸ್ಥಪಡಿಸಿದ, ಪಾಪಿಗಳನ್ನು ಪಾವನತೆಯ ಜೀವನಕ್ಕೆ ಕರೆತಂದ, ಮಕ್ಕಳನ್ನು ಆಶೀರ್ವದಿಸಿದ, ಸರ್ವರಿಗೂ ಒಳಿತನ್ನು ಮಾಡಿದ ಮತ್ತು ಸದಾ ತಮ್ಮನ್ನು ಕಳುಹಿಸಿದ ತಂದೆ ದೇವರಿಗೆ ವಿಧೇಯರಾದ ಪ್ರಭು ಕ್ರಿಸ್ತರನ್ನು ತೋರ್ಪಡಿಸಲು ತಿಳಿಸುತ್ತದೆ.



ಹೀಗೆ ಧಾರ್ಮಿಕ ವ್ಯಕ್ತಿಗಳು ವಿಶೇಷವಾಗಿ ತಮ್ಮ ಸಮರ್ಪಣಾ ಜೀವನದಿಂದ ಧರ್ಮಸಭೆಯ ನಿಜರೂಪವನ್ನು ಅದರ ಸೇವಾ ನಿಯೋಗವನ್ನು ಪ್ರಪಂಚಕ್ಕೆ ತಿಳಿಯಪಡಿಸುತ್ತಾರೆ. ಈ ಜೀವನ ಧಾರ್ಮಿಕ ವರ್ಗದವರನ್ನು ಉತ್ತಮ ಕ್ರೈಸ್ತರನ್ನಾಗಿಯೂ ಉತ್ತಮ ನಾಗರೀಕರನ್ನಾಗಿಯೂ ಮಾಡುತ್ತದೆ.

ಧಾರ್ಮಿಕ ವ್ಯಕ್ತಿಗಳು ಸನ್ಯಾಸ ಆಶ್ರಮಗಳಲ್ಲಿ ಅಥವಾ ಶಾಲೆಗಳಲ್ಲಿ ಅಥವಾ ಧರ್ಮಪ್ರಸಾರ ಕೇಂದ್ರಗಳಲ್ಲಿ ದುಡಿಯುತ್ತಾರೆ. ಅವರ ದೀನ ಮತ್ತು ದೃಢ ಸಮರ್ಪಣೆಯಿಂದ ಪ್ರಭು ಕ್ರಿಸ್ತರ ಸತಿಯಾದ ಧರ್ಮಸಭೆಯನ್ನು ಅಲಂಕರಿಸಲು ಸರ್ವ ಜನರಿಗೂ ಎಲ್ಲಾ ವಿಧದಲ್ಲಿ ಸೇವೆಯನ್ನು ಸಲ್ಲಿಸುತ್ತಾ ಅವರನೆಲ್ಲಾ ಪ್ರೋತ್ಸಾಹಿಸುತ್ತದೆ. (ನೋಡಿ: ಶಾಸನ, ಧಾರ್ಮಿಕ ಜೀವನದಲ್ಲಿ ಹೊಂದಾಣಿಕೆ ಮತ್ತು ನವೀಕರಣ).

## ಯಾತ್ರಾ ಧರ್ಮಸಭೆಯ ಅಂತ್ಯಕಾಲಿಕ ಲಕ್ಷಣ ಮತ್ತು ಸ್ವರ್ಗೀಯ ಧರ್ಮಸಭೆಯೊಂದಿಗೆ ಅದರ ಸಮ್ಮಿಲನ

ಪೂರ್ವ ಕಾಲದ ದೈವಪ್ರಜೆ ವಾಗ್ದತ್ತ ನಾಡಿನತ್ತ ಪಯಣ ಮಾಡಿದಂತೆ, ನೂತನ ದೈವಪ್ರಜೆ ಮಹಿಮಾನ್ವಿತ ಸ್ವರ್ಗದತ್ತ ತನ್ನ ಯಾತ್ರೆಯನ್ನು ಮಾಡುತ್ತಿದೆ. ಅಂತ್ಯಕಾಲದಲ್ಲಿ ಪ್ರಭು ಕ್ರಿಸ್ತರು ಮಹಿಮೆಯೊಂದಿಗೆ ಆಗಮಿಸುವರು. ಆಗ ಅವರಲ್ಲಿ ಸಮಸ್ತವೂ ನಿರ್ದಿಷ್ಟವಾಗಿ ಪುನಃ ಸ್ಥಾಪಿಸಲ್ಪಡುತ್ತದೆ. ಆಗಲೇ ಧರ್ಮಸಭೆಯಾದ ನಾವು ನಮ್ಮ ಪರಿಪೂರ್ಣತೆಯನ್ನು ಪಡೆಯುತ್ತೇವೆ. ಆಗ ಹೊಸ ಭೂಮಿ ಆಕಾಶಗಳು ಸೃಷ್ಟಿಯಾಗುವುವು. ಆ ಅಂತಿಮ ದಿನದವರೆಗೂ ಇಂದಿನ ಯುಗಕ್ಕೆ ಸಂಬಂಧಿಸಿದ ಸಂಸ್ಕಾರ ಮತ್ತು ಸಂಸ್ಥೆಗಳಿಂದ ಕೂಡಿದ ಧರ್ಮಸಭೆ ಅಳಿದು ಹೋಗುವ ಇಹಲೋಕದ ಒಂದು ಭಾಗವಾಗಿ ಗೋಚರಿಸುತ್ತದೆ. ನಿಜವಾಗಿಯೂ ಈ ಲೋಕದಲ್ಲಿ ನಾವು ಯಾತ್ರಾರ್ಥಿಗಳೇ ಆಗಿದ್ದೇವೆ. ಮಹಾ ದೇವರೂ ನಮ್ಮ ರಕ್ಷಕರೂ ಆದ ಯೇಸುಕ್ರಿಸ್ತರ ಆಗಮನವನ್ನು ಭರವಸೆಯಿಂದ ಅವರ ಭಾಗ್ಯಕರ ಅನುಷ್ಠಾನವನ್ನು ಎದುರು ನೋಡುತ್ತೇವೆ (ತೀತ 2:13).

ಸಮಸ್ತ ಸೃಷ್ಟಿಗೆ ಲೋಕಾಂತ್ಯದಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ಪವಿತ್ರ ಗ್ರಂಥ ಸ್ಪಷ್ಟವಾಗಿ ತಿಳಿಸುತ್ತದೆ. ಪ್ರತಿಯೊಬ್ಬ ಮಾನವನು ಇಹಲೋಕದ ಜೀವನಾಂತ್ಯದಲ್ಲಿ ತೀರ್ಪನ್ನು ಎದುರಿಸಬೇಕು. ಅಂತಿಮವಾಗಿ ಸ್ವರ್ಗ ಅಥವಾ ನರಕ ಅವನ ಗತಿಯಾಗಿದೆ.

ಈ ಲೋಕದ ಧರ್ಮಸಭೆಯ ಸದಸ್ಯರಾಗಿರುವ ನಾವು ನಮಗಿಂತ ಮುಂಚಿತರಾಗಿ ಹೋಗಿ ತಮ್ಮ ಸಂಭಾವನೆಯನ್ನು ಅನುಭವಿಸುತ್ತಿರುವ ಸ್ವರ್ಗೀಯ ಧರ್ಮಸಭೆಯ ವಿಶ್ವಾಸಿಗಳೊಂದಿಗೆ ನಾವು ನಿಕಟವಾಗಿದ್ದೇವೆ. ಸ್ವರ್ಗದಲ್ಲಿರುವ ಸಂತರು ಪ್ರಭು ಕ್ರಿಸ್ತರೊಡನೆ ಅಧಿಕವಾಗಿ ಐಕ್ಯವಾಗಿದ್ದು ಪಾವನತೆಯನ್ನು ಅರಸುತ್ತಿರುವ ಭೂಲೋಕದ ಧರ್ಮಸಭೆಯನ್ನು ಪೋಷಿಸುತ್ತಾರೆ. ಈ ಲೋಕದಲ್ಲಿದ್ದು ನಾವು ದೇವರಿಗೆ ಸಲ್ಲಿಸುತ್ತಿರುವ ಆರಾಧನೆಯನ್ನು ವೈಭವಗೊಳಿಸುತ್ತಾರೆ. ಅದರ ನಿರಂತರ ಬೆಳವಣಿಗೆಗೂ ಅವರು ನೆರವಾಗುತ್ತಾರೆ. ಹೀಗೆ ದುರ್ಬಲರಾಗಿರುವ ನಮಗೆ ಸೋದರ ಭಾವನೆಯಿಂದ ನೀಡುತ್ತಿರುವ ಆಧಾರ ಉಪಯುಕ್ತವಾಗಿದೆ.

ಪ್ರಭು ಕ್ರಿಸ್ತರು ದೇವಮಾನವರ ಮಧ್ಯೆ ಇರುವ ಏಕೈಕ ಮಧ್ಯಸ್ಥರು ರಕ್ಷಣಾ ಯೋಜನೆಯಲ್ಲಿ ಮರಿಯಮ್ಮನವರು ಪ್ರಭುವಿನ ದೀನ ದಾಸಿಯಾಗಿ ಪ್ರಭು ಕ್ರಿಸ್ತರೊಡನೆ ನಿಕಟ ಸಹಭಾಗಿಯಾಗಿದ್ದರು. ಪ್ರಭು ಕ್ರಿಸ್ತರೊಡನೆ ಅವರ ಈ ಏಕಮೇವ ಸಹಕಾರದ ಕಾರಣ ಧರ್ಮಸಭೆ ಅವರನ್ನು ನಮ್ಮ ಪರವಾದಿ, ಸಹಾಯಕಿ, ಮಧ್ಯವರ್ತಿ ಎಂಬ ಬಿರುದುಗಳಿಂದ ಗೌರವಿಸುತ್ತದೆ. ಈ ಬಿರುದುಗಳು ಏಕಮಧ್ಯವರ್ತಿಯಾದ ಪ್ರಭು ಕ್ರಿಸ್ತರ ಘನತೆ ಮತ್ತು ಸಾಫಲ್ಯವನ್ನು ಸ್ವಲ್ಪವೂ ಕಡಿತಗೊಳಿಸುವುದಿಲ್ಲ ಅಥವ ಗರಿಷ್ಠಗೊಳಿಸುವುದಿಲ್ಲ.

ಮರಿಯಮ್ಮನವರು ದೇವಪುತ್ರನ ತಾಯಿಯಾದರೂ ಕನ್ಯೆಯಾಗಿ ನೆಲೆಯಾದರು. ಅವರನ್ನು ಧರ್ಮಸಭೆಯ ಪ್ರತಿರೂಪ ಮತ್ತು ಮಾದರಿಯೆಂದು ಕರೆಯಲಾಗಿದೆ. ಧರ್ಮಸಭೆಯು ಮರಿಯಮ್ಮನವರಂತೆ ತಾಯಿಯೂ ಕನ್ನಿಕೆಯೂ ಆಗಿದೆ. ಅದು ದೈವ ವಾರ್ತೆಯನ್ನೂ ವಿಶ್ವಾಸದಿಂದ ಅಂಗೀಕರಿಸುತ್ತದೆ. ಅದು ದೀಕ್ಷಾಸ್ನಾನ ಮತ್ತು ಬೋಧನೆಯ ಮುಖಾಂತರ ದೇವರ ಮಕ್ಕಳಿಗೆ ಜನ್ಮವನ್ನೀಯುತ್ತದೆ. ಪ್ರಭು ಕ್ರಿಸ್ತರ ಸತಿಯಾದ ಧರ್ಮಸಭೆ ಒಬ್ಬ ಕನ್ಯಾ ವಧುವಾಗಿ, ವಿಶ್ವಾಸ, ಭರವಸೆ ಮತ್ತು ಪ್ರೀತಿಯಲ್ಲಿ ಪ್ರವರ್ಧಿಸುತ್ತಾ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ನೆರವೇರಿಸುತ್ತದೆ.

ಕನ್ಯಾ ಮರಿಯಮ್ಮನವರ ವ್ಯಕ್ತಿತ್ವದಲ್ಲಿ ಧರ್ಮಸಭೆಯು ಯಾವ ಕಳಂಕ ಮತ್ತು ಸುಕ್ಕಿಲ್ಲದ ಸಂಪೂರ್ಣತೆಯನ್ನು ಸಾಧಿಸಿದೆ. ಪಾಪವನ್ನು ಹತ್ತಿಕ್ಕಲು ಸೆಣೆಸುತ್ತಿರುವ ಪಾವಿತ್ರತೆಯಲ್ಲಿ ಬೆಳೆಯಲು ಪ್ರಯತ್ನಿಸುತ್ತಿರುವ ಭಕ್ತ ವಿಶ್ವಾಸಿಗಳು ಪ್ರಕಾಶಮಯ ಆದರ್ಶವೆಂದು ಮರಿಯಮ್ಮನವರನ್ನೂ ಸಮೀಪಿಸುತ್ತಾರೆ. ಧರ್ಮಸಭೆಯು ತನ್ನ ಪ್ರೇಷಿತ ಕೆಲಸ ಕಾರ್ಯಗಳಲ್ಲಿ ಮರಿಯಮ್ಮನವರನ್ನು ಯುಕ್ತವಾಗಿ ಈಕ್ಷಿಸುತ್ತದೆ.

ದೇವರ ಯಾತ್ರಾಪ್ರಜೆಗೆ ಮರಿಯಮ್ಮನವರು ನಿಖರ ಭರವಸೆಯಾಗಿದ್ದಾರೆ. ಅವರು ಈಗಾಗಲೇ ಸ್ವರ್ಗದಲ್ಲಿ ಆತ್ಮ ಶರೀರದೊಂದಿಗೆ ಮಹಿಮೆಗೆ ಪಾತ್ರರಾಗಿದ್ದಾರೆ. ಹೀಗೆ ಅವರು ಧರ್ಮಸಭೆಯ ಅಂತಿಮ ಪರಿಪೂರ್ಣತೆಯ ಪ್ರತಿರೂಪವೂ ಪ್ರಾರಂಭವೂ ಆಗಿದ್ದಾರೆ. ಪ್ರಭುವಿನ ಪುನರಾಗಮನದ ದಿನದ ವರೆಗೆ ಇಹಲೋಕದ ಯಾತ್ರಾ ಪ್ರಜೆಗೆ ಭರವಸೆಯನ್ನು ನೆಮ್ಮದಿಯನ್ನು ನೀಡುವ ನಿರ್ದಿಷ್ಟ ಸಂಕೇತ ಅವರಾಗಿದ್ದಾರೆ. ಆ ಶುಭ ದಿನದಂದು ಭೂಲೋಕದ ಎಲ್ಲಾ ಜನಾಂಗಗಳ ಕುಟುಂಬಗಳು ಸಂತಸ ಸಂಭ್ರಮ ಶಾಂತಿ ಸಾಮರಸ್ಯದಿಂದ ದೇವರ ಏಕ ಪ್ರಜೆಯಾಗಿ ಒಗ್ಗೂಡುತ್ತದೆ. ಅದು ಪರಮ ಪೂಜ್ಯ ಮತ್ತು ಅವಿಭಾಜ್ಯ ಪರಮತ್ರಿತ್ವಕ್ಕೆ ಮಹಿಮೆಯನ್ನು ಸಲ್ಲಿಸುತ್ತದೆ.



ಧರ್ಮಸಭೆಯ ನೈಜ್ಯ ಸಂಪ್ರದಾಯಗಳಿಗೆ ನಿಷ್ಠೆಯನ್ನು ತೋರುತ್ತಿರುವ ವ್ಯಾಟಿಕನ್ ಸಮ್ಮೇಳನ ಸ್ವರ್ಗೀಯ ಧರ್ಮಸಭೆಯೊಂದಿಗೆ ನಾವು ಹೇಗೆ ಅನ್ಯೋನ್ಯವಾಗಿರಬಹುದು ಎಂಬುದಕ್ಕೆ ಕೆಲವು ಸಲಹೆಗಳನ್ನು ನೀಡುತ್ತದೆ. ಸ್ವರ್ಗೀಯ ಸಂತರಿಗೂ ನಮಗೂ ಇರುವ ಬಾಂಧವ್ಯದಿಂದ ನಾವು ಅನೇಕ ಪ್ರಯೋಜನಗಳನ್ನು ಪಡೆಯಬಹುದು. ಸಂತರ ಬಗ್ಗೆ ನಮಗಿರುವ ಗೌರವ ಭಾವನೆ ಮತ್ತು ಭಕ್ತಿ ಅತಿಯಾಗಬಾರದು, ಮಿತಿಕುಂದಲೂ ಬಾರದೆಂದು ನಮ್ಮನ್ನು ಎಚ್ಚರಿಸುತ್ತದೆ. ನಿಜ ಭಕ್ತಿ ಅಡಕವಾಗಿರುವುದು ಕ್ರಿಯಾತ್ಮಕ ಪ್ರೀತಿಯಲ್ಲಿ. ಈ ಪ್ರೀತಿ ಇದ್ದರೆ ಮಾತ್ರ ಸಂತರ ಬಗ್ಗೆ ನಮಗಿರುವ ಭಕ್ತಿ ನಮ್ಮನ್ನು ಪವಿತ್ರಾತ್ಮರಲ್ಲಿ ಯೇಸುಕ್ರಿಸ್ತರ ಮುಖಾಂತರ ತಂದೆ ದೇವರೊಂದಿಗೆ ನಿಕಟತೆಯನ್ನು ಸಾಧಿಸಲು ಕರೆದೊಯ್ಯುತ್ತದೆ.

ವಾಸ್ತವವಾಗಿ ನಾವೆಲ್ಲರೂ ದೇವರ ಮಕ್ಕಳು, ಪ್ರಭು ಕ್ರಿಸ್ತರಲ್ಲಿ ಒಂದೇ ಕುಟುಂಬವೂ ಆಗಿದ್ದೇವೆ. ನಾವು ಪರಸ್ಪರ ಪ್ರೀತಿಯಲ್ಲಿ ಒಂದಾಗಿರುವಾಗ, ಐಕ್ಯಮತ್ಯದಿಂದ ಪರಮ ತ್ರಿತ್ವಕ್ಕೆ ಸ್ತುತಿ ಸಲ್ಲಿಸುವಾಗ ನಾವು ಧರ್ಮಸಭೆಯ ಅಂತರಾತ್ಮದ ಕರೆಗೆ ಓಗೊಡುತ್ತೇವೆ. ಹೀಗೆ ನಾವು ಒಂದು ವಿಧದಲ್ಲಿ ಪೂರ್ವಭಾವಿಯಾಗಿ ಸ್ವರ್ಗೀಯ ದೈವಾರಾಧನೆಯಲ್ಲಿ ಭಾಗಿಗಳಾಗುತ್ತೇವೆ.

## ಪ್ರಭು ಕ್ರಿಸ್ತರ ಮತ್ತು ಧರ್ಮಸಭೆಯ ರಹಸ್ಯದಲ್ಲಿ ದೇವಮಾತೆ ಪುನೀತ ಕನ್ಯಾ ಮರಿಯಮ್ಮನವರು

ಕನ್ಯಾಮರಿಯಮ್ಮನವರು ಸರ್ವ ಸೃಷ್ಟಿಗೂ ಮಿಗಿಲಾಗಿದ್ದು ಅತ್ಯುನ್ನತ ರೀತಿಯಲ್ಲಿ ರಕ್ಷಿಸಲ್ಪಟ್ಟರು. ತಮ್ಮ ಅನಂತ ರಕ್ಷಣಾ ಯೋಜನೆಯಲ್ಲಿ ತಂದೆ ದೇವರು ಅವರನ್ನು ಪುತ್ರನ ತಾಯಿಯನ್ನಾಗಿ ಮತ್ತು ತಮ್ಮ ನೆಚ್ಚಿನ ಪುತ್ರಿಯಾಗಿ ಪವಿತ್ರಾತ್ಮರ ಆಲಯವನ್ನಾಗಿ ಮಾಡಿದರು. ದೇವರ ವಿಶೇಷ ವರಪ್ರಸಾದ ಅವರನ್ನು ಭಕ್ತ ವೃಂದದಲ್ಲಿ ಅತಿ ಶ್ರೇಷ್ಠರನ್ನಾಗಿಯೂ ಧರ್ಮಸಭೆಯ ಸುಪ್ರಸಿದ್ಧ ಮತ್ತು ಏಕಮಾತ್ರ ಅಪರೂಪ ವ್ಯಕ್ತಿಯನ್ನಾಗಿಸಿತು. ಪವಿತ್ರಾತ್ಮರ ಬೋಧನೆಗೆ ಅನುಗುಣವಾಗಿ ಧರ್ಮಸಭೆ ಅವರನ್ನು ನೆಚ್ಚಿನ ತಾಯಿಯನ್ನಾಗಿ ಗೌರವಿಸುತ್ತದೆ.

ಪವಿತ್ರ ಗ್ರಂಥ ಮತ್ತು ಧರ್ಮಸಭೆಯ ಪ್ರಾಚೀನ ಪಟ್ಯಗಳು ರಕ್ಷಕರ ಮಾತೆಯಾದ ಈ ಮಹಿಳೆಯ ವ್ಯಕ್ತಿತ್ವವನ್ನು ನಿಚ್ಚಳ ಬೆಳಕಿನಲ್ಲಿ ಮೂಡಿಸಿವೆ. ರಕ್ಷಣಾ ಚರಿತ್ರೆಯಲ್ಲಿ ಅವರಿಗೆ ಒಂದು ವಿಶಿಷ್ಟ ಪಾತ್ರವಿತ್ತು. ಆದಿ ಕಾಂಡದಿಂದ ಹಳೆಯ ಒಡಂಬಡಿಕೆಯಾದ್ಯಂತ ಪ್ರತ್ಯೇಕವಾಗಿ ಯೆಶಾಯನ ಪ್ರವಚನದಲ್ಲಿ ರಕ್ಷಣಾ ಚರಿತ್ರೆಯಲ್ಲಿ ಅವರ ಪಾತ್ರ ಕಂಡು ಬಂದಿದೆ, ದೈವೀ ಯೋಜನೆ ಅನುಷ್ಠಾನಕ್ಕೆ ಬಂದಿದೆ. ಹೊಸ ಒಡಂಬಡಿಕೆಯಲ್ಲಿ ಮಂಗಳ ವಾರ್ತೆಗೆ ಸಮ್ಮತಿ, ಎಲಿಜಬೇತಮ್ಮನಿಗೆ ಭೇಟಿ, ಯೇಸು ಜನನ, ದೇವಾಲಯದಲ್ಲಿ ಬಾಲಯೇಸು ಸಮರ್ಪಣೆ, ದೇವಾಲಯದಲ್ಲಿ ಅವರ ಅಗೋಚರ, ಕಾನಾ ಊರಿನ ಪವಾಡ, ಪ್ರಭುವಿನ ಬಹಿರಂಗ ಜೀವನ, ಶಿಲುಬೆಯ ಬುಡದಲ್ಲಿ ಅವರ ಸಹನೆ ಇತ್ಯಾದಿ ಘಟನೆಗಳಲ್ಲಿ ಪ್ರಭು ಕ್ರಿಸ್ತರೊಡನೆ ಮರಿಯಮ್ಮನವರು ಎಷ್ಟು ನಿಕಟವಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಪಂಚಶತ್ತಮದ ದಿನ ಅವರು ಪ್ರೇಷಿತರೊಡನೆ ಇದ್ದರು. ಅಂದೇ ಧರ್ಮಸಭೆಯ ಉದ್ಘಾಟನೆಯಾಯಿತು. ಈಗ ಸ್ವರ್ಗ ಸ್ವೀಕೃತರಾದ ಕಳಂಕರಹಿತ ಕನ್ಯೆ ತಮ್ಮ ಪುತ್ರ ಮತ್ತು ಧರ್ಮಸಭೆಯೊಂದಿಗೆ ಇದ್ದಾರೆ.

# IV ಪ್ರಾಚ್ಯ ಕಥೋಲಿಕ ಧರ್ಮಸಭೆಗಳು

## (ಶಾಸನ)

## ಸಂಪಾದಕರ ಪ್ರಸ್ತಾವನೆ

ತನ್ನ ಭಕ್ತವಿಶ್ವಾಸಿಗಳೆಲ್ಲರೂ ಪ್ರಮುಖ ವಿಷಯಗಳಲ್ಲಿ ಐಕ್ಯವಾಗಿರಬೇಕೆಂದು ಧರ್ಮಸಭೆ ಆದಿಯಿಂಧಲೂ ಒತ್ತಿ ಹೇಳುತ್ತಾ ಬಂದಿದೆ. ಆದರೆ ಎಲ್ಲಾ ವಿಷಯಗಳಲ್ಲಿ ಏಕತೆ ಇರಬೇಕೆಂದು ಹೇಳಲಿಲ್ಲ. ಎಲ್ಲಾ ಕಾಲಗಳಲ್ಲೂ ಸ್ಥಳಗಳಲ್ಲೂ ಧರ್ಮಸಭೆಯ ವಿನ್ಯಾಸ ಒಂದೇ ಆಗಿರಬೇಕು. ಆದರೆ ಧರ್ಮಸಭೆಯ ಸಂಸ್ಥಾಪನೆ, ನಿಯಮಾವಳಿ, ದೈವಾರಾಧನಾ ವಿಧಿಗಳು, ಸ್ವಲ್ಪಮಟ್ಟಿಗೆ ವಿಶ್ವಾಸದ ನಿರೂಪಣೆ ವಿವಿಧ ಸ್ಥಳಗಳಲ್ಲಿ ವಿಭಿನ್ನ ರೂಪದಲ್ಲಿ ಬೆಳೆಯುತ್ತಾ ಬಂದಿದೆ. ಆದರೂ ಒಂದು ವಿಧದ ಕೇಂದ್ರೀಕರಣ ಮತ್ತು ಏಕರೂಪತೆಯನ್ನು ನಾವು ಕಾಣುತ್ತೇವೆ. ಇದರ ಪರಿಣಾಮವಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳ ಕೆಲವು ಕೇಂದ್ರಗಳು ಸ್ಥಳೀಯ ಸಭೆಗಳ ಅಭಿವೃದ್ಧಿಗೆ ಒಂದು ವಿಧದ ಏಕರೂಪತೆಯನ್ನು ಕೊಟ್ಟು ಅವುಗಳನ್ನು ಒಗ್ಗೂಡಿಸಿ ಪ್ರಾದೇಶಿಕ ವಲಯ ಸಭೆಗಳನ್ನಾಗಿ ಪರಿವರ್ತಿಸಿದರು. ಹೀಗೆ ಅಲೆಕ್ಸಾಂಡ್ರಿಯ ಕೇಂದ್ರ ಈಜಿಪ್ಟ್ ದೇಶದಲ್ಲೂ, ಅಂತಿಯೋಕ ಕೇಂದ್ರ ಸಿರಿಯಾದಲ್ಲೂ (ಸ್ವಲ್ಪ ಕಾಲ ಪರ್ಷಿಯದಲ್ಲೂ) ಕಾನ್ಸ್ಟಾಂಟಿನೋಪಲ್ ಕೇಂದ್ರ ಗ್ರೀಸ್ ದೇಶದ ಕೆಲವು ಭಾಗಗಳಲ್ಲೂ ಏಷಿಯ ಮೈನರಿನಲ್ಲೂ, ಅದರ ಸುತ್ತಮುತ್ತಲಿನ ಪ್ರದೇಶದಲ್ಲೂ ಪ್ರಾಂತೀಯ ಕೇಂದ್ರಗಳಾದವು. ಪಾಶ್ಚಾತ್ಯ ದೇಶದಲ್ಲಿ ರೋಮಿನ ಕೇಂದ್ರ ಕ್ರಮೇಣ ಇಡೀ ಯುರೋಪ್ ಖಂಡಕ್ಕೆ ಏಕರೂಪತೆಯನ್ನು ಕೊಟ್ಟು ಪ್ರಾಮುಖ್ಯತೆಯನ್ನು ಗಳಿಸಿಕೊಂಡಿತು. ಪೌರ್ವಾತ್ಯ ಪ್ರದೇಶದಲ್ಲಿ ಕಾನ್ಸ್ಟಾಂಟಿನೋಪಲ್ ಇದೇ ರೀತಿ ಪ್ರಮುಖವಾಗಲು ಮಾಡಿದ ಪ್ರಯತ್ನಗಳು ಪೂರ್ಣ ಫಲಕಾರಿಯಾಗಲಿಲ್ಲ. ಪುರಾತನ ಅಲೆಕ್ಸಾಂಡ್ರಿಯ ಮತ್ತು ಅಂತಿಯೋಕ ಕೇಂದ್ರಗಳು ಸ್ವಾಯತ್ತತೆಯನ್ನು ಗಳಿಸಿ ಮುಂದುವರೆದವು.

ನಾಲ್ಕನೆಯ ಶತಮಾನದ ಅಂತ್ಯದಲ್ಲಿ ರೋಮ್ ಚಕ್ರಾಧಿಪತ್ಯವು ಪೂರ್ವ ಮತ್ತು ಪಶ್ಚಿಮ ಚಕ್ರಾಧಿಪತ್ಯಗಳೆಂಬ ನಿರ್ದಿಷ್ಟ ಭಾಗಗಳಾಗಿ ಒಡೆದು ಹೋಯಿತು. ಪೂರ್ವಕ್ಕೆ ಸೇರಿದ ಸಭೆಗಳನ್ನು ಪ್ರಾಚ್ಯ ಸಭೆಗಳೆಂದು ಪಶ್ಚಿಮಕ್ಕೆ ಸೇರಿದ ಸಭೆಗಳನ್ನು ಪಾಶ್ಚಾತ್ಯ ಸಭೆಗಳೆಂದೂ ಕರೆಯಲಾದವು. ಪಶ್ಚಿಮ ವಿಭಾಗದಲ್ಲಿ ರೋಮಿನ ಸಭೆಯೊಂದೇ ಪ್ರಬಲವಾದುದುರಿಂದ ಅದನ್ನು ಪಾಶ್ಚಾತ್ಯ ಸಭೆ ಅಥವ ರೋಮಿನ ಸಭೆಯಿಂದು ಹೆಸರಿಸಲಾಯಿತು.

ಈ ಮಧ್ಯೆ ಪೂರ್ವ ವಿಭಾಗದಲ್ಲಿ ರಾಷ್ಟ್ರೀಯ ಮತ್ತು ಕೇಂದ್ರೀಯ ಅಭಿಮಾನದ ಪರಿಣಾಮವಾಗಿ ಎರಡು ಪ್ರಾಂತೀಯ ಸಭೆಗಳು ಉಗಮಿಸಿದವು. ಕಾಲ್ದೆಯನ್ ಅಥವಾ ಪರ್ಷಿಯನ್ ಮತ್ತು ಅರ್ಮೇನಿಯನ್. ಹೀಗೆ ಪೂರ್ವದ ಸಭೆಗಳು ಯಾವುವೆಂದರೆ: ಅಲೆಕ್ಸಾಂಡ್ರಿಯನ್, ಅಂತಿಯೋಕಿಯನ್, ಕಾನ್ಸ್ಟಾಂಟಿನೋಪಲಿಯನ್, ಕಾಲ್ದೆಯನ್ ಮತ್ತು ಅರ್ಮೇನಿಯನ್ ಕ್ರೈಸ್ತ ಸಭೆಗಳು. ಇವುಗಳಲ್ಲಿ ಒಂದೊಂದು ಸಭೆಯೂ ತನ್ನದೇ ಆದ ಆರಾಧನಾ ವಿಧಿಯನ್ನು ನಿರ್ಮಿಸಿಕೊಂಡಿತು. ಅದು ದೈವಾರಾಧನೆ, ಧರ್ಮಸಭಾ ಶಿಸ್ತು, ದೈವಶಾಸ್ತ್ರ ಮತ್ತು ಆಧ್ಯಾತ್ಮಿಕತೆಯಲ್ಲಿ ಕಂಡುಕೊಳ್ಳಬಹುದು. ಪಾಶ್ಚಾತ್ಯ ದೇಶದಲ್ಲೂ ತನ್ನ ಇಡೀ ಪ್ರದೇಶಕ್ಕೆ ರೋಮಿಯ ವಿಧಿ



ಪ್ರಚಲಿತವಾಯಿತು. ಆದರೂ ಪ್ರಾಚೀನ ಸ್ಥಳೀಯ ವಿಧಿಗಳ ಮೂಲ ರೂಪವನ್ನು ಅಂಬ್ರೋಜಿಯನ್, ಲಿಯೋನಿಯನ್, ಮೊಜಾರಾಬಿಕ್ ಬ್ರಾಗನ್ ಇತ್ಯಾದಿ ಸಂಪ್ರದಾಯಗಳಲ್ಲಿ ಕಾಣಬಹುದು. ಅವು ಅಷ್ಟು ಪ್ರಮುಖವಲ್ಲದ್ದರಿಂದ ಪೌರ್ವಾತ್ಯ ಸಭೆಗಳಂತೆ ಪ್ರಾಂತೀಯ ಸಭೆಗಳಾಗಲಿಲ್ಲ.

ಭಾರತದಲ್ಲಿ ರೋಮ್ ಮತ್ತು ಎರಡು ಪೌರ್ವಾತ್ಯ ವಿಧಿಗಳು ಅಸ್ತಿತ್ವದಲ್ಲಿವೆ. ಕೇರಳದ ಸಿರಿಯನ್ ಕ್ರೈಸ್ತರಿಗೆ ಸಂತ ತೋಮಸರ ಪ್ರೇಷಿತತ್ವವೆ ಮೂಲವಾಯಿತು. ಇವರು ಸುಮಾರು ನಾಲ್ಕನೆಯ ಶತಮಾನದಲ್ಲಿ ಕಾಲ್ದೆಯಾದ ಧರ್ಮಸಭೆಯನ್ನು ಅವಲಂಬಿಸಿದರು. ಆದುದರಿಂದ ಅವರ ಆರಾಧನಾ ಸಂಪ್ರದಾಯ ಮೂಲತ: ಕಾಲ್ದೆಯನ್ ರೀತಿಯಲ್ಲಿದೆ. ಹದಿನೇಳನೆಯ ಶತಮಾನದಲ್ಲಿ ಬಿಕ್ಕಟ್ಟು ಉದ್ಭವಿಸಿ ಈ ಸಿರಿಯನ್ ಸಭೆ ಇಬ್ಭಾಗವಾಯಿತು. ಬೇರ್ಪಟ್ಟ ಸಭೆ ಅಂತಿಯೋಕಿನ ಆರಾಧನಾ ಕ್ರಮವನ್ನು ಅಳವಡಿಸಿಕೊಂಡಿತು. ಅನಂತರ 1931 ರಲ್ಲಿ ಮಾರ್ ಯೊವಾನಿಯೋಸ್ ಎಂಬುವರ ನೇತೃತ್ವದಲ್ಲಿ ಕೆಲವರು ಕಥೋಲಿಕ ಧರ್ಮಸಭೆಯನ್ನು ಸೇರಿದರು. ಆದರೆ ಅವರು ಅಂತಿಯೋಕಿನ ಆರಾಧನಾ ಕ್ರಮವನ್ನು ಮುಂದುವರಿಸುತ್ತಾ ಸಿರೋ ಮಲಂಕಾರ ಪಂಗಡವೆಂದು ಕರೆಸಿಕೊಂಡರು.

ಪ್ರಾಚ್ಯ ಸಭೆಗಳ ಬಗ್ಗೆ ವ್ಯಾಟಿಕನ್ ಸಮ್ಮೇಳನದ ಶಾಸನ ಕೆಲವು ಸಾಮಾನ್ಯ ಸೂತ್ರಗಳನ್ನು ಕೊಟ್ಟು ಈ ಸಭೆಗಳನ್ನು ನಾವು ಹೇಗೆ ಮಾನ್ಯ ಮಾಡಬೇಕೆಂದು ತಿಳಿಸುತ್ತದೆ. ಪಾಶ್ಚಾತ್ಯ ಸಭೆಯ ಹಾಗೆ ಪ್ರಾಚ್ಯ ಸಭೆಗಳೂ ಸಾರ್ವತ್ರಿಕ ಕಥೋಲಿಕ ಸಭೆಗೆ ಸೇರಿವೆ. ಈ ಸಭೆಗಳ ಧಾರ್ಮಿಕ ಆಡಳಿತ ಸಂಸ್ಕಾರಗಳ ವಿತರಣೆ ಪ್ರಾಚ್ಯ ಧರ್ಮಸಭೆಗೆ ವಿಶಿಷ್ಟವಾಗಿರುವ ದೈವಾರಾಧನಾ ಕ್ರಮದ ಬಗ್ಗೆ ಪ್ರಸ್ತಾಪಿಸಿ ಯಾಜಕರು ಮತ್ತು ಭಕ್ತವಿಶ್ವಾಸಿಗಳಿಗೆ ವ್ಯವಹಾರಿಕ ಸೂತ್ರಗಳನ್ನು ನಿರೂಪಿಸುತ್ತದೆ.

### ಪೀಠಿಕೆ

ಈ ಶಾಸನ ಪ್ರಾಚ್ಯ ಸಭೆಗಳ ಪ್ರಶಂಸೆಯೊಂದಿಗೆ ಪ್ರಾರಂಭವಾಗುತ್ತದೆ. "ಕಥೋಲಿಕ ಧರ್ಮಸಭೆ ಪ್ರಾಚ್ಯ ಸಭೆಗಳ ಸ್ಥಾಪನಾ ವ್ಯವಸ್ಥೆಯನ್ನು, ಆರಾಧನಾ ಕ್ರಮವನ್ನು, ಧಾರ್ಮಿಕ ಸಂಪ್ರದಾಯ ಮತ್ತು ಕ್ರಿಸ್ತೀಯ ಜೀವನ ಶಿಸ್ತನ್ನು ಬಹುವಾಗಿ ಗೌರವಿಸುತ್ತದೆ. ಏಕೆಂದರೆ ಅವುಗಳ ಪೂಜ್ಯನೀಯ ಪ್ರಾಚೀನತೆ ಅವುಗಳಿಗೆ ವಿಶೇಷ ಸೊಬಗನ್ನು ಕೊಟ್ಟಿದೆ. ಅವುಗಳಲ್ಲಿ ಪಿತಾಮಹರು ಹಸ್ತಾಂತರಿಸಿದ ಪ್ರೇಷಿತ ಸಂಪ್ರದಾಯ ಪ್ರಜ್ವಲಿಸುತ್ತಿದೆ. ಅದು ಸಾರ್ವತ್ರಿಕ ಧರ್ಮಸಭೆಯ ದೈವೀ ಪ್ರಕಟಿತ ಮತ್ತು ಅವಿಭಾಜ್ಯ ಪಿತ್ರಾರ್ಜಿತ. ಈ ಸಂಪ್ರದಾಯಕ್ಕೆ ಸಜೀವ ಸಾಕ್ಷಿಗಳಾದ ಪ್ರಾಚ್ಯ ಸಭೆಗಳಲ್ಲಿ ಈ ಸಮ್ಮೇಳನ ಆಳವಾದ ಆಸಕ್ತಿಯನ್ನು ವ್ಯಕ್ತಪಡಿಸುತ್ತದೆ. ಅವು ಬೆಳೆದು ತಮಗೆ ವಹಿಸಲಾದ ನಿಯೋಗವನ್ನು ಪ್ರೇಷಿತ ನವ ಚೇತನದಿಂಧ ಕ್ರಿಯಾತ್ಮಕಗೊಳಿಸಲೆಂದು ಹಾರೈಸುತ್ತದೆ."

## ಪ್ರತ್ಯೇಕ ಕ್ರೈಸ್ತ ಸಭೆಗಳು ಮತ್ತು ವಿಭಿನ್ನ ಸಭೆಗಳು

"ಪ್ರಭು ಕ್ರಿಸ್ತರ ಆತ್ಮಿಕ ಶರೀರವಾದ ಕಥೋಲಿಕ ಧರ್ಮಸಭೆ ಒಂದೇ ವಿಶ್ವಾಸ, ಒಂದೇ ವಿಧದ, ಸಂಸ್ಕಾರ ಮತ್ತು ಒಂದೇ ಆಡಳಿತದಿಂದ ಪವಿತ್ರಾತ್ಮರಲ್ಲಿ ದೇಹದ ಅಂಗಾಂಗಗಳಂತೆ ಐಕ್ಯವಾಗಿರುವ ಭಕ್ತರಿಂದ ಕೂಡಿದೆ. ಭಕ್ತರು ವಿವಿಧ ಸಮುದಾಯಗಳಾಗಿ ತಮ್ಮ ಅಧಿಕಾರ ವರ್ಗದ ಕೈ ಕೆಳಗೆ ಪ್ರತ್ಯೇಕ ಸಭೆಗಳ ಸದಸ್ಯರಾಗಿ ವಿಭಿನ್ನ ಆರಾಧನಾ ಕ್ರಮಗಳನ್ನು ಅನುಸರಿಸುತ್ತಾರೆ. ಈ ಸಭೆಗಳ ಮಧ್ಯದಲ್ಲಿ ಅಪರೂಪ ಅನ್ಯೋನ್ಯತೆಯನ್ನು ನಾವು ಕಾಣಬಹುದು. ಈ ವಿಭಿನ್ನತೆ ಧರ್ಮಸಭೆಯ ಅನ್ಯೋನ್ಯತೆಗೆ ದಕ್ಕೆಯುಂಟು ಮಾಡದೆ ಏಕತೆಯನ್ನು ವ್ಯಕ್ತಪಡಿಸುತ್ತದೆ. ಕಥೋಲಿಕ ಧರ್ಮಸಭೆ ಪ್ರತಿ ಪ್ರತ್ಯೇಕ ಸಭೆಯ ಸಂಪ್ರದಾಯವನ್ನು ಸುರಕ್ಷಿತವಾಗಿ ಕಾಪಾಡಲು ಆಶಿಸುತ್ತದೆ. ಅವು ಆಯಾಯ ಸ್ಥಳ ಮತ್ತು ಕಾಲಗಳಿಗೆ ಅನುಗುಣವಾಗಿ ಹೊಂದಿಕೊಂಡು ಬಾಳಬೇಕೆಂದು ಬಯಸುತ್ತದೆ" (ಸಂಖ್ಯೆ 2).

ಸಾರ್ವತ್ರಿಕ ಕಥೋಲಿಕ ಧರ್ಮಸಭೆ ಒಂದು ಮತ್ತು ಅದೇ ಸಮಯದಲ್ಲಿ ಹಲವು ಎಂಬುದನ್ನು ಅರಿತುಕೊಂಡರೆ ಪ್ರಾಚ್ಯ ಸಭೆಗಳ ಪ್ರಾಮುಖ್ಯತೆ ನಮ್ಮ ಗಮನಕ್ಕೆ ಬರುತ್ತದೆ. ನಾನಾ ಸಂಸ್ಕೃತಿ, ಚಾರಿತ್ರಿಕ ಮತ್ತು ಭೌಗೋಳಿಕ ಸ್ಥಿತಿಗತಿಗಳಿಗೆ ಒಳಗಾದ ಹಲವಾರು ಸ್ಥಳೀಯ ಸಭೆಗಳು ಅನ್ಯೋನ್ಯವಾಗಿ ಸಾರ್ವತ್ರಿಕ ಧರ್ಮಸಭೆಯೊಂದಿಗೆ ಒಂದೇ ಆಗಿವೆ. ಪೂರ್ವ ಮತ್ತು ಪಶ್ಚಿಮದಲ್ಲಿರುವ ಪ್ರತ್ಯೇಕ ಧರ್ಮಸಭೆಗಳು ತಮ್ಮ ಆರಾಧನಾ ವಿಧಿಯಿಂದ ವಿಭಿನ್ನ ಸಭೆಗಳಾಗಿವೆ. ಅವರ ಆರಾಧನಾ ವಿಧಿ, ಸಭಾ ಶಿಸ್ತು ಮತ್ತು ಆಧ್ಯಾತ್ಮಿಕ ಪಿತ್ರಾರ್ಜಿತ ಇವೆಲ್ಲವೂ ರೋಮಿನ ಧರ್ಮಾಧ್ಯಕ್ಷರ ಪಾಲನಾ ಆಡಳಿತಕ್ಕೆ ಒಳಪಟ್ಟಿವೆ. ಅವರು ದೈವಿಕ ಸಂಸ್ಥಾಪನೆಯಿಂದ ಸಂತ ಪೇತ್ರರ ಉತ್ತರಾಧಿಕಾರಿಯಾಗಿ ಸಾರ್ವತ್ರಿಕ ಧರ್ಮಸಭೆಯ ಅಗ್ರಗಣ್ಯ ಸ್ಥಾನದಲ್ಲಿದ್ದಾರೆ. ಎಲ್ಲ ಕ್ರೈಸ್ತ ಸಭೆಗಳ ಅಂತಸ್ತು ಒಂದೇ, ಆರಾಧನಾ ಕ್ರಮದ ಭಿನ್ನತೆಯ ನಿಮಿತ್ತ ಯಾವ ಸಭೆಯೂ ನಶಿಸಿ ಹೋಗುವುದಿಲ್ಲ. ರೋಮಿನ ಜಗದ್ಗುರುಗಳ ನೇತೃತ್ವದಲ್ಲಿ ಶುಭ ಸಂದೇಶವನ್ನು ವಿಶ್ವದಾದ್ಯಂಥ ಸಾರುವ ಸಮಾನ ಹಕ್ಕು ಮತ್ತು ಕರ್ತವ್ಯ ಸರ್ವರಿಗೂ ಇದೆ. (ಮಾರ್ಕ 16:15; ಸಂಖ್ಯೆ 3).

ಎಲ್ಲಾ ಪ್ರತ್ಯೇಕ ಸಭೆಗಳ ಮುಖಂಡರು ಅವು ಎಲ್ಲೇ ಇರಲಿ ಅವುಗಳ ಪ್ರತ್ಯೇಕತೆಯನ್ನು ಸಂರಕ್ಷಿಸಿ ಅವುಗಳ ಪ್ರಗತಿಗಾಗಿ ಶ್ರಮಿಸಬೇಕೆಂದು ವ್ಯಾಟಿಕನ್ ಸಮ್ಮೇಳನ ಆದೇಶಿಸುತ್ತದೆ. ಈ ಉದ್ದೇಶ ಪೂರೈಕೆಯಾಗಬೇಕಾದರೆ ಶಿಕ್ಷಣ ಮತ್ತು ಬೋಧನೆ ಪ್ರಮುಖ ಸಾಧನಗಳು. "ಎಲ್ಲಾ ಯಾಜಕರು ಮತ್ತು ಪವಿತ್ರಾಭಿಷೇಕದ ಅಭ್ಯರ್ಥಿಗಳು ಈ ಪ್ರತ್ಯೇಕ ಆರಾಧನಾ ವಿಧಿಯ ಬಗ್ಗೆ ವಿಶೇಷವಾಗಿ ಅಂತರ ಆರಾಧನಾ ವಿಧಿಯ ವಿಚಾರಗಳ ಬಗ್ಗೆ ವ್ಯವಹಾರಿಕ ನೀತಿ ನಿಯಮಗಳ ಬಗ್ಗೆ ಮಾರ್ಗದರ್ಶನವನ್ನು ಪಡೆಯಬೇಕು" "ಕ್ರೈಸ್ತ ಶ್ರೀ ಸಾಮಾನ್ಯರು ಧರ್ಮೋಪದೇಶ, ಶಿಕ್ಷಣದಲ್ಲಿ ಆರಾಧನಾ ವಿಧಿ ವಿಧಾನ ನಿಯಮಾವಳಿಯ ಬಗ್ಗೆ ತಿಳಿದುಕೊಳ್ಳಬೇಕು" (ಸಂಖ್ಯೆ 4).

ಐಕ್ಯತೆಯನ್ನು ಕಾಪಾಡಲು ಎಲ್ಲಾ ಗೊಂದಲಗಳಿಂದ ಮುಕ್ತವಾಗಿರಲು ವ್ಯಾಟಿಕನ್ ಸಮ್ಮೇಳನ ಹೀಗೆನ್ನುತ್ತದೆ. "ಒಂದೇ ಪ್ರದೇಶದಲ್ಲಿರುವ ವಿಭಿನ್ನ ಸಭೆಗಳ ಅಧಿಕಾರ ವರ್ಗ ನಿಯತ ಕಾಲಕಾಲಕ್ಕೆ



ಸಭೆಗಳನ್ನು ಏರ್ಪಡಿಸಿ, ವಿಚಾರ ವಿನಿಮಯ ಮಾಡಿ ಅನ್ಯೋನ್ಯತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹೀಗೆ ಧಾರ್ಮಿಕ ಒಳಿತನ್ನು ಬೆಳೆಸಬೇಕು. ಯಾಜಕ ವರ್ಗದ ಶಿಸ್ತನ್ನು ಪರಿಣಾಮಕಾರಿಯಾಗಿ ಕಾಪಾಡಬೇಕು" (ಸಂಖ್ಯೆ 4).

## ಪ್ರಾಚ್ಯ ಧರ್ಮಸಭೆಗಳ ಆಧ್ಯಾತ್ಮಿಕ ನಿಧಿ

"ಪ್ರಾಚ್ಯ ಧರ್ಮಸಭೆಗಳು ಸಾರ್ವತ್ರಿಕ ಧರ್ಮಸಭೆಯಲ್ಲಿ ಎಷ್ಟು ಪ್ರಖ್ಯಾತಿಯನ್ನು ಪಡೆದಿವೆ ಎಂಬುದನ್ನು ಅವುಗಳ ವಿಶ್ವಾಸ, ಸಂಪ್ರದಾಯ ಮತ್ತು ಹಲವಾರು ಸಂಸ್ಥಾಪನಾ ವ್ಯವಸ್ಥೆಗಳು ರುಜು ಪಡಿಸುತ್ತವೆ. ವ್ಯಾಟಿಕನ್ ಸಮ್ಮೇಳನ ಈ ಸಭೆಗಳ ಆಧ್ಯಾತ್ಮಿಕ ಪಿತ್ರಾರ್ಜಿತವನ್ನು ಮಾನ್ಯ ಮಾಡಿ ಶ್ಲಾಘಿಸುತ್ತದೆ ಮಾತ್ರವಲ್ಲ ಅದೆಲ್ಲವೂ ಪ್ರಭು ಕ್ರಿಸ್ತರ ಸಾರ್ವತ್ರಿಕ ಧರ್ಮಸಭೆಯ ಪಿತ್ರಾರ್ಜಿತವೆಂದೇ ಪರಿಗಣಿಸುತ್ತದೆ" (ಸಂಖ್ಯೆ 5).

ಈ ಕಾರಣ ಪ್ರಾಚ್ಯ ಸಭೆಗಳ ಕ್ರೈಸ್ತ ಭಕ್ತರು ತಮ್ಮ ವಿಶಿಷ್ಠ ಆರಾಧನಾ ಕ್ರಮಗಳನ್ನು ಪ್ರತ್ಯೇಕ ಶಿಸ್ತನ್ನು ಸಂರಕ್ಷಿಸಬೇಕೆಂದು ಸಮ್ಮೇಳನ ಅಪೇಕ್ಷಿಸುತ್ತದೆ.

ಈ ವಿಧಿಗಳಲ್ಲಿ ಬದಲಾವಣೆಯನ್ನು ವ್ಯವಸ್ಥಿತ ಪ್ರಗತಿಗಾಗಿ ಮಾತ್ರ ಮಾಡಬೇಕು. ಕಾಲ ಮತ್ತು ವ್ಯಕ್ತಿಗಳ ಪರಿಸರದ ನಿಮಿತ್ತ ಅವ್ಯವಸ್ಥಿತ ಪರಿವರ್ತನೆಗಳಾಗಿದ್ದರೆ, ಬೇರೆ ವಿವಿಧ ಕಾರಣಗಳಿಂದ ಬದಲಾವಣೆಯನ್ನು ತಂದಿದ್ದರೆ, ಅವು ಮೂಲ ಆರಾಧನಾ ಕ್ರಮಕ್ಕೆ ವ್ಯತಿರಿಕ್ತವಾಗಿದ್ದರೆ ಹಿಂದಿನ ಆಚರಣೆಗೆ ಹೋಗಲು ಸರ್ವಪ್ರಯತ್ನ ಮಾಬೇಕು (ಸಂಖ್ಯೆ 6).

ಪ್ರಾಚ್ಯ ಧರ್ಮಸಭೆಗಳು ಪ್ರತ್ಯೇಕ ಸಂಸ್ಥಾಪನಾ ವ್ಯವಸ್ಥೆಯ ಜೊತೆಗೆ ತಮ್ಮದೇ ಆದ ಸಂಸ್ಕಾರಿಕ ಶಿಸ್ತು ಮತ್ತು ಆರಾಧನಾ ಕ್ರಮವನ್ನು ಕಾದಿರಿಸಿಕೊಂಡು ಬಂದಿದೆ.

## ಪ್ರಾಚ್ಯ ಸಭೆಗಳ ಪಿತಾಮಹರು

ಪ್ರಾಚ್ಯ ಸಭೆಗಳಲ್ಲಿ ಪಿತಾಮಹರ ವ್ಯವಸ್ಥೆ ಪ್ರಮುಖವಾದುದು. "ಪ್ರಾಚ್ಯ ಪಿತಾಮಹ ಎಂಬ ಬಿರುದನ್ನು ಧರ್ಮಾಧ್ಯಕ್ಷರಿಗೆ ಕೊಡಲಾಗಿದೆ. ಅವರು ತಮ್ಮ ಪ್ರದೇಶದಲ್ಲಿರುವ ತಮ್ಮ ಆರಾಧನಾ ಕ್ರಮಕ್ಕೆ ಒಳಪಟ್ಟ ಎಲ್ಲಾ ಧರ್ಮಾಧ್ಯಕ್ಷರುಗಳ ಪ್ರಾಂತೀಯ ಧರ್ಮಾಧ್ಯಕ್ಷರುಗಳ ಯಾಜಕರುಗಳ ಮತ್ತು ಶ್ರೀ ಸಾಮಾನ್ಯರ ಮೇಲೆ ಅಧಿಕಾರವನ್ನು ಹೊಂದಿರಬೇಕು. ಈ ಅಧಿಕಾರ ರೋಮಿನ ಜಗದ್ಗುರುಗಳ ಪ್ರಧಾನ ಅಧಿಕಾರಕ್ಕೆ ಚ್ಯುತಿಯಿಲ್ಲದೆ ಇರಬೇಕು.

## ಸಂಸ್ಕಾರಗಳ ವಿಧಿ ವಿಧಾನ

ಸಂಸ್ಕಾರಗಳ ಬಗ್ಗೆ ಪ್ರಾಚ್ಯ ಕ್ರೈಸ್ತ ಸಭೆಗಳಲ್ಲಿ ಕಂಡುಬರುವ ವಿಶಿಷ್ಠಗುಣ ಯಾವುದೆಂದರೆ: ದೃಢೀಕರಣ ಸಂಸ್ಕಾರವನ್ನು ಸಾಧಾರಣವಾಗಿ ಯಾಜಕರು ಪ್ರದಾನ ಮಾಡಬಹುದು. ಅದನ್ನು ಅವರು ದೀಕ್ಷಾಸ್ನಾನದ ಜೊತೆಯಲ್ಲೇ ಕೊಡಬಹುದು.

## ದೇವಾರಾಧನಾ ಪದ್ಧತಿ

ದೇವಾರಾಧನಾ ವಿಚಾರದಲ್ಲಿ ಪ್ರಾಚ್ಯ ಸಭೆಗಳ ಮತ್ತು ಪಾಶ್ಚಾತ್ಯ ಸಭೆಗಳ ಪಂಚಾಂಗಕ್ಕೂ ಅಲ್ಪಸ್ವಲ್ಪ ವ್ಯತ್ಯಾಸವಿದೆ. ಎಲ್ಲಾ ಪ್ರಾಚ್ಯ ಸಭೆಗಳಲ್ಲಿ ನಮ್ಮ ಪ್ರಭುವಿನ ಹಬ್ಬಗಳಿಗೆ ಪ್ರಾಮುಖ್ಯತೆ ಇದೆ. ಪಾಶ್ಚಾತ್ಯ ಸಭೆಗಳ ಪಂಚಾಂಗ ನಾಲ್ಕು ಕಾಲಗಳಾಗಿ ವಿಭಾಗಿಸಿದ್ದರೆ ಪ್ರಾಚ್ಯ ಸಂಖ್ಯೆಗಳ ಪಂಚಾಂಗ ಹತ್ತು ಕಾಲಗಳಾಗಿ ವಿಂಗಡಿಸಲ್ಪಟ್ಟಿದೆ. (ಸಂಖ್ಯೆ 19–23).

## ಬೇರ್ಪಟ್ಟ ಕ್ರೈಸ್ತ ಸಮುದಾಯಗಳೊಂದಿಗೆ ಸಂಬಂಧ

ಪವಿತ್ರ ಪೀಠದಿಂದ ಬೇರ್ಪಟ್ಟಿರುವ ಪ್ರಾಚ್ಯ ಸಭೆಗಳೊಂಧಿಗೆ ಕಥೋಲಿಕರು ಯಾವ ರೀತಿಯಲ್ಲಿ ವರ್ತಿಸಬೇಕೆಂದು ವ್ಯಾಟಿಕನ್ ಸಮ್ಮೇಳನ ಕೆಳಕಂಡಂತೆ ಕೆಲವು ದಿಕ್ಸೂಚಿಗಳನ್ನು ನೀಡಿದೆ.

1) ಕೆಲವು ಶರತ್ತುಗಳಿಗೆ ಒಳಪಟ್ಟು ಮತ್ತು ಕೆಲವು ಸೂತ್ರಗಳಿಗೆ ಅನುಗುಣವಾಗಿ (ಸಂಖ್ಯೆ 26–29) ತಮ್ಮ ಸ್ವಂತ ತಪ್ಪಿಲ್ಲದೆ ಕಥೋಲಿಕ ಧರ್ಮಸಭೆಯಿಂದ ಬೇರ್ಪಟ್ಟಿರುವ ಪ್ರಾಚ್ಯ ಸಭೆಯ ಸದಸ್ಯರಿಗೆ ಪಾಪ ನಿವೇದನೆ, ಪರಮ ಪ್ರಸಾದ, ವ್ಯಾದಿಸ್ಥರ ಅಭ್ಯಂಗ, ಸಂಸ್ಕಾರಗಳನ್ನು ಪ್ರದಾನ ಮಾಡಬಹುದು. ಇಲ್ಲಿ ಅಭ್ಯರ್ಥಿಯ ಅರ್ಹನಾಗಿರಬೇಕು ಮತ್ತು ಸ್ವಂತ ಚಿತ್ತದಿಂದ ಸಂಸ್ಕಾರವನ್ನು ವಿನಂತಿಸಬೇಕು.

2) ಕಥೋಲಿಕರು ಸಹ ಈ ಸಂಸ್ಕಾರಗಳನ್ನು ಕಥೋಲಿಕೇತರ ಪ್ರಾಚ್ಯ ಯಾಜಕರಿಂದ ಅಗತ್ಯವಿದ್ದಾಗ ಅಥವಾ ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ಪಡೆದುಕೊಳ್ಳಬಹುದು. ಅವರಿಗೆ ಕಥೋಲಿಕ ಯಾಜಕರಿಂದ ಇದನ್ನು ಪಡೆದುಕೊಳ್ಳಲು ದೈಹಿಕ ಮತ್ತು ನೈತಿಕ ತೊಡಕಿದ್ದರೆ ಮಾತ್ರ ಹೀಗೆ ಮಾಡಬಹುದು. ಈ ಮಾರ್ಗ ಸೂಚಿಗಳನ್ನು ಸ್ಥಳೀಯ ಅಧಿಕಾರ ವರ್ಗದವರ ನಿಯಂತ್ರಣ ಮತ್ತು ನೇತೃತ್ವದಲ್ಲಿ ಆಚರಣೆಗೆ ತರಬೇಕೆಂದು ಸಮ್ಮೇಳನ ಇಚ್ಛಿಸುತ್ತದೆ.

## ಸಮಾಪ್ತಿ

ಈ ಶಾಸನ ಸಮಾಪ್ತಿಯಾಗುವ ಮೊದಲು ಈ ವಿಜ್ಞಾಪನೆಯನ್ನು ಮಾಡುತ್ತದೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಧರ್ಮಸಭೆಯ ಕ್ರೈಸ್ತರು ಸದಾ ಭಕ್ತಿ ಪೂರ್ವಕವಾಗಿ ದಿನನಿತ್ಯ ನಿಷ್ಠೆಯಿಂದ ದೇವರಲ್ಲಿ ಪ್ರಾರ್ಥಿಸಬೇಕು. ಸರ್ವ ಕ್ರೈಸ್ತರೂ ಒಂದಾಗಬೇಕೆಂದು ದೇವ ಮಾತೆಯಲ್ಲಿ ನೆರವನ್ನು ಕೋರಬೇಕು. ಭಕ್ತರು ಇತರೆ ಹಲವಾರು ಕ್ರೈಸ್ತ ಸಭೆಗಳ ಸದಸ್ಯರಿಗಾಗಿಯೂ ವಿನಂತಿಸಬೇಕು. ಪ್ರಭು ಕ್ರಿಸ್ತರ ನಾಮ ನಿವೇದನೆ ಮಾಡಿದ ಪರಿಣಾಮವಾಗಿ ಹಿಂಸೆಯನ್ನು ಅನುಭವಿಸುತ್ತಿರುವವರು ಪವಿತ್ರಾತ್ಮರ ಶಕ್ತಿಯನ್ನು ಶಾಂತಿಯನ್ನು ಸವಿಯುವಂತೆ ಪ್ರಾರ್ಥಿಸಬೇಕು. "ಸೋದರ ಭಾವನೆಯಿಂದ ಒಬ್ಬರನ್ನೊಬ್ಬರು ಹೃತ್ಪೂರ್ವಕವಾಗಿ ಪ್ರೀತಿಸಿರಿ, ಗೌರವ ತೋರಿಸುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ (ರೋಮನ 12:10 ಸಂಖ್ಯೆ 30).



# V ಕ್ರೈಸ್ತ ಒಗ್ಗಟ್ಟು
## (ಶಾಸನ)

ಒಮ್ಮೆ ಎಲ್ಲಾ ಕ್ರೈಸ್ತ ಭಕ್ತರ ನಡುವೆ ಇದ್ದ ಸಂಪೂರ್ಣ ಐಕ್ಯಮತ್ಯ ಪನ: ಸ್ಥಾಪನೆಯಾಗಬೇಕು ಎಂಬುದು ವ್ಯಾಟಿಕನ್ ಸಮ್ಮೇಳನದ ಪ್ರಮುಖ ಕಾಳಜಿಯಾಗಿದೆ. "ಪ್ರಭು ಯೇಸುಕ್ರಿಸ್ತರು ಒಂದೇ ಧರ್ಮಸಭೆಯನ್ನು ಏಕವಾಗಿ ಸ್ಥಾಪಿಸಿದರು. ಆದರೂ ಅನೇಕ ಕ್ರೈಸ್ತ ಪಂಗಡಗಳು ತಾವೇ ಆ ಧರ್ಮಸಭೆಯೆಂದು ಹೇಳಿಕೊಳ್ಳುತ್ತಿವೆ". ಇಂತಹ ಅನ್ಯೋನ್ಯತೆ ಪ್ರಭು ಕ್ರಿಸ್ತರ ಇಚ್ಛೆಗೆ ವಿರೋಧವಾಗಿದೆ ಮಾತ್ರವಲ್ಲ ಅಪನಿಂದನೆಯೂ ಆಗಿದ್ದು, ಶುಭ ಸಂದೇಶ ಬೋಧನೆಗೆ ತೊಡಕಾಗಿದೆ.

## ಅಧ್ಯಾಯ I

## ಕ್ರೈಸ್ತ ಒಗ್ಗಟ್ಟಿನ ಬಗ್ಗೆ ಕಥೋಲಿಕ ವಿಧಿ ನಿಯಮಗಳು

ದೇವರು ತಮ್ಮ ಪುತ್ರನನ್ನು ಕಳುಹಿಸಿ ತಮ್ಮ ಪ್ರೀತಿಯನ್ನು ಹೇಗೆ ಪ್ರಕಟಿಸಿದರು ಎಂಬುದನ್ನು ಈ ಅಧ್ಯಾಯ ತಿಳಿಸುತ್ತದೆ. ಈ ದೇವಪುತ್ರ ತನ್ನ ರಕ್ಷಣಾ ಕಾರ್ಯದ ಮುಖಾಂತರ ಮಾನವ ಜನಾಂಗಕ್ಕೆ ಹೊಸ ಜೀವವನ್ನು, ಐಕ್ಯತೆಯನ್ನು ಕೊಟ್ಟರು. ಅವರು ಕೊಟ್ಟ ಪರಮ ಪ್ರಸಾದ ಐಕ್ಯಮತ್ಯದ ಸಂಕೇತ ಮತ್ತು ಸಾಧನವಾಗಿದೆ. ಅವರು ಕೊಟ್ಟಿರುವ ಆಜ್ಞೆ ಪ್ರೀತಿಯ ಹೊಸ ಕಟ್ಟಳೆಯಾಗಿದೆ, ಅವರು ಕಳುಹಿಸಿದ ಪವಿತ್ರಾತ್ಮರು ಅವರ ಅನುಯಾಯಿಗಳೊಂದಿಗೆ ನಿರಂತರ ನೆಲೆಸುತ್ತಾರೆ.

ಭಕ್ತರ ಹೃದಯಗಳಲ್ಲಿ ತಂಗಿರುವ ಈ ಪವಿತ್ರಾತ್ಮರು ಧರ್ಮಸಭೆಯಾದ್ಯಂತ ವ್ಯಾಪಿಸಿದ್ದಾರೆ, ಅದನ್ನು ಆಳುತ್ತಿದ್ದಾರೆ. ಅವರು ಭಕ್ತರಲ್ಲಿ ಅದ್ಭುತಕರ ಅನ್ಯೋನ್ಯತೆಯನ್ನು ಸಾಧಿಸುತ್ತಾರೆ. ಅವರು ಭಕ್ತರನ್ನು ಎಷ್ಟು ನಿಕಟವಾಗಿ ಒಂದುಗೂಡಿಸುತ್ತಾರೆ ಎಂದರೆ ಅವರೇ ಧರ್ಮಸಭೆಯಲ್ಲಿ ಅನ್ಯೋನ್ಯತೆಯ ಮೂಲ ಆಧಾರವಾಗಿದ್ದಾರೆ.

ಧರ್ಮಸಭೆಯನ್ನು ಎಲ್ಲೆಡೆಗಳಲ್ಲೂ ಸ್ಥಾಪಿಸಬೇಕೆಂದು ಪ್ರಭು ಕ್ರಿಸ್ತರು 12 ಮಂದಿಗಳನ್ನು ಒಳಗೊಂಡ ಮಂಡಳಿಯನ್ನು ಸ್ಥಾಪಿಸಿದರು. ಅದಕ್ಕೆ ಬೋಧಿಸುವ, ಆಡಳಿತ ನಡೆಸುವ ಮತ್ತು ಪಾವನಗೊಳಿಸುವ ಕಾರ್ಯವನ್ನು ವಹಿಸಿದರು. ಈ ಮಂಡಳಿಗೆ ಸಂತ ಪೇತ್ರರನ್ನು ಶಿರಸ್ಸಾಗಿ ನೇಮಕ ಮಾಡಿದರು.

ಪ್ರೇಷಿತರ ಉತ್ತರಾಧಿಕಾರಿಗಳಾದ ಧರ್ಮಾಧ್ಯಕ್ಷರುಗಳು ಪ್ರೇಷಿತ ಪೇತ್ರರ ನಂತರದ ಶಿರಸ್ಸಾಗಿ ನಿಷ್ಠೆಯಿಂದ ಶುಭ ಸಂದೇಶ ಸಾರಿದರು. ಅವರು ಸಂಸ್ಕಾರಗಳನ್ನು ವಿತರಣೆ ಮಾಡಿದರು. ಅವರು ಪ್ರೀತಿಯಿಂದ ಆಡಳಿತ ನಡೆಸಿದರು. ಹೀಗೆ ಒಬ್ಬ ಪವಿತ್ರಾತ್ಮರ ಕ್ರಿಯೆಯಿಂದ ತಮ್ಮ ಪ್ರಜೆಗಳ ಸಂಖ್ಯೆ ಬೆಳೆಯಬೇಕೆಂದು ಯೇಸು ಕ್ರಿಸ್ತರು ಅಪೇಕ್ಷಿಸಿದರು. ಅವರು ಈ ಪ್ರಜೆಯ ಐಕ್ಯಮತ್ಯವನ್ನು ಅವರ ಏಕ ವಿಶ್ವಾಸ ನಿವೇದನೆ, ಸಾರ್ವಜನಿಕ ಆಚರಣೆ ಮತ್ತು ದೇವರ ಕುಟುಂಬದ ಸೋದರ ಸೌಹಾರ್ದದ ಮುಖಾಂತರ ಸಾಧಿಸುತ್ತಾರೆ.

ಆದಿಯಿಂದಲೂ ಧರ್ಮಸಭೆಯಲ್ಲಿ ಕೆಲವು ಪಂಗಡಗಳಿದ್ದವು. ಅವುಗಳನ್ನು ಸಂತ ಪೌಲರು ಖಂಡಿಸಿದ ನಿದರ್ಶನಗಳಿವೆ. ಅನಂತರ ತಲೆಯೆತ್ತಿದ ಗಂಭೀರ ಕಲಹಗಳಿಂದಾಗಿ ದೊಡ್ಡ ಸಮುದಾಯಗಳು ಕಥೋಲಿಕ ಧರ್ಮಸಭೆಯ ಪೂರ್ಣ ಅನ್ಯೋನ್ಯತೆಯಿಂದ ಬೇರ್ಪಟ್ಟು ಹೋದವು.

ಕ್ರೈಸ್ತರ ಪೂರ್ಣ ಐಕ್ಯಕ್ಕೆ ಇರುವ ಅಡ್ಡಿ ಆತಂಕಗಳನ್ನು ನಿವಾರಣೆ ಮಾಡಬೇಕೆಂಬುದೇ ಕ್ರೈಸ್ತ ಒಗ್ಗಟ್ಟಿನ ಆಂದೋಲನದ ಉದ್ದೇಶ. ಪ್ರಭು ಕ್ರಿಸ್ತರನ್ನು ವಿಶ್ವಾಸಿಸುವ ಭಕ್ತರು ಅಧಿಕೃತ ದೀಕ್ಷಾಸ್ನಾನ ಪಡೆದವರು. ಕಥೋಲಿಕ ಧರ್ಮಸಭೆಯೊಂದಿಗೆ ಅಪೂರ್ಣವಾದರೂ ಒಂದು ವಿಧದ ಐಕ್ಯತೆಯನ್ನು ಗಳಿಸುತ್ತಾರೆ.

ಇಷ್ಟು ಮಾತ್ರವಲ್ಲದೆ ಹಲ ಕೆಲವು ಅಂಶಗಳು ಮತ್ತು ಕೊಡುಗೆಗಳು ಧರ್ಮಸಭೆಗೆ ಜೀವವನ್ನು ಕೊಟ್ಟು ಅದನ್ನು ಬೆಳೆಸುತ್ತವೆ. ಅವು ಕಥೋಲಿಕ ಧರ್ಮಸಭೆಯ ಹೊರಗಿನ ಸರಹದ್ದಿನಲ್ಲೂ ಇರಬಹುದು. ಉದಾ: ಲಿಖಿತ ದೈವವಾಕ್ಯ, ವರಪ್ರಸಾದದ ಜೀವನ, ವಿಶ್ವಾಸ, ಭರವಸೆ ಮತ್ತು ಪ್ರೀತಿ, ಪವಿತ್ರಾತ್ಮರ ಆಂತರಿಕ ವರದಾನಗಳು ಮತ್ತು ಇತರ ಗೋಚರ ಅಂಶಗಳು.

ಕಥೋಲಿಕ ಧರ್ಮಸಭೆಯಿಂದ ಬೇರ್ಪಟ್ಟ ಅನೇಕ ಸಹೋದರರು ಅನೇಕ ಕೈಸ್ತ ಧಾರ್ಮಿಕ ದೈವಾರಾಧನಾ ವಿಧಿಗಳನ್ನು ಆಚರಿಸುತ್ತಾರೆ. ಈ ವಿಧಿಗಳು ಒಂದೊಂದು ಸಭೆ ಮತ್ತು ಸಮುದಾಯದ ಸ್ಥಿತಿಗತಿಗಳಿಗೆ ಅನುಗುಣವಾಗಿ ದೇವರ ಅನುಗ್ರಹವನ್ನು ಉತ್ಪಾದಿಸಬಲ್ಲವು ಮತ್ತು ರಕ್ಷಣಾ ಸಮುದಾಯಕ್ಕೆ ಅವಕಾಶ ಮಾಡಿಕೊಡಬಲ್ಲವು.

ಧರ್ಮಸಭೆಯಿಂದ ಬೇರ್ಪಟ್ಟವರು ಒಂಟಿಯಾಗಿರಬಹುದು, ಸಮುದಾಯವಾಗಿರಬಹುದು ಅಥವಾ ಕೈಸ್ತ ಪಂಗಡವಾಗಿರಬಹುದು. ಆದರೆ ಇವರು ತಮ್ಮೊಂದಿಗೆ ಒಂದೇ ಶರೀರವಾಗಿರಲು ಕೊಟ್ಟ ನವಜೀವ, ನವಚೇತನಗೊಳಿಸಲು ಕೊಟ್ಟ ವರದಾನ. ಇವೆಲ್ಲವನ್ನು ಪವಿತ್ರಗ್ರಂಥ ಮತ್ತು ಪ್ರಾಚೀನ ಪರಂಪರೆ ವಾಗ್ದಾನ ಮಾಡಿದೆ. ಅವುಗಳಿಂದ ಈ ಪಂಗಡಗಳು ಆಶೀರ್ವದಿತರಾಗಲಾರವು. ಏಕೆಂದರೆ ರಕ್ಷಣೆಯ ಪೂರ್ಣ ಸಾಧನವಾಗಿರುವ ಪ್ರಭು ಕ್ರಿಸ್ತರ ಕಥೋಲಿಕ ಧರ್ಮಸಭೆಯ ಮೂಲಕ ಮಾತ್ರ ಸಂಪೂರ್ಣ ರಕ್ಷಣೆ ಪಡೆಯಲು ಸಾಧ್ಯ.

"ಕೈಸ್ತರ ಐಕ್ಯತಾ ಸಂಚಲನ" ಎಂದರೆ ಧರ್ಮಸಭೆಯ ವಿವಿಧ ಅಗತ್ಯ ಮತ್ತು ಅವಕಾಶಗಳಿಗೆ ಅನುಗುಣವಾಗಿ ವಿವಿಧ ಪ್ರಯತ್ನ ಮತ್ತು ಚಟುವಟಿಕೆಗಳು ಹಮ್ಮಿಕೊಳ್ಳಲಾಗುವುವು. ಇವು ಕ್ರೈಸ್ತ ಐಕ್ಯಮತ್ಯವನ್ನು ವೃದ್ಧಿಗೊಳಿಸುವವು. ಈ ಐಕ್ಯತಾ ಸಂಚಲನ ಅಥವಾ ಚಳುವಳಿಗಳ ಉದ್ದೇಶ ಬೇರ್ಪಟ್ಟ ನಮ್ಮ ಸಹೋದರರ ಸ್ಥಿತಿಗತಿಯನ್ನು ಅಪಾರ್ಥಗೊಳಿಸುವ ಹೇಳಿಕೆಗಳನ್ನು ಅವರ ಬಗ್ಗೆ ಅಲ್ಲಸಲ್ಲದ ತೀರ್ಮಾನಗಳನ್ನು ತಡೆಹಿಡಿಯುವುದು ಆಗಿದೆ. ಈ ಪರಿಸ್ಥಿತಿಯಲ್ಲಿ ಪರಿಣತ ವ್ಯಕ್ತಿಗಳ ಮಧ್ಯೆ ವಿಚಾರ ವಿನಿಮಯವಾಗಬೇಕು. ಸಾರ್ವಜನಿಕ ಕಲ್ಯಾಣಕ್ಕಾಗಿ ಯೋಜನೆಗಳು ಕಾರ್ಯಗತವಾಗಬೇಕು. ಇಂಥಹ ಸಂಚಲನಗಳು ಯಶಸ್ವಿಯಾಗಬೇಕಾದರೆ ವಿವೇಕ, ಸಹನೆ ಮತ್ತು ಅಧಿಕಾರ ವರ್ಗದ ಮಾರ್ಗದರ್ಶನ ಬೇಕು. ಹೀಗಾದರೆ ಮಾತ್ರ ಹಂತ ಹಂತವಾಗಿ ಸಂಪೂರ್ಣ ಅನ್ಯೋನ್ಯತೆಗೆ ಅಡ್ಡಿಯಾಗಿರುವ ಅಡೆತಡೆಗಳು ದೂರವಾಗುತ್ತವೆ. "ಈ ಐಕ್ಯತೆ ಎಂದೂ ಕಳೆದು ಹೋಗದಂತೆ ಕಥೋಲಿಕ ಧರ್ಮಸಭೆಯಲ್ಲಿದೆ ಎಂದು ನಾವು ನಂಬುತ್ತೇವೆ"



ಒಬ್ಬೊಬ್ಬ ವ್ಯಕ್ತಿಯನ್ನು ಅಂದರೆ " ಕಥೋಲಿಕ ಧರ್ಮಸಭೆಯೊಂದಿಗೆ ಪೂರ್ಣ ಅನ್ಯೋನ್ಯತೆಯನ್ನು ಅಪೇಕ್ಷಿಸುವವರನ್ನು ಸಂಧಾನಗೊಳಿಸುವ ಕಾರ್ಯ ಈ ಆಂದೋಲನಕ್ಕೆ ವಿರುದ್ಧವಾಗಿಲ್ಲ.

ಕಥೋಲಿಕ ಧರ್ಮಸಭೆಯಲ್ಲಿ ಎಲ್ಲ ಸತ್ಯಗಳು ಪ್ರಕಟವಾಗಿದ್ದರೂ ಎಲ್ಲ ವರಪ್ರಸಾದದ ಸಾಧನಗಳು ಲಭ್ಯವಾಗಿದ್ದರೂ ಅದರ ಎಲ್ಲ ಸದಸ್ಯರು ಅವುಗಳನ್ನು ಅನುಸರಿಸುತ್ತಾ ಜೀವಿಸುತ್ತಿಲ್ಲ. "ಧರ್ಮಸಭೆಯ ವಿವಿಧ ವಿಧಿ ವಿಚಾರಗಳ ಮುಖ್ಯಾಂಶಗಳಲ್ಲಿ ಐಕ್ಯತೆಯನ್ನು ಕಾಪಾಡುವುದು ಅತ್ಯಗತ್ಯ. ಧರ್ಮಸಭೆಯಲ್ಲಿ ಪ್ರತಿಯೊಬ್ಬರೂ ಅವರವರಿಗೆ ವಹಿಸಿದ ಅಧಿಕಾರಕ್ಕೆ ಅನುಗುಣವಾಗಿ ತನ್ನ ಆಧ್ಯಾತ್ಮಿಕ ಜೀವನದಲ್ಲಿ ಅಗತ್ಯ ಸ್ವಾತಂತ್ರ್ಯವನ್ನು ಕಾಪಾಡಲಿ. ಆರಾಧನಾ ವಿಧಿ ವಿಧಾನಗಳಲ್ಲಿ ಮತ್ತು ದೈವ ಶಾಸ್ತ್ರೀಯ ವಿಷಯಗಳ ಬಗ್ಗೆ ಸಾಕಷ್ಟು ಸ್ವಾತಂತ್ರ್ಯವನ್ನು ಕಾಪಾಡಲಿ."

"ಬೇರ್ಪಟ್ಟ ನಮ್ಮ ಸಹೋದರರ ಹೃದಯದಲ್ಲೂ ಪವಿತ್ರಾತ್ಮರು ಪವಾಡಗಳನ್ನು ಎಸಗಬಲ್ಲರು. ಅದು ನಮ್ಮ ಆಧ್ಯಾತ್ಮಿಕ ಪ್ರಗತಿಗೂ ಸಹಾಯಕವಾಗಬಲ್ಲದು. ನೈಜ್ಯ ಕ್ರಿಸ್ತೀಯವಾದುದೆಲ್ಲವೂ ನೈಜ್ಯ ವಿಶ್ವಾಸಕ್ಕೆ ವಿರೋಧವಾಗುವಂತಿಲ್ಲ. ಅದು ಪ್ರತಿಯಾಗಿ ಪ್ರಭು ಕ್ರಿಸ್ತರ ಮತ್ತು ಧರ್ಮಸಭೆಯ ಪ್ರತಿಯೊಂದು ಗೂಢತತ್ವವನ್ನು ಕ್ರಿಯಾತ್ಮಕಗೊಳಿಸಬಲ್ಲದು".

ಆದರೆ ಕ್ರೈಸ್ತರಲ್ಲಿರುವ ವಿಭಜನೆ ಧರ್ಮಸಭೆಯ ಎಲ್ಲಾ ಮಕ್ಕಳಲ್ಲಿ ಪೂರ್ಣ ಐಕ್ಯಮತ್ಯವನ್ನು ತರಲು ಕಥೋಲಿಕತ್ವವನ್ನು ಸಾಧಿಸಲು ಅಡ್ಡಿಯಾಗಿದೆ. ಕೆಲವರು ದೀಕ್ಷಾಸ್ನಾನದಿಂದ ಧರ್ಮಸಭೆಯ ಸದಸ್ಯರಾಗಿದ್ದರೂ ಸಂಪೂರ್ಣ ಐಕ್ಯತೆಯಿಂದ ಬೇರೆಯಾಗಿದ್ದಾರೆ. ಅಷ್ಟಲ್ಲದೆ ಈ ವಿಭಜನೆಯ ದೆಸೆಯಿಂದ ಧರ್ಮಸಭೆ ತನ್ನ ವಾಸ್ತವ ಜೀವನದಲ್ಲಿ ಅದೇ ಕಥೋಲಿಕತ್ವವನ್ನು ವ್ಯಕ್ತ ಪಡಿಸಲು ಅಸಾಧ್ಯವಾಗಿದೆ.

ಐಕ್ಯಮತ್ಯದ ಬಗ್ಗೆ ಹಮ್ಮಿಕೊಂಡ ಚಟುವಟಿಕೆಗಳಲ್ಲಿ ಕಥೋಲಿಕ ಭಕ್ತರು ಅಧಿಕ ಅಧಿಕವಾಗಿ ಭಾಗವಹಿಸುತ್ತಿರುವುದು ಸಮ್ಮೇಳನದ ಗಮನಕ್ಕೆ ಬಂದು ಅದು ಸಂತೋಷಿಸುತ್ತದೆ. ಭೋಲೋಕದ ಎಲ್ಲಾ ಧರ್ಮಾಧ್ಯಕ್ಷರು ಈ ಕಾರ್ಯವನ್ನು ಎಚ್ಚರಿಕೆಯಿಂದ ಪ್ರೋತ್ಸಾಹಿಸಬೇಕೆಂದು ವಿವೇಕಯುಕ್ತ ಮಾರ್ಗಸೂಚಿಯನ್ನು ಕೊಡಬೇಕೆಂದು ಬಯಸುತ್ತದೆ.

# ಅಧ್ಯಾಯ II

## ಕ್ರೈಸ್ತ ಒಗ್ಗಟ್ಟಿನ ಅನುಷ್ಠಾನ

ಪೂರ್ಣ ಐಕ್ಯಮತ್ಯವನ್ನು ಪುನ: ಸ್ಥಾಪಿಸುವ ಕಾರ್ಯ ಇಡೀ ಧರ್ಮಸಭೆಗೆ ಅಂದರೆ ಯಾಜಕರಿಗೆ ಮತ್ತು ಶ್ರೀ ಸಾಮಾನ್ಯರಿಗೆ ಸೇರಿದೆ. ಇದನ್ನು ಅನುಷ್ಠಾನಕ್ಕೆ ತರಲು ನಿಷ್ಠಾವಂತ ಕ್ರೈಸ್ತ ಜೀವನ, ದೈವ ಶಾಸ್ತ್ರೀಯ ಮತ್ತು ಐತಿಹಾಸಿಕ ಅಧ್ಯಯನ ಅಗತ್ಯ. "ಧರ್ಮಸಭೆಯಲ್ಲಿ ಯಾವ ನವೀಕರಣ ಯಶಸ್ವಿಯಾಗಬೇಕಾದರೆ ಅದು ತನ್ನ ಕರೆಗೆ ನಿಷ್ಠೆಯಿಂದ ನಡೆಯುವುದರಲ್ಲಿ ಅಡಗಿದೆ. ಐಕ್ಯಮತ್ಯಕ್ಕಾಗಿ ನಡೆಯುವ ಆಂದೋಲನದ ಪ್ರಾಬಲ್ಯಕ್ಕೆ ಇದೇ ಮೂಲವಾಗಿದೆ".

ಲೌಕಿಕ ಜನರನ್ನು ಒಳಗೊಂಡ ಧರ್ಮಸಭೆ ಒಂದು ಸಂಸ್ಥೆಯಾಗಿದೆ. ಅದರಲ್ಲಿ ನಿರಂತರ ನವೀಕರಣದ ಅಗತ್ಯವಿದೆ. ಇಂತಹ ನವೀಕರಣವನ್ನು ಕ್ರಿಯಾತ್ಮಕಗೊಳಿಸಬೇಕೆಂದು ಪ್ರಭು ಕ್ರಿಸ್ತರು ಯಾತ್ರೆಯಲ್ಲಿರುವ ಕ್ರೈಸ್ತ ಸಭೆಗೆ ಆಹ್ವಾನವನ್ನು ನೀಡಿದ್ದಾರೆ. ಹಲವಾರು ಸಮಯ ಸಂದರ್ಭಗಳಲ್ಲಿ ಧರ್ಮಸಭೆಯಲ್ಲಿ ನೈತಿಕ ನಡತೆ ಮತ್ತು ಧಾರ್ಮಿಕ ಶಿಸ್ತಿನಲ್ಲಿ ಬೋಧನಾ ವಿಚಾರಗಳಲ್ಲಿ ಎಷ್ಟೋ ಕುಂದುಕೊರತೆಗಳು ಕಂಡು ಬಂದಿವೆ. ಆದರೆ ದೈವೀ ಪ್ರಕಟಿತ ಮತ್ತು ಧರ್ಮಸಭೆ ಅಧಿಕೃತವಾಗಿ ಸಾರಿದ ಸತ್ಯಗಳಿಗೆ ಇದು ಅನ್ವಯಿಸುವುದಿಲ್ಲ. ಇತರ ಸಂದರ್ಭಗಳಲ್ಲಿ ನಡೆದ ಅಚಾತುರ್ಯಗಳನ್ನು ಸಮಯಕ್ಕೆ ತಕ್ಕಂತೆ ಸರಿಯಾದ ರೀತಿಯಲ್ಲಿ ತಿದ್ದಿಕೊಳ್ಳತಕ್ಕದ್ದು.

"ಹೃದಯ ಪರಿವರ್ತನೆಯ ವಿನಃ ಯೋಗ್ಯ ಒಗ್ಗಟ್ಟಿನ ಚಳುವಳಿ ಯಶಸ್ವಿಯಾಗಲಾರದು. ಏಕೆಂದರೆ ಐಕ್ಯತೆಯ ಅಭಿಲಾಷೆ, ಮನೋಭಾವದ ಬದಲಾವಣೆ ನಿಸ್ವಾರ್ಥ, ಉದಾರ ಪ್ರೀತಿಯೊಂದಿಗೆ ಹುಟ್ಟಿ ಬೆಳೆಯುತ್ತದೆ. ಆದುದರಿಂದ ನಾವು ನಿಸ್ವಾರ್ಥಕ್ಕಾಗಿ, ದೀನತೆಗೆ, ವಿನಯತೆಯಿಂದ ಪರಸೇವೆ ಮಾಡಲು, ಉದಾರ ಮನಸ್ಸಿನಿಂದ ನೆರೆಯವನನ್ನು ಸೋದರನೆಂದು ಸ್ವೀಕರಿಸಲು ಬೇಕಾದ ವರಪ್ರಸಾದಗಳಿಗಾಗಿ ಪವಿತ್ರಾತ್ಮರಲ್ಲಿ ಪ್ರಾರ್ಥಿಸಬೇಕು. ಕೈಸ್ತ ಭಕ್ತರು ಶುಭ ಸಂದೇಶದ ಉಪದೇಶಕ್ಕೆ ಅನುಗುಣವಾಗಿ ಜೀವಿಸಬೇಕು. ನಮ್ಮ ಬಾಳ್ವೆ ಎಷ್ಟು ಉತ್ತಮವಾಗಿ ಇರುತ್ತದೋ ಅಷ್ಟರ ಮಟ್ಟಿಗೆ ಕ್ರೈಸ್ತ ಒಗ್ಗಟ್ಟು ಫಲಕಾರಿಯಾಗುತ್ತದೆ".

ಸಂತ ಯೊವಾನ್ನರು ಹೀಗೆಂದರು "ನಾವು ಪಾಪ ಮಾಡಲಿಲ್ಲವೆಂದು ಹೇಳಿದರೆ ದೇವರನ್ನು ಸುಳ್ಳುಗಾರರನ್ನಾಗಿ ಮಾಡುತ್ತೇವೆ ಮತ್ತು ಅವರ ವಾಣಿ ನಮ್ಮಲ್ಲಿರುವುದಿಲ್ಲ". (ಯೊವಾ 1:10). ಇದು ಐಕ್ಯಮತ್ಯಕ್ಕೆ ವಿರೋಧವಾದ ಪಾಪಗಳಿಗೂ ಅನ್ವಯಿಸುತ್ತದೆ. ಆದುದರಿಂದ ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸುವ ಹಾಗೆ ನಮ್ಮನ್ನು ಕ್ಷಮಿಸುವಂತೆ ದೇವರನ್ನು ಬೇರ್ಪಟ್ಟ ಸಹೋದರರನ್ನು ಬೇಡಿಕೊಳ್ಳುತ್ತೇವೆ".

ಐಕ್ಯಮತ್ಯಕ್ಕಾಗಿ ನಡೆಯುವ ಪ್ರಾರ್ಥನಾ ಕೂಟ ಮತ್ತು ಒಗ್ಗಟ್ಟಿನ ಸಭಾ ಸಂದರ್ಭಗಳಲ್ಲಿ ಕಥೋಲಿಕರು ಬೇರ್ಪಟ್ಟ ಕ್ರೈಸ್ತ ಸಹೋದರರೊಡನೆ ಸೇರಿ ಪ್ರಾರ್ಥಿಸಲು ಅಪ್ಪಣೆ ನೀಡಬಹುದು ಮಾತ್ರವಲ್ಲ ಅದು ಅಪೇಕ್ಷಣೀಯ.

ಎಲ್ಲಾ ಕ್ರೈಸ್ತರು ಮರಳಿ ಒಂದಾಗಲು ತಾರತಮ್ಯವಿಲ್ಲದ ಸಹ ಆರಾಧನೆ ಸಹಾಯಕವಾಗಲಾರದು. ಜೊತೆಗೂಡಿ ಆರಾಧಿಸುವ ಮೊದಲು ಈ ಎರಡು ನಿಯಮಗಳನ್ನು ಪಾಲಿಸುವುದು ಅಗತ್ಯ. (1) ಧರ್ಮಸಭೆಯ ಐಕ್ಯವನ್ನು ವ್ಯಕ್ತಪಡಿಸುವುದು (2) ವರಪ್ರಸಾದದ ಸಾಧನಗಳಲ್ಲಿ ಪಾಲ್ಗೊಳ್ಳುವುದು, ವ್ಯಕ್ತವಾಗಬೇಕಾದ ಐಕ್ಯವು ಈ ಒಗ್ಗಟ್ಟಿನ ಆರಾಧನೆಯನ್ನು ಬಹಿಷ್ಕರಿಸುತ್ತದೆ. ಗಳಿಸಬೇಕಾದ ವರಪ್ರಸಾದವು ಅದನ್ನು ಪ್ರೋತ್ಸಾಹಿಸುತ್ತದೆ. ಪರಿಸ್ಥಿತಿ ಹೀಗಿರುವಾಗ ಯಾವ ದಾರಿಯನ್ನು ಕ್ರಮಿಸಬೇಕು ಎಂಬುದನ್ನು ಕಾಲ, ಸ್ಥಳ, ಜನ ಮುಂತಾದ ವಿಷಯಗಳನ್ನು ಪರಿಶೀಲಿಸಿ ಕ್ರಿಯಾತ್ಮಕರಾಗಬೇಕು. ಈ ನಿರ್ಧಾರವನ್ನು ಸ್ಥಳೀಯ ಧರ್ಮಾಧ್ಯಕ್ಷರಿಗೆ ಬಿಡಲಾಗಿದೆ. ಆದರೆ ಇಂತಹ ಗಂಭೀರ ವಿಷಯದಲ್ಲಿ ಧರ್ಮಾಧ್ಯಕ್ಷ ಮಂಡಳಿಯ ವಿಧಿ ವಿಧಾನಗಳನ್ನು ಪ್ರೇಷಿತ ಪೀಠದ ಆಜ್ಞೆಯನ್ನು ಮಾನ್ಯ ಮಾಡಬೇಕು.



ಬೇರ್ಪಟ್ಟ ಸಹೋದರರ ಅಭಿಪ್ರಾಯಗಳನ್ನು ಚೆನ್ನಾಗಿ ಅರಿತುಕೊಳ್ಳುವುದು ಅಗತ್ಯ, ಗೆಳೆತನದ ವಿಚಾರ ವಿನಿಯಮ, ಸಂಪರ್ಕ ಉಪಯುಕ್ತ. ಅವರ ಮನೋಭಾವ ದೃಷ್ಟಿಕೋನವನ್ನು ಮನನ ಮಾಡುವುದು ಅತ್ಯಗತ್ಯ. ಹೀಗೆ ಮಾಡುವುದರಿಂದ ನಾವು ಅವರನ್ನು ಅರಿತು ನಮ್ಮ ವಿಶ್ವಾಸವನ್ನು ಇನ್ನಷ್ಟು ಸೂಕ್ತ ರೀತಿಯಲ್ಲಿ ಅವರ ಮುಂದಿಡಲು ಶಕ್ತರಾಗುತ್ತೇವೆ.

ದೈವಶಾಸ್ತ್ರ ಮತ್ತಿತರ ಶಾಸ್ತ್ರಗಳನ್ನು ವಿಶೇಷವಾಗಿ ಐತಿಹಾಸಿಕ ಮೌಲ್ಯವುಳ್ಳ ವಿಚಾರಗಳನ್ನು ಐಕ್ಯಮತ್ಯದ ಗುರಿಯನ್ನು ಗಮನದಲ್ಲಿಟ್ಟುಕೊಂಡು ಬೋಧಿಸಬೇಕು. ಕಲಿಸುವುದೆಲ್ಲವೂ ವಾಸ್ತವ ಪರಿಸ್ಥಿತಿಗೆ ಆದಷ್ಟು ಮಟ್ಟಿಗೆ ಸರಿ ತೂಗುವಂತಿರಬೇಕು. "ಭವಿಷ್ಯದ ಪಾಲಕರು ಮತ್ತು ಯಾಜಕರು ವಾಗ್ದಾನ ರಹಿತವಾಗಿ ಎಚ್ಚರಿಕೆಯಿಂದ ಸಿದ್ಧ ಮಾಡಲಾದ ದೈವ ಶಾಸ್ತ್ರವನ್ನು ಕಲಿಯಬೇಕು. ಕಥೋಲಿಕ ಧರ್ಮಸಭೆಯಿಂದ ಬೇರ್ಪಟ್ಟ ಸಹೋದರರ ಸಂಬಂಧ ಕುರಿತ ವಿಷಯಗಳಲ್ಲಿ ನುರಿತವರಾಗಿರಬೇಕು.

ಕಥೋಲಿಕ ಸಿದ್ಧಾಂತಗಳ ಬೋಧನಾ ವಿಧಾನ ಬೇರ್ಪಟ್ಟ ಸಹೋದರರೊಡನೆ ನಡೆಸಬೇಕಾದ ಸಂವಾದಕ್ಕೆ ಅಡ್ಡಿಯಾಗಬಾರದು. ಆದರೂ ಆ ಬೋಧನೆ ಸ್ಪಷ್ಟವೂ ಸಂಪೂರ್ಣವೂ ಆಗಿರುವುದು ಅತ್ಯಗತ್ಯ. ಅಬದ್ಧ ಶಾಂತಿದಾರಕ ನೀತಿಗಿಂತ ಐಕ್ಯಮತ್ಯಕ್ಕೆ ವಿರೋಧವಾದದ್ದು ಇನ್ನೊಂದಿಲ್ಲ. ಇಂತಹ ಕಲುಷಿತ ನೀತಿ ಕಥೋಲಿಕ ಧರ್ಮದ ಪರಿಶುದ್ಧತೆಯನ್ನು ಅಪವಿತ್ರಗೊಳಿಸುತ್ತದೆ ಮಾತ್ರವಲ್ಲ ನಿಚ್ಚಳ ಮತ್ತು ನಿರ್ದಿಷ್ಟವಾದುದನ್ನು ಮಸುಕುಗೊಳಿಸುತ್ತದೆ. ಬೇರ್ಪಟ್ಟ ಸಹೋದರರೊಡನೆ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಸಹಕರಿಸುವುದು ಶ್ರೇಯಸ್ಕರ.

# ಅಧ್ಯಾಯ III

## ರೋಮಿನ ಪ್ರೇಷಿತ ಪೀಠದಿಂದ ಬೇರ್ಪಟ್ಟ ಧರ್ಮಸಭೆಗಳು ಮತ್ತು ಕ್ರಿಸ್ತೀಯ ಸಮುದಾಯಗಳು

### 1 ಪ್ರಾಚ್ಯ ಕ್ರೈಸ್ತ ಸಭೆಗಳ ವಿಶೇಷ ಸ್ಥಾನಮಾನ :

ಅನೇಕ ಶತಮಾನಗಳಿಂದ ಪ್ರಾಚ್ಯ ಮತ್ತು ಪಾಶ್ಚಾತ್ಯ ಕಥೋಲಿಕ ಸಭೆಗಳು ವಿಶ್ವಾಸ ಮತ್ತು ಸಂಸ್ಕಾರಗಳಲ್ಲಿ ಐಕ್ಯವಾಗಿದ್ದವು. ಆದರೂ ಇತರ ವಿಷಯಗಳಲ್ಲಿ ಬೇರೆ ಬೇರೆ ಮಾರ್ಗದಲ್ಲಿ ನಡೆಯುತ್ತಿದ್ದವು. ಅವುಗಳಲ್ಲಿ ಭಿನ್ನಾಭಿಪ್ರಾಯ ಉಂಟಾದಾಗ ರೋಮಿನ ಪ್ರೇಷಿತ ಪೀಠ ಎರಡು ಪಂಗಡಗಳ ಒಪ್ಪಿಗೆ ಪಡೆದು ಮಧ್ಯಸ್ಥಿಕೆಯನ್ನು ವಹಿಸುತ್ತಿತ್ತು.

ಪ್ರಾಚ್ಯ ವಿಭಾಗದಲ್ಲಿ ಹಲವಾರು ಸ್ಥಳೀಯ ಸಭೆಗಳಿವೆ. ಅವುಗಳಲ್ಲಿ ಪಿತಾಮಹರ ನೇತೃತ್ವದಲ್ಲಿರುವ ಸಭೆಗಳು ಪ್ರಥಮ ಸ್ಥಾನವನ್ನು ಹೊಂದಿವೆ. ಇಲ್ಲಿರುವ ಸ್ಥಳೀಯ ಸಭೆಗಳನ್ನು ಸಂಯುಕ್ತ ಸೋದರ ಸಭೆಗಳನ್ನಾಗಿ ಸಂಘಟಿಸಿ ಅವುಗಳ ಬಾಂಧವ್ಯವನ್ನು ಕಾಪಾಡುವುದು ಪ್ರಮುಖ ಕಾರ್ಯವಾಗಿದೆ.

ಈ ಪ್ರಾಚ್ಯ ವಿಭಾಗದ ಸಭೆಗಳು ವಿವಿಧ ರಂಗಗಳಲ್ಲಿ ತನ್ನದೇ ಆದ ಪಿತ್ರಾರ್ಜಿತವನ್ನು ಕಾಪಾಡಿಕೊಂಡು ಬಂದಿವೆ. ಅದು ತನ್ನದೇ ಆದ ಮನೋಭಾವ ಮತ್ತು ಜೀವನ ಶೈಲಿಯನ್ನು ರೂಢಿಸಿಕೊಂಡಿದೆ. ಅವು ಬೇರ್ಪಡುವುದಕ್ಕೆ ಮೊದಲು ಇಟ್ಟುಕೊಂಡಿದ್ದ ಗುಣಲಕ್ಷಣಗಳನ್ನು ಮತ್ತು ರೋಮಿನ ಪೀಠದೊಂದಿಗೆ ಬೆಳೆಸಿಕೊಂಡಿದ್ದ ಸಂಪರ್ಕವನ್ನು ಐಕ್ಯಮತ್ಯಕ್ಕಾಗಿ ದುಡಿಯುವವರು ಮನಸ್ಸಿನಲ್ಲಿಡಬೇಕು.

ಪ್ರಾಚ್ಯ ಧರ್ಮಸಭೆಗಳು ಪರಿಪಕ್ವ ದೈವಾರಾಧನಾ ವಿಧಿಗಳನ್ನು ಹೊಂದಿವೆ. ಸಹಬಲಿಪೂಜಾರ್ಪಣೆಯ ಮುಖಾಂತರ ಅವರ ಅನ್ಯೋನ್ಯತೆ ಗೋಚರವಾಗುತ್ತದೆ. ಅವರಿಗೆ ನಮ್ಮ ಮಾತೆಯ ಬಗ್ಗೆ ಭಕ್ತಿ ಇದೆ, ಸಂತರ ಬಗ್ಗೆ ಗೌರವವಿದೆ.

ಈ ಧರ್ಮಸಭೆಗಳು ನಮ್ಮಿಂದ ಬೇರ್ಪಟ್ಟಿದ್ದರೂ ನೈಜ್ಯ ಸಂಸ್ಕಾರಗಳನ್ನು ಹೊಂದಿದೆ. ಅವೆಲ್ಲವೂ ಯಾಜಕತ್ವ ಮತ್ತು ಪರಮ ಪ್ರಸಾದ ಪ್ರತ್ಯೇಕವಾಗಿ ಪ್ರೇಷಿತರಿಂದ ಹಸ್ತಾಂತರಿಸಲಾಗಿದೆ. ಅವರು ನಮ್ಮೊಂದಿಗೆ ಈ ಕಾರಣ ಅತೀ ನಿಕಟವಾಗಿ ಸಂಬಂಧಿತವಾಗಿದ್ದಾರೆ. ಆದುದರಿಂದ ಸೂಕ್ತ ಸಂದರ್ಭಗಳಲ್ಲಿ ಧರ್ಮಸಭೆಯ ಅಧಿಕಾರಿಗಳ ಅನುಮತಿಯನ್ನು ಪಡೆದು ದೈವಾರಾಧನೆ ಮಾಡುವುದು ಸಾಧ್ಯ ಮತ್ತು ಶ್ರೇಯಸ್ಕರ.

ಆದಿಯಿಂದಲೂ ಪ್ರಾಚ್ಯ ಧರ್ಮಸಭೆಗಳು ತಮ್ಮದೇ ಆದ ಶಿಸ್ತನ್ನು ಪರಿಪಾಲಿಸಿಕೊಂಡು ಬಂದಿವೆ. ಇಂತಹ ವಿವಿಧ ಸಂಪ್ರದಾಯ ಮತ್ತು ಆಚರಣೆಗಳು ಧರ್ಮಸಭೆಯ ಐಕ್ಯಕ್ಕೆ ಎಳ್ಳಷ್ಟು ಅಡಚಣೆಯಾಗದೆ ಅದರ ಸೌಂದರ್ಯವನ್ನು ಅಧಿಕರಿಸುತ್ತವೆ. ಜೊತೆಗೆ ಧರ್ಮಸಭೆಯು ತನ್ನ ನಿಯೋಗವನ್ನು ಕಾರ್ಯರೂಪಕ್ಕೆ ತರಲು ನೆರವಾಗುತ್ತದೆ. ಎಲ್ಲಾ ವಿಧವಾದ ಸಂಶಯದ ಸುಳಿಯನ್ನು ಕಿತ್ತೊಗೆಯಲು ಸಿನೋಡ್ ಸಭೆ ಹೀಗೆಂದಿದೆ "ಪ್ರಾಚ್ಯ ಸಭೆಗಳು ಅಖಿಲ ಧರ್ಮಸಭೆಯ ಮುಖ್ಯ ಅಂಶಗಳನ್ನು ಗಮನದಲ್ಲಿರಿಸಿ ತಮ್ಮ ತಮ್ಮ ಶಿಸ್ತಿನ ಪ್ರಕಾರ ಸ್ವಯಂ ಆಡಳಿತವನ್ನು ನಡೆಸಲು ಅಧಿಕಾರವನ್ನು ಹೊಂದಿವೆ. ಏಕೆಂದರೆ ಈ ಶಿಸ್ತು ಭಕ್ತ ಮನೋಭಾವಕ್ಕೆ ಒಗ್ಗಿಕೊಂಡಿದೆ, ಅದು ಆಧ್ಯಾತ್ಮಿಕ ಹಿತಸಾಧನೆಗೆ ಅನುಗುಣವಾಗಿದೆ. ಈ ಸಂಪ್ರದಾಯದ ತತ್ವ ಪೂರ್ಣ ಅನುಸರಣೆ ಇದುವರೆಗೆ ಅನುಸರಿಸದೇ ಇದ್ದರೂ ಪುನರ್ ಐಕ್ಯದ ಸ್ಥಾಪನೆಗೆ ಬಹು ಅಗತ್ಯವಾಗಿದೆ. ಧರ್ಮಬೋಧನೆಯನ್ನು ಶಾಸ್ತ್ರೀಯವಾಗಿ ನಿರೂಪಿಸುವಾಗ ನ್ಯಾಯ ಬದ್ಧವಾದ ವೈವಿಧ್ಯತೆ ಅನಿವಾರ್ಯ. ಅನ್ಯೋನ್ಯತೆಯನ್ನು, ಐಕ್ಯವನ್ನು ಪುನರ್ ಸ್ಥಾಪಿಸುವುದಕ್ಕಾಗಿ ಅಗತ್ಯಕ್ಕಿಂತ ಅಧಿಕ ಭಾರವನ್ನು ಯಾರೂ ಹೊರಿಸಬಾರದು. (ಪ್ರೇ.ಕಾ. 15:28).

**2) ಪಾಶ್ಚಾತ್ಯ ದೇಶಗಳಲ್ಲಿರುವ ಬೇರ್ಪಟ್ಟ ಸಭೆಗಳು ಮತ್ತು ಕ್ರಿಸ್ತೀಯ ಸಮುದಾಯಗಳು :**

ಅನೇಕ ಶತಮಾನಗಳ ಐಕ್ಯಮತ್ಯದ ದೆಸೆಯಿಂದ ಈ ಸಭೆಗಳು ಕಥೋಲಿಕ ಧರ್ಮಸಭೆಯೊಂದಿಗೆ ಸಂಬಂಧವನ್ನು ಇಟ್ಟುಕೊಂಡಿವೆ. ಆದರೆ ಅವು ನಮ್ಮೊಂದಿಗೆ ಗಣನೀಯವಾಗಿ ಮತ್ತು ತಮ್ಮ ತಮ್ಮೊಂದಿಗೆ ವ್ಯತ್ಯಾಸವನ್ನು ಹೊಂದಿದೆ. ಅವುಗಳಲ್ಲಿ ಕಥೋಲಿಕ ಸಂಪ್ರದಾಯ ಮತ್ತು ಸಂಸ್ಥಾಪನಾ ವ್ಯವಸ್ಥೆಯನ್ನು ಉಳಿಸಿಕೊಂಡಿರುವ ಸಭೆಗಳಲ್ಲಿ ಆಂಗ್ಲಿಕನ್ ಸಭೆ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಈ ಸಂವಿಧಾನ ಅದನ್ನು ಸಮರ್ಪಕವಾಗಿ ಸದ್ಯಕ್ಕೆ ವಿವರಿಸುವುದಿಲ್ಲ.



ಯೇಸು ಕ್ರಿಸ್ತರು ದೇವರೆಂದು, ಪ್ರಭುವೆಂದು, ದೇವಮಾನವರ ಮಧ್ಯೆ ಏಕೈಕ ಮಧ್ಯಸ್ಥರೆಂದು ಬಹಿರಂಗವಾಗಿ ಅಂಗೀಕರಿಸುವ ಕ್ರೈಸ್ತರನ್ನು ಕುರಿತು ಈ ಸಮ್ಮೇಳನ ಪ್ರಪ್ರಥಮವಾಗಿ ಪ್ರಸ್ತಾಪಿಸುತ್ತದೆ. ಬೇರ್ಪಟ್ಟ ಸಭೆಗಳು ಪವಿತ್ರ ಗ್ರಂಥವನ್ನು ಅಂಗೀಕರಿಸಿ ಗೌರವಿಸುತ್ತವೆ, ಪ್ರೀತಿಸುತ್ತವೆ. ಆದರೆ ಅವರ ಅಭಿಪ್ರಾಯದಲ್ಲಿ ಕಥೋಲಿಕ ಧರ್ಮಸಭೆಗೆ ಅದನ್ನು ಬೋಧಿಸುವ ಮತ್ತು ವ್ಯಾಖ್ಯಾನಿಸುವ ಅಧಿಕಾರವಿದೆ ಎಂಬುದರ ಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿವೆ.

ಯಾರ್ಯಾರು ದೀಕ್ಷಾಸ್ನಾನವನ್ನು ಹೊಂದಿ ಪುನರ್ಜನ್ಮವನ್ನು ಪಡೆದಿದ್ದಾರೋ ಅವರೆಲ್ಲರನ್ನು ಈ ಸಂಸ್ಕಾರ ಐಕ್ಯಗೊಳಿಸುತ್ತದೆ. ಆದರೆ ದೀಕ್ಷಾಸ್ನಾನ ಪ್ರವೇಶಿಕ ಘಟ್ಟ ಮಾತ್ರ. ಅದು ಯೇಸು ಕ್ರಿಸ್ತರಲ್ಲಿ ಸಂಪೂರ್ಣ ಜೀವನವನ್ನು ಪಡೆಯಲು ನೆರವಾಗುವ ಸಾಧನವಾಗಿದೆ. ದೀಕ್ಷಾಸ್ನಾನದ ಉದ್ದೇಶವೇನೆಂದರೆ ಅಭ್ಯರ್ಥಿಯು ವಿಶ್ವಾಸವನ್ನು ಸಂಪೂರ್ಣವಾಗಿ ಪಡೆಯಬೇಕು, ಪ್ರಭು ಕ್ರಿಸ್ತರ ಇಚ್ಛೆಗೆ ಅನುಗುಣವಾಗಿ ದೇವರ ರಕ್ಷಣಾ ಯೋಜನೆಯಲ್ಲಿ ಭಾಗಿಯಾಗಬೇಕು. ಅಂತಿಮವಾಗಿ ಪರಮಪ್ರಸಾದ ಸಂಸ್ಕಾರದ ಮುಖಾಂತರ ಯೇಸುಕ್ರಿಸ್ತರಲ್ಲಿ ಸಂಪೂರ್ಣವಾಗಿ ಐಕ್ಯವಾಗವೇಕು.

ಬೇರ್ಪಟ್ಟಿರುವ ಕ್ರೈಸ್ತ ಸಭೆಗಳು ದೀಕ್ಷಾಸ್ನಾನದಿಂದ ಉದ್ಭವಿಸುವ ಪೂರ್ಣ ಐಕ್ಯಮತ್ಯವನ್ನು ಹೊಂದಿಲ್ಲ. ಅವರಲ್ಲಿ ಯಾಜಕತ್ವ ವಿಲ್ಲದೆ ಇರುವುದರಿಂದ ನೈಜ್ಯ ಮತ್ತು ಅಧಿಕೃತ ಪರಮಪ್ರಸಾದವಿಲ್ಲ. ಆದರೂ ಅವರು ಪ್ರಭುವಿನ ಅಂತಿಮ ಭೋಜನವನ್ನು ಆಚರಿಸಿ ಅವರ ಮರಣ ಮತ್ತು ಪುನರುತ್ಥಾನದ ಸ್ಮರಣೆಯನ್ನು ಮಾಡುತ್ತಾರೆ. ಈ ವಿಧಿ ಅವರಿಗೆ ಪ್ರಭುವಿನೊಡನಿರುವ ಐಕ್ಯಮತ್ಯವೆಂದು ನಾವು ಪರಿಗಣಿಸುತ್ತೇವೆ. ಅವರು ಪ್ರಭುವಿನ ಪುನರಾಗಮನವನ್ನು ಎದುರು ನೋಡುತ್ತಾರೆ. ಆದುದರಿಂದ ಅಂತಿಮ ರಾತ್ರಿ ಭೋಜನ, ವರಪ್ರಸಾದ, ಆರಾಧನೆ ಮತ್ತು ಸೇವಾವೃತ್ತಿ ಇಂತಹ ವಿಷಯಗಳು ನಮ್ಮ ಮತ್ತು ಅವರ ಪರಸ್ಪರ ವಿಚಾರ ವಿನಿಮಯಕ್ಕೆ ಇರುವ ಪರಿಕರಗಳು.

ಈ ಬೇರ್ಪಟ್ಟ ಸಹೋದರರ ಕ್ರೈಸ್ತ ಜೀವನ ಶೈಲಿ ದೀಕ್ಷಾಸ್ನಾನದ ವಿಶ್ವಾಸ ಮತ್ತು ವರಪ್ರಸಾದದಿಂದ ಪೋಷಿತವಾಗಿದೆ. ಜೊತೆಗೆ ದೈವ ವಾಕ್ಯದ ಪಾರಾಯಣದಿಂದ ಬಲಗೊಂಡಿದೆ. ಕಥೋಲಿಕರಂತೆ ನೈತಿಕ ವಿಷಯಗಳಲ್ಲಿ ಇವರು ಶುಭ ಸಂದೇಶವನ್ನು ಸದಾ ಅರ್ಥ ಮಾಡಿಕೊಳ್ಳುವುದಿಲ್ಲ. ಈ ಕಾರಣ ಶುಭ ಸಂದೇಶದ ನೈತಿಕ ಉಪಯುಕ್ತತೆ ಬಗ್ಗೆ ಅವರೊಡನೆ ಚರ್ಚೆಯನ್ನು ನಡೆಸಬಹುದು.

ತಿಳಿಗೇಡಿತನದ ಮತ್ತು ಅವಿವೇಕದ ಉತ್ಸಾಹ ಹುರುಪಿನಿಂದ ದೂರವಿರಬೇಕೆಂದು ವ್ಯಾಟಿಕನ್ ಸಮ್ಮೇಳನ ಆದೇಶಿಸುತ್ತದೆ. ಏಕೆಂದರೆ ಈ ವರ್ತನೆ ಐಕ್ಯಕ್ಕಾಗಿ ಮಾಡುತ್ತಿರುವ ನಿಜ ಪ್ರಯತ್ನಕ್ಕೆ ಹಾನಿಯನ್ನುಂಟು ಮಾಡಬಲ್ಲುದು. ಭಕ್ತರ ಐಕ್ಯಮತ್ಯ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ಪ್ರಾಮಾಣಿಕವಾಗಿರಬೇಕು, ಕಥೋಲಿಕವಾಗಿರಬೇಕು. ಅಂದರೆ ಪ್ರೇಷಿತ ಸಂಪ್ರದಾಯ ಮತ್ತು ಪೂರ್ವಜರಿಂದ ಹಸ್ತಾಂತರಿಸಲಾದ ಸತ್ಯಗಳಿಗೆ ನಿಷ್ಠೆಯನ್ನು ತೋರುವಂತಿರಬೇಕು. ಕಥೋಲಿಕ ಧರ್ಮಸಭೆ ನಿರಂತರವಾಗಿ ವಿಶ್ವಾಸಿಸುತ್ತಿರುವ ಸತ್ಯಗಳಿಗೆ ಸಾಮರಸ್ಯವಾಗಿರಬೇಕು. ನಮ್ಮ ಪ್ರಭು ಬಯಸಿದಂತೆ ಈ ಐಕ್ಯತೆಯಿಂದ ಅವರ ಆತ್ಮಿಕ ಶರೀರ ಹಂತ ಹಂತವಾಗಿ ಬೆಳೆದು ಪರಿಪೂರ್ಣತೆಯನ್ನು ಪಡೆಯಲು ಪೋಷಕವಾಗಿರಬೇಕು.

ಯೇಸು ಕ್ರಿಸ್ತರು ಸ್ಥಾಪಿಸಿದ್ದು ಏಕೈಕ ಧರ್ಮಸಭೆ. ಅದರಲ್ಲಿ ಎಲ್ಲಾ ಕ್ರೈಸ್ತ ಭಕ್ತರು ಸಂಧಾನಗೊಳ್ಳಬೇಕು. ಈ ಪವಿತ್ರ ಗುರಿ ಮಾನವ ಶಕ್ತಿ ಸಾಮರ್ಥ್ಯ ಗುಣ ಲಕ್ಷಣಗಳನ್ನು ಮೀರಿದೆ. ಈ ಅಂಶವನ್ನು ವ್ಯಾಟಿಕನ್ ಸಮ್ಮೇಳನ ಚೆನ್ನಾಗಿ ಅರ್ಥಮಾಡಿಕೊಂಡಿದೆ. ಆದುದರಿಂದಲೇ ಈ ಸಮ್ಮೇಳನ ಯೇಸು ಕ್ರಿಸ್ತರು ಮಾಡಿದ ಐಕ್ಯತೆಯ ಪ್ರಾರ್ಥನೆಯಲ್ಲಿ ನಮ್ಮ ಬಗ್ಗೆ ತಂದೆ ದೇವರಿಗಿರುವ ಪ್ರೀತಿಯಲ್ಲಿ ಮತ್ತು ಪವಿತ್ರಾತ್ಮಕ ಶಕ್ತಿಯಲ್ಲಿ ಪೂರ್ಣ ಭರವಸೆಯನ್ನು ನೀಡುತ್ತದೆ.



# VI ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರ ಪಾಲನಾ ಅಂತಸ್ತು

## (ಶಾಸನ)

### ಪೀಠಿಕೆ

ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರುಗಳ ಪಾಲನಾ ಅಂತಸ್ತು ಎಂಬ ಶಾಸನ ವ್ಯಾಟಿಕನ್ ಸಮ್ಮೇಳನದ ಚಿಕ್ಕ ಶಾಸನಗಳಲ್ಲಿ ಒಂದು. ಆದರೆ ಅದರ ಪ್ರಾಮುಖ್ಯತೆ ಏನೂ ಕಿರಿದಲ್ಲ. ಧರ್ಮಾಧ್ಯಕ್ಷ ಪದದ ಲಕ್ಷಣವನ್ನು ಮತ್ತು ಧರ್ಮಾಧ್ಯಕ್ಷರ ಘನತೆಯನ್ನು ನಾವು ಅರಿತುಕೊಳ್ಳಬೇಕು. ಆಗ ದೇವರ ಯೋಜನೆ ಮತ್ತು ಮಾನವನ ರಕ್ಷಣೆಯಲ್ಲಿ ಅವರು ನಿರ್ವಹಿಸುವ ಹೊಣೆಗಾರಿಕೆಯನ್ನು ನಾವು ಮೆಚ್ಚುತ್ತೇವೆ. ಧರ್ಮಾಧ್ಯಕ್ಷರು ಪ್ರೇಷಿತರ ಉತ್ತರಾಧಿಕಾರಿಗಳು, ಅವರು ಪವಿತ್ರಾತ್ಮರಿಂದ ನೇಮಕಗೊಂಡ ಆತ್ಮ ಪಾಲಕರು. ಅವರು ದೈವಪ್ರಜೆಯ ಅಧಿಕೃತ ಬೋಧಕರು, ಅದನ್ನು ಪವಿತ್ರೀಕರಿಸುವವರು ಮತ್ತು ಆಳುವವರು. ಸಾಧಾರಣವಾಗಿ ಕಥೋಲಿಕರು ಧರ್ಮಾಧ್ಯಕ್ಷರನ್ನು ತಂದೆ ಮತ್ತು ಗುರು ಎಂದು ಪರಿಗಣಿಸದೆ ಅವರೊಬ್ಬ ಆಡಳಿತಗಾರರೆಂದು ಭಾವಿಸುತ್ತಾರೆ. ಆದರೆ ಈ ಶಾಸನ ಧರ್ಮಾಧ್ಯಕ್ಷ ಪದದ ನಿಜಗುಣಕ್ಕೆ ಒತ್ತು ಕೊಡುತ್ತದೆ ಮತ್ತು ಅದರ ನಿಜರೂಪವನ್ನು ಅನಾವರಣಗೊಳಿಸುತ್ತದೆ. ಧರ್ಮಾಧ್ಯಕ್ಷರ ಪಾಲನಾ ಜವಾಬ್ದಾರಿಯೇ ಈ ಶಾಸನದ ಪ್ರಮುಖ ವಿಷಯವಾಗಿದೆ. "ಆತ್ಮಗಳ ಒಳಿತು" ಎಂಬ ನುಡಿ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಈ ಶಾಸನದ ಮೊದಲ ವಾಕ್ಯಗಳು ಇದನ್ನೇ ಪ್ರಸ್ಥಾಪಿಸುತ್ತವೆ. "ನಮ್ಮ ಪ್ರಭು ಯೇಸುಕ್ರಿಸ್ತರು ಮಾನವ ಜನಾಂಗದ ರಕ್ಷಣೆಗಾಗಿ, ಅದನ್ನು ಪಾಪವಿಮುಕ್ತವನ್ನಾಗಿ ಮಾಡಲು ಮತ್ತು ಪವಿತ್ರೀಕರಿಸಲು ಈ ಲೋಕಕ್ಕೆ ಬಂದರು. ತಂದೆ ದೇವರು ಅವರನ್ನು ಕಳುಹಿಸಿದಂತೆ ಅವರೂ ತಮ್ಮ ಪ್ರೇಷಿತರನ್ನು ಕಳುಹಿಸಿದರು. ಅವರ ಮೇಲೆ ಪವಿತ್ರಾತ್ಮರನ್ನು ಪ್ರದಾನಮಾಡಿ ಪವಿತ್ರೀಕರಿಸಿದರು. ಹೀಗೆ ಅವರು ಇಹಲೋಕದಲ್ಲಿ ತಂದೆಯಾದ ದೇವರನ್ನು ಮಹಿಮೆ ಪಡಿಸುವಂತೆಯೂ ಮಾನವರನ್ನು ರಕ್ಷಿಸುತ್ತಾ ಕ್ರಿಸ್ತರ ಆತ್ಮಿಕ ಶರೀರವಾದ ಧರ್ಮಸಭೆಯನ್ನು ಬೆಳೆಸುವಂತೆಯೂ ಹೀಗೆ ಮಾಡಿದರು.

ಈ ಶಾಸನವನ್ನು ಧರ್ಮಸಭೆಯ ಬಗ್ಗೆ ಧರ್ಮಶಾಸ್ತ್ರೀಯ ಸಂವಿಧಾನದ ವಿನ: ಅರ್ಥ ಮಾಡಿಕೊಳ್ಳಲಾಗದು. ಈ ಸಂವಿಧಾನದ ಮೂರನೇ ಅಧ್ಯಾಯ ಹೀಗೆನ್ನುತ್ತದೆ : ಜಗದ್ಗುರುಗಳು ಸಂತ ಪೇತ್ರರ ಉತ್ತರಾಧಿಕಾರಿಗಳು. ಅವರಿಗೆ ಅಖಿಲ ಧರ್ಮಸಭೆಯ ಮೇಲೆ ಸಾರ್ವತ್ರಿಕ ಅಧಿಕಾರವಿದೆ. ಪವಿತ್ರಾತ್ಮರು ಧರ್ಮಾಧ್ಯಕ್ಷರುಗಳನ್ನು ಪ್ರೇಷಿತರ ಉತ್ತರಾಧಿಕಾರಿಗಳನ್ನಾಗಿ ನೇಮಕ ಮಾಡಿದ್ದಾರೆ. ಜಗದ್ಗುರುಗಳ ಸಹಯೋಗದಲ್ಲಿ ಅವರ ಅಧಿಕಾರದ ಅಡಿಯಲ್ಲಿ ಅವರು ಪ್ರಭು ಕ್ರಿಸ್ತರ ಕಾರ್ಯವನ್ನು ನಿರ್ವಹಿಸುತ್ತಾರೆ. "ಯಾಜಕರ ಸಹಕಾರ ಪಡೆದ ಧರ್ಮಾಧ್ಯಕ್ಷರಲ್ಲಿ ನಮ್ಮ ಪ್ರಭು ಯೇಸುಕ್ರಿಸ್ತರು ಭಕ್ತ ವಿಶ್ವಾಸಿಗಳ ಮಧ್ಯೆ ಪ್ರತ್ಯಕ್ಷರಾಗಿದ್ದಾರೆ, ಎನ್ನುತ್ತದೆ ಈ ಸಂವಿಧಾನ. ಪ್ರಮುಖವಾಗಿ ಧರ್ಮಾಧ್ಯಕ್ಷರ ಮುಖಾಂತರ ಪ್ರಭು ಕ್ರಿಸ್ತರು ದೇವರ ವಾಕ್ಯವನ್ನು ಜನಾಂಗಳಿಗೆ ಬೋಧಿಸುತ್ತಾರೆ ಮತ್ತು ಭಕ್ತ ವಿಶ್ವಾಸಿಗಳಿಗೆ ಸಂಸ್ಕಾರಗಳನ್ನು ಪ್ರದಾನ ಮಾಡುತ್ತಾರೆ. ಧರ್ಮಾಧ್ಯಕ್ಷರೇ ಪ್ರಧಾನವಾಗಿ ಹೊಸ ಸದಸ್ಯರನ್ನು ಧರ್ಮಸಭೆಗೆ ಸೇರಿಸಿಕೊಳ್ಳುತ್ತಾರೆ ಮತ್ತು ಎಲ್ಲಾ ಜನರಿಗೆ ಅನಂತ ಜೀವದತ್ತ ನಡೆಸುತ್ತಾರೆ.

ಇಂತಹ ಪುನೀತ ಕಾರ್ಯಗಳನ್ನು ನಿರ್ವಹಿಸಲು ಶಕ್ತರಾಗುವಂತೆ ಪ್ರಭು ಕ್ರಿಸ್ತರು ಪ್ರೇಷಿತರ ಮೇಲೆ ಪ್ರಥಮತ: ಪವಿತ್ರಾತ್ಮರನ್ನು ಬರಮಾಡಿದರು. ಈ ಆಧ್ಯಾತ್ಮಿಕ ವರದಾನವನ್ನು ಅವರ ಹಸ್ತನಿಕ್ಷೇಪದ ಮುಖಾಂತರ ಹಸ್ತಾಂತರಿಸಿದರು. ಇಂದು ಈ ವರದಾನವೇ ಧರ್ಮಾಧ್ಯಕ್ಷರ ಮೇಲೆ ಪವಿತ್ರಾಭಿಷೇಕದಿಂದ ಇಳಿದು ಬಂದಿದೆ. ಈ ಅಭಿಷೇಕದಿಂದ ಯಾಜಕ ದೀಕ್ಷೆಯ ಸಂಪೂರ್ಣತೆ ಧರ್ಮಾಧ್ಯಕ್ಷರಿಗೆ ಲಭಿಸುತ್ತದೆ. ಜೊತೆಗೆ ದೈವ ಪ್ರಜೆಯನ್ನು ಪಾವನಗೊಳಿಸುವ, ಬೋಧನೆ ನೀಡುವ ಮತ್ತು ಆಳುವ ತ್ರಿವಳಿ ಹೊಣೆಗಾರಿಕೆ ಅವರ ವಶಕ್ಕೆ ಬರುತ್ತದೆ. ಹೀಗೆ ಧರ್ಮಾಧ್ಯಕ್ಷರು ಕ್ರಿಸ್ತರ ವ್ಯಕ್ತಿತ್ವನ್ನು ಪ್ರತಿಬಿಂಬಿಸುತ್ತಾರೆ. ಧರ್ಮಾಧ್ಯಕ್ಷರು ಪ್ರಭು ಕ್ರಿಸ್ತರನ್ನು ಪ್ರತಿನಿಧಿಸುವುದರಿಂದಲೇ ಈ ಹೇಳಿಕೆ ಪ್ರಚಲಿತವಾಗಿದೆ. "ಯಾರೂ ಧರ್ಮಾಧ್ಯಕ್ಷರನ್ನು ಆಲಿಸುತ್ತಾರೋ, ಅವರು ಪ್ರಭು ಕ್ರಿಸ್ತರನ್ನು ಆಲಿಸುತ್ತಾರೆ; ಅವರನ್ನು ತಿರಸ್ಕರಿಸುವವನು ಪ್ರಭು ಕ್ರಿಸ್ತರನ್ನು ಮತ್ತು ಅವರನ್ನು ಕಳುಹಿಸಿದ ಅನಂತ ಪಿತನನ್ನು ತಿರಸ್ಕರಿಸುತ್ತಾರೆ".

ಧರ್ಮಾಧ್ಯಕ್ಷರ ಬಗ್ಗೆ ಮೂಲ ವಿಚಾರಗಳು ಇವು : ಪವಿತ್ರ ಅಭಿಷೇಕದಿಂದ ಧರ್ಮಸಭೆಯ ಶಿರಸ್ಸಾದ ಜಗದ್ಗುರುಗಳೊಂದಿಗೆ ಐಕ್ಯವಾಗಿರುವ ಧರ್ಮಾಧ್ಯಕ್ಷರು, ಧರ್ಮಾಧ್ಯಕ್ಷ ಮಂಡಳಿಯ ಸದಸ್ಯರಾಗುತ್ತಾರೆ. ಇದರ ಮುಖಾಂತರ ಅವರ ಪ್ರೇಷಿತ ಮಂಡಳಿ ಸೇವೆ ತಡೆರಹಿತವಾಗಿ ಮುಂದುವರೆಯುತ್ತದೆ. ಜಗದ್ಗುರುಗಳಂತೆ ಇವರ ಅಧಿಕಾರವೂ ಧರ್ಮಸಭೆಯಲ್ಲಿ ಸುಭದ್ರವಾಗಿರುತ್ತದೆ. ಧರ್ಮಾಧ್ಯಕ್ಷರ ಪಾಲನ ಅಂತಸ್ತಿನ ಶಾಸನವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು.

1) ಸಾರ್ವತ್ರಿಕ ಧರ್ಮಸಭೆಯೊಂದಿಗೆ ಧರ್ಮಾಧ್ಯಕ್ಷರ ಸಂಬಂಧ.

2) ಪ್ರತ್ಯೇಕ ಧರ್ಮಸಭೆ ಅಥವಾ ಧರ್ಮಕ್ಷೇತ್ರದ ನಡುವೆ ಧರ್ಮಾಧ್ಯಕ್ಷರ ಸಂಬಂಧ.

## I ಸಾರ್ವತ್ರಿಕ ಧರ್ಮಸಭೆಯೊಂದಿಗೆ ಧರ್ಮಾಧ್ಯಕ್ಷರ ಸಂಬಂಧ :

**1) ಸಾರ್ವತ್ರಿಕ ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರ ಪಾತ್ರ :**

ಈಗಾಗಲೇ ನಾವು ಕಂಡಂತೆ ಧರ್ಮಾಧ್ಯಕ್ಷರ ಅಂತಸ್ತು ಮತ್ತು ಜವಾಬ್ದಾರಿಯು ಬರುವುದು ಅವರ ಪವಿತ್ರಾಭಿಷೇಕದ ಮೂಲಕ, ಜಗದ್ಗುರುಗಳೊಂದಿಗೆ ಐಕ್ಯವಾಗಿರುವುದರಿಂದ ಮತ್ತು ಪ್ರೇಷಿತ ಮಂಡಳಿಯ ಸದಸ್ಯರಾಗಿರುವುದರಿಂದ. ಇದೇ ಅವರ ಅಸ್ತಿವಾರ. ಶಿರಸ್ಸಾದ ಜಗದ್ಗುರುಗಳೊಂದಿಗೆ ಇವರು ಉಚ್ಚ ಮತ್ತು ಸಂಪೂರ್ಣ ಅಧಿಕಾರಿವನ್ನು ಪಡೆಯುತ್ತಾರೆ. ಇದರ ಜೊತೆಗೆ ಅವರ ಜವಾಬ್ದಾರಿಯೂ ಅಧಿಕವಾಗಿರುತ್ತದೆ. ಆದ್ದರಿಂದ ಯಾವ ಯಾವ ಸ್ಥಳಗಳಲ್ಲಿ ಗುರುಗಳ ಅಭಾವದಿಂದ ಶುಭಸಂದೇಶ ಪ್ರಸಾರಕ್ಕೆ ತೊಡಕು ಉಂಟಾಗಿದೆಯೋ ಆ ಸ್ಥಳಗಳಲ್ಲಿ ಧರ್ಮಾಧ್ಯಕ್ಷರು ಆಧಾರ ನೀಡಬೇಕು. ಅವರು ಧನ ಸಹಾಯ ಮತ್ತಿತರ ನೆರವನ್ನು ನೀಡಿ ಅಲ್ಲಿರುವ ಕೊರತೆಯನ್ನು ನೀಗಿಸಬೇಕು.



**2) ಧರ್ಮಾಧ್ಯಕ್ಷರು ಮತ್ತು ಪ್ರೇಷಿತ ಪೀಠ :**

ವ್ಯಾಟಿಕನ್ ಸಮ್ಮೇಳನದ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ಸಾಕಷ್ಟು ಚರ್ಚೆ ಮತ್ತು ಪ್ರಚಾರವಿತ್ತು. ಜಗದ್ಗುರುಗಳು ಕ್ಯೂರಿಯಾ ಕಾರ್ಯಾಲಯ ಮತ್ತು ಸಾರ್ವತ್ರಿಕ ಧರ್ಮಸಭೆಗೆ ನೆರವು ನೀಡುತ್ತಿರುವ ವಿವಿಧ ಕಾರ್ಯಕಾರಿ ಸಮಿತಿಗಳ ಬಗ್ಗೆ ವಿಚಾರ ವಿನಿಮಯ ಮಾಡಿದರು. ಈ ಕಾರ್ಯಾಲಯಗಳಿಗೆ ವಿಶ್ವದ ವಿವಿಧ ಭಾಗಗಳ ಸದಸ್ಯರನ್ನು ಆಯ್ಕೆ ಮಾಡುವುದರಿಂದ ಅವುಗಳಿಗೆ ಅಂತರರಾಷ್ಟ್ರೀಯ ಮಾನ್ಯತೆಯ ಜೊತೆಗೆ ಸಾರ್ವತ್ರಿಕ ಲಕ್ಷಣ ವ್ಯಕ್ತವಾಗುತ್ತದೆ ಎಂಬ ಅಭಿಪ್ರಾಯ ಮೂಡಿಬಂದಿತು. ಹೀಗೆ ಕಾರ್ಯಾಲಯದ ವ್ಯವಸ್ಥೆಯನ್ನು ವಿಸ್ತರಿಸಿ ಆಧುನೀಕರಿಸಲಾಯಿತು. ಜೊತೆಗೆ ಭೂಲೋಕದ ವಿವಿಧ ಸ್ಥಳಗಳಿಂದ ಧರ್ಮಾಧ್ಯಕ್ಷರುಗಳನ್ನು ಆರಿಸಿ ವಿಶೇಷ ಸಿನೋಡ್ ಸಭೆಯನ್ನು ಸ್ಥಾಪಿಸಲಾಯಿತು. ಆಯಾಯ ಪ್ರದೇಶದ ಪರಿಸ್ಥಿತಿಗಳ ಬಗ್ಗೆ ಅರಿವಿದ್ದ ಧರ್ಮಾಧ್ಯಕ್ಷರು ಈ ಸಭೆಯ ಮುಖಾಂತರ ಜಗದ್ಗುರುಗಳಿಗೆ ಸಲಹೆ ನೀಡುವಂತಾಯಿತು.

## II ಪ್ರತ್ಯೇಕ ಧರ್ಮಸಭೆ ಅಥವಾ ಧರ್ಮಕ್ಷೇತ್ರದ ನಡುವೆ ಧರ್ಮಾಧ್ಯಕ್ಷರ ಸಂಬಂಧ

ಈ ಶಾಸನದ ದ್ವಿತೀಯ ಭಾಗ ದೀರ್ಘವೂ ಸೂಕ್ತ ವಿಚಾರಗಳನ್ನೂ ಒಳಗೊಂಡಿದೆ. ಧರ್ಮಕ್ಷೇತ್ರವೆಂದರೆ ಒಬ್ಬ ಧರ್ಮಾಧ್ಯಕ್ಷರ ಪಾಲನ ಸೇವೆಗೆಂದು ಒಪ್ಪಿಸಲಾದ ದೈವ ಪ್ರಜೆಯ ಒಂದು ಭಾಗ. ಧರ್ಮಾಧ್ಯಕ್ಷರು ತಮ್ಮ ಯಾಜಕರ ನೆರವಿನಿಂದ ದೈವ ಪ್ರಜೆಗೆ ನಿತ್ಯ ರಕ್ಷಣೆಯ ಮಾರ್ಗವನ್ನು ತೋರಬೇಕು. ಈ ಪ್ರತ್ಯೇಕ ಧರ್ಮಕ್ಷೇತ್ರದಲ್ಲಿ ಏಕ, ಪವಿತ್ರ, ಕಥೋಲಿಕ ಮತ್ತು ಪ್ರೇಷಿತ ಧರ್ಮಸಭೆ ಪ್ರತ್ಯಕ್ಷವಾಗಿದೆ. ಅದು ಸಾರ್ವತ್ರಿಕ ಧರ್ಮಸಭೆಯ ಕಿರಿಯ ಪ್ರತಿಕೃತಿ. ಈ ಪ್ರತ್ಯೇಕ ಧರ್ಮಸಭೆಯಲ್ಲಿ ಧರ್ಮಾಧ್ಯಕ್ಷರು ಪಾಲನಾ ಸೇವೆಯಲ್ಲಿ ತಮ್ಮ ಭಕ್ತ ವಿಶ್ವಾಸಿಗಳು ಮತ್ತು ಸಹ ಕಾರ್ಮಿಕರೊಂದಿಗೆ ವ್ಯವಹರಿಸುತ್ತಾರೆ.

**1) ಧರ್ಮಾಧ್ಯಕ್ಷರು ಮತ್ತು ಅವರ ಮಂದೆ**

**ಎ. ಧರ್ಮಾಧ್ಯಕ್ಷರು : ಬೋಧಕರು :**

ಈ ಶಾಸನ ಧರ್ಮಾಧ್ಯಕ್ಷರ ವಿವಿಧ ಕರ್ತವ್ಯಗಳನ್ನು ಪಟ್ಟಿ ಮಾಡುತ್ತದೆ. ಶುಭ ಸಂದೇಶವನ್ನು ಬೋಧಿಸುವುದು ಅವರ ಆದ್ಯ ಕರ್ತವ್ಯ. ಮಾನವ ಜೀವನ ಮತ್ತು ನಡವಳಿಕೆಯ ವಿವಿಧ ಆಯಾಮಗಳು. ಮಾನವ ವ್ಯಕ್ತಿತ್ವದ ಘನತೆ, ಕುಟುಂಬ ಜೀವನದ ಐಕ್ಯತೆ ಮತ್ತು ಸ್ಥಿರತೆ, ಸಾಮಾಜಿಕ ಜೀವನದ ನೀತಿ ನಿಯಮ ಮತ್ತು ಉದ್ಯೋಗಗಳು, ವೈಯಕ್ತಿಕ ಮತ್ತು ಕೌಟುಂಬಿಕ ಜೀವನದ ಸುಧಾರಣೆ ಇತ್ಯಾದಿ. ಆಧುನಿಕ ಜನರನ್ನು ಮುತ್ತಿಕೊಂಡಿರುವ ವಿವಿಧ ಸಮಸ್ಯೆಗಳಿಗೆ ಧರ್ಮಾಧ್ಯಕ್ಷರು ಪರಿಹಾರವನ್ನು ಕಂಡುಕೊಳ್ಳಬೇಕು. ಜನರೂ ಸಹ ಧರ್ಮಾಧ್ಯಕ್ಷರ ಮೇಲೆ ನಂಬಿಕೆಯನ್ನು ಮಾರ್ಗದರ್ಶನಕ್ಕಾಗಿ ಅವರನ್ನು ಅವಲಂಬಿಸುವುದು. ಅವರು ಪ್ರಭು ಕ್ರಿಸ್ತರನ್ನು ಆಲಿಸುವಂತೆ ಧರ್ಮಾಧ್ಯಕ್ಷರ ಬೋಧನೆಗೆ ಕಿವಿಗೊಡುವುದು.

ಕೇವಲ ಮನರಂಜನೆಗಾಗಿ ಹೋದವರ ಆತ್ಮಿಕ ಅಗತ್ಯಗಳಿಗೂ ಸೌಕರ್ಯವನ್ನು ಮಾಡುತ್ತಾರೆ. ಈ ಕಾಲದ ಪರಿಸರಕ್ಕೆ ತಕ್ಕಂತೆ ನಮ್ಮಿಂದ ಬೇರ್ಪಟ್ಟ ಕ್ರೈಸ್ತ ಸಹೋದರರನ್ನು ಕ್ರೈಸ್ತೇತರ ಬಾಂಧವರನ್ನು ಅವರು ಪ್ರೀತಿ ಗೌರವದಿಂದ ಕಾಣುತ್ತಾರೆ. ಇಂತಹ ಪರಸ್ನೇಹ ಮತ್ತು ಸಾರ್ವತ್ರಿಕ ಭಾವನೆಯನ್ನು ಅವರು ಕ್ರೈಸ್ತ ಭಕ್ತರಲ್ಲೂ ಬೆಳೆಯಲು ಅನುವು ಮಾಡಿಕೊಡುತ್ತಾರೆ.

ಭಕ್ತರ ಆತ್ಮ ವಿಕಾಸದ ಕಾರ್ಯಗಳನ್ನು ಕೈಗೊಳ್ಳುವ ಧರ್ಮಾಧ್ಯಕ್ಷರು ಸಂಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಅವರು ಸಾರ್ವಜನಿಕ ಅಧಿಕಾರಿಗಳಿಂದಲೂ ಈ ಸ್ವಾತಂತ್ರ್ಯಕ್ಕೆ ಭಾಜನರಾಗಿದ್ದಾರೆ. ಧರ್ಮಕ್ಷೇತ್ರದ ಜವಾಬ್ದಾರಿಯನ್ನು ಈಡೇರಿಸುವಾಗ ಪ್ರತ್ಯಕ್ಷ ಅಥವ ಪರೋಕ್ಷ ಅಡ್ಡಿ ಅಡಚಣೆಗಳನ್ನು ಯಾರೂ ತಂದೊಡ್ಡುವಂತಿಲ್ಲ. ಎಲ್ಲೆಲ್ಲಿ ಧರ್ಮಾಧ್ಯಕ್ಷರ ಈ ಸ್ವಾತಂತ್ರ್ಯಕ್ಕೆ ಮಾನ್ಯತೆ ಲಭಿಸಿದೆಯೋ ಅಲ್ಲಲ್ಲಿ ನಾಗರೀಕ ಮತ್ತು ಸಾಮಾಜಿಕ ಪ್ರಗತಿಗಾಗಿ ಅವರು ಸರಕಾರದೊಂದಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಾರೆ. ಅವರು ನ್ಯಾಯಬದ್ಧ ಕಾನೂನಿಗೆ ವಿಧೇಯತೆಯನ್ನು ಅಧಿಕೃತ ಅಧಿಕಾರಿಗಳಿಗೆ ಗೌರವ ಸಲ್ಲುವಂತೆ ಸರ್ವರನ್ನು ಪ್ರೋತ್ಸಾಹಿಸುತ್ತಾರೆ. ಧರ್ಮಾಧ್ಯಕ್ಷ ಅಂತಸ್ತು ಪ್ರಭು ಕ್ರಿಸ್ತರ ಕೊಡುಗೆ, ಅದು ಆಧ್ಯಾತ್ಮಿಕವಾದುದು, ಪಾರಮಾರ್ಥಿಕವಾದುದು. ಧರ್ಮಾಧ್ಯಕ್ಷರನ್ನು ನೇಮಕ ಮಾಡುವ ಹಕ್ಕು ಸಂಪೂರ್ಣವಾಗಿ ಧರ್ಮಸಭೆಯ ಅಧಿಕೃತ ಅಧಿಕಾರಕ್ಕೆ ಮೀಸಲಾದುದು ಎಂದು ಈ ಸಮ್ಮೇಳನ ಘೋಷಿಸಿತು. ಧರ್ಮಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳನ್ನು ಸೂಚಿಸುವ ಹಕ್ಕನ್ನು ಪಡೆದಿದ್ದ ರಾಷ್ಟ್ರಗಳು ಇಂತಹ ವಿಶೇಷ ಹಕ್ಕನ್ನು ಬಿಟ್ಟುಕೊಡಬೇಕೆಂದು ಈ ಸಮ್ಮೇಳನ ವಿನಂತಿಸಿತು. ಆಗ ಪವಿತ್ರ ಪೀಠ ಈ ಪರಮಾರ್ಥಿಕ ಕಾರ್ಯವನ್ನು ನಿಷ್ಠೆಯಿಂದ ಮಾಡಲು ಶಕ್ತವಾಗುತ್ತದೆ. ಇದರ ಬಗ್ಗೆ ರಾಷ್ಟ್ರಗಳು ಧರ್ಮಸಭೆಯೊಂದಿಗೆ ಸಂವಾದ ಮಾಡುವುದು ಸೂಕ್ತ.

**2) ಪಾಲನಾ ನಿಯೋಗದಲ್ಲಿ ಧರ್ಮಾಧ್ಯಕ್ಷರು ಮತ್ತು ಸಹಾಯಕರು**

ಈ ಶಾಸನದಲ್ಲಿ ಇನ್ನೊಂದು ಸ್ವಾರಸ್ಯಕರ ಭಾಗವಿದೆ. ಅದು ಧರ್ಮಕ್ಷೇತ್ರದ ಮತ್ತು ಧಾರ್ಮಿಕ ಸಭೆಗಳಿಗೆ ಸೇರಿದ ಯಾಜಕರ ಬಗ್ಗೆ ಪ್ರಸ್ತಾಪಿಸುತ್ತದೆ. ಯಾಜಕರು ಧರ್ಮಕ್ಷೇತ್ರಕ್ಕೆ ಸೇರಿದವರಾಗಿರಲಿ, ಧಾರ್ಮಿಕ ಸನ್ಯಾಸ ಸಭೆಗೆ ಸೇರಿದವರಾಗಿರಲಿ ಅವರು ಒಂದೇ ಯಾಜಕತ್ವದಲ್ಲಿ ಭಾಗಿಗಳಾಗುತ್ತಾರೆ. ಅವರು ತಮ್ಮ ಧರ್ಮಾಧ್ಯಕ್ಷರೊಂದಿಗೆ ಕ್ರಿಸ್ತರ ಯಾಜಕತ್ವದ ಸೇವೆಯನ್ನು ನಿರ್ವಹಿಸುತ್ತಾರೆ. ಅವರು "ಧರ್ಮಾಧ್ಯಕ್ಷರ ಸುಜ್ಞಾ ಸಹಾಯಕ"ರಾಗಿ ಸ್ಥಾಪಿಸಲ್ಪಟ್ಟಿದ್ದಾರೆ. ಇದರ ಪರಿಣಾಮವಾಗಿ ಅವರು ಒಂದೇ ಕುಟುಂಬದ ಸದಸ್ಯರಾಗಿದ್ದು ಧರ್ಮಾಧ್ಯಕ್ಷರನ್ನೂ ತಂದೆಯಾಗಿ ಪಡೆದಿದ್ದಾರೆ.

## ಎ. ಧರ್ಮಕ್ಷೇತ್ರದ ಯಾಜಕರು :

ಭಕ್ತರ ರಕ್ಷಣಾ ಕಾರ್ಯದಲ್ಲಿ ಧರ್ಮಕ್ಷೇತ್ರದ ಗುರುಗಳು ಪ್ರಥಮ ಸ್ಥಾನವನ್ನು ಪಡೆಯುತ್ತಾರೆ. ಏಕೆಂದರೆ ಅವರು ಪ್ರಭುವಿನ ಪಾಲನೆಗೆ ಒಳಪಟ್ಟ ಕ್ರೈಸ್ತ ಮಂದೆಯ ಒಂದು ಭಾಗದವರ ಸೇವೆಗಾಗಿ ತಮ್ಮನ್ನೆ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುತ್ತಾರೆ. ಧರ್ಮಧ್ಯಕ್ಷರ ಅಧಿಕಾರಕ್ಕೆ ಒಳಪಟ್ಟ ಒಂದು ಧರ್ಮಕೇಂದ್ರ ಅವರ ಸೇವೆಗೆ ಸಮರ್ಪಿಸಲಾಗಿದೆ. ಧರ್ಮಕೇಂದ್ರದ ಗುರುಗಳು ವಿಶೇಷ ರೀತಿಯಲ್ಲಿ ಧರ್ಮಾಧ್ಯಕ್ಷರೊಂದಿಗೆ ಸಹಕಾರ್ಮಿಕರು. ಅವರ ಸ್ವಾಧೀನಕ್ಕೆ ಕೊಟ್ಟ ಪ್ರದೇಶದಲ್ಲಿ



**ಬಿ. ಧರ್ಮಾಧ್ಯಕ್ಷರು ಪಾವನ ಕರ್ತರು :**

ಧರ್ಮಾಧ್ಯಕ್ಷರು ತಮ್ಮ ದೈನಂದಿನ ಕಾರ್ಯಕ್ರಮಗಳಲ್ಲಿ ಪವಿತ್ರೀಕರಣ ಕಾರ್ಯವನ್ನು ನಿರ್ವಹಿಸುತ್ತಾರೆ. ಪರಮಪ್ರಸಾದ ವಿಧಿ ಮತ್ತು ಇತರ ಸಂಸ್ಕಾರಗಳ ಆಚರಣೆಯಿಂದಲೇ ಧರ್ಮಸಭೆ ತನ್ನ ಅಸ್ತಿತ್ವವನ್ನು ಹೊಂದಿ ಬೆಳೆಯುತ್ತಿದೆ. ಧರ್ಮಕ್ಷೇತ್ರದಲ್ಲಿ ಧರ್ಮಾಧ್ಯಕ್ಷರು ಪವಿತ್ರೀಕರಣ ಕಾರ್ಯಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುತ್ತಾ ಈ ಕಾರ್ಯವನ್ನು ನಿರ್ವಹಿಸುತ್ತಾರೆ. ಧರ್ಮಕ್ಷೇತ್ರದಲ್ಲಿ ಸರ್ವರೂ ಒಮ್ಮನಸ್ಸಿನಿಂದ ಜೀವಿಸುವಂತೆ ಮಾಡುವುದೇ ಅವರ ಗುರಿ. "ಪ್ರಾರ್ಥನೆ ಮತ್ತು ದೈವವಾಕ್ಯದ ಪ್ರಸಾರ" ದ ಮುಖಾಂತರ ಧರ್ಮಾಧ್ಯಕ್ಷರು ಭಕ್ತವಿಶ್ವಾಸಿಗಳನ್ನು ವರಪ್ರಸಾದದ ಚಿಲುಮೆಗಳನ್ನಾಗಿ ಮಾಡಿ ಪ್ರಭುವಿಗೆ ಸಾಕ್ಷಿಗಳಾಗುವಂತೆ ಶ್ರಮಿಸುತ್ತಾರೆ. ಅವರ ಕಾಳಜಿ ಮತ್ತು ಆರೈಕೆಗೆ ಹೊರತಾದವರು ಯಾರೂ ಇಲ್ಲ. ಅವರು ದೈವ ಕರೆಯೋಣಗಳನ್ನು ಪ್ರೋತ್ಸಾಹಿಸುತ್ತಾರೆ, ಅವರಿಗೆ ಅಗತ್ಯ ತರಬೇತಿಯನ್ನೀಡುತ್ತಾರೆ. ಹೀಗೆ ಪರಿಣತ ಸಹಾಯಕರನ್ನು ಅವರು ಪಾಲನಾ ಸೇವೆಗೆ ಸಿದ್ಧ ಮಾಡುತ್ತಾರೆ. ಪ್ರಭು ಕ್ರಿಸ್ತರ ಆತ್ಮಿಕ ಶರೀರವಾದ ಧರ್ಮಸಭೆಯನ್ನು ಕಟ್ಟಲು ಧಾರ್ಮಿಕ ಸಭೆ ಮತ್ತು ವ್ಯಕ್ತಿಗಳನ್ನು ಪ್ರೋತ್ಸಾಹಿಸುತ್ತಾರೆ. ಧರ್ಮಾಧ್ಯಕ್ಷರು ಭಕ್ತ ವಿಶ್ವಾಸಿಗಳ ಸಾಮಾಜಿಕ ಪರಿಸ್ಥಿತಿಯನ್ನು ಅರಿತು ಧರ್ಮಸಭೆಯ ಕೆಲಸಕಾರ್ಯಗಳಲ್ಲಿ ಸಹಕರಿಸುವಂತೆ ಸೂಕ್ತ ಅವಕಾಶಗಳನ್ನು ಕಲ್ಪಿಸಿಕೊಡುತ್ತಾರೆ. "ದೀಕ್ಷಾಸ್ನಾನ ಮತ್ತು ದೃಢೀಕರಣ ಸಂಸ್ಕಾರಗಳ ಮೂಲಕ ಧರ್ಮಸಭೆಯ ಸದಸ್ಯರಾಗುವ ಭಾಗ್ಯವನ್ನು ಪ್ರಭು ಕ್ರಿಸ್ತರಿಂದ ಪಡೆದ ಅವರು ಅದೇ ಧರ್ಮಸಭೆಯ ರಕ್ಷಣಾಕಾರ್ಯದಲ್ಲಿ ಪಾಲ್ಗೊಳ್ಳುವುದು ಅವರ ಕರ್ತವ್ಯ ಮತ್ತು ಹಕ್ಕು. ಹೀಗೆ ಭಕ್ತ ವಿಶ್ವಾಸಿಗಳು ಧರ್ಮಾಧ್ಯಕ್ಷರ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುವುದು, ವಿವಿಧ ಪ್ರೇಷಿತ ಕಾರ್ಯಗಳಲ್ಲಿ ಪಾಲ್ಗೊಳ್ಳುವುದು, ಧರ್ಮಸಭೆಯ ಶಾಸನ ನಿರ್ದೇಶಿಸುವಂತೆ ಪಾಲನಾ ಸಮಿತಿಗಳಲ್ಲಿ ಧರ್ಮಾಧ್ಯಕ್ಷರ ನೇತೃತ್ವದಲ್ಲಿ ಕ್ರಿಯಾತ್ಮಕವಾಗುವುದು, ಪಾಲನಾ ಕೆಲಸಗಳಿಗೆ ಇರುವ ಅವಕಾಶಗಳನ್ನು ಕಂಡು ಹಿಡಿದು ಅವುಗಳ ಬಗ್ಗೆ ಸಾಧಕ ಬಾಧಕ ವರದಿಯನ್ನು ಸಿದ್ಧ ಮಾಡುವುದು ಇತ್ಯಾದಿ. ಕ್ರೈಸ್ತ ಶ್ರೀ ಸಾಮಾನ್ಯರು ತಮ್ಮ ಆಸಕ್ತಿ ಮತ್ತು ಸಮಯವನ್ನು ಉದಾರ ಮನಸ್ಸಿನಿಂದ ಧರ್ಮಸಭೆಗೆ ನೀಡಬೇಕು.

**ಸಿ. ಧರ್ಮಾಧ್ಯಕ್ಷರು : ಪಿತೃ ಮತ್ತು ಪರಿಪಾಲಕರು :**

ಧರ್ಮಾಧ್ಯಕ್ಷರು ತಮ್ಮ ಧರ್ಮಕ್ಷೇತ್ರದ ಪ್ರಜೆಯ ಮಧ್ಯೆ ಸೇವೆ ಸಲ್ಲಿಸುವುದರ ಮುಖಾಂತರ ತಮ್ಮ ಪಿತೃ ಮತ್ತು ಪರಿಪಾಲಕರ ಪಾತ್ರವನ್ನು ನಿರ್ವಹಿಸುತ್ತಾರೆ. ಅವರು ಒಳ್ಳೆಯ ಪಾಲಕರಾಗಿದ್ದು ತಮ್ಮ ಪಾಲನಾ ಮಂದೆಯನ್ನು ಚೆನ್ನಾಗಿ ಅರಿತಿರುತ್ತಾರೆ ಮತ್ತು ಪ್ರಜೆಯೂ ಅವರನ್ನು ಅರಿತಿರುತ್ತದೆ. ಪ್ರತಿಯೊಬ್ಬ ಭಕ್ತನೂ ತನ್ನ ಕರ್ತವ್ಯವನ್ನು ಅರಿತುಕೊಂಡು ಪ್ರೀತಿ ಮತ್ತು ಒಗ್ಗಟ್ಟಿನಿಂದ ದುಡಿಯುವಂತೆ ಧರ್ಮಾಧ್ಯಕ್ಷರು ಅವರನ್ನು ಒಂದುಗೂಡಿಸುತ್ತಾರೆ. ಧರ್ಮಾಧ್ಯಕ್ಷರಿಗೂ ಭಕ್ತ ವಿಶ್ವಾಸಿಗಳಿಗೂ ಮಧ್ಯದಲ್ಲಿ ಪ್ರೀತಿ ವಿಶ್ವಾಸವಿರುವುದರಿಂದ ಧರ್ಮಕ್ಷೇತ್ರದ ಪ್ರೇಷಿತ ಸೇವೆಗಳು ಫಲಭರಿತವಾಗಿ ಮುಂದುವರೆಯುತ್ತವೆ. ಧರ್ಮಾಧ್ಯಕ್ಷರ ಪಾಲನಾ ಕಕ್ಷೆಗೆ ಹೊರತಾದ ಭಕ್ತರು ಯಾರೂ ಇರುವುದಿಲ್ಲ. ಅವರು ಸ್ವಕೀಯ ಜನರನ್ನು ಮಾತ್ರವಲ್ಲ, ಅಪರಿಚಿತರು, ಪರದೇಶಿಯರು, ವಲಸೆಬಂದವರು, ಗಡೀಪಾರಾದವರು, ನಿರಾಶ್ರಿತರು ಇಂಥವರನ್ನು ಗಮನಿಸುತ್ತಾರೆ. ಪರದೇಶಗಳಿಗೆ

ಅವರು ನಿರ್ವಹಿಸಬೇಕಾದ ಕರ್ತವ್ಯಗಳಿವು: ಅವರ ಬೋಧನಾ ಸೇವೆ ಶುಭ ಸಂದೇಶ ಪ್ರಸಾರ, ಸಮಯ ಮತ್ತು ಅಗತ್ಯಕ್ಕೆ ತಕ್ಕಂತೆ ಧರ್ಮೋಪದೇಶ, ಈ ಕಾರ್ಯವನ್ನು ಮಾಡುವಾಗ ಅವರು ಧಾರ್ಮಿಕ ವ್ಯಕ್ತಿಗಳ ಮತ್ತು ಶ್ರೀ ಸಾಮಾನ್ಯರ ಸಹಕಾರವನ್ನು ಪಡೆಯಬೇಕು. ಭಕ್ತರ ಪವಿತ್ರೀಕರಣ ಸೇವೆಯಲ್ಲಿ ಯಾಜಕರು ದಿವ್ಯ ಬಲಿಪೂಜೆಯ ಆಚರಣೆ ಅವರ ಜೀವನದ ಕೇಂದ್ರ ಮತ್ತು ಕ್ರೈಸ್ತ ಸಮುದಾಯದ ಅತ್ಯುನ್ನತ ಆರಾಧನೆ ಎಂಬುದನ್ನು ಗಮನಿಸಬೇಕು. ಭಕ್ತ ಪಾಲಕರಾದ ಇವರು ತಮ್ಮ ಮಂದೆಯನ್ನು ಅರಿತುಕೊಳ್ಳಲು ಕುಟುಂಬಗಳನ್ನು, ಪಾಠಶಾಲೆಗಳನ್ನು ಅವರ ಪಾಲನಾ ಕರ್ತವ್ಯಕ್ಕೆ ಅನುಗುಣವಾಗಿ ಸಂಧಿಸಬೇಕು. ಅವರು ರೋಗಗ್ರಸ್ಥರ ಮತ್ತು ಕಾರ್ಮಿಕರ ಬಗ್ಗೆ ವಿಶೇಷ ಕಾಳಜಿ ತೋರಬೇಕು.

## ಬಿ. ಧಾರ್ಮಿಕ ಯಾಜಕರು

ಪ್ರಭು ಕ್ರಿಸ್ತರ ಆತ್ಮಿಕ ಶರೀರವಾದ ಧರ್ಮಸಭೆಯನ್ನು ಅಭಿಮಾನ ಮತ್ತು ಕ್ರಿಯಾಶೀಲತೆಯಿಂದ ಬೆಳೆಸುವುದರಲ್ಲಿ ಧಾರ್ಮಿಕ ವ್ಯಕ್ತಿಗಳು ಧರ್ಮಾಧ್ಯಕ್ಷರೊಂದಿಗೆ ಸಹಕರಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಧರ್ಮಾಧ್ಯಕ್ಷರ ನೇತೃತ್ವದಲ್ಲಿ ಭಕ್ತರ ಆತ್ಮಿಕ ಪಾಲನೆ ಮಾಡುತ್ತಾ ಇಂಥಹ ಪ್ರೇಷಿತತ್ವವನ್ನು ಕೈಗೊಳ್ಳುವ ಧಾರ್ಮಿಕ ಗುರುಗಳು ಒಂದು ವಿಧದಲ್ಲಿ ಧರ್ಮಕ್ಷೇತ್ರದ ಗುರುಗಳನ್ನೇ ಹೋಲುತ್ತಾರೆ. ಕೆಲವು ಸನ್ಯಾಸ ಸಭೆಗಳು ಪಡೆದಿರುವ ವಿನಾಯತಿ, ಅವರ ಸಾಂಸ್ಥಿಕ ಆಂತರಿಕ ಶಿಸ್ತಿಗೆ ಅನ್ವಯಿಸುತ್ತದೆ. ಅದು ಧರ್ಮಕ್ಷೇತ್ರದ ಭಕ್ತರ ಆತ್ಮ ಸಂರಕ್ಷಣಾ ಕಾರ್ಯಕ್ಕೆ ಸೀಮಿತವಾಗಿರುವುದರಿಂಧ ಅವರನ್ನು ಧರ್ಮಾಧ್ಯಕ್ಷರ ಪ್ರೇಷಿತತ್ವದಿಂದ ಹೊರತು ಪಡಿಸುವುದಿಲ್ಲ. ಪ್ರತಿ ಧರ್ಮಾಧ್ಯಕ್ಷರು ತಮ್ಮ ಉಸ್ತುವಾರಿಯಲ್ಲಿರುವ ಧಾರ್ಮಿಕ ಸನ್ಯಾಸ ವರ್ಗ ಮತ್ತು ಧರ್ಮಕ್ಷೇತ್ರದ ಗುರುಗಳ ಮಧ್ಯೆ ಮಧುರ ಮತ್ತು ಶಿಸ್ತು ಸಹಕಾರದ ಬಾಂಧವ್ಯವಿರುವಂತೆ ನೋಡಿಕೊಳ್ಳಬೇಕು.

## ಸಮಾಪ್ತಿ

ವಿಶ್ವಾಸಿಗಳ ಆತ್ಮ ಕಲ್ಯಾಣವೇ ಈ ಶಾಸನದ ಗುರಿಯಾಗಿದ್ದು ಧರ್ಮಾಧ್ಯಕ್ಷರು ಮತ್ತು ಅವರ ಸಹ ಕಾರ್ಮಿಕರು ಈ ಕಾರ್ಯದಲ್ಲಿ ತಮ್ಮನ್ನೇ ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕೆಂದು ಆದೇಶಿಸುತ್ತದೆ. "ನಮ್ಮ ಪ್ರಭು ದೇವರು ತಮ್ಮ ಪ್ರಜೆಯನ್ನು ಪಾಪದಿಂದ ರಕ್ಷಿಸಲೂ, ಮಾನವರನ್ನು ಪುನೀತರನ್ನಾಗಿ ಮಾಡಲೂ ಪ್ರಭುಕ್ರಿಸ್ತರನ್ನು ಭೂಮಿಗೆ ಕಳುಹಿಸಿದರು. ಪ್ರಭು ಕ್ರಿಸ್ತರು ತಮ್ಮ ಪರಮ ಉದ್ದೇಶವನ್ನು ಮುಂದುವರಿಸಲು ಯೋಜಿಸಿದ ಧರ್ಮಾಧ್ಯಕ್ಷ ವ್ಯವಸ್ಥೆಯ ಉದ್ದೇಶವೂ ಇದೇ ಆಗಿದೆ. ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿ ಪ್ರಭು ಕ್ರಿಸ್ತರ ಬೋಧನೆಗೆ ವಿಧೇಯನಾಗುವುದು ಅಗತ್ಯ. "ಧರ್ಮಸಭೆಯ ಈ ಭಾಗವನ್ನು ಕ್ರಿಸ್ತರ ಪ್ರತಿನಿಧಿಯಾಗಿ ಆಡಳಿತ ನಡೆಸಲು ಆಯ್ಕೆಯಾದ ಧರ್ಮಾಧ್ಯಕ್ಷರಿಗೆ ನಿಷ್ಠೆಯಿಂದ ನಡೆದುಕೊಂಡರೆ ಈ ಗುರಿ ಸಿದ್ಧಿಸುವುದರಲ್ಲಿ ಯಾವ ಅನುಮಾನವೂ ಇರುವುದಿಲ್ಲ.



# VII ಧಾರ್ಮಿಕ ಜೀವನದಲ್ಲಿ ಹೊಂದಾಣಿಕೆ ಮತ್ತು ನವೀಕರಣ

## (ಶಾಸನ)

ಧರ್ಮಸಭೆಯ ಜೀವನದ ನವೀಕರಣವೇ ದ್ವಿತೀಯ ವ್ಯಾಟಿಕನ್ ಸಮ್ಮೇಳನದ ಗುರಿಯಾಗಿತ್ತು. ಈ ಉದ್ದೇಶವನ್ನು ಕಾರ್ಯಗತ ಮಾಡಬೇಕಾದರೆ ಧರ್ಮಸಭೆಯ ಗೂಡಾರ್ಥವನ್ನು ಗ್ರಹಿಸಬೇಕಾಗಿತ್ತು. ಧರ್ಮಸಭೆಯ ಸಂದೇಶವನ್ನು ಜಗತ್ತಿಗೆ ಸಾರಬೇಕಾಗಿತ್ತು. ಈ ಅನ್ವೇಷಣೆಯ ಹಾಗೂ ರೂಪಿಸಲಾದ ನವೀಕರಣದ ಮೂಲ ಸೂತ್ರಗಳು "ಧರ್ಮಸಭೆ" ಸಂವಿಧಾನದಲ್ಲಿ ಕಾಣಬಹುದು. ಈ ಸೂತ್ರಗಳನ್ನು ಧಾರ್ಮಿಕ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನು ಈ ಶಾಸನ ತಿಳಿಸುತ್ತದೆ.

## ಭಾಗ I

## ಪಾವಿತ್ರತೆಗೆ ಕರೆ

ನಮ್ಮನ್ನು ಪುನೀತರನ್ನಾಗಿ ಮಾಡಿ ದೇವರ ಪ್ರೀತಿಯಲ್ಲಿ ಅಧಿಕಾಧಿಕವಾಗಿ ಭಾಗಿಯಾಗುವಂತೆ ಮಾಡುವುದಕ್ಕಾಗಿಯೇ ಧರ್ಮಸಭೆಯ ಸ್ಥಾಪನೆಯಾಯಿತು. ಇದೇ ಅದರ ಅಸ್ತಿತ್ವದ ಗುರಿ.

## ಪಾವಿತ್ರತೆಗೆ ಸಾರ್ವತ್ರಿಕ ಕರೆ

ಪಾವಿತ್ರತೆ ಎಂದರೇನು? ಇದುವರೆಗೆ ನಾವು ಅದೊಂದು ವೈಯಕ್ತಿಕ ವಿಷಯವೆಂದೂ ಅಥವಾ ಆ ವ್ಯಕ್ತಿಯ ಪ್ರತ್ಯೇಕ ಕಾರ್ಯವೆಂದು ಭಾವಿಸಿದ್ದೆವು. ಆದರೆ ಅದು ಏಕ ಎಂಬುದನ್ನು ಈ ಸಮ್ಮೇಳನ ನಮ್ಮ ಗಮನಕ್ಕೆ ತರುತ್ತದೆ. ಅದೇ ಪ್ರಭುಕ್ರಿಸ್ತರ ಪಾವಿತ್ರತೆ, ತಮ್ಮ ಆತ್ಮಿಕ ಶರೀರವಾದ ಧರ್ಮಸಭೆಗೂ ಅದರ ಎಲ್ಲ ಮಕ್ಕಳಿಗೂ ಸಂವಹನಗೊಳಿಸಿರುವ ಪಾವಿತ್ರತೆ.

ಅಂತಿಮವಾಗಿ ಪಾವಿತ್ರತೆ ಪರಮ ತ್ರಿತ್ವದ ಜೀವನದಲ್ಲಿ ಕೇಂದ್ರೀಕೃತವಾಗಿದೆ. ಪವಿತ್ರಾತ್ಮರಲ್ಲಿ ನಾವು ಯೇಸುಕ್ರಿಸ್ತರ ಮೂಲಕ ಪವಿತ್ರಾತ್ಮರ ಜೀವನದಲ್ಲಿ ಭಾಗಗಳಾಗುತ್ತೇವೆ. ಪ್ರಭು ಕ್ರಿಸ್ತರ ಧರ್ಮಸಭೆಯನ್ನು ತಮ್ಮೊಂದಿಗೆ ಅನ್ಯೋನ್ಯವಾಗಿಸಿಕೊಂಡು ಅದನ್ನು ತಮ್ಮ ಶರೀರವನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಹೀಗೆ ಧರ್ಮಸಭೆ ಯೇಸುಕ್ರಿಸ್ತರ ಪಾವಿತ್ರತೆಯಲ್ಲಿ ಸಮಗ್ರವಾಗಿ ಭಾಗಿಯಾಗಿದೆ. ದೀಕ್ಷಾಸ್ನಾನ ಪಡೆದ ಪ್ರತಿ ವ್ಯಕ್ತಿ ಧರ್ಮಸಭೆಗೆ ಮತ್ತು ಪ್ರಭು ಕ್ರಿಸ್ತರಿಗೆ ಸೇರಿದವನಾಗುತ್ತಾನೆ. ತನ್ನ ಸ್ವಂತ ಚಿತ್ತದಿಂದ ಒಬ್ಬ ವ್ಯಕ್ತಿ ಪಾವಿತ್ರತೆಯನ್ನು ಸ್ವೀಕರಿಸುತ್ತಾನೆ ಮತ್ತು ತನ್ನ ದೈನಂದಿನ ಜೀವನದಲ್ಲಿ ಅದನ್ನು ಬಳಸುತ್ತಾನೆ. ಧರ್ಮಸಭೆಯ ಸಾಂಸ್ಕಾರಿಕ ಜೀವನದ ಮೂಲಕ ಪ್ರಭು ಕ್ರಿಸ್ತರು ಈ ಪವಿತ್ರೀಕರಣದ ಕಾರ್ಯವನ್ನು ಮುಂದುವರಿಸುತ್ತಾರೆ. ಆ ವ್ಯಕ್ತಿ ತನ್ನ ಪಾವನತೆಯ ಜೀವನದಿಂದ ಧರ್ಮಸಭೆಯ ಪಾವನತೆಯನ್ನು ಬೆಳೆಸುತ್ತಾ ಅದು ಹಬ್ಬಿ ಹರಡುವಂತೆ ಮಾಡುತ್ತಾನೆ.

ಧರ್ಮಸಭೆಯ ಈ ಪಾವಿತ್ರತೆ ಪವಿತ್ರಾತ್ಮರು ಭಕ್ತರಲ್ಲಿ ಉತ್ಪತ್ತಿಮಾಡುವ ವರಪ್ರಸಾದದಲ್ಲಿ ಕಂಡು ಬರುತ್ತದೆ. ಅದು ಹಲವಾರು ವಿಧದಲ್ಲಿ ವ್ಯಕ್ತವಾಗುತ್ತದೆ. ದೇವರ ಪರಿಪೂರ್ಣ ಪ್ರೀತಿಯನ್ನು ತನ್ನ ನಡವಳಿಕೆಯಲ್ಲಿ ಅರಸುವ ವ್ಯಕ್ತಿಯಲ್ಲಿ ಅದು ಪ್ರಮುಖವಾಗಿ ಕಂಡು ಬರುತ್ತದೆ.

# ಪಾವಿತ್ರತೆಗೆ ಧಾರ್ಮಿಕ ವ್ಯಕ್ತಿಗಳ ವಿಶಿಷ್ಟ ಕರೆ

ಶುಭಸಂದೇಶ ಸೂಚಿಸಿರುವ ತ್ರೈವ್ರತಗಳ ಅನುಸರಣೆಯಲ್ಲಿ ಪಾವಿತ್ರತೆ ವಿಶೇಷವಾಗಿ ಕಂಡು ಬರುತ್ತದೆ. ಆದುದರಿಂದ ಶತಶತಮಾನಗಳಿಂದ ವಿವಿಧ ಧಾರ್ಮಿಕ ಸಭೆಗಳು ಈ ತ್ರೈವ್ರತಗಳ ಅನುಸರಣೆಯಿಂದ ದೇವರ ಮಾರ್ಗದರ್ಶನದಲ್ಲಿ ಬೆಳೆದು ಬಂದಿವೆ. ಈ ಸಮುದಾಯಗಳು ನೇರವಾಗಿ ಈ ವ್ರತಗಳನ್ನು ಅನುಷ್ಠಾನಕ್ಕೆ ತಂದವು. ಈ ಧಾರ್ಮಿಕ ಸಮುದಾಯಗಳ ಸಂಖ್ಯೆ ಏನೇ ಇರಲಿ, ಅವರು ಕೈಗೊಳ್ಳುವ ಕೆಲಸ ಯಾವುದೇ ಇರಲಿ ಅವರಲ್ಲಿ ಕಂಡು ಬರುವ ಸಾಮಾನ್ಯ ಅಂಶ ಇದು. ಅವರು ಈ ವ್ರತಗಳ ಮುಖಾಂತರ ಬಡವರೂ, ದೀನರೂ ಆದ ಶಿಲುಬೆ ಹೊತ್ತ ಕ್ರಿಸ್ತರನ್ನು ಹಿಂಬಾಲಿಸಿದರು. ಹೀಗೆ ಅವರು ಕ್ರಿಸ್ತರ ಪುನರುತ್ಥಾನದಲ್ಲಿ ಪಾತ್ರಧಾರಿಗಳಾಗಲು ಪ್ರಯತ್ನಿಸಿದರು. ಪವಿತ್ರಾತ್ಮರು ಅವರ ಹೃದಯವನ್ನು ಪ್ರೀತಿಯಿಂದ ತುಂಬಿಸುತ್ತಾರೆ. ಅದರಿಂದ ಪುಳಕಿತರಾದ ಧಾರ್ಮಿಕ ವ್ಯಕ್ತಿಗಳು ಯೇಸುಕ್ರಿಸ್ತರಿಗಾಗಿ ಮತ್ತು ಅವರ ಆತ್ಮಿಕ ಶರೀರವಾದ ಧರ್ಮಸಭೆಗಾಗಿ ತಮ್ಮ ಬಾಳನ್ನು ಮುಡುಪಾಗಿಡುತ್ತಾರೆ.

ತ್ರೈವ್ರತಗಳನ್ನು ಅಂಗೀಕರಿಸುವ ಮತ್ತು ಅಭ್ಯಸಿಸುವ ಧಾರ್ಮಿಕ ಸಮುದಾಯಗಳಿಗೆ ಧರ್ಮಸಭೆಯಲ್ಲಿ ವಿಶಿಷ್ಠ ಸ್ಥಾನವಿದೆ. ಅದು ಇಮ್ಮಡಿ ಪಾತ್ರದಲ್ಲಿದೆ. ಇವರು ತಮ್ಮನ್ನೇ ಪ್ರಭು ಕ್ರಿಸ್ತರಿಗೆ ಸಮರ್ಪಿಸಿಕೊಂಡು ತಮ್ಮ ಜೀವನಾದರ್ಶವನ್ನು ದೈವಪ್ರಜೆಗೂ ಪ್ರಪಂಚಕ್ಕೂ ನೀಡುತ್ತಾರೆ. ಅಂತೆಯೇ ಧರ್ಮಸಭೆ ತನ್ನ ಇಷ್ಟಾನುಸಾರ ಉಪಯೋಗಿಸುವಂತೆ ತಮ್ಮ ಸೇವೆಯನ್ನು ಅದಕ್ಕೆ ಒಪ್ಪಿಸುತ್ತವೆ. ಧಾರ್ಮಿಕ ವ್ಯಕ್ತಿಗಳು ಎಷ್ಟು ಹುರುಪಿನಿಂದ ತಮ್ಮ ಜೀವನವನ್ನು ಯೇಸು ಕ್ರಿಸ್ತರೊಂದಿಗೆ ಸಮ್ಮಿಳಿತಗೊಳಿಸಿಕೊಳ್ಳುತ್ತಾರೋ ಅಷ್ಟರ ಮಟ್ಟಿಗೆ ಕ್ರೈಸ್ತ ಜೀವನದ ಅರ್ಥವನ್ನು ಅವರು ವ್ಯಕ್ತ ಪಡಿಸುತ್ತಾರೆ. ಹೀಗೆ ಅವರು ಧರ್ಮಸಭೆಯನ್ನು ಫಲದಾಯಕಗೊಳಿಸುತ್ತಾರೆ ಮತ್ತು ಅದರ ಪ್ರೇಷಿತ ಕಾರ್ಯವನ್ನು ಪರಿಣಾಮಕಾರಿಯನ್ನಾಗಿ ಮಾಡುತ್ತಾರೆ. ಈ ಧಾರ್ಮಿಕ ಜೀವನದ ಧರ್ಮಸಭೆಯ ಶ್ರೇಣಿಯುತ ಅಧಿಕಾರ ವರ್ಗಕ್ಕೆ ಸೇರಿಲ್ಲ. ಆದರೂ ಅವರ ಪಾವನತೆ ಧರ್ಮಸಭೆಯ ಭಾಗವಾಗಿದೆ, ಅದರ ಜೀವನದೊಂದಿಗೆ ಸೇರಿಕೊಂಡಿದೆ. ಶ್ರೇಣಿಯುತ ವಿನ್ಯಾಸ ಧರ್ಮಸಭೆಗೆ ಸಾಮಾಜಿಕ ಸಂವಿಧಾನವನ್ನು ನೀಡುತ್ತದೆ. ಧರ್ಮಸಭೆಗೆ ಈ ವಿನ್ಯಾಸ ಅಗತ್ಯವಾಗಿದೆ. ಆದರೂ ಆಧ್ಯಾತ್ಮಿಕ ವಿನ್ಯಾಸವೂ ಧರ್ಮಸಭೆಗೆ ಅಗತ್ಯವಾಗಿದೆ. ಧರ್ಮಸಭೆಯನ್ನು ನಿಕಟವಾಗಿ ವೀಕ್ಷಿಸಿದರೆ ಅದು ದೇವರಿಗೆ ಸಮರ್ಪಿತ ವ್ಯಕ್ತಿಗಳಿಂದ ಕೂಡಿದೆ. ಅದಕ್ಕೆ ಇಂಥಹ ಸಮರ್ಪಕ ಜೀವಿಗಳ ಅಗತ್ಯವಿದೆ. ಧರ್ಮಸಭೆ ಪಾವನತೆಯಲ್ಲಿ ಪ್ರವರ್ಧಿಸುವಂತೆ ಇವರು ತಮ್ಮ ಅಮೂಲ್ಯ ಜೀವನವನ್ನೂ ಸಮರ್ಪಿಸುತ್ತಾರೆ.

# ಭಾಗ II

## ಹೊಂದಾಣಿಕೆ ಮತ್ತು ನವೀಕರಣದ ಅಗತ್ಯ

ಮೇಲೆ ಕಾಣಿಸಿದಂತೆ ಧಾರ್ಮಿಕ ಸನ್ಯಾಸ ಜೀವನ ಇಬ್ಬಗೆಯಲ್ಲಿ ಧರ್ಮಸಭೆಯನ್ನು ಫಲದಾಯಕಗೊಳಿಸುತ್ತದೆ. ವ್ಯಾಟಿಕನ್ ಸಮ್ಮೇಳನ ಇಡೀ ಧರ್ಮಸಭೆಯ ನವೀಕರಣವನ್ನು ಆಯೋಜಿಸಿದೆ. ಅದರಲ್ಲಿ ಧಾರ್ಮಿಕ ವ್ಯಕ್ತಿಗಳು ಶಾಮೀಲಾಗಬೇಕು, ಇಂದಿನ ವಿಶ್ವ ಬದಲಾಗುತ್ತಿರುವಂತೆ ಕಾಲಮಾನಗಳಿಗೆ ತಕ್ಕಂತೆ ಈ ಬದಲಾವಣೆ ಅನಿವಾರ್ಯ. ವಿಶೇಷವಾಗಿ



ಶುಭಸಂದೇಶ ಹೊಸತಾಗಿ ಪ್ರಸಾರವಾಗುತ್ತಿರುವ ಪ್ರದೇಶಗಳಲ್ಲಿ ನವೀಕರಣವನ್ನು ಧರ್ಮಸಭೆಯ ನಿರ್ದಿಷ್ಠ ಸೂತ್ರಗಳಿಗೆ ಅನುಗುಣವಾಗಿ ಕೈಗೊಳ್ಳಲೇಬೇಕು.

**ಹೊಂದಾಣಿಕೆ ಮತ್ತು ನವೀರಕಣದ ಸೂತ್ರಗಳು :**

1) ಶುಭ ಸಂದೇಶ ತಿಳಿಯಪಡಿಸುವಂತೆ ಧಾರ್ಮಿಕ ಸನ್ಯಾಸ ಜೀವನ ಪ್ರಭು ಕ್ರಿಸ್ತರ ಅನುಸರಣೆಯಲ್ಲಿ ಅಡಕವಾಗಿದೆ : ಧಾರ್ಮಿಕ ಜೀವನದ ನವೀಕರಣಕ್ಕೆ ಶುಭಸಂದೇಶ ಮನೋಭಾವನೆಯು ಪ್ರಥಮ ಸೂತ್ರ.

2) ಧರ್ಮಸಭೆಯಲ್ಲಿ ಅನೇಕ ಧಾರ್ಮಿಕ ಸಂಸ್ಥೆಗಳು ವಿಭಿನ್ನ ಮನೋಭಾವನೆ ಮತ್ತು ಚಟುವಟಿಕೆಗಳಿಂದ ಕ್ರಿಯಾತ್ಮಕವಾಗಿವೆ. ಅವರ ಸೇವೆ ಧರ್ಮಸಭೆಗೆ ಅಮೂಲ್ಯ ಕೊಡುಗೆಯಾಗಿದೆ. ಪ್ರತಿಯೊಂದು ಸಭೆಯು ಧರ್ಮಸಭೆಯ ವಿಭಿನ್ನ ಪ್ರೇಷಿತತ್ವವನ್ನು ಕೈಗೊಂಡು ಅದರ ಭಾಗವಾಗಿವೆ. ಆದುದರಿಂದ ಅದರ ದ್ವಿತೀಯ ಸೂತ್ರವೇನೆಂದರೆ: ಪ್ರತಿ ಧಾರ್ಮಿಕ ಸಭೆಯು ತನ್ನ ಸಂಸ್ಥಾಪಕರ ವಿಶಿಷ್ಠ ಗುರಿ ಮತ್ತು ಅಭಿಲಾಷೆಯನ್ನು ಅನುಷ್ಠಾನಕ್ಕೆ ತರುವುದು.

3) ಈ ಧಾರ್ಮಿಕ ಸಮುದಾಯಗಳು ಧರ್ಮಸಭೆಯ ಜೀವನ ಮತ್ತು ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತವೆ. ಈ ಸಭೆಗಳು ಧರ್ಮಸಭೆಯ ಕಾರ್ಯಗಳು ತಮ್ಮ ಸ್ವಂತ ಕಾರ್ಯಗಳೆಂದು ಸ್ವೀಕರಿಸಿ ತಮ್ಮ ಕಾಲಾವಧಿಯಲ್ಲಿ ಅವನ್ನು ಅನುಷ್ಠಾನಕ್ಕೆ ತರಬೇಕು.

4) ಧರ್ಮಸಭೆಯ ಜೀವನದಲ್ಲಿ ಧಾರ್ಮಿಕ ವ್ಯಕ್ತಿಗಳು ಹೆಚ್ಚು ಸೂಕ್ತರು, ಪರಿಣತರು ಆಗಿದ್ದಾರೆ. ಅವರು ಜನರ ಸಾಮಾಜಿಕ ಜೀವನ ಮತ್ತು ಧರ್ಮಸಭೆಯ ಅಗತ್ಯದ ಬಗ್ಗೆ ಸಾಕಷ್ಟು ಜ್ಞಾನ ಹೊಂದಿರಬೇಕು.

5) ಧಾರ್ಮಿಕರಲ್ಲಿ ಆಧ್ಯಾತ್ಮಿಕ ನವೀಕಾರ ಅತ್ಯಗತ್ಯ. ಆಧುನಿಕ ಪರಿಸರಗಳಿಗೆ ನಾವು ಎಷ್ಟೇ ಹೊಂದಿಕೊಂಡಿದ್ದರೂ ಇದರ ವಿನ: ನಮ್ಮ ಎಲ್ಲಾ ಪ್ರಯತ್ನಗಳು ನಿಷ್ಫಲವಾಗುವುವು. ಆದುದರಿಂದ ವಾಸ್ತವವಾಗಿ ಧಾರ್ಮಿಕ ಜೀವನ, ಪ್ರಾರ್ಥನೆ ಮತ್ತು ಚಟುವಟಿಕೆಗಳು ಸೂಕ್ತವಾಗಿ ಪ್ರೇಷಿತತ್ವಗಳಿಗೆ ಹೊಂದಿಸಿಕೊಳ್ಳಬೇಕು. ಧಾರ್ಮಿಕ ವ್ಯಕ್ತಿಗಳ ಮನೋಭಾವನೆ ಸಂಸ್ಥೆಯ ಮನೋಭಾವನೆಯೊಂದಿಗೆ ಹೊಂದಿಕೊಳ್ಳಬೇಕು.

**ವೈಯಕ್ತಿಕ ನವೀಕರಣ :**

ಧಾರ್ಮಿಕ ವ್ಯಕ್ತಿ ಪ್ರಥಮತ: ಸಾಮಾನ್ಯ ಕ್ರೈಸ್ತ ಭಕ್ತ. ಈ ಭಕ್ತ ಉತ್ತಮ ಕ್ರೈಸ್ತನಾಗಲು ಧಾರ್ಮಿಕ ಜೀವನವನ್ನು ಅವಲಂಬಿಸುತ್ತಾನೆ. ಧಾರ್ಮಿಕ ವ್ಯಕ್ತಿಯಾಗಿ ದೇವರಿಗೆ ತನ್ನನ್ನು ಸಮರ್ಪಿಸಿಕೊಳ್ಳುವ ವ್ಯಕ್ತಿ ದೇವರಿಗೆ ಸೇವೆ ಸಲ್ಲಿಸಲು ಹೆಚ್ಚು ಸಮರ್ಪಕನಾಗುತ್ತಾನೆ, ಯೋಗ್ಯನಾಗುತ್ತಾನೆ. ಧಾರ್ಮಿಕ ಸಭೆಯ ಗುಣಲಕ್ಷಣಗಳು, ಮನೋಭಾವ, ತ್ರೈವ್ರತದ ಅನುಸರಣೆಯಲ್ಲಿ ಭಿನ್ನತೆ ಇದ್ದರೂ ಅವೆಲ್ಲದರಲ್ಲಿ ಒಂದು ಸಮಾನತೆ ಇದೆ. ಎಲ್ಲಾ ಧಾರ್ಮಿಕರು ದೇವರ ಕರೆಗೆ ಓಗೊಟ್ಟವರು. ಅವರು ಪಾಪಕ್ಕೆ ವಿಮುಖರಾಗಿ, ಲೋಕವನ್ನು ತ್ಯಜಿಸಿ ದೇವರಿಗೆ ತಮ್ಮ ಬಾಳನ್ನು ಮುಡುಪಾಗಿಡುವರು. ಅವರು ದೀಕ್ಷಾಸ್ನಾನದಲ್ಲಿ ಮಾಡುವ ಸಮರ್ಪಣೆಯನ್ನು ಪ್ರತ್ಯಕ್ಷವಾಗಿ ಕಾರ್ಯಚರಣೆಗೆ ತರುತ್ತಾರೆ. ಹಿಂದಿನ ದೀಕ್ಷಾಸ್ನಾನ ಮತ್ತು ಇಂದಿನ ಸಮರ್ಪಣೆ

# ಭಾಗ III

## ಸುವಾರ್ತೋಪದೇಶಗಳು ಮತ್ತು ಸಭಾ ಜೀವನ

**ಸುವಾರ್ತೋಪದೇಶಗಳು :** ಧರ್ಮಸಭೆಯ ಸಂಪ್ರದಾಯಿಕ ಜೀವನದಲ್ಲಿ ಸುವಾರ್ತೋಪದೇಶಗಳಲ್ಲಿ ಮೂರಕ್ಕೆ ಗೌರವಾನ್ವಿತ ಗಣ್ಯ ಸ್ಥಾನವಿದೆ. ಅವು ಕನ್ಯಾವ್ರತ (ಬ್ರಹ್ಮಚರ್ಯೆ) ದಾರಿದ್ರ್ಯ ಮತ್ತು ವಿಧೇಯತೆ. ಎಲ್ಲಾ ಜನರು ಈ ಅಂಶವನ್ನು ಗಮನಿಸಬೇಕು. ಸುವಾರ್ತೋಪದೇಶದ ತ್ರೈವ್ರತಗಳನ್ನು ಕೈಗೊಳ್ಳುವುದರಿಂಧ ಕೆಲವು ಗೌರವಾನ್ವಿತ ಮೌಲ್ಯಗಳನ್ನು ನಿಸ್ಸಂದೇಹವಾಗಿ ತ್ಯಜಿಸಬೇಕಾಗುತ್ತದೆ. ಆದರೂ ಈ ತ್ರೈವ್ರತಗಳು ಮಾನವನ ನೈಜ ವ್ಯಕ್ತಿತ್ವದ ಬೆಳವಣಿಗೆಗೆ ಮಾರಕವಾಗುವುದಿಲ್ಲ. ಪ್ರತಿಯಾಗಿ ಅವು ಸ್ವಾಭಾವಿಕ ವ್ಯಕ್ತಿಯ ವಿಕಾಸಕ್ಕೆ ಪ್ರೇರಕವೂ ಆಗಿವೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಸ್ವಂತ ಕರೆಗೆ ಅನುಗುಣವಾಗಿ ಸ್ವೇಚ್ಛೆಯಿಂದ ಈ ವ್ರತಗಳು ಅವನ ಹೃನ್ಮನದ ಪಾವಿತ್ರತೆಗೆ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ನೆರವಾಗುತ್ತವೆ. ಅವು ಅವನಲ್ಲಿ ಪ್ರೀತಿಯನ್ನು ಸದಾ ಉಜ್ವಲಗೊಳಿಸುತ್ತದೆ. (ಸಂವಿಧಾನ : ಧರ್ಮಸಭೆ ಸಂಖ್ಯೆ 46.)

**ಎ) ಬ್ರಹ್ಮಚರ್ಯೆ (ಕನ್ಯಾವ್ರತ) :**

ಸ್ವರ್ಗ ಸಾಮ್ರಾಜ್ಯಕ್ಕಾಗಿ ಸ್ವಂತ ಇಚ್ಛೆಯಿಂದ ಕೈಗೊಂಡ ಬ್ರಹ್ಮಚರ್ಯೆ ದೇವರ ವಿಶೇಷ ವರದಾನವಾಗಿದೆ. ಅದು ವ್ಯಕ್ತಿಯ ಹೃದಯ ಸ್ವತಂತ್ರವಾಗಿ ದೇವರನ್ನು ಮತ್ತು ಪರಮಾನವರನ್ನು ಪ್ರೀತಿಸುವಂತೆ ಪ್ರಜ್ವಲಿಸುತ್ತದೆ. ಈ ವ್ರತ ಪ್ರಭು ಕ್ರಿಸ್ತರನ್ನು ಮತ್ತು ಧರ್ಮಸಭೆಯನ್ನು ಸಂಪೂರ್ಣ ಸೇವಾ ಜೀವನದಿಂದ ಸಮರ್ಪಿಸಿಕೊಳ್ಳುವ ಸಾಧನವಾಗಿದೆ. ದೈವೀ ಸಾಮ್ರಾಜ್ಯವನ್ನು ಪ್ರಸ್ತುತ ಕಾಲದಲ್ಲಿ ಸಂಪೂರ್ಣವಾಗಿ ಅಂಗೀಕರಿಸುವ ಸಂಕೇತವೂ ಆಗಿದೆ. ಆದುದರಿಂದ ಧಾರ್ಮಿಕ ವ್ಯಕ್ತಿಗಳು ತಾವು ಕೈಗೊಂಡಿರುವ ಬ್ರಹ್ಮಚರ್ಯೆ ವ್ರತಕ್ಕೆ ಪ್ರಾಮಾಣಿಕವಾಗಿ ನಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಅದರ ಅನುಸರಣೆಗೆ ಸ್ವಂತ ಶಕ್ತಿಯಲ್ಲಿ ನಂಬಿಕೆ ಇಡದೆ ದೇವರ ನೆರವಿನಲ್ಲಿ ಭರವಸೆಯಿಡುತ್ತಾರೆ. ದೇಹದಂಡನೆ, ಇಂದ್ರೀಯ ನಿಗ್ರಹಣೆಯಂತಹ ಅಭ್ಯಾಸದಿಂಧ ತಮ್ಮ ನಿಯಂತ್ರಣ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಹೀಗಿರುವಲ್ಲಿ ಬ್ರಹ್ಮಚರ್ಯೆ ಅಸಾಧ್ಯ, ಹಾನಿಕರ, ಅಮಾನುಷ ಎಂಬ ಅಭಿಪ್ರಾಯ ಸಹಜವಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ಧಾರ್ಮಿಕ ವ್ಯಕ್ತಿಗಳು ಮಾನಸಿಕವಾಗಿ ಸಿದ್ಧ ಮನಸ್ಕರಾಗಿ ದೇವರಿಗೆ ತಮ್ಮನ್ನೇ ಸಮರ್ಪಿಸುವುದರಿಂದ ಶುದ್ಧ ಮತ್ತು ಸಿದ್ಧ ವ್ಯಕ್ತಿಗಳಾಗುತ್ತಾರೆ. ಪ್ರೀತಿ ಮತ್ತು ಸಂತೃಪ್ತಿಯ ಸೋದರ ಸಭಾ ಜೀವನದಲ್ಲಿ ಅವರು ಸ್ವರ್ಗಸುಖವನ್ನು ಅನುಭವಿಸುತ್ತಾರೆ. ಬ್ರಹ್ಮಚಾರಿಗಳು ಮಾನವ ಸಹಜವಾದ ಆಶೆ ಆಕಾಂಕ್ಷೆ ಲೌಕಿಕ ಅಮಿಷಗಳನ್ನು ನಿಯಂತ್ರಿಸಬೇಕಾಗುತ್ತದೆ. ಆದುದರಿಂದಲೇ ಈ ವ್ರತವನ್ನು ಸ್ವೀಕರಿಸಿ ಅದರಲ್ಲಿ ನಿರಂತರವಾಗಿ ನಿಲ್ಲುವ ಸಂಕಲ್ಪವನ್ನು ರುಜುಪಡಿಸುವವರೆಗೂ ಅದನ್ನು ಅಂಗೀಕರಿಸಲು ಅನುಮತಿ ಕೊಡಲಾಗುವುದಿಲ್ಲ.

**ಬಿ) ದಾರಿದ್ರ್ಯ :**

ಸ್ವಂತ ಚಿತ್ತದಿಂದ ದಾರಿದ್ರ್ಯ ವ್ರತವನ್ನು ಧಾರ್ಮಿಕ ವ್ಯಕ್ತಿಗಳು ಅಂಗೀಕರಿಸುತ್ತಾರೆ. ಇದು ಪ್ರಭು ಕ್ರಿಸ್ತರನ್ನು ಅನುಕರಿಸುವ ಚಿಹ್ನೆಯೆಂದು ಮಾನ್ಯತೆ ಪಡೆದಿದೆ. ಕ್ರೈಸ್ತ ದಾರಿದ್ರ್ಯವೆಂದರೆ



ಅವರನ್ನು ಧರ್ಮಸಭೆಯ ಸೇವೆಗೆ ಅರ್ಹರನ್ನಾಗಿ ಮಾಡುತ್ತದೆ. ಆದುದರಿಂದ ಪ್ರತಿಯೊಬ್ಬ ಧಾರ್ಮಿಕ ವ್ಯಕ್ತಿ ದೇವರೊಬ್ಬರನ್ನೇ ಎಲ್ಲಕ್ಕೂ ಮಿಗಿಲಾಗಿ ಅರಸಬೇಕು. ದೇವರಲ್ಲೇ ತಮ್ಮ ಹೃದಯವನ್ನು ಕೇಂದ್ರೀಕರಿಸುವ ಧ್ಯಾನಪರತೆಯನ್ನು ಸಾಧಿಸಬೇಕು. ದೇವರ ಸಾಮ್ರಾಜ್ಯವನ್ನು ಸಾರುವ ಮನೋಭಾವ ಅವರಲ್ಲಿ ಬೇರೂರಿರಬೇಕು.

ಅವರ ದೈವ ಪ್ರೀತಿ ಪರಪ್ರೀತಿಗೆ ಅರ್ಥವನ್ನು ಶಕ್ತಿಯನ್ನು ತುಂಬಿಸುತ್ತದೆ. ಈ ಪ್ರೀತಿ ಲೋಕ ರಕ್ಷಣಾ ಕಾರ್ಯಕ್ಕೆ ನೆರವಾಗುತ್ತದೆ. ಧಾರ್ಮಿಕ ವ್ಯಕ್ತಿಗಳು ಚಿಕ್ಕಮಕ್ಕಳಂತೆ ತಮ್ಮ ಪಾಲಕರೊಂದಿಗೆ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕು. ಅವರು ಕಾಯಾ, ವಾಚಾ, ಮನಸಾ ಧರ್ಮಸಭೆಯೊಂದಿಗೆ ಒಂದಾಗಿರಬೇಕು ಮತ್ತು ಶುಭಸಂದೇಶ ಪ್ರಸಾರಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕು.

**ಧಾರ್ಮಿಕ ಸಭೆಗಳ ನವೀಕರಣ :**

ಎ) ಅನುಭಾವಿ ಧ್ಯಾನಪರ ಸಭೆಗಳು : ಧರ್ಮಸಭೆಯಲ್ಲಿರುವ ಧಾರ್ಮಿಕ ಸಭೆಗಳಲ್ಲಿ ಕೆಲವು ಸಂಪೂರ್ಣ ಅನುಭಾವಿ ಧ್ಯಾನಪರ ಸಭೆಗಳು. ಕ್ರಿಯಾತ್ಮಕ ಪ್ರೇಷಿತ ಸಭೆಗಳ ಅಗತ್ಯ ಎಷ್ಟೇ ಇದ್ದರೂ ಧ್ಯಾನಪರ ಸಭೆಗಳಿಗೆ ವಿಶಿಷ್ಠ ಗೌರವ ಸ್ಥಾನವಿದೆ. ಅವು ಕ್ರಿಸ್ತರ ಆತ್ಮಿಕ ಶರೀರವಾದ ಧರ್ಮಸಭೆಯ ಅವಿಭಾಜ್ಯ ಅಂಗಗಳು. ಅವು ಧರ್ಮಸಭೆಯ ಮಹಿಮೆ ಮತ್ತು ಸ್ವರ್ಗೀಯ ವರಪ್ರಸಾದದ ಚಿಲುಮೆಯಾಗಿವೆ.

ಬಿ) ಮಠವಾಸಿ ಸಭೆಗಳು : ದೇವರ ಮಹಿಮಾ ಸೇವೆಗೆ ಸಮರ್ಪಿತವಾದ ಮಠವಾಸಿ ಸಮುದಾಯಗಳಿಗೆ ಧರ್ಮಸಭೆಯಲ್ಲಿ ವಿಶಿಷ್ಠ ಸ್ಥಾನಮಾನವಿದೆ. ಈ ಸಭೆಗಳು ಕ್ರೈಸ್ತ ಭಕ್ತರಿಗೆ ಆಧ್ಯಾತ್ಮಿಕತೆಯ ಆದರ್ಶವಾಗುವಂತೆ ಪ್ರೋತ್ಸಾಹಿಸಲಾಗಿದೆ.

ಸಿ) ಪ್ರೇಷಿತರ ಸಭೆಗಳು : ವಿಶಿಷ್ಠ ಪ್ರೇಷಿತ ಸೇವೆಯನ್ನು ತಮ್ಮ ಗುರಿಯನ್ನಾಗಿಟ್ಟುಕೊಂಡು ಶ್ರಮಿಸುವ ಧಾರ್ಮಿಕ ಸಭೆಗಳಿವೆ. ಧರ್ಮಸಭೆಯ ಹೆಸರಿನಲ್ಲಿ ವಹಿಸಿಕೊಂಡ ಕೆಲಸ ಕಾರ್ಯಗಳನ್ನು ಈ ಸಭೆಗಳು ನಿಷ್ಠೆಯಿಂದ ನೆರವೇರಿಸುತ್ತವೆ. ಇದರ ಧಾರ್ಮಿಕ ಜೀವನ ಪ್ರೇಷಿತ ಮನೋಭಾವದಿಂದ ಪ್ರೇರಿತವಾಗಿದೆ. ಅವರ ಪ್ರೇಷಿತತತ್ವವೂ ಪ್ರಭು ಕ್ರಿಸ್ತರೊಂದಿಗೆ ಅವರಿಗಿರುವ ಅನ್ಯೋನ್ಯತೆಯಿಂದ ಹೊರ ಹೊಮ್ಮುತ್ತದೆ.

ಡಿ) ಲೌಕಿಕ ಧಾರ್ಮಿಕ ಸಭೆಗಳು : ಇನ್ನೂ ಕೆಲವು ಧಾರ್ಮಿಕ ಸಭೆಗಳು ಶ್ರೀ ಸಾಮಾನ್ಯರಂತೆ ಲೋಕದಲ್ಲಿ ಜೀವಿಸುತ್ತಿದ್ದರೂ ತ್ರೈವ್ರತಗಳಿಂದ ಬಂಧಿತವಾಗಿರುತ್ತವೆ. ಅವರು ಪರಿಪೂರ್ಣ ಪ್ರೀತಿಯಿಂದ ದೇವರಿಗೆ ತಮ್ಮನ್ನೇ ಪ್ರತಿಷ್ಠಾಪಿಸಿಕೊಳ್ಳುತ್ತಾರೆ. ಅವರ ವ್ರತ ನಿವೇದನೆ ಮತ್ತು ಸಮರ್ಪಣೆಯನ್ನು ಧರ್ಮಸಭೆ ಅಂಗೀಕರಿಸುತ್ತದೆ. ಅವರು ಈ ಲೋಕದಲ್ಲಿ ಹುದುಗಾಗಿ ಕ್ರಿಸ್ತರ ಶರೀರವಾದ ಧರ್ಮಸಭೆಯ ಬೆಳವಣಿಗೆಗೆ ನೆರವಾಗುತ್ತಾರೆ.

ಕೇವಲ ಮತದ ಮುಖ್ಯಸ್ಥರ ಅನುಮತಿಯನ್ನು ಪಡೆದು ವಸ್ತುಗಳನ್ನು ಉಪಯೋಗಿಸುವುದು ಎಂದು ಅರ್ಥವಲ್ಲ. ನಿಜವಾದ ಬಡತನ ಮನಸ್ಸಿನಲ್ಲೂ ನಡವಳಿಕೆಯಲ್ಲೂ ಬಡವರಾಗಿ ಜೀವಿಸುವುದರಲ್ಲಿ ಅಡಕವಾಗಿದೆ. ಅವರು ತಮ್ಮ ಸ್ವಂತ ಜೀವನೋಪಾಯಕ್ಕಾಗಿ ದುಡಿಯಬೇಕಾಗುತ್ತದೆ. ಆದರೆ ಅದಕ್ಕೆ ಮಿತಿ ಮೀರಿದ ಗಮನಕೊಡದೆ ಪರಲೋಕದಲ್ಲಿರುವ ತಂದೆ ದೇವರ ಪರಾಮರಿಕೆಯಲ್ಲಿ ನಂಬಿಕೆಯಿಟ್ಟು ಐಹಿತ ವಸ್ತುಗಳ ಅರಸುವ ಮನೋಭಾವವನ್ನು ತೊರೆಯುತ್ತಾರೆ.

**ಸಿ) ವಿಧೇಯತೆ :**

ಸ್ವಂತ ಚಿತ್ತದಿಂದ ಧಾರ್ಮಿಕ ವ್ಯಕ್ತಿಗಳು ವಿಧೇಯತೆಯನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸುತ್ತಾರೆ. ಈ ಸಮರ್ಪಣೆಯಿಂದ ಅವರು ಶಾಶ್ವತವಾಗಿ ಮತ್ತು ಸುರಕ್ಷಿತವಾಗಿ ದೇವರ ರಕ್ಷಣಾ ಚಿತ್ತಕ್ಕೆ ಶರಣಾಗುತ್ತಾರೆ. ಅವರು ದೇವರ ಸ್ಥಾನದಲ್ಲಿರುವ ಮಠದ ಮುಖ್ಯಸ್ಥರಿಗೆ ಪವಿತ್ರಾತ್ಮರ ಪ್ರೇರಣೆಯ ಪ್ರಕಾರ ವಿಶ್ವಾಸದಿಂಧ ವಿಧೇಯರಾಗುತ್ತಾರೆ. ಹೀಗೆ ಪಿತದೇವರ ಚಿತ್ತವನ್ನು ನೆರವೇರಿಸಲು ಈ ಲೋಕಕ್ಕೆ ಒಂದು ದಾಸನ ಸ್ವಭಾವ ತಳೆದು ಯಾತನೆಯಲ್ಲಿ ವಿಧೇಯತೆಯನ್ನು ಪ್ರಭು ಕ್ರಿಸ್ತರು ಕಲಿತರು. ಈ ಪ್ರಭುವಿನ ಆದೇಶವನ್ನು ಧಾರ್ಮಿಕ ವ್ಯಕ್ತಿಗಳು ಅನುಸರಿಸುತ್ತಾರೆ. ಪ್ರಭು ಕ್ರಿಸ್ತರು ಪಿತ ದೇವರಿಗೆ ವಿಧೇಯರಾಗಿ ತಮ್ಮ ಸಹೋದರರಿಗೆ ಸೇವೆ ಸಲ್ಲಿಸಿದರು. ಧಾರ್ಮಿಕ ವ್ಯಕ್ತಿಗಳೂ ಸಹ ತಮ್ಮ ಹಿರಿಯರಿಗೆ ವಿಧೇಯರಾಗಿ ಧರ್ಮಸಭೆಯ ಸೇವೆಗೆ ಬದ್ಧರಾಗಿರುತ್ತಾರೆ. ಅವರು ಅನ್ಯೋನ್ಯತೆಯಿಂದ ದೈವ ಯೋಜನೆಯ ಪ್ರಕಾರ ಧರ್ಮಸಭೆಯ ಬೆಳವಣಿಗೆಗೆ ನೆರವಾಗುತ್ತಾರೆ. ಅವರು ಜ್ಞಾನ ಮತ್ತು ಇಚ್ಛಾಶಕ್ತಿಯನ್ನು ಪ್ರಕೃತಿ ಸಹಜ ಕುಶಲತೆ ಮತ್ತು ದೈವೀ ಕೊಡುಗೆ ವರದಾನಗಳನ್ನು ಬೆಳಸಿ ತಮಗೆ ವಹಿಸಿದ ಕರ್ತವ್ಯಗಳನ್ನು ಈಡೇರಿಸುತ್ತಾರೆ. ಇಂಥಹ ಅರಿವಿನ ಮತ್ತು ಅರ್ಥಭರಿತ ವಿಧೇಯತೆ ಮಾನವ ಘನತೆಯನ್ನು ಖಂಡಿಸದೆ ಅದನ್ನು ಪ್ರವರ್ಧಮಾನಕ್ಕೆ ಏರಿಸುತ್ತದೆ.

ಧಾರ್ಮಿಕ ಸಭೆಗಳ ಮುಖ್ಯಸ್ಥರು ತಾವು ದೇವರ ಚಿತ್ತವನ್ನು ಹರಿಸುವ ಕಾಲುವೆಗಳು ಎಂದು ಅರಿತು ತಮ್ಮ ಅಧೀನದಲ್ಲಿರುವ ಮಠವಾಸಿಗಳಿಗೆ ದೇವರ ಚಿತ್ತ ಏನೆಂಬುದನ್ನು ಉದಾರ ಮನಸ್ಸಿನಿಂದ ಮತ್ತು ಕರ್ತವ್ಯ ನಿಷ್ಠೆಯಿಂದ ಕಂಡು ಕೊಳ್ಳುತ್ತಾರೆ. ಅವರು ತಮ್ಮ ಅಧಿಕಾರವನ್ನು ಸೇವಾಮನೋಭಾವದಿಂದ ಚಲಾಯಿಸುತ್ತಾರೆ. ಹೀಗೆ ದೇವರಿಗೆ ತಮ್ಮ ಮಕ್ಕಳ ಮೇಲಿರುವ ವಾತ್ಸಲ್ಯವನ್ನು ಪ್ರತಿಬಿಂಬಿಸುತ್ತಾರೆ. ಮುಖ್ಯಸ್ಥರು ತಮ್ಮ ಅಧೀನದಲ್ಲಿರುವವರು ಮಾನವರು ಮತ್ತು ದೇವರ ಮಕ್ಕಳು ಎಂಬುದನ್ನು ಅರಿತು ಅವರ ಮಾನವ ಘನತೆಯನ್ನು ಸಂರಕ್ಷಿಸುತ್ತಾರೆ. ಧಾರ್ಮಿಕ ಮುಖ್ಯಸ್ಥರು ತಮ್ಮ ಅಧೀನದಲ್ಲಿರುವ ಧಾರ್ಮಿಕರಿಗೆ ಸ್ವಯಂ ಸಹಕಾರವನ್ನು ಪಡೆಯುವುದರಲ್ಲಿ ನವೀಕರಣ ಅಡಕವಾಗಿದೆ. ಹೀಗೆ ವಿಧೇಯತೆ ಜವಾಬ್ದಾರಿಯುತವೂ ತಮ್ಮ ಅರ್ಥಭರಿತವೂ ಆಗುವುದು.

## ಸಭಾ ಜೀವನ

ಧಾರ್ಮಿಕ ಸಭೆಗಳು ಒಂದೇ ಗುರಿಯನ್ನು ಮುಟ್ಟಲು ಒಗ್ಗಟ್ಟಿನಿಂದ ಸಾಮಾನ್ಯ ಸಭಾ ಜೀವನವನ್ನು ನಡೆಸುತ್ತಾರೆ. ಈ ಸಭಾ ಜೀವನ ಶುಭಸಂದೇಶದ ಬೋಧನೆಯಲ್ಲಿ ತನ್ನ ಮೂಲವನ್ನು ಹೊಂದಿದೆ. ಆದಿ ಧರ್ಮಸಭೆಯಲ್ಲಿ ಕ್ರೈಸ್ತರು ಒಂದೇ ಹೃದಯ ಆತ್ಮವುಳ್ಳವರಾಗಿ



ಐಕ್ಯಮತ್ಯದ ಜೀವನಕ್ಕೆ ಮಾದರಿಯಾಗಿದ್ದರು. ಈ ಸಭಾದರ್ಶ ದೈವಾರಾಧನಾ ವಿಧಿಯಲ್ಲಿ ಪ್ರಮುಖವಾಗಿ ಪರಮ ಪ್ರಸಾದದ ಆಚರಣೆ, ಸಭಾ ಪ್ರಾರ್ಥನೆಯಲ್ಲಿ, ಅಡಕವಾಗಿದ್ದವು. ಈ ಭಾವನೆ ಪರಸ್ಪರ ಗೌರವ, ಸೋದರ ಸಹಕಾರದಲ್ಲಿ ವ್ಯಕ್ತವಾಗುತ್ತಿದ್ದವು. ಈ ಸಭೆಯ ಸದಸ್ಯರೆಲ್ಲರೂ ಸಮಾನ ಹಕ್ಕು ಬಾಧ್ಯತೆ ಮತ್ತು ಕರ್ತವ್ಯವುಳ್ಳವರಾಗಿದ್ದರು. ಅವರು ದೇವರ ಪ್ರೀತಿಯಿಂದ ಒಂದುಗೂಡಿರುವ ವಾಸ್ತವ ಕುಟುಂಬವಾಗಿದ್ದಾರೆ. ಈ ದೈವ ಪ್ರೀತಿಯನ್ನು ಎಲ್ಲಾ ನೀತಿ ನಿಯಮದ ಸಾರವು ಸರ್ವರನ್ನು ಒಗ್ಗೂಡಿಸುವ ಬಂಧನವೂ, ಪರಸ್ಪರ ಪ್ರೀತಿ ಭಾವನೆ ಪ್ರೇಷಿತ ಕೆಲಸ ಕಾರ್ಯಗಳ ಚೇತನವೂ ಆಗಿದೆ.

# ಭಾಗ IV

## ಕೆಲವು ಸಾಮಾನ್ಯ ಸೂಚನೆಗಳು :

### ಧಾರ್ಮಿಕ ಉಡುಪು :

ಧಾರ್ಮಿಕ ಸಭೆಯ ಸದಸ್ಯರು ತಮ್ಮ ಪ್ರತ್ಯೇಕ ಉಡುಪಿನಿಂದ ದೇವರಿಗೆ ಸಮರ್ಪಿತರಾದವರು ಎಂಬುದನ್ನು ಸೂಚಿಸುತ್ತಾರೆ. ಉಡುಪಿನಿಂದ ಅವರು ವ್ಯತಿರಿಕ್ತವಾದರೂ ಅದು ಸರಳವೂ ಸಭ್ಯವು ಆಗಿದ್ದು ತಾವು ಸೇವೆ ಸಲ್ಲಿಸುತ್ತಿರುವ ಸಮಯ ಮತ್ತು ಸ್ಥಳಗಳಿಗೆ ಅನುಗುಣವಾಗಿರಬೇಕು. ಈ ವಸ್ತ್ರ ಆರೋಗ್ಯ ಪಾಲನೆಯನ್ನು ಕಡೆಗಣಿಸಬಾರದು.

### ಧಾರ್ಮಿಕ ಕರೆಗಳ ಪೋಷಣೆ :

ಧಾರ್ಮಿಕ ಜೀವನ ಧರ್ಮಸಭೆಯ ಸ್ವಭಾವಕ್ಕೆ ಪ್ರಮುಖ ಸಾಕ್ಷಿಯಾಗಿದೆ ಮಾತ್ರವಲ್ಲ ಅದರ ಸೇವಾ ನಿಯೋಗದ ಮೇಲೂ ಪರಿಣಾಮಕಾರಿಯಾಗಿದೆ. ಆದುದರಿಂದ ಎಲ್ಲರೂ ಧಾರ್ಮಿಕ ಕರೆಯೋಣಗಳನ್ನು ಉತ್ಪನ್ನ ಮಾಡಲು ಪೋಷಿಸಲು ಗಂಭೀರ ಪ್ರಯತ್ನವನ್ನು ಮಾಡಬೇಕು. ವಿಶೇಷವಾಗಿ ಯಾಜಕರು ಮತ್ತು ಕ್ರೈಸ್ತ ಶಿಕ್ಷಕರು ಧಾರ್ಮಿಕ ಜೀವನಕ್ಕೆ ಬಂದಿರುವ ಅಭ್ಯರ್ಥಿಗಳನ್ನು ಪ್ರೋತ್ಸಾಹಿಸಬೇಕು. ಈ ಕರೆಯೋಣಗಳು ಯಾಜಕತ್ವ, ಧಾರ್ಮಿಕ ಸಹೋದರ ಅಥವಾ ಸಹೋದರಿಯರದಾಗಿರಬೇಕು. ಈ ಕರೆಯೋಣಗಳ ಸೊಬಗು ಮತ್ತು ಮಹತ್ವದ ಬಗ್ಗೆ ಆಗಾಗ ಪ್ರಬೋಧನೆಯನ್ನು ನೀಡಬೇಕು. ಜನ್ಮದಾತರು ಕ್ರೈಸ್ತ ಸುಗುಣಗಳು ಮಕ್ಕಳ ಹೃದಯಗಳಲ್ಲಿ ಮೊಳೆಯುವಂತೆ ಬೆಳೆಯುವಂತೆ ಮಾಡಿದರೆ ಕರೆಯೋಣಗಳು ಉತ್ಪನ್ನವಾಗುತ್ತವೆ. ಧಾರ್ಮಿಕ ವ್ಯಕ್ತಿಗಳಿಗೂ ಈ ದಿಸೆಯಲ್ಲಿ ತಮ್ಮ ಪರಿಚಯವನ್ನು ಜನರಿಗೆ ಮಾಡಿಕೊಡಬೇಕು. ಈ ಧಾರ್ಮಿಕ ವ್ಯಕ್ತಿಗಳ ಜೀವನ ಶೈಲಿ, ರೀತಿ ನೀತಿ ಅಭ್ಯರ್ಥಿಗಳನ್ನು ಆಯಸ್ಕಾಂತದಂತೆ ಆಕರ್ಷಿಸುತ್ತದೆ. ಅವರೂ ಅಭ್ಯರ್ಥಿಗಳನ್ನು ಪರಿಶೀಲಿಸಿ ಯೋಗ್ಯರಾದವರನ್ನು ಮಾತ್ರ ಆಯ್ಕೆ ಮಾಡಬೇಕು.

### ಧಾರ್ಮಿಕ ವ್ಯಕ್ತಿಗಳ ತರಬೇತಿ :

ಸನ್ಯಾಸ ಜೀವನದಲ್ಲಿ ಹೊಂದಾಣಿಕೆ ಮತ್ತು ನವೀಕರಣವಾಗಬೇಕಾದರೆ ಧಾರ್ಮಿಕ ವ್ಯಕ್ತಿಗಳ ಸೂಕ್ತ ತರಬೇತಿ ಅಗತ್ಯವೆಂದು ವ್ಯಾಟಿಕನ್ ಸಮ್ಮೇಳನ ಅಭಿಪ್ರಾಯಪಡುತ್ತದೆ. ಈ ತರಬೇತಿಗೆ ಧಾರ್ಮಿಕ ಮುಖ್ಯಸ್ಥರು ಗಮನಕೊಡಬೇಕು. ನವದೀಕ್ಷಿತತ್ವ ಅಂದರೆ ನೊವಿಷಿಯೆಟ್

# VIII ಯಾಜಕತ್ವದ ತರಬೇತಿ
## (ಶಾಸನ)

ಇಡೀ ಧರ್ಮಸಭೆ ಗುರುಗಳ ಸೇವಾವೃತ್ತಿಯನ್ನು ಅವಲಂಬಿಸಿದೆ. ಯಾಜಕತ್ವದ ಶಿಕ್ಷಣ ಇಂದಿನ ಬದಲಾದ ಪರಿಸರಕ್ಕೆ ಹೊಂದಾಣಿಕೆಯಾಗಿರಬೇಕು ಎಂದು ವ್ಯಾಟಿಕನ್ ಸಮ್ಮೇಳನ ಅಭಿಪ್ರಾಯ ಪಡುತ್ತದೆ. ಈ ಕೆಳಗಿನ ವಿಧಿ ನಿಯಮಗಳು ನೇರವಾಗಿ ಧರ್ಮಕ್ಷೇತ್ರದ ಗುರುಗಳಿಗಾಗಿ ರೂಪಿಸಿದ್ದರೂ, ಯಾಜಕತ್ವಕ್ಕೆ ತರಬೇತಿಯನ್ನೀಯುವ ಸರ್ವರೂ ಇವುಗಳನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಬಳಸಿಕೊಳ್ಳಬಹುದು.

### 1. ಯಾಜಕ ತರಬೇತಿಯ ಕಾರ್ಯಕ್ರಮ :

ಈ ತರಬೇತಿಯನ್ನು ಪ್ರತಿ ದೇಶ ಅಥವ ಭಿನ್ನವಿಧಿ ಸಭೆಗಳು ಕೈಗೊಳ್ಳಬೇಕಾದರೆ ಯೋಜನೆಗಳನ್ನು ಧರ್ಮಾಧ್ಯಕ್ಷ ಸಮಿತಿ ಸಮ್ಮೇಳನಗಳು ನಿರ್ದಿಷ್ಟಗೊಳಿಸಬೇಕು. ಈ ಯೋಜನೆಗಳನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿ ಪ್ರೇಷಿತ ಪೀಠದ ಅನುಮತಿಯನ್ನು ಪಡೆಯಬೇಕು. ಹೀಗೆ ಸಾರ್ವತ್ರಿಕ ಧರ್ಮಸಭೆಯ ನಿಯಮಗಳನ್ನು ಪ್ರತ್ಯೇಕ ಪರಿಸರಕ್ಕೆ ತಕ್ಕಂತೆ ಕಾಲ ಮತ್ತು ಭಾವಿ ಗುರುಗಳು ಸೇವೆ ಸಲ್ಲಿಸುವ ಪ್ರದೇಶಗಳನ್ನೂ ಪಾಲನಾ ಅಗತ್ಯಗಳನ್ನೂ ಗಮನಿಸಿ ಹೊಂದಿಸಿಕೊಳ್ಳತಕ್ಕದ್ದು.

### 2. ಯಾಜಕ ಕರೆಗಳಿಗೆ ತ್ವರಿತ ಕ್ರಿಯಾ ಯೋಜನೆ :

**ಎ) ದೈವಿಕ ಕರೆಗಳನ್ನು ಕಂಡುಕೊಳ್ಳುವುದೆಲ್ಲಿ ?**

ಇಡೀ ಕ್ರೈಸ್ತ ಸಮುದಾಯದಲ್ಲಿ ವಿಶೇಷವಾಗಿ ಒಳ್ಳೆಯ ಕ್ರೈಸ್ತ ಕುಟುಂಬಗಳಲ್ಲಿ ದೈವೀಕರೆಗಳನ್ನು ಕಂಡುಕೊಳ್ಳಬಹುದು.ಕುಟುಂಬಗಳು ದೈವ ಕರೆಯೋಣದ "ಸಸಿ ಪಾತಿ" ಗಳು.

**ಬಿ) ಈ ಕರೆಗಳನ್ನು ಪೋಷಿಸುವುದು ಹೇಗೆ ?**

ಸಂಪೂರ್ಣ ಕ್ರೈಸ್ತ ಜೀವನಾದರ್ಶ ಧರ್ಮಕೇಂದ್ರದ ಫಲಭರಿತ ಜೀವನದಲ್ಲಿ ಕ್ರಿಯಾತ್ಮಕ ಪಾಲ್ಗೊಳ್ಳುವಿಕೆ. ಯುವ ಜನರಲ್ಲಿ ವಿಶ್ವಾಸ, ಪ್ರೀತಿಯ ಮನೋಭಾವನೆ ಮತ್ತು ಕರ್ತವ್ಯ ನಿಷ್ಠೆಯ ಪ್ರೇರಣೆ.

**ಸಿ) ಯಾಜಕ ಕರೆಯೋಣದ ಪ್ರೇರಣೆ ಯಾರ ಜವಾಬ್ದಾರಿ ?**

ತಮ್ಮ ಕುಟುಂಬವನ್ನು ಕರೆಯೋಣದ "ಸಸಿ ಪಾತಿ" ಯನ್ನಾಗಿ ಮಾಡುವ ಜನ್ಮದಾತರು, ದೈವೀ ಕರೆಯೋಣ ಅಭ್ಯರ್ಥಿಗಳನ್ನು ಕಂಡುಕೊಂಡು ಅವರಿಗೆ ಮಾರ್ಗದರ್ಶನ ನೀಡುವ ಶಿಕ್ಷಕರು ಮತ್ತು ಯುವ ಸಂಘದ ಮುಖ್ಯಸ್ಥರು. ತಮ್ಮ ವೈಯಕ್ತಿಕ ಜೀವನದಿಂದ ಯುವಜನರನ್ನು ಯಾಜಕತ್ವಕ್ಕೆ ಆಕರ್ಷಿಸುವ ಎಲ್ಲಾ ಯಾಜಕರು. ಈ ಎಲ್ಲಾ ಪ್ರಯತ್ನಗಳನ್ನು ಒಂದುಗೂಡಿಸಿ ಯಾಜಕ ಕರೆಯೋಣಕ್ಕೆ ಬೆಂಬಲ ಕೊಡುವ ಧರ್ಮಾಧ್ಯಕ್ಷರು.



ಆದಾಕ್ಷಣ ಅಭ್ಯರ್ಥಿಯನ್ನು ಪ್ರೇಷಿತ ಕಾರ್ಯಕ್ಕೆ ಕಳುಹಿಸಬಾರದು. ಅವರ ಧಾರ್ಮಿಕ ಮತ್ತು ಪ್ರೇಷಿತ ತರಬೇತಿಯನ್ನು ಔದ್ಯೋಗಿಕ ತರಬೇತಿಯೊಂದಿಗೆ ಮುಂದುವರೆಯಬೇಕು. ಆಧುನಿಕ ವಿಶ್ವದಲ್ಲಿ ಪ್ರಚಲಿತವಾಗಿರುವ ಆಚಾರ ವಿಚಾರಗಳ ಬಗ್ಗೆ ಅವರಿಗೆ ಸಾಕಷ್ಟು ಶಿಕ್ಷಣವನ್ನು ನೀಡಬೇಕು. ಸನ್ಯಾಸಿಗಳು ತಮ್ಮ ಜೀವನದಾದ್ಯಂತ ಆಧ್ಯಾತ್ಮಿಕ ಮತ್ತು ಲೌಕಿಕ ಶಿಕ್ಷಣವನ್ನು ಬೆಳೆಸಿಕೊಳ್ಳುತ್ತಿರಬೇಕು. ಹೀಗಾದರೆ ಮಾತ್ರ ಅವರು ಧರ್ಮಸಭೆಯ ಅಗತ್ಯಗಳಿಗೆ ಸಿದ್ಧ ಮನಸ್ಕರಾಗಿ ಸ್ಪಂದಿಸಲು ಶಕ್ತರಾಗುವರು.

### ಧಾರ್ಮಿಕ ಸಭೆಗಳ ಸಂಘ (ಸಂಯೋಗ)ಮತ್ತು ಒಕ್ಕೂಟ :

ಧರ್ಮಸಭೆಯ ನವೀಕರಣದ ಪ್ರಕ್ರಿಯೆಯಲ್ಲಿ ವಿವಿಧ ಧಾರ್ಮಿಕ ಸಭೆಗಳು ಮತ್ತು ಮಠಗಳು ಜೊತೆಗೂಡಿ ಒಂದು ಸಂಸ್ಥೆ ಅಥವ ಸಂಯೋಗವನ್ನು ಸ್ಥಾಪಿಸುವುದು ಉಪಯುಕ್ತ. ಅದರಲ್ಲಿ ಧಾರ್ಮಿಕ ಸಭೆಯ ಸದಸ್ಯರೇ ಇರುವುದರಿಂದ ಕುಟುಂಬ ಭಾವನೆ ಬೆಳೆಯುವುದರಲ್ಲಿ ಅನುಮಾನವಿಲ್ಲ. ಒಂದೇ ಗುರಿ ಉದ್ದೇಶ ಮತ್ತು ಮನೋಭಾವವಿರುವುದರಿಂದ ಈ ಒಕ್ಕೂಟ ಧರ್ಮಸಭೆಯ ಪ್ರಗತಿಗೆ ಸಹಾಯಕವಾಗುತ್ತದೆ.

### ಧಾರ್ಮಿಕ ಮುಖಂಡರ ಸಮ್ಮೇಳನ ಮತ್ತು ಸಮಿತಿಗಳು :

ಧರ್ಮಸಭೆಯ ನವೀಕರಣ ಮತ್ತು ಹೊಂದಾಣಿಕೆಗೆ ಧಾರ್ಮಿಕ ಸಭೆಗಳ ಮುಖಂಡರ ಸಮಿತಿ ಮತ್ತು ಸಮ್ಮೇಳನಗಳು ಸಹಾಯಕವಾಗುತ್ತದೆ. ಧರ್ಮಸಭೆಯ ಅಭಿವೃದ್ಧಿಗೆ ಅವರು ಉತ್ತಮ ಸಹಕಾರ ಬೆಂಬಲವನ್ನು ಸೂಚಿಸುವುದು. ಈ ಸಮಿತಿ ಸಮ್ಮೇಳನಗಳು ಪ್ರೇಷಿತ ಕಾರ್ಯಕಲಾಪಗಳಲ್ಲಿ ಧರ್ಮಾಧ್ಯಕ್ಷರೊಂದಿಗೆ ಕ್ರಿಯಾತ್ಮಕಗೊಳ್ಳಬೇಕು.

### ಸಮಾಪ್ತಿ

ಧಾರ್ಮಿಕ ಸಂಘ ಸಂಸ್ಥೆಗಳು ದೇವರು ಅವರಿಗಿತ್ತ ಕರೆಯೋಣಕ್ಕೆ ಓಗೊಟ್ಟು ಪ್ರಸ್ತುತ ಧರ್ಮಸಭೆಯಲ್ಲಿ ತಮಗಿರುವ ಜವಾಬ್ದಾರಿಯನ್ನು ನಿಷ್ಠೆಯಿಂದ ಉದಾರತೆಯಿಂದ ನಿರ್ವಹಿಸಲೆಂದು ವ್ಯಾಟಿಕನ್ ಸಮ್ಮೇಳನ ಹೊಂದಾಣಿಕೆ ಮತ್ತು ನವೀಕರಣದ ವಿಧಿ ನಿಯಮಗಳನ್ನು ರೂಪಿಸಿದೆ. "ಎಲ್ಲಾ ಧಾರ್ಮಿಕ ವ್ಯಕ್ತಿಗಳು ವಿಶ್ವಾಸದಲ್ಲಿ ಬೇರೂರಿ ದೈವ ಮತ್ತು ಪರಪ್ರೀತಿಯುಳ್ಳವರಾಗಿರಲಿ. ಪವಿತ್ರ ಶಿಲುಬೆಯಲ್ಲಿ ಅವರ ಪ್ರೀತಿ, ಭವಿಷ್ಯದ ಮಹಿಮೆಯಲ್ಲಿ ಅವರ ನಿರೀಕ್ಷೆ, ಇಡೀ ಲೋಕದಲ್ಲಿ ಕ್ರಿಸ್ತರ ಸುವಾರ್ತೆಯನ್ನು ಸಾರಲು ಪ್ರೇರೇಪಿಸಲಿ. ಹೀಗೆ ಅವರ ಸಾಕ್ಷ್ಯವನ್ನು ಎಲ್ಲರೂ ಕಂಡು ಸ್ವರ್ಗದಲ್ಲಿರುವ ಪಿತ ದೇವರನ್ನು ಮಹಿಮೆ ಪಡಿಸಲಿ".

**ಡಿ) ಕರೆಯೋಣಗಳನ್ನು ಪೋಷಿಸುವ ವಿಧಾನಗಳು ಯಾವುವು ?**

ಸರ್ವೇಸಾಧಾರಣ ವಿಧಾನಗಳು ಉದಾ : ಪ್ರಾರ್ಥನೆ, ಪ್ರಬೋಧನೆ, ಇತ್ಯಾದಿ. ಆಧುನಿಕ ಸಂಪರ್ಕ ಸಾಧನಗಳು ಉದಾ: ಮುದ್ರಣ, ಆಕಾಶವಾಣಿ, ಧ್ವನಿಸುರುಳಿ, ದೂರದರ್ಶನ, ದೈವ ಕರೆಯ ಬಗ್ಗೆ ಪ್ರದರ್ಶನಗಳು ಇತ್ಯಾದಿ.

**ವಿ.ಸೂ.:** ಈ ಕಾರ್ಯಕ್ರಮಗಳನ್ನು ಕೇವಲ ಒಂದು ಧರ್ಮಕ್ಷೇತ್ರ, ದೇಶ, ಧಾರ್ಮಿಕಸಭೆ ಅಥವಾ ವಿಭಿನ್ನ ವಿಧಿ ಸಭೆಗೆ ಸೀಮಿತಗೊಳಿಸದೆ ಸದಾ ವಿಶಾಲ ಮತ್ತು ಪಾರದರ್ಶಕ ಮನೋಭಾವದಿಂದ ಮಾಡತಕ್ಕದ್ದು.

**ಇ) ಕಿರಿಯ ಗುರುಮಠ ಎಂದರೇನು ?**

ದೈವ ಕರೆಯೋಣದ ಸಸಿಗಳನ್ನು ಬೆಳೆಸಲು ಸ್ಥಾಪಿಸಿರುವ ಸಂಸ್ಥೆಗಳೇ ಕಿರಿಯ ಗುರು ಮಠಗಳು.

**ಈ) ಸಸಿಗಳನ್ನು ಬೆಳೆಸುವುದೇಗೆ ?**

ಯಾಜಕತ್ವವನ್ನು ಗಮನದಲ್ಲಿರಿಸಿ ಅಭ್ಯರ್ಥಿಗೆ ವಿಶೇಷ ಧಾರ್ಮಿಕ ಶಿಕ್ಷಣ ಕೊಡುವುದರಿಂದ ಜನ್ಮದಾತರ ಸೂಕ್ತ ಸಹಕಾರದಿಂದ ಅಭ್ಯರ್ಥಿಯ ವಯಸ್ಸು, ನಡತೆ, ಬೆಳವಣಿಗೆ ಮತ್ತು ಮಾನಸಿಕ ಆರೋಗ್ಯವನ್ನು ದೈನಂದಿನ ಕಾರ್ಯಕ್ರಮಗಳೊಂದಿಗೆ ನಿಯಂತ್ರಿಸುವುದರ ಮುಖಾಂತರ. ಅಭ್ಯರ್ಥಿಯ ಕುಟುಂಬದ ಸದಸ್ಯರೊಂದಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪರ್ಕವನ್ನು ಮುಂದುವರಿಸುವುದರ ಮುಖಾಂತರ. ಹಿರಿಯ ಗುರುಮಠದ ವಿನ್ಯಾಸ, ರೀತಿ ನೀತಿ ನಿಯಮ ಗೊತ್ತು ಗುರಿಗಳನ್ನು ಹೊಂದಿಸಿಕೊಳ್ಳುವುದರ ಮುಖಾಂತರ.

**ವಿ.ಸೂ.:**

1) ಒಂದು ವೇಳೆ ಕಿರಿಯ ಗುರುಮಠದ ಶಿಕ್ಷಣಾ ಕಾರ್ಯಕ್ರಮ ಅಭ್ಯರ್ಥಿಗಳಿಗೆ ಬೇರೆ ಯಾವ ಜೀವನ ಅಂತಸ್ತನ್ನು ಆಯ್ಕೆ ಮಾಡಿಕೊಳ್ಳಲು, ಮುಂದುವರಿಸಲೂ ಸಾಧ್ಯವಾಗುವಂತೆ ರೂಪಿಸತಕ್ಕದ್ದು.

2) ನಾವು ವಯಸ್ಕ ಅಭ್ಯರ್ಥಿಗಳ ಶಿಕ್ಷಣಕ್ಕೆ ಗಮನವೀಯುತ್ತಿರುವಾಗ ವಯಸ್ಸು ಮೀರಿದ ಗುರು ಅಭ್ಯರ್ಥಿಗಳಿಗೂ ತರಬೇತಿ ನೀಡಲು ಈ ಅವಕಾಶವನ್ನು ಕಲ್ಪಿಸುವ ಶಾಲಾ ಸಂಸ್ಥೆಗಳ ಅಭಿವೃದ್ಧಿಗೂ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

## 3. ಹಿರಿಯ ಗುರುಮಠಗಳು:

ಹಿರಿಯ ಗುರುಮಠಗಳು ಯಾಜಕ ತರಬೇತಿಗೆ ಅತ್ಯವಶ್ಯಕ. ಇಲ್ಲಿ ಕೊಡಲಾಗುವ ಎಲ್ಲ ತರಬೇತಿ ಪಾಲನಾ ಪ್ರೇಷಿತತ್ವ ಅಭಿಮುಖವಾಗಿರಬೇಕು. ಇಲ್ಲಿಂದ ಗುರು ಅಭ್ಯರ್ಥಿಗಳನ್ನು ಕ್ರಿಸ್ತರ ಪರಿಚಯ ಮಾಡಿಸಲು ಕಳುಹಿಸಿಕೊಡಬೇಕು. ಅವರು ಅಲ್ಲಿ "ಕ್ರಿಸ್ತರು ಬಂದದ್ದು ಸೇವೆ ಮಾಡಲು, ಸೇವೆ ಮಾಡಿಸಿ ಕೊಳ್ಳಲು ಅಲ್ಲ. ತಮ್ಮ ಪ್ರಾಣವನ್ನು ಹಲವರಿಗಾಗಿ ಈಡಾಗಿ ಕೊಡಲು" ಎಂಬುದನ್ನು ತಿಳಿಯಪಡಿಸುವಂತಿರಬೇಕು. ಈ ಉದ್ದೇಶವನ್ನು ಕಾರ್ಯಗತ ಮಾಡಲು ಗುರುಮಠದ ಮುಖ್ಯಸ್ಥರು ಮತ್ತು ಉಪನ್ಯಾಸಕ ಮಧ್ಯೆ ಸಂಪೂರ್ಣ ಸಹಕಾರ ಮತ್ತು ಧರ್ಮಾಧ್ಯಕ್ಷರ ಅಧಿಕಾರಕ್ಕೆ ಪೂರ್ಣ ವಿಧೇಯತೆ ಇರಬೇಕು.



**ಗುರು ಅಭ್ಯರ್ಥಿಗಳ ತರಬೇತಿಗೆ ಜವಾಬ್ದಾರಿಯನ್ನು ಹೊರುವವರು ಯಾರು ?**

ಗುರು ಮಠದ ನಿರ್ದೇಶಕರು, ಪರಿಣತ ಉಪನ್ಯಾಸಕರು, ಆಡಳಿತಾಧಿಕಾರಿಗಳು ಮತ್ತು ಶಿಕ್ಷಕರು ಹೊಣೆಗಾರರು. ಇವರು ಧರ್ಮಶಾಸ್ತ್ರದಲ್ಲಿ ದೃಢ ನಂಬಿಗಸ್ತರೂ ಪಾಲನಾ ಪ್ರೇಷಿತತ್ವದಲ್ಲಿ ಪಾಂಡಿತ್ಯವುಳ್ಳವರೂ ಆಗಿರಬೇಕು. ಭಾವೀ ಯಾಜಕರ ಯಶಸ್ಸು ಆಡಳಿತಾಧಿಕಾರಿ ಮತ್ತು ಶಿಕ್ಷಕರ ಚಿಂತನೆ ಮತ್ತು ಕ್ರಿಯಾಶೀಲತೆಯನ್ನು ಅವಲಂಬಿಸಿರುವುದರಿಂದ ಇದರ ಬಗ್ಗೆ ಆಲೋಚಿಸಬೇಕೆಂದು ಈ ಶಾಸನ ಎಚ್ಚರಿಸುತ್ತದೆ. ಗುರುಮಠದ ಮುಖ್ಯಸ್ಥರ ಮೇಲ್ವಿಚಾರಣೆಯಲ್ಲಿ ಆ ಸಮುದಾಯ ಭಾವನೆಯಲ್ಲೂ ನಡೆನುಡಿಯಲ್ಲೂ ಒಮ್ಮನಸ್ಸಿನದಾಗಿರಬೇಕು. ಗುರುಮಠದ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಒಂದೇ ಕುಟುಂಬದ ಸದಸ್ಯರಂತಿರಬೇಕು. ಪ್ರಭು ಕ್ರಿಸ್ತರ ಆಶಯದಂತೆ ಅವರೆಲ್ಲರೂ ಒಂದಾಗಿರಲಿ ಎಂಬ ಪ್ರಶ್ನೆಯನ್ನು ಸಕಾರಾತ್ಮಕವಾಗಿ ಉತ್ತರಿಸುವಂತಿರಬೇಕು. ಹೀಗಾದರೆ ಗುರು ಅಭ್ಯರ್ಥಿಗಳು ತಮ್ಮ ದೈವಕರೆಯ ಬಗ್ಗೆ ಸಂತೋಷ ಭರಿತರಾಗುವರು. ಭವಿಷ್ಯದ ಆತ್ಮ ಪಾಲಕರಾಗುವ ಅಭ್ಯರ್ಥಿಗಳ ಬಗ್ಗೆ ಧರ್ಮಾಧ್ಯಕ್ಷರು ನಿರಂತರ ಒಲವನ್ನೂ ತೋರಬೇಕು. ಧರ್ಮಾಧ್ಯಕ್ಷರು ಗುರು ಅಭ್ಯರ್ಥಿಗಳಿಗೆ ನೈಜ್ಯ ತಂದೆಯಾಗಿರಬೇಕು. ಧರ್ಮಕ್ಷೇತ್ರದ ಎಲ್ಲಾ ಗುರುಗಳು ಗುರುಮಠವನ್ನು ಧರ್ಮಕ್ಷೇತ್ರದ ಹೃದಯವೆಂದು ಪರಿಗಣಿಸಿ ಅದಕ್ಕೆ ಅಗತ್ಯ ಸೇವೆಯನ್ನು ಸಂತೋಷದಿಂದ ಸಲ್ಲಿಸಬೇಕು.

## ಗುರುಮಠದ ಅಭ್ಯರ್ಥಿಯ ಅರ್ಹತೆಗಳೇನು ?

ಯಾಜಕನಾಗುವ ಉದ್ದೇಶ ನೈಜ್ಯವಾಗಿರಬೇಕು. ಈ ಅಂತಸ್ತನ್ನು ಆರಿಸಿಕೊಳ್ಳಲು ಸಂಪೂರ್ಣ ಸ್ವಾತಂತ್ರ್ಯ. ಆಧ್ಯಾತ್ಮಿಕ ಶಕ್ತಿ, ಆರೋಗ್ಯಕರ ನೈತಿಕ ಮನೋದೃಷ್ಟಿ ಮತ್ತು ಮಾನಸಿಕ ಸಬಲತೆ. ಮಾನಸಿಕ ಮತ್ತು ದೈಹಿಕ ಆರೋಗ್ಯ, ವಂಶೀಯ ರೋಗ ರಹಿತ ದಾಖಲೆ. ಯಾಜಕ ಜವಾಬ್ದಾರಿಯನ್ನು, ಪಾಲನಾ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯ.

**ವಿ.ಸೂ.:** ಯಾಜಕರ ಕೊರತೆ ಅಧಿಕವಾಗಿ ಇದ್ದರೂ ಅಭ್ಯರ್ಥಿಗಳ ಆಯ್ಕೆಯಲ್ಲಿ ಸಡಿಲತೆ ಸಲ್ಲದು.

ಒಂದು ಧರ್ಮಕ್ಷೇತ್ರ ತನ್ನದೇ ಆದ ಗುರುಮಠವನ್ನು ಸ್ಥಾಪಿಸಲು ಅಶಕ್ತವಾಗಿರುವಾಗ ಅಂತರ ಧರ್ಮಕ್ಷೇತ್ರಿಯ ಅಥವಾ ರಾಷ್ಟ್ರೀಯ ಗುರುಮಠಗಳನ್ನು ಸ್ಥಾಪಿಸಬೇಕು. ಇವು ಸಂಬಂಧಪಟ್ಟ ಧರ್ಮಾಧ್ಯಕ್ಷರುಗಳ ನೇತೃತ್ವದಲ್ಲಿದ್ದು ಪವಿತ್ರ ಪೀಠದ ಅನುಮೋದನೆಗೆ ಒಳಪಟ್ಟಿರಬೇಕು. ಒಂದು ಗುರುಮಠದಲ್ಲಿ ಅಧಿಕ ವಿದ್ಯಾರ್ಥಿಗಳಿದ್ದರೆ, ಅವರನ್ನು ಚಿಕ್ಕ ಗುಂಪುಗಳನ್ನಾಗಿ ವಿಂಗಡಿಸಿ, ಪ್ರತಿ ಗುಂಪಿಗೆ ವೈಯಕ್ತಿಕ ಗಮನ ಲಭಿಸುವಂತೆ ಆಯೋಜಿಸಬೇಕು.

## 4. ಆಧ್ಯಾತ್ಮಿಕ ತರಬೇತಿಯ ವ್ಯವಸ್ಥೆ :

ಈ ಶಾಸನ ಭವಿಷ್ಯದ ಗುರುಗಳ ಆಧ್ಯಾತ್ಮಿಕ ತರಬೇತಿಯ ಬಗ್ಗೆ ವಿವರವಾದ ನೀತಿ ನಿಯಮಗಳನ್ನು ಹೊರಡಿಸಿದೆ. ಗುರುಮಠದ ಮುಖ್ಯಸ್ಥರಿಗೂ, ಉಪನ್ಯಾಸಕರಿಗೂ ಮತ್ತು ಅಭ್ಯರ್ಥಿಗಳಿಗೂ ವಿಭಿನ್ನ ನಿಯಮಗಳು ಇಲ್ಲಿವೆ. ಬ್ರಹ್ಮಚರ್ಯೆಯ ಬಗ್ಗೆ ಧರ್ಮಸಭೆಯ ಹೇಳಿಕೆಯನ್ನು ನಾವು ಗಮನಿಸುವುದು ಅತ್ಯಗತ್ಯ.

## 5. ಧರ್ಮಸಭಾ ವ್ಯಾಸಂಗದ ಮಟ್ಟ.

ಗುರುಮತದ ವ್ಯಾಸಂಗದ ಮಟ್ಟವನ್ನು ಲೌಕಿಕ ವ್ಯಾಸಂಗದ ಹಂತಕ್ಕೆ ಏರಿಸಲು ವ್ಯಾಟಿಕನ್ ಸಮ್ಮೇಳನ ಉದ್ದೇಶಿಸಿತು. ಈ ದಿಸೆಯಲ್ಲಿ ಕಲಿಸಬೇಕಾದ ವಿಷಯ ಮತ್ತು ವಿಧಾನಗಳ ಬಗ್ಗೆ ವಿವರಣೆಯನ್ನು ನೀಡಿತು.

ಪ್ರೇಷಿತ ಪೀಠದಿಂದ ಬೇರ್ಪಟ್ಟ ಕ್ರಿಸ್ತೀಯ ಸಮುದಾಯಗಳ ಬಗ್ಗೆ ಹೆಚ್ಚಿನ ಮಾಹಿತಿ. ಭವಿಷ್ಯದ ಗುರುಗಳು ಕ್ರೈಸ್ತೇತ ಧರ್ಮಗಳ ಬಗ್ಗೆ ಅರಿವು ವಿಶೇಷವಾಗಿ ತಮ್ಮ ಕಾರ್ಯಕ್ಷೇತ್ರಗಳಲ್ಲಿರುವ ಮತ ಧರ್ಮಗಳ ಪರಿಚಯ. ವಿಜ್ಞಾನ ಶಾಸ್ತ್ರ, ಬೋಧನಾ ವಿಧಾನ, ಮನಶಾಸ್ತ್ರ ಮತ್ತು ಸಮಾಜ ಶಾಸ್ತ್ರ. ದೈವಶಾಸ್ತ್ರ ವಿದ್ಯಾರ್ಥಿಗಳು ಬೈಬಲ್ ಗ್ರಂಥದ ಬಗ್ಗೆ ಪ್ರತ್ಯೇಕ ಅಧ್ಯಯನ ಮಾಡಿರಬೇಕು. ಅದು ದೈವಶಾಸ್ತ್ರದ ಹೃದಯ ಎಂಬುದನ್ನು ಅವರು ತಿಳಿದಿರಬೇಕು.

## 6. ಪಾಲನಾ ತರಬೇತಿ :

ಪ್ರಥಮತಃ ಯಾಜಕರು ಆತ್ಮಪಾಲಕರಾಗಿರುವುದರಿಂದ, ಕುರುಬನು ತನ್ನ ಮಂದೆಯನ್ನು ನೋಡಿಕೊಳ್ಳುವಂತೆ ತಮ್ಮ ವಶಕ್ಕೆ ಕೊಡಲಾದ ಭಕ್ತರನ್ನು ಗಮನಿಸಬೇಕು. ಆದುದರಿಂದ ಈ ಕೆಳಕಂಡ ವಿಷಯಗಳಲ್ಲಿ ಅವರು ತರಬೇತಿಯನ್ನು ಪಡೆದುಕೊಳ್ಳುವುದು ಅಗತ್ಯ.

ಧರ್ಮೋಪದೇಶ ಮತ್ತು ಪ್ರಬೋಧನೆ.
ದೈವಾರಾಧನೆ ಮತ್ತು ಸಂಸ್ಕಾರಗಳ ವಿತರಣೆ.
ದಾನಧರ್ಮದಯಾ ಕಾರ್ಯಗಳು.
ದಾರಿತಪ್ಪಿದವರಿಗೆ ಮತ್ತು ಅವಿಶ್ವಾಸಿಗಳಿಗೆ ನೆರವು.
ಇತರ ಪಾಲನಾ ಕರ್ತವ್ಯಗಳು.
ನೆರೆಹೊರೆಯವರಿಗೆ ಮಾರ್ಗದರ್ಶನ.

ಪ್ರತಿಯೊಬ್ಬ ಗುರು ಅಭ್ಯರ್ಥಿ ತನ್ನ ನೆರೆಹೊರೆಯವರೊಡನೆ ನೈಜ್ಯ ಸಂವಾದವನ್ನು ಮಾಡುವ ಕಲೆಯನ್ನು ರೂಢಿಸಿಕೊಳ್ಳಬೇಕು. ಇತರರ ಸುಖ ದು:ಖವನ್ನು ಆಲಿಸುವ ಮನಸ್ಸನ್ನೂ ತನ್ನ ಹೃನ್ಮನಗಳನ್ನು ವಿವಿಧ ಸಂದರ್ಭಗಳಲ್ಲಿ ಇತರ ಕಷ್ಟಕೊರತೆಗೆ ಪರಸ್ನೇಹಾ ಭಾವನೆಯಿಂದ ತೆರೆದಿಡುವುದನ್ನೂ ಅಭ್ಯಾಸ ಮಾಡಬೇಕು.

## 7) ಯಾಜಕಾಭಿಷೇಕ ನಂತರದ ತರಬೇತಿ.

ಯಾಜಕಾಭಿಷೇಕದ ನಂತರವೂ ಗುರುಗಳಿಗೆ ಸ್ನಾತಕೊತ್ತರ ವ್ಯಾಸಂಗವನ್ನು ಏರ್ಪಡಿಸುವುದು ಧರ್ಮಾಧ್ಯಕ್ಷ ಮಂಡಲಿಯ ಜವಾಬ್ದಾರಿ. ಉದಾ: ಪಾಲನಾ ಸಂಸ್ಥೆಗಳಿಂದ ನಿಗದಿತ ವೇಳೆಯಲ್ಲಿ ಸಭೆ ಸಂಚಲನಗಳ ಏರ್ಪಾಟು. ಪ್ರೇಷಿತ ಮತ್ತು ಯಾಜಕ ಸೇವೆಯಲ್ಲಿರುವ ಯುವ ಗುರುಗಳಿಗೆ ಸೂಕ್ತ ಯೋಜನೆಗಳನ್ನು ಕೈಗೊಳ್ಳಲು ಕಾರ್ಯಗಾರಗಳು.



ಬ್ರಹ್ಮಚಾರಿಗಳಾಗಿ ಜೀವಿಸಬೇಕಾದ ವಿದ್ಯಾರ್ಥಿಗಳಿಗೆ ಈ ಅಂತಸ್ತಿನ ಬಗ್ಗೆ ಗಣನೀಯ ಶಿಕ್ಷಣವನ್ನೀಯಬೇಕು. ಯಾಜಕರು ತಮ್ಮ ಸೇವಾವೃತ್ತಿಯಲ್ಲಿ ಸರ್ವರಿಗೂ ಸರ್ವಸ್ವವಾಗಬೇಕಾದರೆ ಪರಿಪೂರ್ಣ ಪ್ರೀತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಬೇಕು. ಅವರು ಬ್ರಹ್ಮಚರ್ಯೆಯನ್ನೂ ಜೀವನ ಶೈಲಿಯಾಗಿ ಅಂಗೀಕರಿಸಬೇಕು. ಈ ಅಂತಸ್ತನ್ನು ಅವರು ದೇವರ ಕೊಡುಗೆಯೆಂದು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಬೇಕು. ಈ ಸ್ವೀಕಾರಕ್ಕೆ ಅನುಗುಣವಾಗಿ ಭಾವೀ ಗುರುಗಳು ಸ್ವಇಚ್ಛೆಯಿಂದಲೂ ಸುಮನಸ್ಸಿನಿಂದಲೂ ನಡೆದುಕೊಳ್ಳಬೇಕು.

ಕ್ರೈಸ್ತ ವಿವಾಹ ಮತ್ತು ಅದರ ಕರ್ತವ್ಯ ಮತ್ತು ಘನತೆಯನ್ನು ನಾವು ಮಾನ್ಯ ಮಾಡುತ್ತೇವೆ. ಆದರೆ ಭಾವೀ ಯಾಜಕರು ಬ್ರಹ್ಮಚರ್ಯೆ ದೇವರಿಗೆ ಅರ್ಪಿಸಲಾಗುವ ಅಮೂಲ್ಯ ಕೊಡುಗೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಅದನ್ನು ಅವರು ಪೂರ್ಣ ಪ್ರೌಢತೆ ಮತ್ತು ಉದಾರ ಮನಸ್ಸಿನಿಂದ ತಮ್ಮ ಆತ್ಮ ಶರೀರದೊಂದಿಗೆ ಪಾದಕಾಣಿಕೆಯಾಗಿ ಅರ್ಪಿಸಬೇಕು. ಪ್ರಸ್ತುತ ಸಮಾಜದಲ್ಲಿ ಬ್ರಹ್ಮಚರ್ಯೆಗಿರುವ ಅಪಾಯಗಳ ಬಗ್ಗೆ ಅಭ್ಯರ್ಥಿಗಳು ಎಚ್ಚೆತ್ತವರಾಗಿರಬೇಕು. ಅದನ್ನು ಕಾಪಾಡಿಕೊಳ್ಳಲು ಅವರಿಗಿರುವ ದೈವಿಕ ಮತ್ತು ಮಾನುಷಿಕ ರಕ್ಷಣೋಪಾಯಗಳನ್ನು ಅವರು ಬಳಸಿಕೊಳ್ಳಬೇಕು. ಈ ಜೀವನದಲ್ಲಿ ಬಂದೊದಗುವ ಈ ವ್ರತಕ್ಕೆ ಬರುವ ಅಪಾಯ ಅವಗಡಗಳನ್ನು ಎದುರಿಸಲು, ಅವುಗಳನ್ನು ಜಯಿಸಲು ಸರ್ವ ಪ್ರಯತ್ನವನ್ನು ಮಾಡಬೇಕು.

ಭವಿಷ್ಯದ ಗುರುಗಳಿಂದ ತಮ್ಮ ತರಬೇತಿಯ ಅವಧಿಯಲ್ಲಿ ಏನನ್ನು ಸಾಧಿಸಬೇಕೆಂದು ಧರ್ಮಸಭೆ ಅಪೇಕ್ಷಿಸುತ್ತದೆ ?

ಪ್ರಮುಖ ವಿಷಯಗಳಲ್ಲಿ ಪ್ರೌಢ ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ.
ಜನ ಮತ್ತು ಘಟನೆಗಳ ಬಗ್ಗೆ ಮೌಲ್ಯ ಮಾಪನೆ ಮಾಡುವ ಶಕ್ತಿ.
ಪ್ರಾಮಾಣಿಕ ಮನಸ್ಸು, ನ್ಯಾಯನಿಷ್ಠೆಯ ಬಗ್ಗೆ ಸದಾ ಜಾಗೃತಿ ಮತ್ತು ವಾಗ್ದಾನಗಳ ಬಗ್ಗೆ ಅಚಲತೆ.
ನಡವಳಿಕೆಯಲ್ಲಿ ಸಂಪೂರ್ಣ ಸುಸಂಸ್ಕೃತತೆ.
ಮಾತುಕತೆಯಲ್ಲಿ ಪ್ರೀತಿಮಯ ಪ್ರೌಢತೆ.
ವೈಯಕ್ತಿಕ ಮನವರಿಕೆಯಿಂದ ಹಿರಿಯರಾಗಿ ವಿಧೇಯತೆ, ಅಧಿಕಾರ ಮಾನ್ಯತೆ.

ಈ ಬಗ್ಗೆ ಧರ್ಮಾಧ್ಯಕ್ಷರಿಗಿರುವ ವಿಶೇಷ ಅಧಿಕಾರಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ತೀವ್ರ ಆಧ್ಯಾತ್ಮಿಕ ಜೀವನಕ್ಕೆ ಪೀಠಿಕಾ ಕಾಲಾವಧಿಯನ್ನು ನಿಗಧಿಗೊಳಿಸುವುದು. ಅಭ್ಯರ್ಥಿಯ ವ್ಯಾಸಂಗ ಕಾಲಾವಧಿಯನ್ನು ತಡೆಹಿಡಿದು ಮುಂದೂಡುವುದು. ಪಾಲನಾ ಸೇವೆಗೆ ಸೂಕ್ತ ಪೀಠಿಕೆಯನ್ನು ರೂಪಿಸುವುದು ಅಥವ ಪವಿತ್ರಾಭಿಷೇಕ ಸ್ವೀಕಾರದ ವಯೋಮಿತಿಯನ್ನು ಏರಿಸುವುದು. ಸೇವಾದರ್ಶಿ ದೈವಶಾಸ್ತ್ರ ಅಧ್ಯಯನದ ಜೀವನದ ನಂತರ ಯಾಜಕಾಭಿಷೇಕದ ಮೊದಲು ಪಾಲನಾ ಕ್ಷೇತ್ರದಲ್ಲಿ ನಿರ್ದಿಷ್ಟ ಕಾಲ ಸೇವೆ.

## ಸಮಾಪ್ತಿ

ಗುರುವಿದ್ಯಾರ್ಥಿಗಳು ಅರಿತುಕೊಳ್ಳಬೇಕಾದ ವಿಷಯವೇನೆಂದರೆ : ಧರ್ಮಸಭೆಯ ಭವಿಷ್ಯ ಮತ್ತು ಮಾನವ ಜನಾಂಗದ ರಕ್ಷಣಾ ಹೊಣೆ ಅವರ ವಶಕ್ಕೆ ಒಪ್ಪಿಸಲಾಗಿದೆ. ಇದು ಗಂಭೀರ ಜವಾಬ್ದಾರಿ ಮತ್ತು ಗುರುತರ ಹೊಣೆಗಾರಿಕೆ. ಈ ಶಾಸನದಲ್ಲಿ ಲಿಖಿತವಾಗಿರುವ ಸೂತ್ರಗಳನ್ನು ಅವರು ಸುಮನಸ್ಸಿನಿಂದ ಸ್ವೀಕರಿಸಿ ಹೇರಳವಾದ ಶಾಶ್ವತ ಉಳಿಯುವ ಫಲಗಳನ್ನೀಯಲು ಶ್ರಮಿಸಬೇಕು.



# IX ಕ್ರೈಸ್ತ ಶಿಕ್ಷಣ

## (ಪ್ರಕಟಣೆ)

ಪ್ರಸ್ತುತ ಕಾಲದಲ್ಲಿ ಕಿರಿಯರಲ್ಲಿ ಮತ್ತು ವಯಸ್ಕರಲ್ಲಿ ಶಿಕ್ಷಣದ ಪ್ರಾಮುಖ್ಯತೆ ಅಧಿಕವಾಗುತ್ತಿರುವುದನ್ನು ವ್ಯಾಟಿಕನ್ ಸಮ್ಮೇಳನ ಕಾಳಜಿಯಿಂದ ಪರಿಶೀಲಿಸಿದೆ. ಈ ಕಾಲದ ಪರಿಸರ ವಿದ್ಯಾಭ್ಯಾಸದ ಅವಕಾಶವನ್ನು ಸುಲಭಗೊಳಿಸಿದೆ. ಮಾನವರಲ್ಲಿ ತಮ್ಮ ಅಂತಸ್ತಿನ ಬಗ್ಗೆ ಹೆಚ್ಚಿನ ಅರಿವುಂಟಾಗಿದೆ. ಈಗ ಜನರು ಹೆಚ್ಚುಹೆಚ್ಚಾಗಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಸಕ್ರಿಯ ಪಾತ್ರವಹಿಸಲು ಅಪೇಕ್ಷಿಸುತ್ತಾರೆ. ಅವರಿಗೆ ಅಧಿಕ ವಿರಾಮ ದೊರಕುವುದರಿಂದ ತಂತ್ರಜ್ಞಾನ ಮತ್ತು ವೈಜ್ಞಾನಿಕ ಅನ್ವೇಷಣೆಗಳ ಬಗ್ಗೆ ತಿಳಿದುಕೊಳ್ಳುತ್ತಾರೆ, ಹೊಸ ಸಂಪರ್ಕ ಸಾಧನೆಗಳನ್ನು ಬಳಸಿಕೊಳ್ಳುತ್ತಾರೆ. ಇದರ ನೆರವಿನಿಂದ ಇತರರೊಂದಿಗೆ ನಿಕಟ ಸಂಬಂಧವನ್ನು ಬೆಳಸಿಕೊಳ್ಳುತ್ತಾ ಸಾಂಸ್ಕೃತಿಕ ಮತ್ತು ಧಾರ್ಮಿಕ ಪಿತ್ರಾರ್ಜಿತವನ್ನು ತಮ್ಮದನ್ನಾಗಿ ಗಳಿಸಿ ವೈಯಕ್ತಿಕವಾಗಿ ಬೆಳೆಯುತ್ತಿದ್ದಾರೆ. ಮಾನವರ ಶಿಕ್ಷಣ ಹಕ್ಕು ವಿಶೇಷವಾಗಿ ಪೋಷಕರ ಮತ್ತು ಮಕ್ಕಳ ಹಕ್ಕುಗಳು ಸಾರ್ವಜನಿಕ ದಾಖಲೆಗಳಲ್ಲೂ ಕಾಣಿಸಿಕೊಂಡು ಮಾನ್ಯತೆಗಳಿಸಿದೆ. ಶಾಲೆಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು ಅಧಿಕ ಸಂಖ್ಯೆಯಲಿ ಬೆಳೆಯುತ್ತಿವೆ. ಶಿಕ್ಷಣಾ ವಿಧಾನದಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಾ ಇವೆ. ಸರ್ವರಿಗೂ ಶಿಕ್ಷಣವನ್ನು ನೀಡಲು ಬ್ರಹತ್ ಪ್ರಯತ್ನಗಳು ಮಾಡಲಾಗಿವೆ. ಆದರೂ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಮತ್ತು ಇತರರು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಇನ್ನಿತರರು ಸುಜ್ಞಾನ ಮತ್ತು ಸೋದರ ಪ್ರೀತಿಯನ್ನು ಸಾರುವ ಶಿಕ್ಷಣವನ್ನು ಪಡೆಯುತ್ತಿಲ್ಲ.

ಶಿಕ್ಷಣದ ಬೆಳವಣಿಗೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ಧರ್ಮಸಭೆ ಮಹತ್ತರ ಪಾತ್ರವನ್ನು ವಹಿಸಬೇಕಾಗಿದೆ. ಏಕೆಂದರೆ ಅದು ಮಾನವನ ಸರ್ವತೋಮುಖ ಬಾಳಿನಲ್ಲಿ ಕಾಳಜಿ ಹೊಂದಿದ್ದು ಐಹಿಕ ವಿಚಾರಗಳಲ್ಲಿ ಮಾತ್ರವಲ್ಲ, ಅವನ ಅಂತಿಮ ಗುರಿಯಾದ ರಕ್ಷಣೆಯಲ್ಲೂ ಅಧಿಕ ಆಸಕ್ತಿ ಹೊಂದಿದೆ. ಧರ್ಮಸಭೆ ಮಾನವ ಸಮಾಜವಾಗಿದ್ದು ರಕ್ಷಣಾ ರಹಸ್ಯವನ್ನು ಸಾರುವ ದೈವಿಕ ನಿಯೋಗವನ್ನು ಪಡೆದಿದೆ. ಅದರ ಜೊತೆಗೆ ಅದು ಶಿಕ್ಷಣ ಕೊಡಬಲ್ಲ ಸಂಸ್ಥೆಯೂ ಆಗಿದೆ. ಆದುದರಿಂದ ಈ ಪವಿತ್ರ ಸಮ್ಮೇಳನ ಕ್ರೈಸ್ತ ಶಿಕ್ಷಣದ ಬಗ್ಗೆ ಕೆಲವು ಮೂಲ ಭೂತ ಸೂತ್ರಗಳನ್ನು ಪ್ರಕಟಿಸಿದೆ.

### ಕ್ರೈಸ್ತ ಶಿಕ್ಷಣದ ಮೂಲಭೂತ ಸೂತ್ರಗಳು :

ಎಲ್ಲಾ ವರ್ಗದ ಸ್ಥಿತಿಗತಿಯ ಮತ್ತು ವಯಸ್ಸಿನ ಜನರಿಗೆ ತಮ್ಮ ಜೀವನ ಗುರಿಯನ್ನು ಮುಟ್ಟಲು ಶಿಕ್ಷಣ ಪಡೆಯುವ ಹಕ್ಕಿದೆ. ಅದು ಅವರವರ ಅರ್ಹತೆ, ಲಿಂಗ, ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಅನುಗುಣವಾಗಿರಬೇಕು. ಈ ಶಿಕ್ಷಣ ಇತರರೊಡನೆ ಸ್ನೇಹ ಬಾಂಧವ್ಯದಿಂದಲೂ ನಿಜವಾದ ಐಕ್ಯಮತ್ಯ ಮತ್ತು ಶಾಂತಿ ಸಮಾಧಾನ ಬೆಳೆಸಲು ಪೋಷಕವಾಗಿರಬೇಕು. ಶಿಕ್ಷಣದ ನಿಜ ಉದ್ದೇಶವೇನೆಂದರೆ ವ್ಯಕ್ತಿತ್ವದ ಪೂರ್ಣ ಬೆಳವಣಿಗೆಗೆ ಜೀವನದ ಗುರಿಯನ್ನು ತಲುಪುವುದು ಮತ್ತು ಸಮಾಜದ ಒಳಿತಿಗಾಗಿ ಶ್ರಮಿಸುವುದು.

ಆದುದರಿಂದ ಮಕ್ಕಳು ಮತ್ತು ಯುವಜನರು ಇಂದಿನ ಮನಃಶಾಸ್ತ್ರ ಮತ್ತು ಶಿಕ್ಷಣ ವಿಧಾನಗಳ ಪ್ರಗತಿಯ ಪ್ರಯೋಜನ ಪಡೆಯುತ್ತಾ ತಮ್ಮ ದೈಹಿಕ, ನೈತಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುವಂತೆ ಮಾಡಬೇಕು. ಹೀಗೆ ಅವರು ವೈಯಕ್ತಿಕವಾಗಿ ಜವಾಬ್ದಾರಿಯುತ ಪ್ರಜ್ಞೆಯನ್ನೂ ಸ್ವಾತಂತ್ರ್ಯವನ್ನೂ ಪಡೆದುಕೊಂಡು ಜೀವಿಸುವಂತಿರಬೇಕು. ಸಾಮಾಜಿಕ ಮತ್ತು ಸಾರ್ವಜನಿಕ ಜೀವನದಲ್ಲೂ ಪ್ರಯೋಜನಕಾರಿಯಾಗಿ ಭಾಗವಹಿಸುವಂತಿರಬೇಕು.

ಎಲ್ಲಕ್ಕೂ ಮಿಗಿಲಾಗಿ ಅವರು ತಮ್ಮ ನೈತಿಕ ಪ್ರಜ್ಞೆಯನ್ನು ಬೆಳೆಸಿಕೊಳ್ಳುವುದು ಅಗತ್ಯ. ಅದರಲ್ಲಿ ಸಕಾರಾತ್ಮಕ ಮತ್ತು ವಿವೇಚನೆಯುಳ್ಳ ಲೈಂಗಿಕ ಶಿಕ್ಷಣ, ಸೂಕ್ತ ನಿರ್ಧಾರವನ್ನು ಕೈಗೊಳ್ಳುವ ಸಾಮರ್ಥ್ಯವಿರಬೇಕು, ಜೊತೆಗೆ ದೈವಪ್ರೀತಿ, ದೈವಜ್ಞಾನ ಆಧಾರಿತ ನೈತಿಕ ತತ್ವಗಳ ಬಗ್ಗೆ ನಿಷ್ಠೆ ಸೇರಿರಬೇಕು. ಆದುದರಿಂದ ಶಿಕ್ಷಣ ರಂಗಕ್ಕೆ ಪೂರ್ಣ ಗಮನಕೊಡಬೇಕೆಂದು ಧರ್ಮಸಭೆ ತನ್ನ ಪಾಲಕರನ್ನು ಆದೇಶಿಸುತ್ತದೆ. ಏಕೆಂದರೆ ಅವರು ಧರ್ಮಸಭೆಯ ಭವಿಷ್ಯದ ಬೆಳಕಾಗಿದ್ದಾರೆ. ಈ ಶಿಕ್ಷಣ ಜಗತ್ತಿನಾದ್ಯಂತ ವಿಸ್ತರಿಸಬೇಕೆಂಬುದು ಅದರ ಅಪೇಕ್ಷೆ.

ಆದರೆ ಧರ್ಮಸಭೆ ವ್ಯಕ್ತಿಯ ವಿಕಾಸಕ್ಕೆ ಮಾತ್ರ ಶ್ರಮಿಸುವುದಿಲ್ಲ. ಅದರ ಪ್ರಮುಖ ಗುರಿ ಇದು " ದೀಕ್ಷಾಸ್ನಾನ ಪಡೆದ ಪ್ರತಿ ವ್ಯಕ್ತಿಯನ್ನೂ ಧಾರ್ಮಿಕ ಜೀವನದ ದರ್ಶನ ಪಡೆಯಬೇಕು. ಅವನು ಪಡೆದ ವಿಶ್ವಾಸ ಎಂಬ ವರದ ಬಗ್ಗೆ ಪ್ರಜ್ಞಾವಂತನಾಗಬೇಕು. ಜೊತೆಗೆ ಅವನು ತಂದೆ ದೇವರನ್ನು ಆತ್ಮದಿಂದಲೂ ಸತ್ಯದಿಂದಲೂ ಪೂಜಿಸಬೇಕು (ಯೊವಾ 4:23). ಅವನು ವಿಶೇಷವಾಗಿ ದೈವಾರಾಧನಾ ವಿಧಿಗಳಲ್ಲಿ ಭಾಗವಹಿಸುತ್ತಾ ವೈಯಕ್ತಿಕ ಜೀವನದಲ್ಲಿ ನೀತಿ ಮತ್ತು ಸತ್ಯದ ಪಾವಿತ್ರತೆಯಿಂದ ತುಂಬಿದ ಹೊಸ ಮಾನವನಾಗಿ ರೂಪಿತನಾಗಬೇಕು (ನೋಡಿ : ಎಫೆಸ 4:22–24). ಹೀಗೆ ಈ ವ್ಯಕ್ತಿ ಪ್ರಭುವಿನ ಆತ್ಮಿಕ ಶರೀರದ ಬೆಳವಣಿಗೆಗಾಗಿ ಶ್ರಮಿಸಬೇಕು. ಈ ವ್ಯಕ್ತಿಯು ತನ್ನ ದೈವೀಕರೆಯನ್ನು ಗಮನದಲ್ಲಿಟ್ಟು ಭವ್ಯ ಭವಿಷ್ಯಕ್ಕೆ ಸಾಕ್ಷಿ ನೀಡಬೇಕು (ನೋಡಿ, ಪೇತ್ರ 3:15). ಇಂಥಹ ವ್ಯಕ್ತಿ ಕ್ರಿಸ್ತೀಯ ಮೌಲ್ಯಗಳಿಂದ ಈ ಲೋಕದ ಪರಿವರ್ತನೆಗೆ ಪ್ರಯತ್ನಿಸಬೇಕು. ಕ್ರೈಸ್ತ ವಿಶ್ವಾಸ ಮತ್ತು ಶಿಕ್ಷಣ ಪ್ರತಿಯೊಬ್ಬ ವ್ಯಕ್ತಿಯ ಹಕ್ಕು. ಅವನು ನೀರು ಮತ್ತು ಪವಿತ್ರಾತ್ಮರಿಂದ ನವಜನ್ಮ ಪಡೆದ ವ್ಯಕ್ತಿ.

## ಕ್ರೈಸ್ತ ಶಿಕ್ಷಣದ ಸಹಕಾರಿಗಳು :

ಶಿಕ್ಷಣವೆಂಬ ಮಹಾಕಾರ್ಯದಲ್ಲಿ ಸಹಕಾರಿಗಳಾಗಿರುವವರು ಜನ್ಮದಾತರು, ಸರಕಾರ ಮತ್ತು ಧರ್ಮಸಭೆ, ಇವರ ಕರ್ತವ್ಯ ಮತ್ತು ಪಾತ್ರದ ಬಗ್ಗೆ ಈ ಸಮ್ಮೇಳನ ಕೆಲವು ವಿಷಯಗಳನ್ನು ವಿಷದಪಡಿಸುತ್ತಿದೆ.

**ಜನ್ಮಧಾತರು :** ಜನ್ಮಧಾತರೇ ಮಕ್ಕಳ ಪ್ರಥಮ ಮತ್ತು ಪ್ರಮುಖ ಶಿಕ್ಷಕರು. ಅವರ ಪಾತ್ರವನ್ನು ಬೇರೆ ಯಾರೂ ನಿರ್ವಹಿಸುವಂತಿಲ್ಲ. ಅವರ ಮುಖ್ಯ ಕರ್ತವ್ಯವೆಂದರೆ ದೈವ ಪರಪ್ರೀತಿ ಮತ್ತು ಗೌರವದಿಂದ ಕೂಡಿದ ಕುಟುಂಬವನ್ನು ರೂಪಿಸುವುದು. ವಿವಾಹ ಸಂಸ್ಕಾರದ ವರಪ್ರಸಾದದಿಂದ ಬಲಗೊಂಡ ಕುಟುಂಬ ಸಾಮಾಜಿಕ ಸುದ್ಗುಣ ದೈವ ಮತ್ತು ಪರಪ್ರೀತಿಯ ಅರಿವನ್ನು ಮೂಡಿಸುವ ಪ್ರಥಮ ಪಾಠಶಾಲೆಯಾಗಿದೆ. ಈ ಪಾಠಶಾಲೆಯಲ್ಲಿ ಕ್ರೈಸ್ತ ಮಗು ಧರ್ಮಸಭೆಯ ಮತ್ತು ಕ್ರೈಸ್ತ



ಸಾಮಾಜದ ಜೀವನದ ಅರಿವಿನಲ್ಲಿ ಬೆಳೆಯುತ್ತದೆ. ಕಥೋಲಿಕ ಶಾಲೆ ಈ ಶಿಕ್ಷಣವನ್ನೇ ಮುಂದುವರಿಸುತ್ತಾ ಇಲ್ಲಿ ಕೊರತೆಯಾದುದನ್ನು ಭರಿಸುತ್ತದೆ. ಈ ಶಾಲೆ ಜನ್ಮಧಾತರಿಂದ ಮತ್ತು ಹೆತ್ತವರ ಸಂಘಗಳಿಗೆ ಪೂರ್ಣ ನೈತಿಕ ಮತ್ತು ಅಗತ್ಯವಿದ್ದರೆ ಆರ್ಥಿಕ ಬೆಂಬಲವನ್ನು ಪಡೆಯಬೇಕು.

**ಸರ್ಕಾರ :** ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಹಕ್ಕು ಬಾದ್ಯತೆಗಳು ಸರ್ಕಾರಕ್ಕೂ ಇವೆ. ಯುವ ಜನರಿಗೆ ಭೌತಿಕ, ಸಾಂಸ್ಕೃತಿಕ ಮತ್ತು ಪೌರ ಶಿಕ್ಷಣವನ್ನು ಒಳ್ಳೆಯ ಶಾಲೆಗಳ ಮುಖಾಂತರ ನೀಡುವ ಜವಾಬ್ದಾರಿ ಅದಕ್ಕಿದೆ. ಇಂಥಹ ಶಿಕ್ಷಣವನ್ನೇ ನೀಡುವ ಇತರ ಸಂಘ ಸಂಸ್ಥೆಗಳಿಗೂ ತಾರತಮ್ಯ ಮಾಡದೆ ನೆರವನ್ನು ನೀಡಬೇಕು, ನ್ಯಾಯ ಸಮ್ಮತ ಆರ್ಥಿಕ ಅನುದಾನವನ್ನು ವಿತರಿಸಬೇಕು. ಯಾವ ವಿಧದಲ್ಲೂ ಶಾಲೆ ಏಕಾಧಿಪತ್ಯವನ್ನು ಚಲಾಯಿಸಬಾರದು. ಜನ್ಮಧಾತರು ತಮ್ಮ ಮನಸ್ಸಿಗೆ ಒಪ್ಪಿಗೆಯಾದ ಶಾಲೆಗಳಿಗೆ ಮಕ್ಕಳನ್ನು ಸೇರಿಸುವ ಅವಕಾಶವನ್ನು ಸರಕಾರ ಕಲ್ಪಿಸಿಕೊಡಬೇಕು. ಈ ಹಕ್ಕನ್ನು ಪವಿತ್ರವೆಂದು ಪರಿಗಣಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಮಾನ್ಯ ಮಾಡುವ ಪೌರ ಆಡಳಿತಾಧಿಕಾರಿಗಳನ್ನು ಸಂಸ್ಥೆಗಳನ್ನು ಧರ್ಮಸಭೆ ಅನುಮೋದಿಸುತ್ತದೆ.

**ಧರ್ಮಸಭೆ :** ಶಿಕ್ಷಣ ನೀಡುವ ಹಕ್ಕು ಮತ್ತು ಕರ್ತವ್ಯ ವಿಶೇಷ ರೀತಿಯಲ್ಲಿ ಧರ್ಮಸಭೆಗೆ ಮೀಸಲು. ಅದು ಶಿಕ್ಷಣ ನೀಡಬಲ್ಲ ಮಾನವ ಸಮಾಜ ಮಾತ್ರವಲ್ಲ, ಧರ್ಮಸಭೆಗೆ ರಕ್ಷಣಾ ಮಾರ್ಗವನ್ನು ಸರ್ವರಿಗೂ ಸಾರುವ ಮತ್ತು ವಿಶ್ವಾಸಿಗಳಿಗೆ ಪ್ರಭು ಕ್ರಿಸ್ತರ ಜೀವನವನ್ನು ನೀಡುವ ಜವಾಬ್ದಾರಿಯುಂಟು. ಸರ್ವಜನರಿಗೆ ಜೀವನದಲ್ಲಿ ಸಂಪೂರ್ಣತೆಯನ್ನು ಪಡೆಯಲು ನೆರವಾಗುವ ಕರ್ತವ್ಯ ಧರ್ಮಸಭೆಗಿದೆ. ಧರ್ಮಸಭೆ ನೈಜ್ಯ ತಾಯಿಯಂತೆ ತನ್ನ ಮಕ್ಕಳ ಜೀವನಕ್ಕೆ ಅಗತ್ಯ ಕ್ರಿಸ್ತೀಯ ಮನೋಭಾವ ಪ್ರೇರಿತ ಶಿಕ್ಷಣ ನೀಡಬೇಕು. ಅದು ಎಲ್ಲ ಜನರು ತಮ್ಮ ವ್ಯಕ್ತಿತ್ವವನ್ನು ಪರಿಪೂರ್ಣಗೊಳಿಸುವಂತೆ, ಅವರು ಸಮಾಜದ ಕಲ್ಯಾಣಕ್ಕೆ ನೆರವಾಗುತ್ತಾ ಮಾನವೀಯ ಲೋಕವನ್ನು ಕಟ್ಟುವಂತೆ ಪ್ರೇರೇಪಿಸಬೇಕು.

ಧರ್ಮಸಭೆ ಈ ಪಾತ್ರವನ್ನು ನಿರ್ವಹಿಸುವಾಗ ಎಲ್ಲಾ ಸೂಕ್ತ ಸಾಧನಗಳನ್ನು ಬಳಸುತ್ತದೆ. ಧರ್ಮೋಪದೇಶವನ್ನು, ಸಾಮೂಹಿಕ ಮಾಧ್ಯಮಗಳನ್ನು, ಯುವ ಸಂಘಗಳನ್ನು ಮತ್ತು ಶಾಲೆಗಳನ್ನು ಬಳಸುತ್ತದೆ.

**ಪಾಠಶಾಲೆ :** ಶಿಕ್ಷಣ ಸಾಧನಗಳಲೆಲ್ಲಾ ಪಾಠಶಾಲೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಅದು ಬುದ್ಧಿ ಶಕ್ತಿಯನ್ನೂ ಎಚ್ಚರಿಕೆಯಿಂದ ಬೆಳೆಸುವುದಕ್ಕೆ ಮಾತ್ರವಲ್ಲ ತೀರ್ಮಾನಗಳನ್ನು ಕೊಳ್ಳಲು ವಿವೇಚನೆ, ಮೌಲ್ಯಮಾಪನ ಮಾಡುವ ಪ್ರಜ್ಞೆ, ಹಿಂದಿನ ಪೀಳಿಗೆಯ ಸಾಂಸ್ಕೃತಿಕ ಪರಂಪರೆಯನ್ನು ಹಸ್ತಾಂತರಿಸುವ ಅರಿವು, ಸಾರ್ವಜನಿಕ ಮತ್ತು ವ್ಯಕ್ತಿ ಜೀವನಕ್ಕೆ ಸಿದ್ಧತೆ, ಸ್ನೇಹ ಸಂಬಂಧ ಮತ್ತು ಪರಸ್ಪರ ಅರಿವಿನ ಮನೋಭಾವನೆಯನ್ನು ಬೆಳೆಸುತ್ತದೆ. ಹೀಗೆ ಪಾಠಶಾಲೆ ಸಮುದಾಯ ಜೀವನದ ಕೇಂದ್ರವಾಗಬಲ್ಲದು. ಶಾಲೆಯ ಕಾರ್ಯ ನಿರ್ವಹಣೆ ಮತ್ತು ಪ್ರಗತಿ ಅದರಲ್ಲಿ ಅಭ್ಯಾಸ ಮಾಡುತ್ತಿರುವವರಲ್ಲೂ ಹೊರಗಿರುವವರಲ್ಲೂ, ಭಕ್ತವಿಶ್ವಾಸಿಗಳಲ್ಲೂ ಇತರರಲ್ಲೂ ಆಸಕ್ತಿಯನ್ನು ಮೂಡಿಸಬಲ್ಲದು.

ಕಥೋಲಿಕ ಶಾಲೆ ಈ ಉದಾತ್ತ ಧ್ಯೇಯಗಳನ್ನು ವಿಶೇಷ ರೀತಿಯಲ್ಲಿ ಪರಿಪಾಲಿಸುತ್ತದೆ. ಇಲ್ಲಿನ ಕಾರ್ಯಕ್ರಮಗಳಲ್ಲಿ ಧರ್ಮೋಪದೇಶ ಕಲಿಕೆಗೆ ಪ್ರಾಮುಖ್ಯತೆ ಇದೆ. ಅದು ವ್ಯಕ್ತಿಯಲ್ಲಿ ವಿಶ್ವಾಸವನ್ನು ಬೆಳಗಿಸುತ್ತದೆ ಮತ್ತು ಬಲಪಡಿಸುತ್ತದೆ. ಪ್ರಭು ಕ್ರಿಸ್ತರ ಭಾವನೆಗೆ ಅನುಗುಣವಾಗಿ ಜೀವನವನ್ನು ಪೋಷಿಸುತ್ತದೆ. ಆರಾಧನಾ ವಿಧಿಯಲ್ಲಿ ಪೂರ್ಣ ವಿವೇಚನೆಯಿಂದ ಕ್ರಿಯಾತ್ಮಕವಾಗಿ ಭಾಗವಹಿಸಲು ಅನುವು ಮಾಡುತ್ತದೆ. ಪ್ರೇಷಿತ ಚಟುವಟಿಕೆಗಳಿಗೆ ಪ್ರೇರಣೆಯನ್ನೀಯುತ್ತದೆ. ಇಂಥಹ ಶಾಲೆಗಳು ಶುಭಸಂದೇಶದ ಸ್ವಾತಂತ್ರ್ಯ ಮತ್ತು ಪರಸ್ನೇಹದ ಭಾವನೆಗಳಿಂದ ಪ್ರೇರಿತವಾಗಿರುತ್ತದೆ. ಯುವಜನರು ತಾವು ದೀಕ್ಷಾಸ್ನಾನದಲ್ಲಿ ಪಡೆದ ನವಜೀವನಕ್ಕೆ ಅನುಗುಣವಾಗಿ ಬೆಳೆಯಲು ಪೋಷಕವಾಗಿರುತ್ತದೆ. ಅವರ ವ್ಯಕ್ತಿತ್ವದ ಬೆಳವಣಿಗೆ ಮಾನವ ಸಂಸ್ಕೃತಿ ಮತ್ತು ಜ್ಞಾನಾರ್ಜನೆಯ ಜೊತೆಗೆ ಸಮಕಾಲೀನ ವ್ಯವಹಾರ ಜ್ಞಾನದ ಗಳಿಕೆ ಕ್ರೈಸ್ತ ವಿಶ್ವಾಸಕ್ಕೆ ಅನುಗುಣವಾಗಿರುತ್ತದೆ. ಆದುದರಿಂದ ಕಥೋಲಿಕ ಶಾಲೆಗಳಲ್ಲಿ ಅಧ್ಯಯನ ಮಾಡಿದವರು ಈ ಉತ್ತಮ ಶಿಕ್ಷಣದಿಂದ ಜಗತ್ತಿನ ಪ್ರಜೆಗಳಾಗುತ್ತಾರೆ ಮತ್ತು ತಮ್ಮ ಆದರ್ಶ ಬಾಳಿನಿಂದ ದೇವರ ಸಾಮ್ರಾಜ್ಯವನ್ನು ಹರಡುವ ಪ್ರೇಷಿತರಾಗುತ್ತಾರೆ.

ಧರ್ಮಸಭೆಯ ದೈವಿಕ ನಿಯೋಗದಲ್ಲಿ ಕಥೋಲಿಕ ಶಾಲೆಗಳು ಪರಿಣಾಮಕಾರಿಯಾಗಿವೆ. ಆದುದರಿಂದ ಧರ್ಮಸಭೆ ಎಲ್ಲ ಗುಣದ ಮತ್ತು ದರ್ಜೆಯ ಶಾಲೆಗಳನ್ನು ಸ್ವತಂತ್ರವಾಗಿ ಸ್ಥಾಪಿಸುವ ಮತ್ತು ನಡೆಸುವ ಶಕ್ತಿಯನ್ನು ಹೊಂದಿದೆ. ಒಂದು ಶಾಲೆ ಹೇಗಿರಬೇಕೆಂದು ಧರ್ಮಸಭೆ ನಿರ್ಧರಿಸುತ್ತದೋ ಅದನ್ನು ಅವಲಂಬಿಸಿರುವ ಶಾಲೆಗಳು ಅಂತೆಯೇ ಇರಬೇಕೆಂದು ಅದು ಅಪೇಕ್ಷಿಸುತ್ತದೆ. ಕಥೋಲಿಕ ಧರ್ಮಸಭೆ ಪರಿಸರಕ್ಕೆ ಅನುಗುಣವಾಗಿ ತನ್ನ ಸಂಸ್ಥೆಗಳನ್ನು ರೂಪಿಸುತ್ತದೆ. ಧರ್ಮ ಪ್ರಸಾರ ಕೇಂದ್ರಗಳಲ್ಲಿ ಸ್ಥಾಪಿಸಿರುವ ಶಾಲೆಗಳನ್ನು ಪ್ರತ್ಯೇಕವಾಗಿ ಕ್ರೈಸ್ತೇತ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಧರ್ಮಸಭೆ ಪ್ರೀತಿ ಭಾವನೆಯಿಂದ ಕಾಣುತ್ತದೆ. ಕಥೋಲಿಕ ಶಾಲೆಗಳು ಶಿಕ್ಷಣದ ತಳಹದಿಯಾದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಮಾತ್ರವಲ್ಲ, ವಿವಿಧ ವೃತ್ತಿ, ತಾಂತ್ರಿಕ ಮತ್ತು ಸಮಾಜ ಸೇವಾ ಶಾಲೆಗಳನ್ನು ಒಳಗೊಂಡಿರುತ್ತವೆ. ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಕೊಡುವ ಶಿಕ್ಷಕರನ್ನು ಸಿದ್ಧಮಾಡುವ ಸಂಸ್ಥೆಗಳು ಸಾಮಾನ್ಯವಾಗಿ ಯುವ ಜನರ ಮತ್ತು ವಯಸ್ಕರ ಎಲ್ಲ ಶಾಲೆಗಳು ಇವುಗಳಲ್ಲಿ ಸೇರಿವೆ.

**ಕಾಲೇಜು ಮತ್ತು ವಿಶ್ವ ವಿದ್ಯಾಲಯಗಳು :** ಉನ್ನತ ಶಿಕ್ಷಣವನ್ನು ನೀಡುವ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಬಗ್ಗೆ ಧರ್ಮಸಭೆ ಆಸಕ್ತಿ ವಹಿಸುತ್ತಿದೆ. ಈ ಸಂಸ್ಥೆಗಳು ತಮ್ಮ ಬೋಧನೆ ಮತ್ತು ಸಂಶೋಧನೆಯಲ್ಲಿ ಅತಿ ಉನ್ನತ ಮಟ್ಟದ್ದಾಗಿರಬೇಕು. ಇಂಥಹ ಸಂಸ್ಥೆಗಳು ತಮ್ಮ ಸ್ಥಾಪನಾ ನಿಯಮಾನುಸಾರ ಪ್ರತಿಯೊಂದು ವಿಷಯವನ್ನು ಪೂರ್ಣ ಸ್ವಾತಂತ್ರ್ಯ ಮತ್ತು ವೈಜ್ಞಾನಿಕ ಸಂಶೋಧನೆಯಿಂದ ಅಧ್ಯಯನ ಮಾಡಬೇಕೆಂಬುದು ಧರ್ಮಸಭೆಯ ಅಭಿಲಾಷೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಧರ್ಮ ಪಂಡಿತ ಸಂತ ತೋಮಸರ ನೀತಿಯನ್ನು ಗಮನಿಸುವುದು ಅಗತ್ಯ. ಅವರು ವಿಶ್ವಾಸಕ್ಕೂ ವಿಜ್ಞಾನಕ್ಕೂ ಇರುವ ಸಾಮರಸ್ಯದ ಬಗ್ಗೆ ವಿಚಾರ ಮಾಡಿದರು. ಕಥೋಲಿಕ ಕಾಲೇಜು ಮತ್ತು ವಿಶ್ವವಿದ್ಯಾಲಯಗಳು ಆಧುನಿಕ ವೈಜ್ಞಾನಿಕ ಸಂಶೋಧನಾ ಕೇಂದ್ರಗಳಾಗಬೇಕೆಂದು ಧರ್ಮಸಭೆ ಆಶಿಸುತ್ತದೆ. ಕಥೋಲಿಕ ಮತ್ತು ಇತರ ವಿಶ್ವವಿದ್ಯಾಲಯಗಳಲ್ಲಿ



ವಿದ್ಯಾರ್ಥಿಗಳಿಗೆ ಬೌಧಿಕ ಬೆಳವಣಿಗೆಯ ಜೊತೆಯಲ್ಲೇ ಆಳವಾದ ಭೌತಿಕ/ಧಾರ್ಮಿಕ ತರಬೇತಿ ದೊರಕುವಂತೆ ಯಾಜಕರು ಮತ್ತು ಧರ್ಮಾಧ್ಯಕ್ಷರು ಗಮನವಹಿಸಬೇಕು. ಧರ್ಮಸಭೆ ಧರ್ಮಪ್ರಸಾರ ದೇಶಗಳಲ್ಲಿ ನಡೆಸುತ್ತಿರುವ ತನ್ನ ಎಲ್ಲಾ ಶಾಲೆ ಸಂಸ್ಥೆಗಳಲ್ಲಿ ಬಡಬಗ್ಗರಿಗೆ ಸಾಮಾನ್ಯ ಅವಕಾಶವಿಲ್ಲದವರಿಗೆ ಸೇರಿಸಿಕೊಳ್ಳಬೇಕೆಂದು ಆದೇಶಿಸುತ್ತದೆ.

ಧಾರ್ಮಿಕ ಅಧ್ಯಯನಕ್ಕೆ ಸಂಬಂಧಿಸಿದ ಸಂಸ್ಥೆಗಳ ಬಗ್ಗೆ ಧರ್ಮಸಭೆಗೆ ಅಧಿಕ ಆಸಕ್ತಿ ಇದೆ. ಇಂಥಹ ಸಂಸ್ಥೆಗಳಿಗೆ ಯಾಜಕ ಅಭ್ಯರ್ಥಿಗಳನ್ನು ಸಿದ್ಧಗೊಳಿಸುವ ಗುರುತರ ಜವಾಬ್ದಾರಿಯನ್ನು ವಹಿಸುತ್ತದೆ ಮಾತ್ರವಲ್ಲ ಉನ್ನತ ಶಿಕ್ಷಣ ನೀಡಲೂ ಅವುಗಳಲ್ಲಿ ಪಾಂಡಿತ್ಯ ಪಡೆಯಲೂ ಸಂಶೋಧನೆ ನಡೆಸಲೂ ವಿದ್ಯಾರ್ಥಿಗಳನ್ನು ಕಳುಹಿಸುತ್ತದೆ. ಇಂಥಹ ಸಂಸ್ಥೆಗಳಲ್ಲಿ ದೈವೀ ಪ್ರಕಟಣೆಯ ಗಾಢ ಅರಿವು ಲಭ್ಯವಾಗುತ್ತದೆ. ಇದರ ಇತರೆ ಪರಿಣಾಮಗಳಲ್ಲಿ ಬೇರ್ಪಟ್ಟ ಕ್ರೈಸ್ತ ಸಹೋದರರೊಂದಿಗೆ ಮತ್ತಿತರರೊಂದಿಗೆ ಪ್ರಯೋಜನಕಾರಿ ಸಂವಾದ ಸಾಧ್ಯವಾಗುತ್ತದೆ.

ಶಿಕ್ಷಣಕ್ಕೆ ಸಂಬಂಧಿಸಿದಂತೆ ಅತ್ಯಾಧುನಿಕ ವಿಧಾನಗಳನ್ನು ಸಲಕರಣೆಗಳನ್ನು ಬಳಸಬೇಕು. ಧರ್ಮಸಭೆ ವಿವಿಧ ಸಂಘ ಸಂಸ್ಥೆಗಳನ್ನು ಯುವ ಜನ ಸಂಚಲನಗಳನ್ನು ಆದರಿಸುತ್ತದೆ. ಮಾನವನ ಸರ್ವತೋಮುಖ ಬೆಳವಣಿಗೆಗಾಗಿ ಬಳಸುವ ಸಂಪರ್ಕ ಸಾಧನಗಳು ಮಾನಸಿಕ ಮತ್ತು ದೈಹಿಕ ಬೆಳವಣಿಗೆಗಾಗಿ ಅಗತ್ಯವಾದುದುರಿಂದ ಅವನ್ನು ಆಹ್ವಾನಿಸುತ್ತದೆ. ಅಂತಿಮವಾಗಿ ಪರಸ್ಪರ ಸಹಕಾರ ಅತ್ಯಗತ್ಯ ಎಂಬುದನ್ನು ಎಲ್ಲರೂ ಅರಿಯಬೇಕು. ಈಗೀಗ ಅದು ಧರ್ಮಕ್ಷೇತ್ರ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಧಿಕವಾಗುತ್ತಾ ಬರುತ್ತಿದೆ. ಈ ಸರ್ವೋಪಯೋಗಿ ಸಹಕಾರವನ್ನು ಮಾನವ ಜನಾಂಗದ ಒಳಿತಿಗಾಗಿ ಅಗತ್ಯವಾದಂತೆ ಮತ್ತು ಆಯಾ ಉದ್ದೇಶಗಳ ಪೂರೈಕೆಗಳಿಗಾಗಿ ಬಳಸಬೇಕು.

**ಶಿಕ್ಷಕ :** ಧರ್ಮಸಭೆ ಶಿಕ್ಷಕನ ಕರೆಯೋಣ ಸೊಗಸಾದುದು ಮತ್ತು ಪ್ರಮುಖವಾದುದು ಎಂದು ಪರಿಗಣಿಸುತ್ತದೆ. ಈ ವೃತ್ತಿ ವ್ಯಕ್ತಿಯ ಮಾನಸಿಕ ಮತ್ತು ಹೃದಯದ ವಿಶಾಲತೆಯನ್ನು ಎದುರು ನೋಡುತ್ತದೆ. ನಯ ನಾಜೂಕಿನ ಸಿದ್ಧತೆ, ಶಿಕ್ಷಣ ವಿಧಾನದಲ್ಲಿ ಜ್ಞಾನ ಮತ್ತು ವಿನೂತನ ವಿಧಾನಗಳ ಅಳವಡಿಕೆ, ಸದಾ ಸಿದ್ಧ ಹೊಂದಾಣಿಕೆ ಇವು ಅಗತ್ಯ ಪರಿಕರಗಳು. ಶಿಕ್ಷಕ ಮತ್ತು ಸಂಶೋಧನಾ ರಂಗದಲ್ಲಿ ಆಸಕ್ತಿ ಮತ್ತು ಅರ್ಹತೆಯುಳ್ಳ ಯುವಜನರನ್ನು ಅದ್ಯಾಪಕ ವೃತ್ತಿಗೆ ಪ್ರೋತ್ಸಾಹಿಸಬೇಕು. ಶಿಕ್ಷಕರು ಜನ್ಮಧಾತರೊಂದಿಗೆ ಶಿಕ್ಷಣ ವೃತ್ತಿಯಲ್ಲಿ ಪಾಲುಗಾರರು. ಯುವ ಜನರು ಸಮಾಜದಲ್ಲಿ ಮತ್ತು ಕುಟುಂಬದಲ್ಲಿ ತಮ್ಮ ಪಾತ್ರವನ್ನು ಸಮರ್ಪಕವಾಗಿ ನಿರ್ವಹಿಸುವುದು ಅಗತ್ಯ. ಈ ಹಂತದಲ್ಲಿ ಶಿಕ್ಷಕರು ಮತ್ತು ಜನ್ಮದಾತರ ಒಬ್ಬರೊಡನೊಬ್ಬರು ಕೈ ಜೋಡಿಸಿ ಕೊಳ್ಳುವುದು ಅತ್ಯಗತ್ಯ. ಯುವಜನರು ತಮ್ಮ ವಿಭಿನ್ನ ಲಿಂಗ ಮತ್ತು ದೇವರು ಅವರಿಗೆ ಜೀವನದಲ್ಲಿ ನಿಯೋಜಿಸಿದ ರೀತಿಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಲು ಶಕ್ತರಾಗುವಂತೆ ಅವರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಬೇಕು. ಅವರು ಪದವೀಧರರಾದ ನಂತರ ಅವರೊಡನೆ ಸಂಪರ್ಕವನ್ನು ಇಟ್ಟುಕೊಳ್ಳಬೇಕು. ಈ ಸಂಪರ್ಕ ವೈಯಕ್ತಿಕವಾಗಿದ್ದ ಈ ಪ್ರಕ್ರಿಯೆಯಲ್ಲಿ ಶಿಕ್ಷಕರು ಸಕ್ರಿಯ ನೆರವನ್ನು ನೀಡಬೇಕು.

## ಸಮಾಪ್ತಿ

ಈ ಮಹಾ ಸಮ್ಮೇಳನ ಶಿಕ್ಷಣ ರಂಗದಲ್ಲಿ ಮಹತ್ತರ ಮತ್ತು ಉದಾತ್ತ ಸೇವೆಯನ್ನು ಸಲ್ಲಿಸುತ್ತಿರುವ ಯಾಜಕರು, ಧಾರ್ಮಿಕ ಸ್ತ್ರೀ ಪುರುಷರು ಮತ್ತು ಶ್ರೀ ಸಾಮಾನ್ಯರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಅವರು ಈ ಪ್ರೇಷಿತ ಕಾರ್ಯವನ್ನೂ ಸಮರ್ಪಕಾ ಭಾವದಿಂದ ಈ ವೃತ್ತಿಯನ್ನೂ ನಿರ್ವಹಿಸುತ್ತಿರುವುದುದರಿಂದ ಅವರನ್ನು ಅಭಿನಂದಿಸುತ್ತದೆ. ಈ ಕಾರ್ಯವನ್ನು ಅವರು ಈ ಸಮ್ಮೇಳನ ನಿರೂಪಿಸಿರುವಂತೆ ಮಾಡುತ್ತಿರುವುದರಿಂದ ಅದು ಧರ್ಮಸಭೆಯ ಆಂತರಿಕ ಪರಿವರ್ತನೆಯೊಂದಿಗೆ ಇಡೀ ವಿಶ್ವದಲ್ಲಿ ಅದರ ಉಪಯೋಗ ಸಾರ್ವತ್ರಿಕ ಪರಿಣಾಮ ಬೀರಬೇಕೆಂದು ಆಶಿಸುತ್ತದೆ.



# X ಕ್ರೈಸ್ತೇತ ಧರ್ಮಗಳೊಂದಿಗೆ ಧರ್ಮಸಭೆಯ ಸಂಬಂಧ

## (ಪ್ರಕಟಣೆ)

### ಪೀಠಿಕೆ

ಇತ್ತೀಚಿನ ದಿನಗಳಲ್ಲಿ ಈ ಪ್ರಪಂಚವು ವೇಗವಾಗಿ ಚಿಕ್ಕದಾಗುತ್ತಿದೆ. ಮಾನವ ಜನಾಂಗ ಹತ್ತಿರ ಹತ್ತಿರ ಬರುತ್ತಿದೆ ಅದರ ಮಧ್ಯದ ಸಂಬಂಧ ನಿಕಟವಾಗುತ್ತಿದೆ. ವಿಶ್ವದ ಎಲ್ಲ ಜನರು ಒಂದೇ ಕುಟುಂಬಕ್ಕೆ ಸೇರಿದವರು ಎಂಬ ಭಾವನೆ ಬಲವಾಗುತ್ತಿದೆ.

ಬಲವಾಗುತ್ತಿರುವ ಸೋದರತ್ವದ ಬಗ್ಗೆ ಧರ್ಮಸಭೆ ಅಧಿಕ ಆಸಕ್ತಿ ವಹಿಸುತ್ತದೆ. ಧರ್ಮಸಭೆ ಎಲ್ಲ ಜನರಲ್ಲಿ ಐಕ್ಯತೆ ಮತ್ತು ಪ್ರೀತಿಯನ್ನು ತರುವ ಜವಾಬ್ದಾರಿಯನ್ನು ಹೊಂದಿದೆ. ಅವರೆಲ್ಲರೂ ಪರಲೋಕದ ಒಂದೇ ತಂದೆಯ ಮಕ್ಕಳಾದುದರಿಂದ ಸೋದರರಂತೆ ಬಾಳಬೇಕು ಎನ್ನುತ್ತದೆ. ಜೊತೆಗೆ ಅವರೆಲ್ಲರೂ ಒಂದೇ ಮೂಲದಿಂದ ಒಂದೇ ಒಂದು ಗುರಿಯನ್ನು ಸೇರುವವರಾಗಿದ್ದಾರೆ. ಎಲ್ಲಾ ಮಾನವರು ದೇವರಿಂದ ಉಗಮಿಸಿದರು. ಅವರಿಂದ ಸೃಷ್ಟಿಸಲ್ಪಟ್ಟರು. ಅವರ ಸ್ವರೂಪ ಮತ್ತು ಹೋಲಿಕೆಯಲ್ಲಿ ರೂಪಿಸಲ್ಪಟ್ಟರು. ಅವರೆಲ್ಲರ ಜೀವನ ಧ್ಯೇಯ ಒಂದೇ. ಅವರು ದೇವರ ಗೆಳತನದಲ್ಲಿ ಮತ್ತವರ ಪ್ರಸನ್ನತೆಯಲ್ಲಿ ಸಂತೋಷಿಸಲು ಸೃಷ್ಟಿಸಲ್ಪಟ್ಟರು. ಈ ಗುರಿಯನ್ನು ತಲುಪುವಂತೆ ದೇವರು ಅವರನ್ನು ನಡೆಸುತ್ತಾರೆ.

ಎಲ್ಲ ಜನರಲ್ಲಿ ಐಕ್ಯತೆಯನ್ನು ತರುವ ಜವಾಬ್ದಾರಿ ಧರ್ಮಸಭೆಗಿದೆ. ಆದುದರಿಂದ ಅದು ವಿವಿಧ ಧರ್ಮಗಳಲ್ಲಿ ಆಸಕ್ತಿ ತೋರಿಸುತ್ತದೆ. ಜನರು ತಮ್ಮ ಮನಸ್ಸನ್ನು ಕಾಡುವ ಮೂಲಭೂತ ಪ್ರಶ್ನೆಗಳಿಗೆ ಉತ್ತರವನ್ನು ತಮ್ಮ ಮತಧರ್ಮಗಳಿಂದ ಕಂಡುಕೊಳ್ಳಲು ಅಪೇಕ್ಷಿಸುತ್ತಾರೆ. ಮಾನವ ಎಂದರೆ ಯಾರು? ಅವನ ಜೀವನದ ಅರ್ಥ ಮತ್ತು ಗುರಿ ಏನು? ಪಾಪವೆಂದರೇನು? ಒಳಿತೆಂದರೇನು? ಯಾತನೆ ಯಾವಾಗ ಬರುತ್ತದೆ ಮತ್ತದರ ಉದ್ದೇಶವೇನು? ನಿಜ ಸಂತೋಷದ ಮಾರ್ಗ ಯಾವುದು? ಸಾವು ಎಂದರೇನು? ನಾವು ಎಸಗಿದ ಒಳಿತು ಕೆಡುಕುಗಳಿಗೆ ತೀರ್ಪು ಉಂಟೇ? ಸಂಭಾವನೆಯುಂಟೇ? ನಾವು ಎಲ್ಲಿಂದ ಬಂದವರು ಮತ್ತು ಎಲ್ಲಿಗೆ ಹೋಗುತ್ತಿದ್ದೇವೆ? ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಅವರು ಒಂದು ಗೂಢವನ್ನು ಸ್ಪರ್ಷ ಗುರುತಿಸಿದ್ದಾರೆ. ಈ ಶಕ್ತಿ ಈ ಪ್ರಪಂಚದ ಆಗುಹೋಗುಗಳನ್ನು ರೂಪಿಸುತ್ತದೆ ಮತ್ತು ಮಾನವನ ಗುರಿಯನ್ನೂ ನಿರ್ಧರಿಸುತ್ತದೆ. ಕೆಲವರು ಪರಮ ಆತ್ಮವನ್ನು ಅಥವಾ ಪಿತನನ್ನು ಕಂಡುಕೊಂಡಿದ್ದಾರೆ. ಈ ಸ್ಪರ್ಷ ಮತ್ತು ಪರಿಜ್ಞಾನ ಅವರ ಜೀವನದ ಮೇಲೆ ಅಗಾಧ ಪರಿಣಾಮವನ್ನು ಬೀರುತ್ತಾ ಅವರನ್ನು ಗಾಢ ಧಾರ್ಮಿಕ ವ್ಯಕ್ತಿಗಳನ್ನಾಗಿ ಮಾಡಿದೆ.

ಪ್ರಪಂಚದಲ್ಲಿರುವ ಪ್ರಮುಖ ಧರ್ಮಗಳಲ್ಲಿ ನಾವು ಹಿಂದು, ಬೌಧ ಮತ್ತು ಇಸ್ಲಾಂ ಧರ್ಮಗಳನ್ನು ಪರಿಗಣಿಸಬಹುದು.

## 1. ಹಿಂದು ಮತ್ತು ಬೌಧ ಧರ್ಮ :

ಹಿಂದೂ ಮತಸ್ಥರು ದೈವಿಕ ರಹಸ್ಯವನ್ನು ಧ್ಯಾನಿಸಿ ಅದನ್ನು ಅಸಂಖ್ಯಾತ ಅಪರೂಪ ಪುರಾಣಗಳಲ್ಲೂ ತತ್ವಜ್ಞಾನಿಕ ಪರಿಶೋಧನೆಗಳಲ್ಲೂ ವ್ಯಕ್ತ ಪಡಿಸುತ್ತಾರೆ. ಅವರು ಮಾನವ ಪರಿಶ್ರಮ ಆತಂಕದಿಂದ ಬಿಡುಗಡೆಯನ್ನೂ ಅಪೇಕ್ಷಿಸುತ್ತಾ ತಪಶ್ಚರ್ಯೆ, ಗಾಢಧ್ಯಾನ ಅಥವಾ ದೇವರಿಗೆ ಮೊರೆ ಹೋಗುವುದರಲ್ಲಿ ಪರಿಹಾರವನ್ನು ಕಂಡುಕೊಂಡರು. ಬೌಧ ಧರ್ಮ ವಿವಿಧ ಪಂಗಡಗಳ ಸಂಗಮ. ಅದು ಈ ಚಂಚಲ ಲೋಕದ ಅಪೂರ್ಣತೆಯನ್ನು ಕಂಡಿತು. ಭಕ್ತಿ ಮತ್ತು ಭರವಸೆಯಿಂದ ಈ ಜೀವನದಿಂದ ಸಂಪೂರ್ಣ ಜ್ಞಾನೋದಯ ಗಳಿಸಬಹುದೆಂದು ಅದು ಬೋಧಿಸುತ್ತದೆ.

ಕಥೋಲಿಕ ಧರ್ಮಸಭೆ ಈ ಧರ್ಮ ಅಥವಾ ಇತರ ಧರ್ಮಗಳಲ್ಲಿ ಅಡಕವಾಗಿರುವ ಸತ್ಯ ಮತ್ತು ಪವಿತ್ರವಾಗಿರುವ ಏನನ್ನೂ ತಿರಸ್ಕರಿಸುವುದಿಲ್ಲ. ಅವನ್ನು ಪೂಜ್ಯ ಭಾವದಿಂದ ಗೌರವಿಸುತ್ತದೆ. ಈ ಧರ್ಮಗಳ ನಡಳವಿಕೆ ಮತ್ತು ಜೀವನ, ವಿಧಿ ನಿಯಮ ಮತ್ತು ಬೋಧನೆಗಳು ಕಥೋಲಿಕ ಧರ್ಮದಿಂದ ಅನೇಕ ರೀತಿಯಲ್ಲಿ ಭಿನ್ನವಾಗಿದ್ದರೂ ಅವುಗಳಲ್ಲೂ ಸತ್ಯದ ಬೆಳಕನ್ನೂ ಅಂಗೀಕರಿಸುತ್ತದೆ. ಈ ಬೆಳಕು ಎಲ್ಲ ಜನರಿಗೂ ಜ್ಞಾನೋದಯ ನೀಡುತ್ತದೆ. ಆದರೂ ಧರ್ಮಸಭೆ ಸಾರುತ್ತಿರುವುದು ಎಂದೆಂದೂ ಸಾರುವುದೇನೆಂದರೆ ಪ್ರಭು ಕ್ರಿಸ್ತರು "ಮಾರ್ಗವು, ಸತ್ಯವೂ, ಜೀವವೂ" (ಯೊವಾ14:6) ಆಗಿದ್ದು ಅವರಲ್ಲಿ ದೇವರು ಸಮಸ್ತವನ್ನು ಸಂಧಾನ ಪಡಿಸಿಕೊಂಡರು.

## ಇಸ್ಲಾಂ ಧರ್ಮ :

ಮಹಮ್ಮದಿಯರು ಏಕ ದೇವರನ್ನು ಆರಾಧಿಸುತ್ತಾರೆ. ಆ ದೇವರು ಜೀವಂತರು, ತಾವಾಗಿರುವವರು, ಕರುಣಾಮಯಿ, ಸರ್ವಶಕ್ತರು, ಇಹಪರ ಲೋಕಗಳ ಸೃಷ್ಟಿ ಕರ್ತರು ಎಂದು ನಂಬುತ್ತಾರೆ. ಈ ದೇವರು ತಮ್ಮನ್ನೇ ಮಾನವರಿಗೆ ತಿಳಿಯಪಡಿಸುತ್ತಾರೆ ಮತ್ತು ಅವರು ವಿಶ್ವಾಸದಿಂದ ಅವರನ್ನು ಅಂಗೀಕರಿಸಬೇಕು. ಮಹಮ್ಮದೀಯರು ದೇವರ ಅಗಮ್ಯ ವಿಧಿನಿಯಮಗಳಿಗೆ ಪೂರ್ಣ ಹೃದಯದಿಂದ ವಿಧೇಯರಾಗಿರಲು ಸರ್ವವಿಧದಲ್ಲೂ ಪ್ರಯತ್ನಿಸುತ್ತಾರೆ. ಅವರು ಪ್ರಭು ಕ್ರಿಸ್ತರನ್ನು ಒಬ್ಬ ಪ್ರವಾದಿ ಎಂದು ಮಾತ್ರ ಅರಿತಿದ್ದಾರೆ. ಅವರು ಮರಿಯಮ್ಮನವರು ಕನ್ಯಾಮಾತೆಯೆಂದು ಅಂಗೀಕರಿಸಿ ಗೌರವಿಸುತ್ತಾರೆ. ಅವರು ನೈತಿಕ ಜೀವನವನ್ನು ಮಾನ್ಯ ಮಾಡುತ್ತಾ ದೇವರನ್ನು ಪ್ರಾರ್ಥನೆ, ಉಪವಾಸ ಮತ್ತು ದಾನಧರ್ಮಗಳ ಮುಖಾಂತರ ಆರಾಧಿಸುತ್ತಾರೆ. ಅವರು ಮರು ಜೀವದಲ್ಲಿ ಲಭಿಸುವ ಸಂಭಾವನೆಯನ್ನು ಎದುರು ನೋಡುತ್ತಾರೆ. ಧರ್ಮಸಭೆ ಇವರನ್ನು ಮೆಚ್ಚುಗೆಯಿಂದ ಗೌರವಿಸುತ್ತದೆ. ಕೆಲವು ಶತಮಾನಗಳ ಹಿಂದೆ ಇವರಿಗೂ ಕ್ರೈಸ್ತರಿಗೂ ನಡೆದ ವ್ಯಾಜ್ಯ ಮತ್ತು ವೈಮನಸ್ಸನ್ನು ಮರೆತು ಬಿಡುವಂತೆ ಅಗ್ರಹಿಸುತ್ತದೆ.

ಧರ್ಮಸಭೆ ಎಲ್ಲ ಧರ್ಮಗಳಲ್ಲಿರುವ ಎಲ್ಲ ಒಳಿತು ದೈವೀಕೃತವೆಂದು ಶ್ಲಾಘಿಸಲು ಕರೆಕೊಡುತ್ತದೆ. ಅವುಗಳಲ್ಲಿರುವ ಆಧ್ಯಾತ್ಮಕತೆ, ಸಾಮಾಜಿಕ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳನ್ನು ಅತೀವವಾಗಿ ಮಾನ್ಯ ಮಾಡಬೇಕೆನ್ನುತ್ತದೆ. ಇಂಥಹ ಉದಾತ್ತ ಭಾವನೆ ಇತರ ಧರ್ಮೀಯರೊಂದಿಗೆ



ಸಂವಾದ ನಡೆಸಲೂ ಸಾಮಾನ್ಯ ಕೆಲಸಕಾರ್ಯಗಳಲ್ಲಿ ಸಹಕರಿಸಲೂ ಸಹಾಯಕವಾಗುತ್ತದೆ. ಇದು ವಿವೇಕ ಮತ್ತು ಪ್ರೀತಿ, ಕ್ರಿಸ್ತೀಯ ವಿಶ್ವಾಸ ಮತ್ತು ಜೀವನಕ್ಕೆ ಸಾಕ್ಷಿಯನ್ನೀಯುತ್ತದೆ. ಸಾಮಾಜಿಕ ನ್ಯಾಯ, ನೈತಿಕ ಕಲ್ಯಾಣ, ಎಲ್ಲ ಮಾನವರಲ್ಲಿ ಶಾಂತಿ ಸೌಹಾರ್ದ ಮತ್ತು ಸ್ವಾತಂತ್ರ್ಯವನ್ನು ಪೋಷಿಸುವ ಚಟುವಟಿಕೆಗಳಲ್ಲಿ ಸಹಕರಿಸಲು ಸಾಧ್ಯವಾಗುತ್ತದೆ.

## 3. ಯೆಹೂದ್ಯ ಧರ್ಮೀಯರೊಡನೆ ನಮ್ಮ ಸಂಬಂಧ :

ವ್ಯಾಟಿಕನ್ ಸಮ್ಮೇಳನ ನಮಗೂ ಯೆಹೂದ್ಯರಿಗೂ ಸಾಮಾನ್ಯವಾಗಿರುವ ಅಪೂರ್ವ ಆಧ್ಯಾತ್ಮಿಕ ಪಿತ್ರಾರ್ಜಿತದೆಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಕಥೋಲಿಕರು ಅವರೊಂದಿಗೆ ಪರಸ್ಪರ ಅರಿವು, ಗೌರವ ಮತ್ತು ಸೋದರ ಸಂವಾದವನ್ನು ಬೆಳೆಸಬೇಕೆಂದು ಅಗ್ರಹಿಸುತ್ತದೆ. ಯೆಹೂದ್ಯ ಮುಖಂಡರು ಮತ್ತು ಅವರ ಹಿಂಬಾಲಕರು ಪ್ರಭು ಕ್ರಿಸ್ತರ ಮರಣಕ್ಕೆ ಒತ್ತಾಯಿಸಿದ್ದು ಸತ್ಯ. ಆದರೆ ಪ್ರಭುವಿನ ಯಾತನೆಯಲ್ಲಿ ನಡೆದುದೆಲ್ಲವನ್ನು ಅಂದಿನ ಯೆಹೂದ್ಯರ ಅಥವಾ ಇಂದಿನ ಯೆಹೂದ್ಯರ ಮೇಲೆ ನಿರ್ದಿಷ್ಟವಾಗಿ ಹೇರಿಸಲಾಗದು. ಯೆಹೂದ್ಯರನ್ನು ತಿರಸ್ಕೃತರು, ಅಪರಾಧಿಗಳು ಎಂದು ಪವಿತ್ರ ಗ್ರಂಥದ ಬೆಂಬಲ ಪಡೆದವರಂತೆ ವರ್ತಿಸುವುದು ಸರಿಯಲ್ಲ. ಈ ವಿಷಯದ ಬಗ್ಗೆ ಧರ್ಮೋಪದೇಶ ಮಾಡುವಾಗ ಮತ್ತು ದೈವವಾರ್ತೆಯನ್ನು ಬೋಧಿಸುವಾಗ ಶುಭ ಸಂದೇಶದ ಸತ್ಯಕ್ಕೂ ಪ್ರಭು ಕ್ರಿಸ್ತರ ಮನೋಭಾವಕ್ಕೂ ಅನುಗುಣವಲ್ಲದ್ದನ್ನು ಉಪದೇಶಿಸಬಾರದು.

## 4. ಸಾರ್ವತ್ರಿಕ ಸೋದರತ್ವ :

ನಾವು ಒಬ್ಬ ವ್ಯಕ್ತಿಯನ್ನು ಸೋದರ ಭಾವನೆಯಿಂದ ಅಂಗೀಕರಿಸಲು ನಿರಾಕರಿಸಿದರೆ, ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟವನನ್ನು ಆದರಿಸಲು ಅಶಕ್ತರಾದರೆ, ತಂದೆಯಾದ ದೇವರಲ್ಲಿ ಪ್ರಾರ್ಥಿಸಲು ಅರ್ಹರಲ್ಲ. ತಂದೆಯಾದ ದೇವರೊಡನೆ ಮಾನವನಿಗಿರುವ ಸಂಬಂಧ ಮಾನವ ಮಾನವರ ಮಧ್ಯದಲ್ಲಿರಬೇಕಾದ ಸಂಬಂಧ ಬಹಳವಾಗಿ ಹೊಂದಿಕೊಂಡಿದೆ. ಪವಿತ್ರ ಗ್ರಂಥವೇ ಹೀಗೆನ್ನುತ್ತದೆ. 'ಪ್ರೀತಿಸದವನು ದೇವರನ್ನು ಅರಿತವನಲ್ಲ "(ಯೊವಾ 4:8)

ಮನುಷ್ಯರನ್ನು ಜನಾಂಗ, ವರ್ಣ ಜೀವನ ಅಂತಸ್ತು, ಅಥವಾ ಧರ್ಮದ ಆಧಾರದ ಮೇಲೆ ತಾರತಮ್ಯ ಮಾಡುವುದು ಮತ್ತು ಶೋಷಣೆ ಮಾಡುವುದು ಪ್ರಭು ಕ್ರಿಸ್ತರ ಭಾವನೆಗೆ ವಿರೋಧವಾದುದು. ಇದಕ್ಕೆ ಪ್ರತಿಯಾಗಿ ಪ್ರೇಷಿತ ಪೇತ್ರ ಮತ್ತು ಪೌಲರ ಜಾಡಿನಲ್ಲಿ ನಡೆಯುತ್ತಾ ವ್ಯಾಟಿಕನ್ ಸಮ್ಮೇಳನ ಈ ವಿನಂತಿಯನ್ನು ಮಾಡುತ್ತದೆ. ಕ್ರೈಸ್ತ ಭಕ್ತ ವಿಶ್ವಾಸಿಗಳು ಜನಾಂಗಗಳಲ್ಲಿ ಒಳ್ಳೆಯ ಸೋದರತ್ವ ಸಂಬಂಧವನ್ನು ಹೊಂದಿರಬೇಕು (1ಪೇತ್ರ 2:12). ಜೊತೆಗೆ ಸಾಧ್ಯವಾದ ಮಟ್ಟಿಗೆ ಎಲ್ಲಾ ಜನರೊಂದಿಗೆ ಶಾಂತಿಯಿಂದ ಬಾಳಿರಿ. ಆಗ ಅವರು ಸ್ವರ್ಗದಲ್ಲಿರುವ ತಂದೆಗೆ ನಿಜ ಮಕ್ಕಳಾಗುತ್ತಾರೆ.

# XI ದೈವೀ ಪ್ರಕಟಣೆ
## (ಸಂವಿಧಾನ)

### ಸಂಪಾದಕರ ಪ್ರಸ್ಥಾವನೆ :

ದೈವೀ ಪ್ರಕಟಣೆಯ ಬಗ್ಗೆ ದ್ವಿತೀಯ ವ್ಯಾಟಿಕನ್ ಸಮ್ಮೇಳನದ ಸಂವಿಧಾನ ಸುಪ್ರಸಿದ್ಧ ಪತ್ರಗಳಲ್ಲಿ ಒಂದು, ವಿವಿಧ ಇತರೆ ವಿಷಯಗಳ ಜೊತೆಯಲ್ಲಿ ಈ ಸಂವಿಧಾನ ಕಥೋಲಿಕ ಮತ್ತು ಇತರ ಧರ್ಮದವರೊಂದಿಗೆ ಸಂವಾದಕ್ಕೆ ಅವಕಾಶ ಮಾಡಿಕೊಡುತ್ತದೆ.

ಈ ಪತ್ರ ದೈವೀ ಪ್ರಕಟಣೆಯನ್ನು ಜನರು ವಿಶ್ವಾಸಿಸಬೇಕಾದ ನಿಗದಿತ ಸತ್ಯ ಸಿದ್ದಾಂತಗಳ ಕಂತೆಯೆಂದು ಪರಿಗಣಿಸುವುದಿಲ್ಲ. ದೈವೀ ಪ್ರಕಟಣೆ ಎಂಬುದು ಕ್ರಿಯಾತ್ಮಕ ಶಕ್ತಿಶೀಲ ಐತಿಹಾಸಿಕ ಘಟನೆ ಎನ್ನುತ್ತದೆ. ದೇವರು ಅನೇಕ ಐತಿಹಾಸಿಕ ಘಟನೆಗಳ ಮುಖಾಂತರ ತಮ್ಮನ್ನೆ ಮನುಷ್ಯರಿಗೆ ಪ್ರಕಟಿಸಿ ಸಾಕ್ಷಾತ್ಕರಿಸಿದರು. ಈ ಘಟನೆಗಳ ತುತ್ತತುದಿ ಪ್ರಭು ಕ್ರಿಸ್ತರ ಪ್ರತ್ಯಕ್ಷತೆ. ಆದುದರಿಂದ ಮಾನವನ ರಕ್ಷಣೆಗಾಗಿ ಕಾರ್ಯ ಮಗ್ನರಾದ ದೇವರ ಚರಿತ್ರೆಯ ಮೂಲತಃ ದೈವೀ ಪ್ರಕಟಣೆಯಾಗಿದೆ. ಈ ಚರಿತ್ರೆಯನ್ನು ನಾವು ಸೃಷ್ಟಿ ಕಾರ್ಯದಲ್ಲಿ ಕಾಣುತ್ತೇವೆ; ಅಬ್ರಹಾಮನ ಕರೆ, ದೈವೀ ಪ್ರಜೆಯ ಸಂಘಟನೆಯಲ್ಲಿ ಮುಂದುವರೆದು ದೇವರು ತಮ್ಮ ಪುತ್ರನನ್ನು ಕಳುಹಿಸುವುದರಲ್ಲಿ ಅತ್ಯುನ್ನತ ಹಂತವನ್ನು ತಲುಪುತ್ತದೆ. ಅದರಲ್ಲೇ ಪುತ್ರನ ಜೀವನ, ಮರಣ ಮತ್ತು ಪುನರುತ್ಥಾನ ಸೇರ್ಪಡೆಯಾಗುತ್ತದೆ.

ದ್ವಿತೀಯ ಅಧ್ಯಾಯ ಪವಿತ್ರ ಗ್ರಂಥ ಮತ್ತು ಸಂಪ್ರದಾಯಕ್ಕಿರುವ ಸಂಬಂಧದ ಸೂಕ್ಷ್ಮ ಸಮಸ್ಯೆಯನ್ನು ಪ್ರಸ್ಥಾಪಿಸುತ್ತದೆ. ಈ ಸಮಸ್ಯೆಯ ಬಗ್ಗೆ ಎರಡು ವಿಭಿನ್ನ ಅಭಿಪ್ರಾಯಗಳುಳ್ಳ ಪಂಥಗಳಿವೆ. ಮೊದಲನೆಯ ಪಂಥ ಪವಿತ್ರ ಗ್ರಂಥ ಮತ್ತು ಸಂಪ್ರದಾಯ, ಇವು ವಿಭಿನ್ನ ಮತ್ತು ಸ್ವತಂತ್ರ ದೈವೀ ಪ್ರಕಟಣಾ ಮೂಲಗಳು. ಅಂದರೆ ಸಂಪ್ರದಾಯದಲ್ಲಿ ಅಡಗಿರುವ ಕೆಲವು ಸತ್ಯಗಳು ಪವಿತ್ರ ಗ್ರಂಥದಲ್ಲಿಲ್ಲ ಮತ್ತು ಪವಿತ್ರ ಗಂಥದಲ್ಲಿರುವುದು ಸಂಪ್ರದಾಯದಲ್ಲಿ. ಇನ್ನೊಂದು ಪಂಥದ ಅಭಿಪ್ರಾಯದಲ್ಲಿ ಪವಿತ್ರ ಗ್ರಂಥ ಮತ್ತು ಸಂಪ್ರದಾಯ ಒಂದೇ ಸತ್ಯದ ಎರಡು ಮುಖಗಳು ಅಥವಾ ಪ್ರತಿಬಿಂಬಗಳು. ಆದುದರಿಂದ ಪವಿತ್ರ ಗ್ರಂಥದಲ್ಲಿರುವ ಸತ್ಯಗಳು ಒಂದಲ್ಲಿ ಇನ್ನೊಂದು ರೀತಿಯಲ್ಲಿ ಪರಂಪರೆಯಲ್ಲಿವೆ, ಪರಂಪರೆಯಲ್ಲಿರುವುದು ಪವಿತ್ರ ಗ್ರಂಥವಲ್ಲಿದೆ. ದೈವೀ ಪ್ರಕಟಣೆಯ ಪ್ರಸ್ತುತ ಸಂವಿಧಾನ ಈ ಸಮಸ್ಯೆಗೆ ಉತ್ತರವನ್ನು ನೀಡದೆ ಅದನ್ನು ದೈವ ಶಾಸ್ತ್ರಜ್ಞರ ದೀರ್ಘ ಪರ್ಯಾಲೋಚನೆ ಮತ್ತು ಊಹೆಗೆ ಬಿಟ್ಟಿದೆ. ತೀರ್ಮಾನ ತೆಗೆದುಕೊಳ್ಳಬೇಕಾದವರು ಅವರು.

ಈ ಸಂವಿಧಾನದಲ್ಲಿ ಶುಭ ಸಂದೇಶಗಳ ಬಗ್ಗೆ ಒಂದು ಪ್ರಮುಖ ಭಾಗವಿದೆ. ಅದು ಪ್ರಭುಕ್ರಿಸ್ತರ ಪುನರುತ್ಥಾನದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತದೆ. ಪುನರುತ್ಥಾನ ಮತ್ತು ನಂತರದ ಪವಿತ್ರಾತ್ಮರ ಆಗಮನದಿಂದ ಪ್ರೇಷಿತರು ಯೇಸು ಸ್ವಾಮಿಯಲ್ಲಿ ಮತ್ತು ಅವರ ನಿಯೋಗದಲ್ಲಿ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಲು ಶಕ್ತರಾದರು. ಈ ಸಂವಿಧಾನ ಶುಭ ಸಂದೇಶಗಳು ನಂಬಲರ್ಹ ಐತಿಹಾಸಿಕ ದಾಖಲೆಗಳೆನ್ನುತ್ತದೆ. ಆದರೆ ಶುಭಸಂದೇಶಗಳು



ಆಧುನಿಕ ಚರಿತ್ರಾಕಾರರಂತೆ ಘಟನೆಗಳನ್ನು ದಾಖಲಿಸುವ ಅಭಿಪ್ರಾಯವನ್ನು ಹೊಂದಿರಲಿಲ್ಲ. ವಾಸ್ತವವಾಗಿ ನಡೆದ ಘಟನೆಗಳನ್ನು ವಿವರವಾಗಿ ವರ್ಣಿಸುವ ಉದ್ದೇಶ ಅವರಲ್ಲಿರಲಿಲ್ಲ. ಪ್ರಭು ಕ್ರಿಸ್ತರ ಜೀವನ, ಮರಣ ಮತ್ತು ಪುನರುತ್ಥಾನ ಇವು ನಮ್ಮ ವಿಶ್ವಾಸದ ಅಸ್ತಿವಾರ ಮತ್ತು ರಕ್ಷಣೆಯ ಭರವಸೆ ಎಂಬ ಸಂದೇಶವನ್ನು ನೀಡುವುದಾಗಿತ್ತು.

ನಾಲ್ಕು ಶುಭ ಸಂದೇಶಗಳ ರಚನೆಯಲ್ಲಿ ಮೂರು ಹಂತಗಳ ಬೆಳವಣಿಗೆಯನ್ನು ನಾವು ಗುರುತಿಸಬಹುದು. ಪ್ರಥಮ ಮತ್ತು ಮೂಲ ಹಂತದಲ್ಲಿ ನಮ್ಮ ಪ್ರಭುವಿನ ಜೀವನ ಬೋಧನೆ ಮತ್ತು ಸಾಧನೆಯ ಪ್ರಸ್ತಾಪವಿದೆ. ದ್ವಿತೀಯ ಹಂತದಲ್ಲಿ ಪ್ರಭು ಯೇಸುವಿನ ಬೋಧನೆ ಮತ್ತು ಸಾಧನೆಯನ್ನು ಪ್ರೇಷಿತ ಧರ್ಮಸಭೆ ಅಂದಿನ ಪ್ರತಿಕೂಲ ಪರಿಸ್ಥಿತಿಯಲ್ಲೂ ಹೇಗೆ ಕಾರ್ಯಗತಗೊಳಿಸಿತು ಎಂಬುದನ್ನು ತಿಳಿಸುತ್ತದೆ. ತೃತೀಯ ಮತ್ತು ಅಂತಿಮ ಹಂತದಲ್ಲಿ ಶುಭಸಂದೇಶಗಳು ಯೇಸು ಸ್ವಾಮಿಯ ಬಗ್ಗೆ ಧರ್ಮಸಭೆಯ ಸಂಪ್ರದಾಯವನ್ನು ಬಳಸಿಕೊಂಡು ಶುಭಸಂದೇಶಗಳನ್ನು ಬರೆದರು. ಈ ನಾಲ್ಕು ಶುಭಸಂದೇಶಗಳಲ್ಲಿ ನಾವು ಯೇಸುಸ್ವಾಮಿಯ ನಿಯೋಗ ಮತ್ತು ಬೋಧನೆಯ ಬಗ್ಗೆ ಧ್ಯಾನಿಸುತ್ತೇವೆ. ಪ್ರೇಷಿತ ಧರ್ಮಸಭೆಯ ಜೀವನ, ದೈವಾರಾಧನೆ, ಅದರ ಇಕ್ಕಟ್ಟು ಬಿಕ್ಕಟ್ಟು ಇವುಗಳು ಪ್ರತಿ ಶುಭ ಸಂದೇಶಿಯ ಬರವಣಿಗೆಯಲ್ಲಿ ವಿಶಿಷ್ಠವಾದರೂ ಪ್ರತ್ಯೇಕವಾಗಿಲ್ಲ. ಪ್ರತಿಯೊಬ್ಬರೂ ತಮ್ಮದೇ ಆದ ದೈವಶಾಸ್ತ್ರೀಯ ದೃಷ್ಟಿಕೋನದಲ್ಲಿ ಶುಭ ಸಂದೇಶವನ್ನು ರಚಿಸಿದರು.

### ಪೀಠಿಕೆ

ಈ ಸಂವಿಧಾನದ ಮುಖಾಂತರ ದ್ವಿತೀಯ ವ್ಯಾಟಿಕನ್ ಸಮ್ಮೇಳನ ದೈವೀಪ್ರಕಟಣೆಯ ಬಗ್ಗೆ ಅಧಿಕೃತ ಬೋಧನೆಯನ್ನು ಮುಂದಿಡಲು ಅಪೇಕ್ಷಿಸುತ್ತದೆ. ಅದರ ಉದ್ದೇಶವೇನೆಂದರೆ ಈ ಭೂಲೋಕದ ಸರ್ವಜನರು ರಕ್ಷಣಾ ಸಂದೇಶವನ್ನು ಆಲಿಸಿ ವಿಶ್ವಾಸಿಸಲಿ, ವಿಶ್ವಾಸಿಸಿ ನಿರೀಕ್ಷಿಸಲಿ, ನಿರೀಕ್ಷಿಸಿ ಪ್ರೀತಿಸಲಿ.

## ಅಧ್ಯಾಯ I
## ದೈವೀ ಪ್ರಕಟಣೆ

ಪ್ರೀತಿಯಿಂದ ಪ್ರೇರಿತರಾದ ದೇವರು ತನ್ನನ್ನೇ ಮನುಷ್ಯನಿಗೆ ವ್ಯಕ್ತಪಡಿಸಿದರು. ಮಾನವನು ತಮ್ಮ ದೈವಿಕ ಜೀವನದಲ್ಲಿ ಭಾಗಿಯಾಗಬೇಕು ಎಂದು ಅವನನ್ನು ಮೇಲ್ಮಟ್ಟಕ್ಕೆ ಏರಿಸಲು ಚಿತ್ತರಾದರು.

ಪ್ರಾರಂಭದಲ್ಲಿ ದೇವರು ಎಲ್ಲವನ್ನು ಸೃಷ್ಟಿಸಿ ತಮ್ಮನ್ನೇ ಪ್ರಕಟಿಸಿದರು. ಮಾನವನಾದರೋ ಪಾಪವನ್ನು ಕಟ್ಟಿಕೊಂಡನು. ಅವನು ಪಾಪಿಯಾದರೂ ದೇವರು ತಮ್ಮ ಯೋಜನೆಯನ್ನು ತೊರೆಯಲಿಲ್ಲ. ಅವರು ನಮ್ಮ ಪ್ರಥಮ ಪೋಷಕರಿಗೆ ವಾಗ್ದಾನವನ್ನು ಮಾಡಿ ರಕ್ಷಣಾ ಭರವಸೆಯನ್ನಿತ್ತು ಇಡೀ ಮಾನವ ಜನಾಂಗವನ್ನು ತಮ್ಮ ವಶದಲ್ಲಿಟ್ಟುಕೊಂಡರು.

ದೇವರು ಅಬ್ರಹಾಮನನ್ನು ಕರೆದರು. ಅಬ್ರಹಾಮ ಇಸ್ರಯೇಲ್ ಜನಾಂಗದ ಸ್ಥಾಪಕನಾಗಬೇಕಿತ್ತು. ಈ ಜನಾಂಗದ ಮುಖಾಂತರವೇ ಎಲ್ಲ ಜನಾಂಗಗಳಿಗೆ ರಕ್ಷಣೆ ಲಭಿಸಬೇಕಿತ್ತು.

ದೇವರು ಮೋಶೆಗೆ ವಿಶೇಷ ಆಯೋಗವನ್ನಿತ್ತರು. ಮೋಶೆಯ ನೇತೃತ್ವದಲ್ಲಿ ಇಸ್ರಯೇಲರು ದೈವ ಪ್ರಜೆಯಾದರು. ಶತಶತಮಾನಗಳಲ್ಲಿ ದೇವರು ಪ್ರವಾದಿಗಳನ್ನು ಆಯ್ಕೆ ಮಾಡಿದರು. ಇವರು ಜನರಿಗೆ ಬೋಧಿಸಿದರು. ದೇವರ ಚಿತ್ತವನ್ನು ಅವರಿಗೆ ಅರ್ಥೈಸಿದರು. ದೇವರ ಕ್ರಿಯಾವಿಧಾನವನ್ನು ತಿಳಿಯಪಡಿಸಿ ಒಬ್ಬ ರಕ್ಷಕರನ್ನು ಎದುರು ನೋಡುವಂತೆ ಅವರನ್ನು ಸಿದ್ಧಪಡಿಸಿದರು. ಕ್ರಮೇಣ ಇಸ್ರಯೇಲರು ತಮ್ಮನ್ನು ದೇವರೇಕೆ ಸ್ವಕೀಯ ಪ್ರಜೆಯನ್ನಾಗಿ ಮಾಡಿದರು ಎಂಬುದನ್ನು ಗ್ರಹಿಸಿಕೊಂಡರು.

ಪ್ರಭು ಕ್ರಿಸ್ತರ ಕಾಲಕ್ಕೆ ಮೊದಲು ಹಳೆಯ ಒಡಂಬಡಿಕೆಯಲ್ಲಿ ರಕ್ಷಣಾ ಯೋಜನೆಯ ನೀಲಿ ನಕ್ಷೆಯನ್ನು ನಾವು ಕಾಣಬಹುದು. ಆ ಲೇಖನಾ ಶ್ರೇಣಿ ಪವಿತ್ರಾತ್ಮರ ಸ್ಫೂರ್ತಿಯಿಂದ ರಚಿಸಲಾಗಿದ್ದು ದೇವರ ವಾಕ್ಯವಾಗಿದೆ. ಅದು ಶಾಶ್ವತ ಮೌಲ್ಯವನ್ನು ಹೊಂದಿದ್ದು ಪ್ರಭು ಕ್ರಿಸ್ತರ ರಹಸ್ಯವನ್ನು ನಮ್ಮ ಸ್ವಂತ ಕರೆಯೋಣವನ್ನು ಗ್ರಹಿಸಲು ಉಪಯುಕ್ತವಾಗಿದೆ.

ಅಂತಿಮವಾಗಿ ದೇವರು ತಮ್ಮ ಸೃಷ್ಟಿ ಕಾರ್ಯದ ಮತ್ತು ಇಸ್ರಯೇಲಿನ ಇತಿಹಾಸದ ತುತ್ತ ತುದಿಯಾದ ತಮ್ಮ ಪುತ್ರನನ್ನು ಕಳುಹಿಸಿದರು. ದೇವರು ಹಳೆಯ ಒಡಂಬಡಿಕೆಯ ಕಾಲದಲ್ಲಿ ಎಸಗಿದೆಲ್ಲವನ್ನು ಪ್ರಭು ಕ್ರಿಸ್ತರು ಸಂಪೂರ್ಣಗೊಳಿಸಿದರು. ಅವರು ತಮ್ಮ ಜೀವನ, ಮರಣ, ಪುನರುತ್ಥಾನ ಮತ್ತು ಪವಿತ್ರಾತ್ಮರ ಕೊಡುಗೆಯ ಮುಖಾಂತರ ದೈವೀ ಪ್ರಕಟಣೆಯನ್ನು ಅಂತಿಮವಾಗಿ ಸಂಪೂರ್ಣಗೊಳಿಸಿದರು. ದೇವರು ನಮ್ಮೊಡನೆ ಯಾವಾಗಲೂ ಇರುತ್ತಾರೆ. ನಮ್ಮನ್ನು ಪಾಪ ಮತ್ತು ಮರಣದಿಂದ ಮುಕ್ತಗೊಳಿಸುತ್ತಾರೆ ಎಂಬ ಭರವಸೆಯನ್ನು ಕ್ರಿಸ್ತರ ಮುಖಾಂತರ ನಾವು ಹೊಂದಿದ್ದೇವೆ.

ಆದುದರಿಂದ ಪ್ರಭುಕ್ರಿಸ್ತರ ನಂತರ ಇನ್ನು ಯಾವ ಬಾಹ್ಯ ದೈವೀ ಪ್ರಕಟಣೆ ಇರಲಾರದು. (ಸಂತರು ಮತ್ತು ಅನುಭಾವಿಗಳು ವೈಯಕ್ತಿಕ ಪ್ರಕಟಣೆಗಳನ್ನು ಪಡೆಯುತ್ತಾ ಬಂದಿದ್ದಾರೆ. ಆದರೆ ಇಂಥಹ ಪ್ರಕಟಣೆಗಳು ಧರ್ಮಸಭೆಯನ್ನು ಬಂಧಿಸುವುದಿಲ್ಲ. ಅವು ಪ್ರಭುಕ್ರಿಸ್ತರಲ್ಲಿ ಮತ್ತು ಅವರ ಮುಖಾಂತರ ಪ್ರಕಟವಾಗುವುದಕ್ಕೆ ಸತ್ವಭರಿತವಾಗಿ ಏನನ್ನೂ ಕೂಡಿಸುವಂತಿಲ್ಲ.

ಪವಿತ್ರ ಚರಿತ್ರೆಯಲ್ಲಿ ನಾವು ಕಾಣುವಂತೆ ದೇವರು ತಮ್ಮ ಮಾತು ಮತ್ತು ಕ್ರಿಯೆಗಳಿಂದ ತಮ್ಮನ್ನೇ ಪ್ರಕಟಪಡಿಸಿದ್ದಾರೆ. ನಾವು ದೇವರ ಕ್ರಿಯೆಯನ್ನು ಸೃಷ್ಟಿಯಲ್ಲಿ, ಇಸ್ರಯೇಲಿನ ಚರಿತ್ರೆಯಲ್ಲಿ, ಪ್ರಭು ಕ್ರಿಸ್ತರ ಜೀವನ ಮತ್ತು ನಿಯೋಗದಲ್ಲಿ ಕಂಡುಕೊಳ್ಳುತ್ತೇವೆ. ದೇವರ ವಾಕ್ಯದಲ್ಲಿ ಅವರ ಕಾರ್ಯಗಳು ಸಾರಲಾಗಿವೆ, ಪ್ರತಿಬಿಂಬಿಸಲಾಗಿವೆ ಮತ್ತು ಅರ್ಥೈಸಲಾಗಿವೆ. (ದೇವರ ಏಕಮೇವ ವಾಕ್ಯವು ವಿವಿಧ ರೀತಿಯಲ್ಲಿ ವ್ಯಕ್ತವಾಗುತ್ತದೆ. ಅದು ಪವಿತ್ರ ಗ್ರಂಥದಲ್ಲಿ ದಾಖಲಾಗಿದೆ, ದೈವಾರಾಧನಾ ವಿಧಿಯಲ್ಲಿ ಸಾರಲಾಗುತ್ತದೆ ಮತ್ತು ಆಚರಿಸಲಾಗುತ್ತದೆ, ಧರ್ಮಸಭೆಯ ಬೋಧನಾ ಅಧಿಕಾರದಿಂದ ವಿತರಿಸಲಾಗುತ್ತದೆ ಮತ್ತು ಎಲ್ಲಾ ಭಕ್ತ ವಿಶ್ವಾಸಿಗಳ ಬಾಳಿನಲ್ಲಿ ಕ್ರಿಯಾತ್ಮಕವಾಗಿದೆ.

ದೈವೀ ಪ್ರಕಟಣೆಗೆ ಮಾನವನು ಕೊಡುವ ಪ್ರತ್ಯುತ್ತರ ವಿಶ್ವಾಸ, ಅವನು ತನ್ನ ಬುದ್ಧಿ ಮತ್ತು ಚಿತ್ತಶಕ್ತಿಯಿಂದ ದೇವರೊಬ್ಬರೇ ರಕ್ಷಣೆಯ ಭರವಸೆಯೆಂದು ಸಂಪೂರ್ಣವಾಗಿ ಶರಣಾಗತನಾಗುತ್ತಾನೆ. ಈ ಸಂಪೂರ್ಣ ಶರಣಾಗತಿಗೆ ಪವಿತ್ರಾತ್ಮರ ಸಹಾಯ ಅತ್ಯಗತ್ಯ. ಈ ಪವಿತ್ರಾತ್ಮರು ನಮ್ಮ ವಿಶ್ವಾಸವನ್ನು ದೈವೀ ಪ್ರಕಟಣೆಯ ಆಳ ಜ್ಞಾನ ಮತ್ತು ಒಳ ದೃಷ್ಟಿಯನ್ನು ಕೊಟ್ಟು ಸಲಹುತ್ತಾರೆ.



# ಅಧ್ಯಾಯ II

## ದೈವೀ ಪ್ರಕಟಣೆಯ ಹಸ್ತಾಂತರ

ದೇವರು ತಾವು ಪ್ರಕಟಿಸಿದೆಲ್ಲವೂ ಸಂಪೂರ್ಣವಾಗಿದ್ದು ಮುಂದಿನ ಎಲ್ಲಾ ಜನಾಂಗಗಳಿಗೆ ಹಸ್ತಾಂತರವಾಗುವಂತೆ ಮಾಡಿದರು. ಪ್ರಭು ಕ್ರಿಸ್ತರು ಶುಭಸಂದೇಶವನ್ನು ಪ್ರಬೋಧಿಸುವಂತೆ ತಮ್ಮ ಶಿಷ್ಯರಿಗೆ ಆದೇಶವನ್ನಿತ್ತರು. ಪ್ರೇಷಿತರು ಈ ನಿಯೋಗವನ್ನು ಬೋಧನೆ, ಉದಾಹರಣೆ ಪ್ರಭುಕ್ರಿಸ್ತರು ಕಲಿಸಿದ ಎಲ್ಲಕ್ಕೂ ನಿಷ್ಠೆ ಮತ್ತು ಪವಿತ್ರಾತ್ಮರ ಪ್ರಕಟಣೆಯನ್ನು ಸ್ವೀಕರಿಸುತ್ತಾ ಮುಂದುವರಿಸಿದರು. ಅವರು ತಮ್ಮ ಸಹಪಾಟಿಗಳೊಂದಿಗೆ ರಕ್ಷಣೆಯ ಸುವಾರ್ತೆಯನ್ನು ಹೊಸ ಒಡಂಬಡಿಕೆಯಲ್ಲಿ ಬರವಣಿಗೆಯ ಮುಖಾಂತರ ಈ ನಿಯೋಗವನ್ನು ಅನುಷ್ಠಾನಕ್ಕೆ ತಂದರು. ಶುಭಸಂದೇಶವನ್ನು ಧರ್ಮಸಭೆಯಲ್ಲಿ ಸಂರಕ್ಷಿಸಲು ಪ್ರೇಷಿತರು ಧರ್ಮಾಧ್ಯಕ್ಷರನ್ನು ಅವರ ಉತ್ತರಾಧಿಕಾರಿಗಳನ್ನು ತಮ್ಮ ಸ್ಥಾನದಲ್ಲಿ ಸ್ಥಾಪಿಸಿ ಬೋಧನಾ ಅಧಿಕಾರವನ್ನು ಅವರಿಗೆ ಕೊಟ್ಟರು.

ಪ್ರೇಷಿತರ ಬೋಧನೆ ವಿಶೇಷ ರೀತಿಯಲ್ಲಿ ದೈವೀ ಪ್ರೇರಿತ ಪುಸ್ತಕಗಳಲ್ಲಿ ಪ್ರತಿಬಿಂಬಿತವಾಗಿದ್ದು ಅದು ಶತಶತಮಾನಕ್ಕೂ ಹಸ್ತಾಂತರಿಸಲಾಗಿದೆ. ಈ ವಿಧದಲ್ಲಿ ಮತ್ತು ಧರ್ಮಸಭೆ ತಮ್ಮ ಜೀವನ ಮತ್ತು ಆರಾಧನಾ ವಿಧಿಯ ಮುಖಾಂತರ ದೈವೀ ಪ್ರಕಟಣೆ ಎಲ್ಲಾ ಸಂತತಿಗಳಿಗೆ ತಲುಪುವಂತೆ ಮಾಡುತ್ತದೆ. ಹಳೆಯ ಮತ್ತು ಹೊಸ ಒಡಂಬಡಿಕೆಯ ಪವಿತ್ರ ಗ್ರಂಥಗಳು, ಧರ್ಮಸಭೆಯ ಜೀವನ ಮತ್ತು ದೈವಾರಾಧನೆ ಇವು ಒಂದು ಕನ್ನಡಿಯಾಗಿದ್ದು ಅದರಲ್ಲಿ ಯಾತ್ರಾ ಧರ್ಮಸಭೆ ದೇವರನ್ನು ಕಾಣುತ್ತದೆ. ಹೀಗೆ ಸಂಪ್ರದಾಯ ಮತ್ತು ಪವಿತ್ರ ಗ್ರಂಥಗಳು ನಿಕಟವಾಗಿ ಹೆಣೆದುಕೊಂಡಿದ್ದು ಒಂದೇ ಮೂಲವನ್ನು ಹೊಂದಿದ್ದು ಒಂದೇ ಗುರಿಯೆಡೆಗೆ ಸಾಗುತ್ತವೆ. ಪವಿತ್ರ ಗ್ರಂಥ ಮತ್ತು ಸಂಪ್ರದಾಯದಿಂದ ಧರ್ಮಸಭೆ ದೈವಿಕ ಪ್ರಕಟಣೆಯನ್ನು ಪಡೆದಿರುವುದರಿಂದ ಅವೆರಡನ್ನೂ ಸರಿಸಮಾನವಾಗಿ ಸನ್ಮಾನಿಸಬೇಕು.

ಧರ್ಮಸಭೆಯ ಬೋಧನಾ ಅಧಿಕಾರ, ಪವಿತ್ರ ಗ್ರಂಥ ಮತ್ತು ಸಂಪ್ರದಾಯವನ್ನು ಅರ್ಥೈಸುತ್ತದೆ. ಧರ್ಮಸಭೆಯ ಅಧಿಕಾರ ದೈವಿಕ ಪ್ರಕಟಣೆಗಿಂತ ಮೇಲಾದುದು, ಅದು ದೈವೀ ಪ್ರಕಟಣೆಯ ಸೇವೆಯಲ್ಲಿದ್ದು ಅದನ್ನು ಸಂರಕ್ಷಿಸುತ್ತಾ ವಿವರಿಸುತ್ತದೆ. ಪವಿತ್ರ ಗ್ರಂಥ, ಸಂಪ್ರದಾಯ ಮತ್ತು ಬೋಧನಾ ಅಧಿಕಾರಗಳು ಒಂದರೊಡನೊಂದು ಹೊಂದಿಕೊಂಡಿದ್ದು ಅವೆಲ್ಲವೂ ಜೊತೆಯಾಗಿ ಮಾನವನ ರಕ್ಷಣೆಗೆ ತಮ್ಮದೇ ಆದ ರೀತಿಯಲ್ಲಿ ನೆರವಾಗುತ್ತವೆ.

# ಅಧ್ಯಾಯ III

## ಪವಿತ್ರ ಗ್ರಂಥ, ದೈವೀ ಸ್ಪೂರ್ತಿ ಮತ್ತು ದೈವಿಕ ಅರ್ಥ ನಿರೂಪಣೆ

ಪವಿತ್ರ ಗ್ರಂಥಗಳ ದೈವೀ ಸ್ಪೂರ್ತಿಯ ಬಗ್ಗೆ ಈ ಸಂವಿಧಾನ ಹಿಂದಿನ ಸಮ್ಮೇಳನಗಳ ಬೋಧನೆಯನ್ನು ಗಮನಕ್ಕೆ ತಂದುಕೊಳ್ಳುತ್ತದೆ. ದೇವರು ಪವಿತ್ರ ಗ್ರಂಥಗಳ ಕರ್ತರಾಗಿದ್ದು ಅವುಗಳನ್ನು ರಚಿಸಲು ಮಾನವರನ್ನು ಅವರ ಶಕ್ತಿ ಮತ್ತು ಸಾಮರ್ಥ್ಯಗಳೊಂದಿಗೆ ಬಳಸಿಕೊಂಡರು. ಹೀಗೆ ಬೈಬಲ್ ಗ್ರಂಥ ಮಾನವನ ಮಾತುಗಳಲ್ಲಿರುವ ದೇವರ ವಾಕ್ಯವಾಗಿದೆ.

ಪವಿತ್ರ ಗ್ರಂಥಗಳು ದೇವರ ವಾಕ್ಯವಾಗಿದ್ದು ಅವು ನಮ್ಮ ರಕ್ಷಣಾ ಸಾಧನಗಳಾಗಿವೆ. ಅವು ಮಾನವರನ್ನು ಸತ್ಯ ಮತ್ತು ಸಜ್ಜೀವನದಲ್ಲಿ ನಡೆಸುತ್ತವೆ (2 ತಿಮಾ 3:14). ಅವುಗಳಲ್ಲಿ ದೇವರು ನಮ್ಮ ರಕ್ಷಣೆಗಾಗಿ ಪವಿತ್ರ ಗ್ರಂಥದಲ್ಲಿ ಇರಿಸಲು ಇಚ್ಛಿಸಿದ ಸತ್ಯ ಯಾವ ತಪ್ಪಿಲ್ಲದ ಅಡಕವಾಗಿದೆ.

ಪವಿತ್ರ ಗ್ರಂಥದಲ್ಲಿ ದೇವ ಪುತ್ರ ಮನುಷ್ಯರಾದ ದೈವಿಕ ಅವರೋಹಣಕ್ಕೆ ಸಮನಾದ ರಹಸ್ಯ ಅಡಕವಾಗಿದೆ. ದೇವರ ವಾಕ್ಯವು ದೈವಿಕ ಶಕ್ತಿಯನ್ನು ಕಳೆದುಕೊಳ್ಳದೆ ಮಾನುಷ ಭಾಷೆಯಲ್ಲಿ ತಗ್ಗಿಸಿ ಕೊಂಡಿರುವುದೇ ಈ ರಹಸ್ಯ.

ಪವಿತ್ರ ಬರಹದ ಮಾನವ ಲೇಖಕನ ಪಾತ್ರದ ಬಗ್ಗೆ ನಾವು ಸೂಕ್ತ ಗಮನವನ್ನು ಹರಿಸಬೇಕು. ದೇವರು ಮನುಷ್ಯರ ಮುಖಾಂತರ ಮಾತನಾಡಿರುವುದರಿಂದ ಈ ಮನುಷ್ಯರು ಏನನ್ನು ಹೇಳಲು ಅಪೇಕ್ಷಿಸಿದರು ಎಂಬುದನ್ನು ನಾವು ಪರಿಶೀಲಿಸಬೇಕು. ಪ್ರತಿಯೊಂದು ಕೃತಿಯ ವಾಚ್ಯರೂಪದ ಬಗ್ಗೆ ನಾವು ಪ್ರತ್ಯೇಕ ಗಮನವಹಿಸಬೇಕು. ಪ್ರತಿ ಸಾಹಿತ್ಯವು ತನ್ನದೇ ಆದ ಪ್ರತ್ಯೇಕ ಮಾದರಿಯನ್ನು ವಿಷಯಕ್ಕೆ ತಕ್ಕಂತೆ ಅನುಸರಿಸುತ್ತದೆ. ಪದ್ಯವನ್ನು ವಿಷಯವನ್ನು ನಿರೂಪಿಸುವ ಗದ್ಯದಂತೆ ಬರೆಯಲಾಗುವುದಿಲ್ಲ. ಅದನ್ನು ಗದ್ಯದಂತೆ ಯಾರೂ ಓದುವುದಿಲ್ಲ. ಅಂತೆಯೇ ಬೈಬಲಿನಲ್ಲಿ ನಾವು ವಿವಿಧ ವಾಚ್ಯರೂಪಗಳನ್ನು ಕಾಣುತ್ತೇವೆ. ಪವಿತ್ರ ಗ್ರಂಥಕರ್ತನು ಹೇಳಲಿಚ್ಛಿಸಿದ ವಿಷಯವನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ವಾಚ್ಯರೂಪಗಳನ್ನು ನಾವು ಗಮನಿಸಲೇ ಬೇಕು. ಹೀಗೆ ನಾವು ಗ್ರಂಥಕರ್ತನ ಕಾಲದಲ್ಲಿ ಪ್ರಚಲಿತವಾಗಿದ್ದ ಭಾವನಾ ಶೈಲಿ ಆಡುವ ಮತ್ತು ನಿರೂಪಿಸುವ ವಿಧಾನವನ್ನು ಕಂಡುಕೊಳ್ಳಲು ಶಕ್ತರಾಗುತ್ತೇವೆ.

ನಾವು ಮಾನುಷಿಕ ಅಂಶವನ್ನು ಗಣನೆಗೆ ತೆಗೆದುಕೊಳ್ಳುತ್ತಿರುವಂತೆ ದೈವಿಕ ಅಂಶವನ್ನು ಕಡೆಗಣಿಸುವಂತಿಲ್ಲ. ಆದುದರಿಂದ ಪವಿತ್ರ ಗ್ರಂಥವನ್ನು ವಿಶ್ವಾಸಕ್ಕೆ ಅನುಗುಣವಾಗಿ ಪರಿಶೀಲಿಸಬೇಕು. ಈ ಪ್ರಕ್ರಿಯೆಯಲ್ಲಿ ಧರ್ಮಸಭೆ ಉಚ್ಚ ನ್ಯಾಯವಾದಿಯಾಗಿದೆ.



# ಅಧ್ಯಾಯ IV

## ಹಳೆಯ ಒಡಂಬಡಿಕೆ

ಹಳೆ ಒಡಂಬಡಿಕೆಯಲ್ಲಿ ದೇವರ ಪ್ರಕಟಣೆ ಮತ್ತು ರಕ್ಷಣಾ ಯೋಜನೆ, ರಕ್ಷಣಾ ಚರಿತ್ರೆಯ ಮೊದಲ ಹಂತವಾಗಿದೆ. ಹಳೆಯ ಒಡಂಬಡಿಕೆಯ ವಿವಿಧ ಪುಸ್ತಕಗಳು ಈ ಚರಿತ್ರೆಯನ್ನು ನಿರೂಪಿಸುತ್ತವೆ. ದೇವರು ಸೃಷ್ಟಿಕಾರ್ಯ, ಮಾನವನ ಜನಾಂಗದ ಸೃಷ್ಟಿಯ ನಂತರ ಅಬ್ರಹಾಮನ ಕರೆಯೋಣದಿಂದ ಮುಂದಿನ ಪೀಳಿಗೆಯನ್ನು ಈ ಚರಿತ್ರೆ ನಿರೂಪಿಸುತ್ತದೆ.

ಹಳೆಯ ಒಡಂಬಡಿಕೆ ಯೇಸುಕ್ರಿಸ್ತರಲ್ಲಿ ಕಾರ್ಯರೂಪಕ್ಕೆ ಬರಲಿರುವ ಅಂತಿಮ ಪ್ರಕಟಣೆಗೆ ಸಿದ್ಧತೆ ಮಾಡುತ್ತದೆ. ಆದುದರಿಂದ ಅದರಲ್ಲಿ ನಾವು ಅಪೂರ್ಣ ಮತ್ತು ತಾತ್ಕಾಲಿಕ ಗುಣಗಳನ್ನು ಕಾಣುತ್ತೇವೆ. ಆದರೂ ಅದು ಎಲ್ಲಾ ಕಾಲದ ಜನರಿಗೆ ದೇವರ ಮತ್ತು ಮಾನವನ ಬಗ್ಗೆ ಪೂರ್ಣ ಮಾಹಿತಿಯನ್ನು ನೀಡುತ್ತದೆ. ಮಾನವನೊಂದಿಗೆ ದೇವರು ಎಷ್ಟು ಕಾಳಜಿಯಿಂದ ನಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸುತ್ತದೆ. ದೇವರ ವಕ್ತಾರರಾಗಿ ಮಾತನಾಡಿದ ಪ್ರವಾದಿಗಳು ದೇವರ ಮಾರ್ಗದ ಬಗ್ಗೆ ಆಳವೂ ನಿಚ್ಚಳವೂ ಆದ ಜ್ಞಾನವನ್ನು ಇಸ್ರಯೇಲರಿಗೆ ಕೊಟ್ಟರು. "ಅವರು ಇತಿಹಾಸದ ದಿಗಂತವನ್ನು ವಿಸ್ತರಿಸಿ ಕ್ರಿಸ್ತರ ಆಗಮನಕ್ಕೆ ಸಜ್ಜುಗೊಳಿಸಿದರು. ಅವರೇ ಸರ್ವರ ವಿಮೋಚಕರಾಗಿದ್ದುದರಿಂದ ತಮ್ಮ ಪ್ರವಾದನೆಗಳ ಮುಖಾಂತರ ಮೆಸ್ಸಿಯನ ಸಾಮ್ರಾಜ್ಯವನ್ನು ಘೋಷಿಸಿದರು. (ನೋಡಿ ಲೂಕ 24:44, ಯೊವಾ 5:39; 1 ಪೇತ್ರ 1:10)" ಅಷ್ಟಲ್ಲದೆ ಹಳೆಯ ಒಡಂಬಡಿಕೆಯ ಪುಸ್ತಕಗಳನ್ನು ಸಮಗ್ರವಾಗಿ ಗಮನಿಸಿದರೆ ಅವು ಧರ್ಮಸಭೆಯ ನಿಧಿಯಾಗಿದೆ. ಅದರಲ್ಲಿ ದೇವರ ಸಜೀವ ಭಾವನೆಗಳು ವ್ಯಕ್ತವಾಗಿವೆ ಮತ್ತು ಮಾನವನ ಅವರ ಬಗ್ಗೆ ಗಹನ ಸತ್ಯಗಳು ತಿಳಿಸಲಾಗಿವೆ. ಮಾತ್ರವಲ್ಲ, ಅದರಲ್ಲಿ ಸುಂದರ ಪ್ರಾರ್ಥನೆಗಳ (ಉದಾ: ಕೀರ್ತನೆಗಳು) ಸಂಗ್ರಹವೇ ಇದೆ.

ಮೇಲಿನ ಕಾರಣಗಳಿಗಾಗಿ ಕ್ರೈಸ್ತರು ಹಳೆಯ ಒಡಂಬಡಿಕೆಯನ್ನು ಹೆಚ್ಚಿನ ಗೌರವದಿಂದ ಸ್ವೀಕರಿಸುವಂತೆಯೂ ಭಕ್ತಿ ಪೂರ್ವಕವಾಗಿ ಪಠಿಸುವಂತೆಯೂ ಆದೇಶಿಸುತ್ತದೆ. ಅದಲ್ಲದೆ, ಹಳೆಯ ಒಡಂಬಡಿಕೆ ಹೊಸ ಒಡಂಬಡಿಕೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ ಎಂಬುದನ್ನು ಸರ್ವರು ಗ್ರಹಿಸಬೇಕು. ಏಕೆಂದರೆ ಹಳೆಯ ಒಡಂಬಡಿಕೆಯು ಕಾಲವು ಸಂಪೂರ್ಣವಾದಾಗ ಬರಲಿರುವ ಪ್ರಭು ಕ್ರಿಸ್ತರ ಮಾರ್ಗವನ್ನು ಸಿದ್ಧ ಮಾಡುವ ಉದ್ದೇಶವನ್ನು ಹೊಂದಿದೆ. (ಗಲಾತಿ 4:4).

# ಅಧ್ಯಾಯ V

## ಹೊಸ ಒಡಂಬಡಿಕೆ

ಹೊಸ ಒಡಂಬಡಿಕೆಯ ಬರವಣಿಗೆಗಳು ದೈವೀ ಶ್ರುತಿಯ ನಿಚ್ಚಳ ಮತ್ತು ಸಂಪೂರ್ಣ ರೂಪವನ್ನು ವ್ಯಕ್ತಪಡಿಸುತ್ತದೆ. ಅವು ದೇವರು ಹೇಗೆ ಹಿಂದಿನ ಕಾಲದಲ್ಲಿ ನಮ್ಮ ಪಿತೃಗಳೊಂದಿಗೆ ವಿವಿಧ ರೀತಿಯಲ್ಲಿ ಮಾತನಾಡಿ, ಅಂತಿಮ ಕಾಲದಲ್ಲಿ ತಮ್ಮ ಪುತ್ರನ ಮುಖಾಂತರ ಮಾತನಾಡಿದರು ಎಂಬುದನ್ನು ತಿಳಿಸುತ್ತವೆ. (ಹೆಬ್ರಿಯ 1:1). ಹೊಸ ಒಡಂಬಡಿಕೆಯ ವಿವಿಧ ಪುಸ್ತಕಗಳಲ್ಲಿ ಅಡಕವಾಗಿರುವುದು ಏನೆಂದರೆ "ಯೇಸುಸ್ವಾಮಿಯ ಮರಣ ಮತ್ತು ಪುನರುತ್ಥಾನ ಕೇಂದ್ರಬಿಂದುವಾಗಿರುವ ರಹಸ್ಯವನ್ನು ಹೊಸ ಒಡಂಬಡಿಕೆ ವಿಷದ ಪಡಿಸುತ್ತದೆ".

ಪ್ರಭುವಿನ ಪುನರುತ್ಥಾನ ಮತ್ತು ಪವಿತ್ರಾತ್ಮರ ಆಗಮನದ ಬೆಳಕಿನಲ್ಲಿ ಪ್ರೇಷಿತರು ಮತ್ತು ಅವರ ಸಹಪಾಟಿಗಳು ಯೇಸುಕ್ರಿಸ್ತರ ನಿಯೋಗದ ಬಗ್ಗೆ ನಿಚ್ಚಳವಾಗಿ ಅರಿತುಕೊಂಡರು. ಆದುದರಿಂದ ಈ ಘಟನೆಗಳ ಗೂಡಾರ್ಥವನ್ನು ಸವಿಸ್ತಾರವಾಗಿ ತಮ್ಮ ಬೋಧನೆಯಲ್ಲಿ ತಿಳಿಸಿದರು.

ಯೇಸುಸ್ವಾಮಿಯ ಸಂದೇಶದ ಬಗ್ಗೆ ಹುಟ್ಟಿಕೊಂಡ ಸಂಪ್ರದಾಯ ಬಾಯಿಮಾತು ಮತ್ತು ಬರವಣಿಗೆಯಲ್ಲಿ ಸಜೀವವಾಗಿಡಲಾಯಿತು. ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಲಾಯಿತು. ಈ ಸಂಪ್ರದಾಯವೇ ನಾಲ್ಕು ಶುಭಸಂದೇಶಗಳ ಹಿನ್ನೆಲೆಯಲ್ಲಿರುವುದು. ಈ ಸಂಪ್ರದಾಯವೇ ನಾಲ್ಕು ಶುಭಸಂದೇಶಗಳ ಹಿನ್ನೆಲೆಯಾಗಿದೆ ಮತ್ತು ಇದೇ ಮಾನವರಾದ ದೈವವಾರ್ತೆಯೂ ನಮ್ಮ ರಕ್ಷಕರೂ ಆದವರ ಬೋಧನೆ ಮತ್ತು ಜೀವನಕ್ಕೆ ಪ್ರಮುಖ ಸಾಕ್ಷಿಯಾಗಿದೆ. ಆದುದರಿಂದ ಶುಭಸಂದೇಶಗಳು ಪ್ರೇಷಿತರಿಂದ ಉಗಮಿಸಿದ್ದರಿಂದ ನಿಜ ಐತಿಹಾಸಿಕ ದಾಖಲೆಯಾಗಿವೆ. "ಅವು ಪ್ರಭು ಕ್ರಿಸ್ತರ ಸಾಧನೆ ಮತ್ತು ಬೋಧನೆಯನ್ನು ನಿಷ್ಠೆಯಿಂದ ನಿರೂಪಿಸುತ್ತವೆ". ಈ ಲಿಖಿತ ಶುಭ ಸಂದೇಶಗಳು ಮೂಲ ಪ್ರಕಟಣೆಯಾದ "ಸುವಾರ್ತೆ" ಯಿಂದ ಅಚ್ಚಳಿಯದೆ ರೂಪಿತಗೊಂಡವು ಎಂಬುದನ್ನು ನಾವು ಗ್ರಹಿಸಬೇಕು. ಶುಭಸಂದೇಶಗಳು ಮೂಲ ಪ್ರಕಟಣೆಯ ಅಂತಿಮ ಅಭಿವ್ಯಕ್ತಿಯಾಗಿದೆ. ಏಕೆಂದರೆ ಯೇಸುಸ್ವಾಮಿಯ ಬಗ್ಗೆ ಬೋಧನೆಯ ಪರಿಸರದಲ್ಲಿ ಶುಭಸಂದೇಶಗಳ ಬಾಹ್ಯರೂಪದ ಮೂಲ ಅಡಗಿದೆ. ಶುಭ ಸಂದೇಶಗಳು ಯೇಸುಸ್ವಾಮಿಯ ಬಗ್ಗೆ ಸಂಪ್ರದಾಯಗಳನ್ನು ಜೊತೆಗೂಡಿಸಿ ಶುಭಸಂದೇಶಗಳನ್ನು ಬರೆದರು. "ಈ ಸಂಪ್ರದಾಯಗಳಲ್ಲಿ ಕೆಲವನ್ನು ತಾತ್ಪರ್ಯ ರೂಪದಲ್ಲಿ ಕೆಲವನ್ನು ಕ್ರೈಸ್ತ ಸಮುದಾಯಗಳ ಅಗತ್ಯಕ್ಕೆ ತಕ್ಕಂತೆ ವಿವರಿಸಿದರು". "ಹೀಗೆ ಮತ್ತಾಯ, ಮಾರ್ಕ, ಲೂಕ ಮತ್ತು ಯೊವಾನ್ನರ ಶುಭ ಸಂದೇಶ ತಮ್ಮ ಪ್ರಾಮುಖ್ಯತೆಯನ್ನು ಹೊಂದಿದೆ". "ನಮ್ಮ ಮಧ್ಯೆ ನೇರವೇರಿದ ಘಟನೆಗಳ ವರದಿಯನ್ನು ಬರೆದಿಡಲು ಹಲವರು ಪ್ರಯತ್ನಿಸಿದ್ದಾರೆ. ಪ್ರಾರಂಭದಿಂದ ಕಣ್ಣಾರೆ ಕಂಡ ಶುಭ ಸಂದೇಶವನ್ನು ಸಾರಿದವರಿಂದಲೇ ನಾವು ಕೇಳಿದ ಘಟನೆಗಳಿವು". (ಲೂಕ 1:1–2).

ಹೊಸ ಒಡಂಬಡಿಕೆಯ ನಿಬಂಧನೆ ಇತರ ದೈವೀಸ್ಫೂರ್ತಿ ಪಡೆದ ಬರಹಗಳನ್ನು ಹೊಂದಿದೆ. ಅವುಗಳಲ್ಲಿ ಸಂತ ಪೌಲರ ನಿರೂಪಗಳು ಮತ್ತು ಪ್ರೇಷಿತ ಲೇಖನಗಳಿವೆ. ಅವುಗಳಲ್ಲಿ "ಪ್ರಭು



ಕ್ರಿಸ್ತರನ್ನು ಸಂಬಂಧಿಸಿದ ವಿಷಯಗಳು ಸಾಕ್ಷಾತ್ಕರಿಸಲಾಗಿದೆ. ಅವರ ನೈಜ್ಯ ಬೋಧನೆಯನ್ನು ಅಧಿಕ ನಿಖರವಾಗಿ ನಿರೂಪಿಸಲಾಗಿದೆ. ಪ್ರಭುಕ್ರಿಸ್ತರ ರಕ್ಷಣಾ ಶಕ್ತಿಯ ದೈವಿಕ ಕಾರ್ಯಗಳು ವಿವರಿಸಲಾಗಿವೆ. ಪ್ರಾರಂಭಿಕ ಧರ್ಮಸಭೆಯ, ಅದರ ಆಶ್ಚರ್ಯಕರ ಬೆಳವಣಿಗೆ, ಮಹಿಮಾನ್ವಿತ ಭವಿಷ್ಯದ ಅನುಷ್ಠಾನದ ಕಥನವನ್ನು ನಾವು ಕಾಣುತ್ತೇವೆ.

# ಅಧ್ಯಾಯ VI

## ಧರ್ಮಸಭೆಯ ಜೀವನದಲ್ಲಿ ಪವಿತ್ರ ಗ್ರಂಥ

ಧರ್ಮಸಭೆಯ ಜೀವನದಲ್ಲಿ ಪವಿತ್ರ ಗ್ರಂಥ ಕೇಂದ್ರ ಸ್ಥಾನವನ್ನು ಅಲಂಕರಿಸುತ್ತದೆ. ವಾಸ್ತವವಾಗಿ ಧರ್ಮಸಭೆ ದೈವೀಕ ಗ್ರಂಥಗಳನ್ನು ಪ್ರಭುವಿನ ಶರೀರವನ್ನು ಆರಾಧಿಸುವಂತೆ ಸನ್ಮಾನಿಸುತ್ತದೆ. ದೇವರ ವಾಕ್ಯ ಮತ್ತು ಪ್ರಭು ಕ್ರಿಸ್ತರ ಶರೀರವನ್ನು ಎರಡು ಪೀಠಗಳಿಂದ ಸ್ವೀಕರಿಸಿ ಅವನ್ನು ಜೀವದಾಯಕ ರೊಟ್ಟಿಯನ್ನಾಗಿ ಕೊಡುತ್ತದೆ. ಪವಿತ್ರ ಪುಸ್ತಕಗಳಿಂದ ತಂದೆ ದೇವರು ಮನುಷ್ಯರೊಂದಿಗೆ ಮಾತನಾಡುತ್ತಾರೆ ಮತ್ತು ದೇವವಾಕ್ಯ ಎಷ್ಟು ಶಕ್ತಿಯುತವೆಂದರೆ ಅದು ಪ್ರೇರಣೆಯಾಗಿದ್ದು ಧರ್ಮಸಭೆಯನ್ನು ಬೆಂಬಲಿಸುತ್ತದೆ.

ಭಕ್ತ ವಿಶ್ವಾಸಿಗಳಿಗೆ ಪವಿತ್ರ ಗ್ರಂಥಗಳು ಸುಲಭವಾಗಿ ಲಭಿಸುವಂತೆ ಅವುಗಳನ್ನು ಅನೇಕ ಭಾಷೆಗಳಲ್ಲಿ ಭಾಷಾಂತರಿಸಬೇಕು. ಪಂಡಿತರು ತಮ್ಮ ಚಾತುರ್ಯ ಮತ್ತು ಸಾಮರ್ಥ್ಯವನ್ನು ಅದರ ಸಂಶೋಧನೆಗೆ ಬಳಸಬೇಕು. ದೈವಶಾಸ್ತ್ರಜ್ಞರು ಪವಿತ್ರ ಪುಟಗಳ ಅಧ್ಯಯನವನ್ನು ದೈವಶಾಸ್ತ್ರದ ಜೀವವನ್ನಾಗಿ ತಮ್ಮ ಅನ್ವೇಷಣೆಯಿಂದ ಪುನಶ್ಚೇತನ ಗೊಳಿಸಬೇಕು. ಅಂತೆಯೇ ಬೋಧಕರು ಮತ್ತು ಉಪದೇಶಿಗಳು ಈ ಕಾರ್ಯವನ್ನು ಎಸಗಬೇಕು. ಕ್ರೈಸ್ತ ಭಕ್ತವಿಶ್ವಾಸಿಗಳು ದೈವೀಕ ಗ್ರಂಥಗಳನ್ನು ಪದೇ ಪದೇ ಓದುತ್ತಾ ಯೇಸು ಕ್ರಿಸ್ತರ ಅತಿ ಶ್ರೇಷ್ಠ ಜ್ಞಾನವನ್ನು ಪಡೆದುಕೊಳ್ಳುವಂತೆ ಅವರಿಗೆ ಆದೇಶ ನೀಡಲಾಗಿದೆ. (ಫಿಲಿಪ್ಪಿ 3:8). ಏಕೆಂದರೆ ಪವಿತ್ರ ಗ್ರಂಥದ ಅಜ್ಞಾನ ಪ್ರಭು ಕ್ರಿಸ್ತರ ಅಜ್ಞಾನವೇ ಆಗಿದೆ (ಸಂತ ಜೆರೋಮ್). ಆದುದರಿಂದ ಆರಾಧನಾ ವಿಧಿ, ಸೂಕ್ತ ಉಪನ್ಯಾಸ ಮತ್ತು ಇತರ ಪ್ರಸ್ತುತ ಸಲಕರಣೆಗಳ ಮೂಲಕ (ಉದಾ : ಬೈಬಲ್ ಅಧ್ಯಯನ, ಬೈಬಲ್ ಕಾರ್ಯಗಾರ, ಬೈಬಲ್ ಪ್ರಾರ್ಥನಾ ವಿಧಿ ಇತ್ಯಾದಿ) ಪವಿತ್ರ ಗ್ರಂಥದೊಡನೆ ಸಂಪರ್ಕವನ್ನು ಬೆಳೆಸಿಕೊಳ್ಳಬೇಕು.

ಬೈಬಲ್ ಗ್ರಂಥದ ಬಗ್ಗೆ ಆಸಕ್ತಿಯ ಪುನಶ್ಚೇತನದಿಂದ ವ್ಯಾಟಿಕನ್ ಸಮ್ಮೇಳನ ಭವಿಷ್ಯದಲ್ಲಿ ಅಧಿಕ ಅಧಿಕ ಫಲಗಳನ್ನು ಎದುರು ನೋಡುತ್ತದೆ. ಪರಮ ಪ್ರಸಾದದ ರಹಸ್ಯವನ್ನು ಪದೇ ಪದೇ ಆಚರಿಸುವುದರಿಂದ ಧರ್ಮಸಭೆಯ ಜೀವನ ಸಬಲವಾಗುತ್ತದೆ. ಅಂತೆಯೇ ಎಂದೆಂದಿಗೂ ಉಳಿಯುವ (ಯೆಶಾಯ 40:8) ದೇವರ ವಾಕ್ಯವನ್ನು ಅಧಿಕ ಅಧಿಕವಾಗಿ ಸನ್ಮಾನಿಸುವುದರಿಂದ ಆಧ್ಯಾತ್ಮಿಕ ಜೀವನ ಹೆಚ್ಚು ಹೊಸ ಚೇತನವನ್ನು ಪಡೆಯುತ್ತದೆ.

ಜನಸಂಖ್ಯೆಯ ಬೆಳವಣಿಗೆ, ವಿಜ್ಞಾನ ಮತ್ತು ತಾಂತ್ರಿಕತೆಯ ನಿರಂತರ ಬೆಳವಣಿಗೆ ಮತ್ತು ಭೂಲೋಕದ ಅನೇಕ ಭಾಗಗಳಲ್ಲಿ ಕ್ಷೀಣಿಸುತ್ತಿರುವ ಯಾಜಕರ ಸಂಖ್ಯೆ ಹಿಂದಿಗಿಂತ ಇಂದು ಎದ್ದು ಕಾಣುವ ಜಟಿಲ ಸಮಸ್ಯೆಗಳು ಶ್ರೀ ಸಾಮಾನ್ಯರ ಪ್ರೇಷಿತತ್ವದ ಅನಿವಾರ್ಯತೆಯನ್ನು ತಿಳಿಸುತ್ತದೆ.

**2. ಗುರಿ ಉದ್ದೇಶಗಳು :**

ಧರ್ಮಸಭೆಯ ನಿಯೋಗ ಕ್ರಿಸ್ತರ ಸಂದೇಶ ಮತ್ತು ವರಪ್ರಸಾದವನ್ನು ಜನರಿಗೆ ವಿತರಣೆ ಮಾಡುವುದು ಮಾತ್ರವಲ್ಲ, ಶುಭ ಸಂದೇಶದ ಸತ್ವವನ್ನು ಮಾನವ ಚಟುವಟಿಕೆಯ ಎಲ್ಲ ಕ್ಷೇತ್ರಗಳಲ್ಲಿ ಸಾರುವುದು ಒಳಗೊಂಡಿದೆ. ಯಾಜಕರು ಈ ಕರ್ತವ್ಯವನ್ನು ಶುಭ ಸಂದೇಶವನ್ನು ಬೋಧಿಸುವುದರಿಂದ ಮತ್ತು ಸಂಸ್ಕಾರಗಳನ್ನು ವಿತರಣೆ ಮಾಡುವುದರಿಂದ ಈಡೇರಿಸುತ್ತಾರೆ. ಶ್ರೀ ಸಾಮಾನ್ಯರು ತಮ್ಮ ಮಾತು ಮತ್ತು ಕ್ರಿಯೆಗಳ ಮುಖಾಂತರ ಕ್ರಿಸ್ತರಿಗೆ ಸಾಕ್ಷ್ಯ ನೀಡುತ್ತಾ ತಮ್ಮ ವಿಶೇಷ ಪ್ರೇಷಿತತ್ವವನ್ನು ಅನುಷ್ಠಾನಕ್ಕೆ ತರುತ್ತಾರೆ. ನಮ್ಮ ಪ್ರಭುವಿನ ಮಾತುಗಳಿವು : " ನಿಮ್ಮ ಜ್ಯೋತಿ ಜನರ ಮುಂದೆ ಬೆಳಗಲಿ; ಹೀಗೆ ಅವರು ನಿಮ್ಮ ಸತ್ಕಾರ್ಯಗಳನ್ನು ಕಂಡು ಸ್ವರ್ಗದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡಲಿ "(ಮತ್ತಾ 5:16). ಒಬ್ಬ ನೈಜ್ಯ ಪ್ರೇಷಿತ ಕೇವಲ ಸಾಕ್ಷಿ ನೀಡುವುದರಲ್ಲಿ ಸಂತೃಪ್ತನಾಗುವುದಿಲ್ಲ. ಅವನು ಪ್ರಭು ಕ್ರಿಸ್ತರನ್ನು ಬಾಯಿಮಾತಿನಿಂದ ಸಾರಲು ಅವಕಾಶಗಳನ್ನು ಹುಡುಕುತ್ತಾನೆ. ಈ ಸಂದರ್ಭದಲ್ಲಿ ಪ್ರೇಷಿತ ಪೌಲರ ಮಾತುಗಳು "ಶುಭ ಸಂದೇಶ ಸಾರದಿದ್ದರೆ ನನಗೆ ಧಿಕ್ಕಾರವಿರಲಿ" ನಮ್ಮನ್ನು ಎಚ್ಚರಿಸಬೇಕು. ಕ್ರೈಸ್ತ ಧರ್ಮದ ಬೋಧನೆಯನ್ನು ಆಸಕ್ತಿಯಿಂದ ವಿವರಿಸಲು, ಪ್ರತಿಪಾದಿಸಲು ಮತ್ತು ಜೀವನದ ಸಮಸ್ಯೆಗಳನ್ನು ಪರಿಹರಿಸಲು ಕಲಿಯಬೇಕೆಂದು ಶ್ರೀ ಸಾಮಾನ್ಯರನ್ನು ಕೋರಲಾಗಿದೆ.

ಶ್ರೀ ಸಾಮಾನ್ಯರ ಪ್ರೇಷಿತತ್ವದ ಮೊದಲನೆಯ ಗುರಿ ಶುಭಸಂದೇಶ ಮತ್ತು ದೇವರ ವರಪ್ರಸಾದವನ್ನು ಎಲ್ಲಾ ಜನರಿಗೆ ತಲುಪಿಸುವುದು. ಎರಡನೆಯ ಗುರಿ ಲೌಕಿಕ ವ್ಯವಸ್ಥೆಯನ್ನು ನವೀಕರಿಸುವುದು. ಕುಟುಂಬ, ಸಂಸ್ಕೃತಿ, ಆರ್ಥಿಕ ವಿಷಯಗಳು, ಕಲೆ ಮತ್ತು ವೃತ್ತಿಗಳು, ರಾಜಕೀಯ ಸಮುದಾಯದ ಕಾನೂನುಗಳು, ಅಂತರ ರಾಷ್ಟ್ರೀಯ ಸಂಬಂಧಗಳು ಮತ್ತು ಇಂತಹ ಇತರ ವಿಷಯಗಳು ಲೌಕಿಕ ವ್ಯವಸ್ಥೆಗೆ ಸೇರುತ್ತದೆ.

ಮಾನವನ ಚಟುವಟಿಕೆಯ ಯಾವ ಕ್ಷೇತ್ರವೂ ಪ್ರಭು ಕ್ರಿಸ್ತರ ವರಪ್ರಸಾದದ ಕಕ್ಷೆಯಿಂದ ಹೊರಗಿಡಲಾಗದು. ಜನ್ಮ ಪಾಪದಿಂದ ಜರ್ಜರಿತನಾದ ಮಾನವ ಬಹುಬಾರಿ ನಿಜದೇವರ ನೈಜ್ಯ ಮಾನವ ಸ್ವಭಾವ, ನೈತಿಕ ನಿಯಮಗಳ ವಿಷಯದಲ್ಲಿ ಅಡ್ಡದಾರಿಯನ್ನು ಹಿಡಿದಿದ್ದಾನೆ. ಆದುದರಿಂದ ಲೌಕಿಕ ಕ್ಷೇತ್ರದಲ್ಲಿರುವ ಕುಂದುಕೊರತೆಗಳನ್ನು ಕ್ರೈಸ್ತ ಧರ್ಮತತ್ವಗಳಿಗೆ ಅನುಗುಣವಾಗಿ ಸರಿಪಡಿಸುವುದು ಶ್ರೀ ಸಾಮಾನ್ಯರ ಜವಾಬ್ದಾರಿಯಾಗಿದೆ. ಕ್ರೈಸ್ತ ಸಮಾಜ ಸಂಚಲನ ಲೌಕಿಕ ವ್ಯವಸ್ಥೆಯನ್ನು ನವೀಕರಿಸುವ ಪ್ರೇಷಿತತ್ವಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.

ಪರಪ್ರೀತಿಯೇ ಎಲ್ಲಾ ವಿಧದ ಪ್ರೇಷಿತತ್ವಕ್ಕೆ ಮೂಲ ಮಂತ್ರವಾಗಿರಬೇಕು. ಮಾನವ ಕೊರತೆಯನ್ನು ನೀಗಿಸುವ ನೆರವು ಪರಪ್ರೀತಿಯ ಸಜೀವ ಉದಾಹರಣೆಯಾಗಿದೆ. ಎಲ್ಲೆಲ್ಲಿ ಜನರು ಅನ್ನ ಪಾನೀಯ, ವಸ್ತ್ರವಸತಿ, ಉದ್ಯೋಗ, ಶಿಕ್ಷಣದ ಅಗತ್ಯದಲ್ಲಿದ್ದಾರೋ ಎಲ್ಲೆಲ್ಲಿ ಜನರು ನೈಜ್ಯ



# XII ಶ್ರೀ ಸಾಮಾನ್ಯರ ಪ್ರೇಷಿತತ್ವ
## (ಶಾಸನ)

ಪ್ರಭು ಕ್ರಿಸ್ತರು ತಮ್ಮ ರಕ್ಷಣಾ ಕಾರ್ಯವನ್ನು ಈ ಭೂಲೋಕದಲ್ಲಿ ಮುಂದುವರಿಸಲು ಪ್ರೇಷಿತತ್ವದ ಯೋಜನೆಯನ್ನು ಮಾಡಿದರು. ಅದಕ್ಕೆ ಅನುಗುಣವಾಗಿ ಶ್ರೀ ಸಾಮಾನ್ಯರನ್ನು ಈ ಕಾರ್ಯಕ್ಕೆ ಧರ್ಮಸಭೆ ಆಯ್ಕೆ ಮಾಡುತ್ತದೆ. ಈ ಕ್ರೈಸ್ತ ಕರೆಯೋಣದ ದೆಸೆಯಿಂದ ಧರ್ಮಸಭೆಯ ಶುಭ ಸಂದೇಶ ಆಯೋಗದಲ್ಲಿ ಶ್ರೀ ಸಾಮಾನ್ಯರ ಪಾತ್ರ ಅನಿವಾರ್ಯ. ಈ ಆಧುನಿಕ ಬದಲಾದ ಪರಿಸ್ಥಿತಿಯಲ್ಲಿ ಶ್ರೀ ಸಾಮಾನ್ಯರ ಪ್ರೇಷಿತತ್ವದ ಆಯಾಮವನ್ನು ವಿಸ್ತರಿಸಿ ಅದರ ಕಾರ್ಯಾಚರಣೆಯನ್ನು ತೀವ್ರಗೊಳಿಸಬೇಕಾಗುತ್ತದೆ. ಈ ಪರಿಸ್ಥಿತಿ ಹೊಸ ಸಮಸ್ಯೆಗಳನ್ನು ತಂದಿರುವುದರಿಂದ ಅವುಗಳನ್ನು ಪರಿಹರಿಸಲು ಪರಿಣತ ಅಧ್ಯಯನ ಮತ್ತು ಸೂಕ್ಷ್ಮಗಮನ ಅಗತ್ಯ.

ಈ ಅಗತ್ಯಗಳನ್ನು ಪೂರೈಸಲು ವ್ಯಾಟಿಕನ್ ಸಮ್ಮೇಳನ ಸಮಯೋಜಿತ ಸಲಹೆಗಳನ್ನು ನೀಡಿದೆ. ಅದು ಶ್ರೀ ಸಾಮಾನ್ಯರ ಪ್ರೇಷಿತತ್ವದ ಗುಣಲಕ್ಷಣ. ಅದರ ಮೂಲ ತತ್ವಗಳಲ್ಲಿ ವಿವಿಧತೆಯನ್ನು ವಿವರಿಸುತ್ತಾ ಅದರ ಫಲದಾಯಕ ಕಾರ್ಯವಿಧಾನಕ್ಕೆ ಪಾಲನಾ ದಿಕ್ಸೂಚಿಗಳನ್ನು ನೀಡುತ್ತದೆ.

**1) ಪ್ರೇಷಿತತ್ವಕ್ಕೆ ಶ್ರೀ ಸಾಮಾನ್ಯರಿಗೆ ಆಹ್ವಾನ :**

ಪ್ರಭು ಕ್ರಿಸ್ತರ ಸಾಮ್ರಾಜ್ಯವನ್ನು ಭೂಲೋಕದಲ್ಲೆಲ್ಲಾ ಹರಡಲು, ತಂದೆ ದೇವರಿಗೆ ಮಹಿಮೆ ಸಲ್ಲಿಸಲು, ಧರ್ಮಸಭೆಯ ಸ್ಥಾಪನೆಯಾಯಿತು. ಹೀಗೆ ಎಲ್ಲಾ ಜನರು ಸಂರಕ್ಷಣಾ ವಿಮೋಚನೆ ಪಡೆಯಲು ಅವಕಾಶವಾಯಿತು ಮತ್ತು ಅವರ ಮುಖಾಂತರ ಇಡೀ ಪ್ರಪಂಚವನ್ನು ಕ್ರಿಸ್ತರೊಡನೆ ಸಂಬಂಧ ಕಲ್ಪಿಸಲು ದಾರಿಯಾಯಿತು. ಈ ಉದ್ದೇಶವನ್ನು ಗಮನದಲ್ಲಿರಿಸಿಕೊಂಡು ಹಮ್ಮಿಕೊಂಡ ಚಟುವಟಿಕೆಗಳನ್ನು ಪ್ರೇಷಿತತ್ವ ಎಂದು ಕರೆಯಬಹುದು. ಧರ್ಮಸಭೆಯು ವಿವಿಧ ರೀತಿಯಲ್ಲಿ ತನ್ನ ಸದಸ್ಯರಿಂದ ಅದನ್ನು ಕಾರ್ಯರೂಪಕ್ಕೆ ತರುತ್ತಾ ಇದೆ. ಯೇಸುಕ್ರಿಸ್ತರ ಎಲ್ಲಾ ಅನುಯಾಯಿಗಳಿಗೂ ಈ ಪ್ರೇಷಿತತ್ವದ ಕರೆ ನೀಡಲಾಗಿದೆ. ಪ್ರತಿ ಕ್ರೈಸ್ತನ ಕರೆಯೋಣದ ಸಹಜ ಗುಣವೇ ಪ್ರೇಷಿತತ್ವವಾಗಿದೆ. ಗ್ರಹಸ್ಥರ ಪ್ರೇಷಿತರ ಯಾಜಕರ ಪ್ರೇಷಿತತ್ವದಿಂದ ಭಿನ್ನವಾಗಿದ್ದರೂ ಪರಸ್ಪರ ಸಂಬಂಧವನ್ನು ಹೊಂದಿದೆ.

ಸಂಸ್ಕಾರಗಳು ಎಲ್ಲಕ್ಕೂ ಮಿಗಿಲಾಗಿ ದೀಕ್ಷಾಸ್ನಾನ ನಮ್ಮ ಕ್ರಿಸ್ತೀಯ ಸದಸ್ಯತ್ವವನ್ನು ನೀಡುತ್ತದೆ. ಅದುವೇ ನಮ್ಮನ್ನು ಪ್ರೇಷಿತರನ್ನಾಗಿ ಮಾಡುತ್ತದೆ. ದೃಢೀಕರಣ, ಸಂಸ್ಕಾರ, ಪವಿತ್ರಾತ್ಮರ ವರಗಳಿಂದ ನಮ್ಮನ್ನು ಪ್ರೇಷಿತತ್ವದಲ್ಲಿ ಬಲಪಡಿಸುತ್ತದೆ. ಪರಮಪ್ರಸಾದ ಪ್ರೇಷಿತತ್ವದ ಜೀವಾಳವಾಗಿರುವ ಪರಪ್ರೀತಿಯನ್ನು ಪೋಷಿಸುತ್ತದೆ.

ಶ್ರೀ ಸಾಮಾನ್ಯರ ಪ್ರೇಷಿತತ್ವ ಯಶಸ್ವಿಯಾಗಬೇಕಾದರೆ ಶ್ರೀ ಸಾಮಾನ್ಯರು ಪ್ರಭು ಕ್ರಿಸ್ತರೊಡನೆ ಒಂದಾಗಿರಬೇಕು. ಅವರು ದೈವಾರಾಧನಾ ವಿಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ತಮ್ಮತಮ್ಮ ಅಂತಸ್ಥಿನ ಕರ್ತವ್ಯಗಳಿಗೆ ಪ್ರಾಮಾಣಿಕರಾಗಿರಬೇಕು. ಪ್ರೇಷಿತತ್ವದ ವಿಶಿಷ್ಟ ಮಾದರಿಯಾಗಿರುವ ಮರಿಯಮ್ಮನವರಲ್ಲಿ ಭಕ್ತಿಯುಳ್ಳವರಾಗಿರಬೇಕು.

ಮಾನವ ಅಗತ್ಯ ಸೌಕರ್ಯಗಳಿಂದ ವಂಚಿತರಾಗಿದ್ದಾರೋ ಅಂಥಹ ಸಂದರ್ಭಗಳಲ್ಲಿ ಕ್ರೈಸ್ತ ಪ್ರೀತಿ ಪರಿಸ್ಥಿತಿಯನ್ನು ಪರಿಹರಿಸಬೇಕು. ಎಲ್ಲಿ ಜನರು ಕಷ್ಟ ಸಂಕಟ, ರೋಗರುಜಿನ, ದೇಶ ಭ್ರಷ್ಟರು, ಖೈದಿಗಳು ಆಗಿ ಪರಿತಪಿಸುತ್ತಾರೋ ಅಲ್ಲಿ ಕ್ರೈಸ್ತ ಪರಪ್ರೀತಿ ಅವರನ್ನು ಕಂಡುಕೊಳ್ಳಬೇಕು. ಅವರಿಗೆ ಅಗತ್ಯವಾದ ಸಾಂತ್ವನ, ಕಾಳಜಿ, ಸಹಾಯ ಮತ್ತು ಸಮರ್ಪಕ ಪರಿಹಾರವನ್ನು ನೀಡಬೇಕು. ಪರಪ್ರೀತಿಯನ್ನು ವ್ಯಕ್ತಪಡಿಸುತ್ತಿರುವಾಗ ನೆರೆಹೊರೆಯವರಲ್ಲಿ ದೇವರ ಮತ್ತು ಪ್ರಭು ಕ್ರಿಸ್ತರ ಮುಖವನ್ನು ಕಾಣಬೇಕು ಮತ್ತು ಹೀಗೆ ಅವರನ್ನು ಆದರಿಸಬೇಕು. ಇಂಥಹ ಫಲಾನುಭವಿಗಳ ಸ್ವಾತಂತ್ರ್ಯ ಮತ್ತು ಘನತೆಯನ್ನು ಗೌರವಿಸಬೇಕು. ಜೊತೆಗೆ ಅವರ ವೈಯಕ್ತಿಕ ಬೇನೆಯ ಮೂಲವನ್ನು ಕಿತ್ತೊಗೆಯ ಬೇಕು. ಇಂಥಹ ಚಟುವಟಿಕೆಗಳಲ್ಲಿ ಶ್ರೀ ಸಾಮಾನ್ಯರು ಎಲ್ಲಾ ಸುಮನಸ್ಕರೊಂದಿಗೆ ಸಹಕರಿಸಲು ಸಮ್ಮೇಳನ ಆದೇಶಿಸುತ್ತದೆ.

**3) ಪ್ರೇಷಿತತ್ವದ ವಿವಿಧ ಕ್ಷೇತ್ರಗಳು. :**

ಧರ್ಮಸಭೆಯಲ್ಲಿ ಪ್ರೇಷಿತತ್ವ ಮತ್ತು ಭೂಲೋಕದಲ್ಲೆಲ್ಲಾ ಅದರ ಕ್ರಿಯಾತ್ಮಕತೆಯನ್ನು ವಿವಿಧ ಹಂತದಲ್ಲಿ ನಾವು ಕಾಣಬಹುದು. ಧರ್ಮಸಭೆ, ಸಮುದಾಯ, ಕುಟುಂಬ, ಯುವಜನರು, ಸಮಾಜಿಕ ಕ್ಷೇತ್ರ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕ್ರಿಯಾತ್ಮಕವಾಗಿದೆ. ಪ್ರಥಮ ಕ್ಷೇತ್ರ ಧರ್ಮಸಭೆಯ ಸಮುದಾಯವಾಗಿದೆ. ಅಂದರೆ ಧರ್ಮಕೇಂದ್ರ, ಧರ್ಮಕ್ಷೇತ್ರ. ಇಲ್ಲಿ ಶ್ರೀ ಸಾಮಾನ್ಯರ ಪ್ರೇಷಿತತ್ವ ಅತಿ ಅವಶ್ಯವಾಗಿದೆ. ಅದರ ವಿನ: ಯಾಜಕರ ಪ್ರೇಷಿತತ್ವ ತನ್ನ ಪೂರ್ಣ ಪರಿಣಾಮವನ್ನು ಬೀರಲಾರದು. ಧರ್ಮಸಭೆಯಿಂದ ದೂರವಿರುವವರನ್ನು ಅವರಿಗೆ ಧರ್ಮೋಪದೇಶ ಶಿಕ್ಷಣ ನೀಡುವುದು, ಅವರ ಪ್ರತ್ಯೇಕ ಕುಶಲತೆ ಮತ್ತು ಅನುಭವವನ್ನು ಬೆಳಕಿಗೆ ತರುವುದು, ಇಂಥಹ ಕಾರ್ಯಗಳನ್ನು ಶ್ರೀಸಾಮಾನ್ಯರು ಕೈಗೊಳ್ಳಬೇಕು. ಧರ್ಮಕೇಂದ್ರದ ಹಂತದಲ್ಲಿ ಇಂಥಹ ಪ್ರೇಷಿತತ್ವಕ್ಕೆ ವಿಶೇಷ ಮಾನ್ಯತೆ ಇದೆ. ಅದು ಧರ್ಮಕೇಂದ್ರದಲ್ಲಿರುವ ವಿಭಿನ್ನ ಅಂಶಗಳನ್ನು ಒಂದುಗೂಡಿಸಿ ಜನರನ್ನು ಐಕ್ಯಗೊಳಿಸುತ್ತದೆ. ಯಾಜಕರು ಹಮ್ಮಿಕೊಂಡಿರುವ ಪ್ರೇಷಿತ ಮತ್ತು ಶುಭ ಸಂದೇಶ ಪ್ರಸಾರ ಕಾರ್ಯಗಳಲ್ಲಿ ಸಾಧ್ಯವಾದ ಮಟ್ಟಿಗೆ ಸಹಕರಿಸಬೇಕು.

ಈ ಪ್ರೇಷಿತತ್ವದ ಎರಡನೆಯ ಕ್ಷೇತ್ರ ಕುಟುಂಬ. ಈ ಪ್ರೇಷಿತತ್ವ ಧರ್ಮಸಭೆಗೂ ಪೌರ ಸಮಾಜಕ್ಕೂ ಏಕಮೇವ ಪ್ರಾಮುಖ್ಯತೆಯನ್ನು ಹೊಂದಿದೆ. ಈ ಪ್ರೇಷಿತತ್ವದಲ್ಲಿ ಪತಿ ಪತ್ನಿಯರಿಬ್ಬರೂ ಪರಸ್ಪರರಿಗೆ, ಮಕ್ಕಳಿಗೆ, ಮತ್ತು ಕುಟುಂಬದಲ್ಲಿರುವ ಸರ್ವರಿಗೂ ವಿಶ್ವಾಸದ ಸಾಕ್ಷಿಗಳಾಗಿರಬೇಕು. ಅವರು ತಮ್ಮ ವಿಶ್ವಾಸವನ್ನು ಮಕ್ಕಳಿಗೆ ಪ್ರದಾನ ಮಾಡುತ್ತಾ ಮಾತು ಮತ್ತು ಮಾತ್ರಿಕೆಯಿಂದ ಅವರಿಗೆ ಶಿಕ್ಷಣವೀಯಬೇಕು. ತಮ್ಮ ಮಕ್ಕಳು ಆಯ್ಕೆ ಮಾಡುವ ಜೀವನ ಕರೆಗೆ ವಿವೇಕದಿಂದ ನೆರವನ್ನು ನೀಡಬೇಕು. ಒಂದು ವೇಳೆ ಧಾರ್ಮಿಕ ಅಂತಸ್ತನ್ನು ಆರಿಸಿಕೊಳ್ಳುವುದಾದರೆ ಅದನ್ನು ಬಹು ಎಚ್ಚರಿಕೆಯಿಂದ ಪೋಷಿಸಬೇಕು.

ವಿವಾಹವು ಸ್ವಾಭಾವತ: ಅವಿಭಾಜ್ಯ ಅಂತಸ್ತು ಮತ್ತು ಅದೊಂದು ಸಂಸ್ಕಾರ ಎಂಬುದನ್ನು ಜನ್ಮದಾತರು ತಮ್ಮ ಮಕ್ಕಳಿಗೆ ಹೇಳುವುದು ಕರ್ತವ್ಯ. ಅವರು ಮತ್ತು ಸಮಾನ ಮನಸ್ಕ ವಿಶ್ವಾಸಿಗಳು ಸುಮನಸ್ಕ ಜನರ ಜೊತೆಗೂಡಿ ಕುಟುಂಬಗಳಿಗೆ ಸಾಕಷ್ಟು ಪ್ರಾಮುಖ್ಯತೆ ಕೊಡುವಂತೆ ಅಗ್ರಹಿಸಬೇಕು. ವಸತಿ, ಶಿಕ್ಷಣ, ಉದ್ಯೋಗದ ಸ್ಥಳದಲ್ಲಿ ಸೌಕರ್ಯ, ಸಾಮಾಜಿಕ ಭದ್ರತೆ ಮತ್ತು ತೆರಿಗೆ ಇಂಥಹ ಅಗತ್ಯಗಳು.



ಕುಟುಂಬವು ಸಮಾಜದ ಪ್ರಥಮ ಮತ್ತು ಪ್ರಮುಖ ಜೀವಕೋಶವೆಂದು ಕರೆಯುತ್ತಾರೆ. ಅದು ಈ ನಿಯೋಗವನ್ನು ದೇವರಿಂದ ಸ್ವೀಕರಿಸಿದೆ. ಅದನ್ನು ಕುಟುಂಬ ಪರಸ್ಪರ ಪ್ರೀತಿ ವಿಶ್ವಾಸ, ಕುಟುಂಬ ಪ್ರಾರ್ಥನೆ, ಧರ್ಮಕೇಂದ್ರದ ಆರಾಧನಾ ತಂಡದಲ್ಲಿ ಪಾಲುಗಾರಿಕೆ, ಕೊರತೆಯಲ್ಲಿರುವ ಸಹೋದರರಿಗೆ ನ್ಯಾಯನೀತಿಯಂಥಹ ಸೇವಾ ಸತ್ಕಾರ್ಯದ ಮುಖಾಂತರ ವ್ಯಕ್ತಪಡಿಸುವುದು.

ಹೊಸದಾಗಿ ಧರ್ಮಕೇಂದ್ರ ಪ್ರಾರಂಭವಾದ ಪ್ರದೇಶದಲ್ಲಿ ಕ್ರೈಸ್ತ ಕುಟುಂಬಗಳು ಶುಭಸಂದೇಶದ ಬೋಧನೆಗೆ ಬದ್ಧರಾಗಿ ನಡೆಯುತ್ತಾ ಪ್ರಭು ಕ್ರಿಸ್ತರಿಗೆ ಪರಿಣಾಮಕಾರಿ ಸಾಕ್ಷಿ ನೀಡಬಹುದು. ಈ ಪ್ರೇಷಿತತ್ವವನ್ನು ಬೆಳೆಸಲು ಕುಟುಂಬಗಳು ಗುಂಪು ಗುಂಪಾಗಿ ಸಂಘಟನೆಗೊಳ್ಳುವುದು ಉಪಯುಕ್ತ.

ಪ್ರೇಷಿತತ್ವದ ಮೂರನೆಯ ಕ್ಷೇತ್ರ ಯುವಜನರು. ಆಧುನಿಕ ಸಮಾಜದಲ್ಲಿ ಯುವಜನರ ಪಾತ್ರ ಪ್ರಮುಖವಾದುದು. ಈ ಪ್ರಾಮುಖ್ಯತೆಗೆ ತಕ್ಕಂತೆ ಪ್ರೇಷಿತ ಕಾರ್ಯವನ್ನು ಕೈಗೊಳ್ಳುವುದು ಅವರ ಕರ್ತವ್ಯ. ಅವರ ಸ್ವಾಭಾವಿಕ ಗುಣಲಕ್ಷಣಗಳು ಈ ಪ್ರೇಷಿತತ್ವದೊಂದಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಯುವ ಜನರಿಗೆ ಜೀವನದಲ್ಲಿ ಅಪಾರ ಆಸಕ್ತಿ ಇರುತ್ತದೆ. ಈ ಗುಣವು ಕ್ರಿಸ್ತರ ಮನೋಭಾವದೊಂದಿಗೆ ಸೇರಿಕೊಂಡು, ವಿಧೇಯತೆ ಮತ್ತು ಧರ್ಮಸಭೆಯ ಮೇಲಿನ ಪ್ರೀತಿಯಿಂದ ಪ್ರೇರಿತವಾದರೆ ಪ್ರೇಷಿತತ್ವವು ಫಲಕಾರಿಯಾಗುತ್ತದೆ. ಯುವಜನರು ತಮ್ಮ ಸರಿಸಮಾನ ಜನರ ಗುಂಪಿನಲ್ಲಿ ಈ ಕಾರ್ಯವನ್ನು ಸಫಲಗೊಳಿಸುವುದರಲ್ಲಿ ಅನುಮಾನವಿಲ್ಲ.

ಮಕ್ಕಳಿಗೂ ತಮ್ಮದೇ ಪ್ರೇಷಿತ ಕಾರ್ಯ ಕೈಗೊಳ್ಳುವ ಅವಕಾಶವುಂಟು.ಅವರ ವಯೋಮಾನಕ್ಕೆ ತಕ್ಕಂತೆ ತಮ್ಮ ಸಹಪಾಟಿಗಳ ಮಧ್ಯೆ ಅವರು ಸಜೀವ ಸಾಕ್ಷಿಗಳಾಗಿರಬೇಕು.

ಯುವ ಜನರು ತಮ್ಮ ಪ್ರೇಷಿತತ್ವವನ್ನು ಚೆನ್ನಾಗಿ ನೆರವೇರಿಸುವಂತೆ ವಯಸ್ಕರು ಕೇವಲ ಚರ್ಚೆಯಿಂದಲ್ಲದೆ ತಮ್ಮ ಆದರ್ಶ ನಡವಳಿಕೆಯಿಂದ ನೆರವನ್ನು ನೀಡಬೇಕು. ಕ್ರಿಯಾತ್ಮಕ ಬುದ್ಧಿಮತಿ, ಮನಪೂರ್ವಕ ಸಹಾಯವೂ ಅಗತ್ಯ. ಯುವಜನರು ಹಿರಿಯರ ಬಗ್ಗೆ ಗೌರವ ಮತ್ತು ವಿಶ್ವಾಸವನ್ನು ಬೆಳೆಸಿಕೊಳ್ಳಬೇಕು. ಆಧುನಿಕತೆಯಿಂದ ಅವರು ಆಕರ್ಷಿತರಾಗಿದ್ದರೂ, ಸ್ತುತ್ಯಾರ್ಹ ಮತ್ತು ಗೌರವಾನ್ವಿತ ಸಂಪ್ರದಾಯಗಳಿಗೆ ಅವರು ಮಾನ್ಯತೆ ನೀಡಬೇಕು.

ಪ್ರೇಷಿತತ್ವದ ನಾಲ್ಕನೆಯ ಕ್ಷೇತ್ರ ಸಾಮಾಜಿಕ ಪರಿಸರ. ಇಲ್ಲಿ ಜನರ ಮನೋಭಾವ, ಸಂಪ್ರದಾಯ, ಕಾನೂನು ಮತ್ತು ಅವರು ಜೀವಿಸುವ ಸಮುದಾಯದ ಚೌಕಟ್ಟನ್ನು ನಾವು ಗಮನಿಸಬಹುದು. ಕ್ರೈಸ್ತ ಶ್ರೀಸಾಮಾನ್ಯರು ತಮ್ಮ ವಿಶ್ವಾಸ ಪೂರಿತ ಮನೋಭಾವದಿಂದ ಈ ಪ್ರೇಷಿತತ್ವದೊಂದಿಗೆ ಸೇರ್ಪಡೆಯಾದಾಗ ಅವರು "ಲೋಕದ ಬೆಳಕಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಅವರ ಪ್ರಾಮಾಣಿಕತೆ ಮತ್ತು ಸೋದರ ಪ್ರೀತಿ ಎದ್ದು ಕಾಣುವಂತಿರಬೇಕು. ಶ್ರೀ ಸಾಮಾನ್ಯರು ತಮ್ಮ ಕೌಟುಂಬಿಕ, ಸಾಮಾಜಿಕ ಮತ್ತು ವೃತ್ತಿ ಸಹಜ ಜವಾಬ್ದಾರಿಗಳನ್ನು ಕ್ರಿಸ್ತೀಯ ಉದಾರತೆಯಿಂದ ಕೈಗೊಳ್ಳಬೇಕು. ಅವರ ಜೀವನ ಇಡೀ ಭೂಲೋಕದಲ್ಲಿ ಹುದುಗಿನಂತೆ ಕೆಲಸ ಮಾಡಬೇಕು. ಒಳ್ಳೆಯ ಪ್ರೇಷಿತರು ಪ್ರೇಷಿತತ್ವದಿಂದ ಮಾತ್ರ ಸಮಾಧಾನ ಪಟ್ಟುಕೊಳ್ಳುವುದಿಲ್ಲ. ಅವರು ತಮ್ಮ ನೆರೆಯವರಿಗೆ ಮಾತು ಮತ್ತು ಕೃತಿಯ ಮುಖಾಂತರ ಪ್ರಭು ಕ್ರಿಸ್ತರನ್ನು ಸಾರಲು ಉತ್ಸಾಹಶಾಲಿಗಳಾಗುತ್ತಾರೆ".

**4) ಪ್ರೇಷಿತತ್ವದ ವಿವಿಧ ರೂಪಗಳು :**

ನಿಜವಾದ ಕ್ರೈಸ್ತ ಜೀವನವೇ ಎಲ್ಲಾ ವಿಧದ ಪ್ರೇಷಿತತ್ವದ ಮೂಲಾಧಾರ. ಶ್ರೀ ಸಾಮಾನ್ಯರು ವೈಯಕ್ತಿಕವಾಗಿ ಅಥವಾ ಸಂಘಟಿತರಾಗಿ ತಮ್ಮ ಪ್ರೇಷಿತತ್ವವನ್ನು ಚಲಾಯಿಸಬಹುದು. ಆದರೆ ಪ್ರತಿಯೊಬ್ಬರೂ ವೈಯಕ್ತಿಕ ಪ್ರೇಷಿತತ್ವದಲ್ಲಿ ತಮ್ಮನ್ನೇ ತೊಡಗಿಸಿಕೊಳ್ಳಲೇಬೇಕು.

ಪ್ರೇಷಿತತ್ವವನ್ನು ಒಂಟಿಯಾಗಿ ನೆರವೇರಿಸಲು ಹಲವಾರು ವಿಧಾನಗಳಿವೆ. ವಿಶ್ವಾಸ, ನಂಬಿಕೆ ಮತ್ತು ಪ್ರೀತಿ ಪೂರಕವಾದ ಶ್ರೀಸಾಮಾನ್ಯ ಜೀವನವೇ ಈಗಿನ ಕಾಲದಲ್ಲಿ ಸಾಕ್ಷಿಯನ್ನೀಯಲು ಶಕ್ತವಾಗಿದೆ. ಬಾಯಿಮಾತು, ಬರಹದಿಂದ ಪ್ರಭು ಕ್ರಿಸ್ತರ ಬೋಧನೆಯನ್ನು ನಿರೂಪಿಸುವುದು ವೈಯಕ್ತಿಕ ಪ್ರೇಷಿತತ್ವದ ಇನ್ನೊಂದು ವಿಧಾನ. ನಮ್ಮ ಸಹ ನಾಗರೀಕರೊಂದಿಗೆ ವಿಶ್ವಾಸದ ಬೆಳಕಿನ ಆಧಾರದ ಮೇಲೆ ಉನ್ನತ ಗುರಿ ಉದ್ದೇಶವನ್ನು ಇಟ್ಟುಕೊಳ್ಳುವುದು ಅಗತ್ಯ. ಅದರ ಆಧಾರದ ಮೇಲೆ ಲೌಕಿಕ ವಿಷಯಗಳ ಬಗ್ಗೆ ಇತರರಿಗೆ ತಿಳಿಸುವುದು ಪ್ರೇಷಿತತ್ವದ ಇನ್ನೊಂದು ಬಗೆ. ಅಂತಿಮವಾಗಿ ಶ್ರೀ ಸಾಮಾನ್ಯರು ಪರಪ್ರೀತಿಯನ್ನು ತಮ್ಮ ಜೀವನದ ಜೀವಾಳವನ್ನಾಗಿ ಸ್ವೀಕರಿಸಿ ಸಾಧ್ಯವಾದ ಮಟ್ಟಿಗೆ ಅದನ್ನೇ ತಮ್ಮ ಕಾರ್ಯ ಚಟುವಟಿಕೆಗಳಲ್ಲಿ ವ್ಯಕ್ತ ಪಡಿಸಬೇಕು. ಧರ್ಮಸಭೆಯ ಆರಾಧನಾ ವಿಧಿಯಲ್ಲಿ ಪಾಲ್ಗೊಳ್ಳುವಿಕೆ, ವೈಯಕ್ತಿಕ ಪ್ರಾರ್ಥನೆ, ಪ್ರಾಯಶ್ಚಿತ್ತ ಮತ್ತು ಯಾತನೆ ಅನುಭವಿಸುತ್ತಿರುವಾಗ ಅದನ್ನು ಕ್ರಿಸ್ತರ ಪ್ರೀತಿಗಾಗಿ ಅನುಭವಿಸಲು ಇರುವ ತೊಂದರೆ ತೊಡಕುಗಳು ಇವೆಲ್ಲವೂ ಮಾನವರ ರಕ್ಷಣೆಗೆ ಸಹಾಯಕ ಪರಿಕರಗಳು ಎಂಬುದನ್ನು ಗಮನದಲ್ಲಿಡಬೇಕು.

ಪ್ರೇಷಿತತ್ವದಲ್ಲಿ ಒಬ್ಬಂಟಿಗರಾಗಿ ಪ್ರವೇಶಿಸುವವರು ತಮ್ಮಷ್ಟಕ್ಕೆ ತಾವಿರಬಾರದು ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಧರ್ಮಸಭೆ ಎಂಬುದು ಒಂದು ಸಮುದಾಯ. ಅದರ ಸದಸ್ಯರು ಪರಸ್ಪರ ಉತ್ತೇಜನ ಮತ್ತು ಬೆಂಬಲವನ್ನು ಕೊಡಬೇಕು. ಎಲ್ಲಿ ಸಂಘಟಿತ ಸ್ಥಾಪನಾ ಸಹಕಾರ ಲಭಿಸದಿದ್ದಾಗ ಒಂಟಿಯಾಗಿ ಮುಂಚುವುದು ಶ್ರೇಯಸ್ಕರ.

ಸ್ವಾಭಾವಿಕವಾಗಿ ಮಾನವನು ಸಾಮಾಜಿಕ ಜೀವಿ. ದೇವರು ಯೇಸುಸ್ವಾಮಿಯ ಅನುಯಾಯಿಗಳನ್ನು ಒಂದು ಜನಾಂಗವನ್ನಾಗಿ ಒಂದೇ ದೇಹವಾಗಿರಲು ಆಯ್ಕೆ ಮಾಡಿದರು. ಆದುದರಿಂದ ಗುಂಪು ಪ್ರೇಷಿತತ್ವ ಮಾನವ ಮತ್ತು ಕ್ರೈಸ್ತ ಅಗತ್ಯಕ್ಕೆ ಅನುಗುಣವಾಗಿದೆ.

ಆದುದರಿಂದ ಭಕ್ತ ವಿಶ್ವಾಸಿಗಳು ತಮ್ಮ ತಮ್ಮ ಕುಟುಂಬ ಸಮುದಾಯಗಳಲ್ಲಿ ಧರ್ಮಕೇಂದ್ರ, ಧರ್ಮಕ್ಷೇತ್ರಗಳಲ್ಲಿ ಗುಂಪು ಪ್ರೇಷಿತತ್ವದಲ್ಲಿ ಭಾಗಿಗಳಾಗಬೇಕು. ಗುಂಪು ಪ್ರೇಷಿತತ್ವ ಅದರ ಸದಸ್ಯರನ್ನು ಪೋಷಿಸುತ್ತದೆ. ಪ್ರೇಷಿತ ಸೇವೆಗೆ ಅಗತ್ಯ ತರಬೇತಿಯನ್ನಿತ್ತು ಅದನ್ನು ಸಂಘಟಿಸುತ್ತದೆ.

ಕೆಲವು ಸಂಘ ಸಂಸ್ಥೆಗಳು ಅದರ ಸದಸ್ಯರ ದೈನಂದಿನ ಜೀವನದಲ್ಲಿ ವಿಶ್ವಾಸವೂ ಬೆಳೆಯುವಂತೆ ಪ್ರೋತ್ಸಾಹಿಸುತ್ತದೆ. ಅದರ ಮಧ್ಯೆ ನಿಕಟ ಸಂಬಂಧಕ್ಕೆ ಶ್ರಮಿಸುತ್ತದೆ. ಅವುಗಳಿಗೆ ಆದ್ಯತೆ ಕೊಡುವುದು ಅಗತ್ಯ.

ಗುಂಪು ಪ್ರೇಷಿತತ್ವದ ಸಂಘ ಸಂಸ್ಥೆಗಳು ಸಾಧನಗಳೇ ಹೊರತು ಗುರಿಯಲ್ಲ, ಧರ್ಮಸಭೆಗೆ ನೆರವು ನೀಡುವುದೇ ಅವುಗಳ ಉದ್ದೇಶವಾಗಿರಬೇಕು. ಅವುಗಳ ಆಧ್ಯಾತ್ಮಿಕ ಶಕ್ತಿಯ ಮಟ್ಟ



ಅವು ಧರ್ಮಸಭೆಯ ಗುರಿ ಉದ್ದೇಶಗಳೊಂದಿಗೆ ಹೊಂದಿಕೊಂಡಿರುವುದನ್ನು ಅವಲಂಬಿಸಿದೆ ಮತ್ತು ಅವುಗಳ ಸಾಕ್ಷ್ಯ ಶುಭ ಸಂದೇಶದ ಮನೋಭಾವಭರಿತವಾಗಿರಬೇಕು. ವ್ಯಾಟಿಕನ್ ಸಮ್ಮೇಳನ ಇಂಥಹ ಗುಂಪು ಸಂಘ ಸಂಸ್ಥೆಗಳನ್ನು ಪ್ರೋತ್ಸಾಹಿಸುತ್ತದೆ.

ಅನೇಕ ಶ್ರೀ ಸಾಮಾನ್ಯರು ಒಂಟಿ ಅಥವಾ ವಿವಾಹಿತರು ತಮ್ಮ ವೃತ್ತಿಯ ಅನುಭವವನ್ನು ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಸಂಘ ಸಂಸ್ಥೆಗಳಿಗೆ ಮತ್ತು ಅವುಗಳ ಚಟುವಟಿಕೆಗಳಿಗೆ ಮೀಸಲಾಗಿಡುತ್ತಾರೆ. ಇಂಥಹ ವ್ಯಕ್ತಿಗಳು ಧರ್ಮಸಭೆ ವಿಶೇಷ ಗೌರವ ಮತ್ತು ಸನ್ಮಾನಕ್ಕೆ ಪಾತ್ರರು.

**5) ಬಾಹ್ಯ ಸಂಬಂಧಗಳು :**

ಪ್ರೀತಿ ಪ್ರೇಷಿತತ್ವ ಒಂಟಿಯಾಗಲಿ ಗುಂಪು ಆಧಾರಿತವಾಗಲಿ ಅದನ್ನು ಧರ್ಮಸಭೆಯ ಪ್ರೇಷಿತತ್ವದೊಂದಿಗೆ ಸೇರ್ಪಡೆಯಾಗಬೇಕು. ಧರ್ಮಸಭೆಯ ಶ್ರೇಣಿಯುತ ಅಧಿಕಾರ ವರ್ಗದಲ್ಲಿ ಶಾಮಿಲಾಗಿರುವುದು ಕ್ರೈಸ್ತ ಪ್ರೇಷಿತತ್ವದ ಪ್ರಮುಖ ಗುಣ. ವಿವಿಧ ಯೋಜನೆಗಳಲ್ಲಿ ಮಗ್ನರಾಗಿರುವ ಗುಂಪುಗಳು ತಮ್ಮ ತಮ್ಮಲ್ಲೇ ಒಂದಾಗಿರವುದೂ ಅಗತ್ಯ.

ಶ್ರೇಣಿಯುತ ಅಧಿಕಾರ ವರ್ಗ ಶ್ರೀ ಸಾಮಾನ್ಯರ ಪ್ರೇಷಿತತ್ವದಲ್ಲಿ ಪ್ರೋತ್ಸಾಹಿಸಬೇಕು. ಧರ್ಮಸಭೆಯ ಅಧಿಕಾರ ವರ್ಗದಿಂದ ಅನುಮೋದನೆಯನ್ನು ಪಡೆಯದ ಯಾವ ಯೋಜನೆಯೂ "ಕಥೋಲಿಕ" ಎಂದು ಕರೆಯಲಾಗದು. ಅಧಿಕಾರ ವರ್ಗ ಪರಿಸರಕ್ಕೆ ತಕ್ಕಂತೆ ತನ್ನ ಪ್ರೇಷಿತತ್ವದಲ್ಲಿ ಬದಲಾವಣೆಯನ್ನು ತರಬಹುದು. ಆದರೂ ಪ್ರೀತಿ ಪ್ರೇಷಿತತ್ವದ ಸಹಜಗುಣವನ್ನು ಪ್ರತ್ಯೇಕತೆಯನ್ನೂ ಸಂರಕ್ಷಿಸಬೇಕು ಮತ್ತು ಶ್ರೀ ಸಾಮಾನ್ಯರು ಸ್ವಂತವಾಗಿ ಪ್ರೇಷಿತತ್ವವನ್ನು ಕೈಗೊಳ್ಳುವ ಸಾಧ್ಯತೆಯನ್ನೂ ತಳ್ಳಿಹಾಕಬಾರದು.

ಧರ್ಮಾಧ್ಯಕ್ಷರು ಮತ್ತು ಯಾಜಕರು ಪ್ರೇಷಿತತ್ವ ಶ್ರೀ ಸಾಮಾನ್ಯರ ಹಕ್ಕು ಮತ್ತು ಕರ್ತವ್ಯ ಎಂಬುದನ್ನು ಮರೆಯಬಾರದು. ಅವರು ಶ್ರೀ ಸಾಮಾನ್ಯರೊಂದಿಗೆ ಸೋದರ ಭಾವನೆಯಿಂದ ಧರ್ಮಸಭೆಯಲ್ಲಿ, ಧರ್ಮಸಭೆಗಾಗಿ ದುಡಿಯಬೇಕು. ಧಾರ್ಮಿಕ ಸಹೋದರ ಸಹೋದರಿಯರೂ ಪ್ರೇಷಿತತ್ವದ ಕಾರ್ಯಗಳ ಮೌಲ್ಯವರಿತು ಶ್ರೀ ಸಾಮಾನ್ಯರ ಕಾರ್ಯ ಚಟುವಟಿಕೆಗಳಿಗೆ ಸಕ್ರಿಯ ಸಹಾಯ ನೀಡತಕ್ಕದ್ದು.

ಶ್ರೀ ಸಾಮಾನ್ಯರ ಎಲ್ಲ ಪ್ರೇಷಿತ ಗುಂಪುಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಧರ್ಮಸಭೆಯ ಈ ಉದ್ದೇಶಕ್ಕಾಗಿ ನೇಮಕ ಮಾಡುವ ವಿವಿಧ ಸಮಿತಿಗಳೊಡನೆ ಸಂಘಟಿತವಾಗಲು ಸಿದ್ಧವಾಗಿರಬೇಕು.

ಕಥೋಲಿಕ ಮತ್ತು ಇತರೆ ಕ್ರೈಸ್ತ ಪಂಗಡಗಳು ಒಂದೇ ಗುರಿ ಉದ್ದೇಶವುಳ್ಳವರಾಗಿರುತ್ತೇವೆ. ಆದುದರಿಂದ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪರಸ್ಪರ ಸಂಬಂಧ ಮತ್ತು ಒಗ್ಗಟ್ಟಿಗಾಗಿ ಹಾತೊರೆಯಬೇಕು. ಈ ಸಂಬಂಧ ವೈಯಕ್ತಿಕವೂ ಸಮುದಾಯ ಮುಖವಾಗಿರಲೂ ಬಹುದು. ಅಂತೆಯೇ ಇದೇ ಗುರಿ ಸಾಧನೆಗಾಗಿ ಕ್ರೈಸ್ತೇತ ಗುಂಪುಗಳೊಂದಿಗೂ ನಾವು ಮಧುರ ಸಂಬಂಧವನ್ನಿಟ್ಟುಕೊಳ್ಳಬೇಕು.

# XIII ಧಾರ್ಮಿಕ ಸ್ವಾತಂತ್ರ್ಯ

## (ಪ್ರಕಟಣೆ)

### ಪೀಠಿಕೆ

ವ್ಯಾಟಿಕನ್ ಸಮ್ಮೇಳನ ಇಂದಿನ ಜನರ ಮುಖ್ಯ ಅಭಿಪ್ರಾಯ ಮತ್ತು ಮನೋಭಾವವನ್ನು ಗಮನಕ್ಕೆ ತಂದುಕೊಂಡಿದೆ.

1) ಮಾನವ ವ್ಯಕ್ತಿತ್ವ ಘನತೆಯುಳ್ಳದ್ದು ಎಂಬ ವಿಷಯದ ಬಗ್ಗೆ ಗಾಢ ಮನವರಿಕೆ .

11) ಮಾನವರು ಜವಾಬ್ದಾರಿ ಮತ್ತು ಕರ್ತವ್ಯ ನಿಷ್ಠೆಯಿಂದ ಸ್ವಾತಂತ್ರ್ಯವನ್ನು ಅನುಭವಿಸುತ್ತಾ ತೀರ್ಮಾನಗಳನ್ನು ತೆಗೆದುಕೊಂಡು ನಡೆಯುವಂತಿರಬೇಕು. ಇಲ್ಲಿ ಯಾವ ವಿಧವಾಗಿ ಬಲತ್ಕಾರವಿರಬಾರದು ಎಂಬ ಬಿನ್ನಹ.

111) ಸರ್ಕಾರಗಳು ವ್ಯಕ್ತಿಯ ಮತ್ತು ಸಂಘ ಸಂಸ್ಥೆಗಳ ನ್ಯಾಯಬದ್ಧ ಸ್ವಾತಂತ್ರ್ಯವನ್ನು ಉಲ್ಲಂಘಿಸದಂತೆ ಅದರ ಅಧಿಕಾರಕ್ಕೆ ಶಾಸನ ಬದ್ಧ ಕಾನೂನುಗಳಿರಬೇಕೆಂಬ ಆಶಯ.

ಜನರ ಮನಸ್ಸಿನಲ್ಲಿರುವ ಅಭಿಲಾಷೆಗಳನ್ನು ಸತ್ಯಕ್ಕೂ ನ್ಯಾಯಕ್ಕೂ ಅನುಗುಣವಾಗಿವೆ ಎಂಬುದನ್ನು ಈ ಸಮ್ಮೇಳನ ಸಾರಲು ಆಶಿಸುತ್ತದೆ. ಸ್ವಾತಂತ್ರ್ಯದ ಬಗ್ಗೆ ಪ್ರಥಮ ಕೋರಿಕೆ ಇದು. ಸಮಾಜದಲ್ಲಿ ಧರ್ಮವನ್ನು ಸ್ವತಂತ್ರವಾಗಿ ಅನುಸರಿಸಲು ಅವಕಾಶವಿರಬೇಕು. ಈ ಸಮ್ಮೇಳನ ಈ ಹೇಳಿಕೆಗಳಲ್ಲಿ ತನ್ನ ನಂಬಿಕೆಯನ್ನು ಪ್ರಕಟಿಸುತ್ತದೆ.

ಎ) ಮಾನವನು ದೇವರನ್ನು ಹೇಗೆ ಪೂಜಿಸಬೇಕೆಂದು ಅವರೇ ತಿಳಿಯಪಡಿಸಿದ್ದಾರೆ.

ಬಿ) ಕಥೋಲಿಕ ಮತ್ತು ಪ್ರೇಷಿತ ಧರ್ಮಸಭೆಯಲ್ಲಿ ನಿಜ ಧರ್ಮ ಅಡಕವಾಗಿದೆ.

ಸಿ) ಎಲ್ಲಾ ಮಾನವರು ಸತ್ಯವನ್ನು ಕಂಡುಕೊಳ್ಳಬೇಕು, ಆಲಂಗಿಸಬೇಕು ಮತ್ತು ಅದನ್ನು ಭದ್ರವಾಗಿ ಅವಲಂಬಿಸಬೇಕು.

ಈ ಕರ್ತವ್ಯಗಳು ಪ್ರತಿ ಮಾನವನ ಮನಸಾಕ್ಷಿಯನ್ನು ಬಂಧಿಸುತ್ತದೆ. ಸತ್ಯವು ಒಮ್ಮೆಲೇ ಮನಸ್ಸನ್ನು ಮೌನವಾಗಿ ಮತ್ತು ಶಕ್ತಿಯುತವಾಗಿ ಪ್ರವೇಶಿಸುತ್ತದೆ. ಈ ಸತ್ಯ ತನ್ನ ನಿಜಾಂಶವನ್ನು ಬಲಾತ್ಕಾರದಿಂದ ಯಾರ ಮೇಲೂ ವಿಧಿಸುವುದಿಲ್ಲ.

ಧಾರ್ಮಿಕ ಸ್ವಾತಂತ್ರ್ಯವೆಂದರೆ ಪ್ರಜಾ ಸಮಾಜದಲ್ಲಿ ವ್ಯಕ್ತಿಗೆ ತಮ್ಮ ಧರ್ಮದ ವಿಧಿಗಳನ್ನು ಆಚರಿಸಲು ಯಾವ ಪ್ರತಿಬಂಧ ಇಲ್ಲದಿರುವುದು. ನೈಜ್ಯ ಧರ್ಮದ ಬಗ್ಗೆ ಮಾನವರಿಗೆ ಇರಬೇಕಾದ ನೈತಿಕ ಕರ್ತವ್ಯ ಮತ್ತು ಏಕೈಕ ಕಥೋಲಿಕ ಧರ್ಮಸಭೆಯ ಬಗ್ಗೆ ಕಥೋಲಿಕ ಧರ್ಮತತ್ವದಲ್ಲಿ ಯಾವ ಬದಲಾಣೆಯೂ ಇಲ್ಲ. ಈ ಸಮ್ಮೇಳನ ಎಲ್ಲಕ್ಕೂ ಮಿಗಿಲಾಗಿ ಇತ್ತೀಚಿನ ಜಗದ್ಗುರುಗಳು ಮಾನವ ಅಭೇದ್ಯ ಹಕ್ಕುಗಳ ಬಗ್ಗೆ ನೀಡಿದ ಬೋಧನೆಯನ್ನು ವಿಸ್ತ್ರತಗೊಳಿಸುತ್ತದೆ.



**6) ಪ್ರೇಷಿತತ್ವಕ್ಕೆ ತರಬೇತಿ :**

ಶ್ರೀ ಸಾಮಾನ್ಯರು ಸೂಕ್ತ ತರಬೇತಿಯನ್ನು ಪಡೆದಿದ್ದರೆ ಮಾತ್ರ ಅವರ ಪ್ರೇಷಿತ ಕಾರ್ಯಗಳು ಫಲಭರಿತವಾಗುತ್ತದೆ. ಅವರ ತರಬೇತಿ ಜೀವನದ ಅಂತಸ್ತು ಮತ್ತು ಆಧ್ಯಾತ್ಮಿಕ ಅಭ್ಯಾಸಕ್ಕೆ ಅನುಗುಣವಾಗಿರಬೇಕು.

ಸರ್ವತೋಮುಖ ಮಾನವ ವಿಕಾಸ ಪ್ರೇಷಿತತ್ವಕ್ಕೆ ಅಗತ್ಯ ಪೂರ್ವ ಸಿದ್ಧತೆಯಾಗಿದೆ. ವ್ಯಕ್ತಿಗೆ ಆಧುನಿಕ ಪ್ರಪಂಚದ ಪೂರ್ಣ ಜ್ಞಾನವಿರಬೇಕು ಮತ್ತು ಅವನು ತನ್ನ ಸಾಮಾಜಿಕ ಗುಂಪಿನ ಸಂಸ್ಕೃತಿಯೊಂದಿಗೆ ಒಗ್ಗಿಕೊಂಡಿರಬೇಕು.

ಎಲ್ಲಕ್ಕೂ ಮಿಗಿಲಾಗಿ ಆಧ್ಯಾತ್ಮಿಕ ತರಬೇತಿ ಅತಿ ಮುಖ್ಯ. ಅವರು ತಮ್ಮ ಜೀವನ ಮತ್ತು ಚಟುವಟಿಕೆಗಳನ್ನು ಸೃಷ್ಟಿ ಮತ್ತು ರಕ್ಷಣೆ, ಜೊತೆಗೆ ಪವಿತ್ರಾತ್ಮರ ಸ್ಫೂರ್ತಿಯ ರಹಸ್ಯದ ಮೇಲೆ ಸ್ಥಾಪಿಸಲು ಶಕ್ತರಾಗುತ್ತಾರೆ.

ಇದರ ಜೊತೆಗೆ ವಿಶ್ವಾಸ ಮತ್ತು ನೈತಿಕತೆಯ ದೃಢವಾದ ದೈವ ಶಾಸ್ತ್ರೀಯ ತರಬೇತಿ ಇರಬೇಕು. ಅದು ಪ್ರತಿ ಗುಂಪು ಮತ್ತು ಅಗತ್ಯವಿದ್ದರೆ ಪ್ರತಿ ವ್ಯಕ್ತಿಗೆ ಹೊಂದಿಕೊಳ್ಳುವಂತಿರಬೇಕು. ಆದರೆ ಅದು ಕೇವಲ ಪುಸ್ತಕ ಜ್ಞಾನಕ್ಕೆ ಸೀಮಿತವಾಗಿರಬಾರದು. ಅದನ್ನು ಶುಭ ಸಂದೇಶದ ಬೆಳಕಿನಲ್ಲಿ ಕಂಡು, ವಿವೇಚಿಸಿ ಕಾರ್ಯ ಮಗ್ನರಾಗಲು ಶ್ರೀ ಸಾಮಾನ್ಯರಿಗೆ ಸಹಾಯಕವಾಗಿರಬೇಕು. ಹೀಗೆ ಶ್ರೀ ಸಾಮಾನ್ಯರು ಸಜೀವ ಸದಸ್ಯರಾಗಿ, ಧರ್ಮಸಭೆಯ ಸಾಕ್ಷಿಯಾಗಿ ತಾವಿದ್ದ ಸ್ಥಳದಲ್ಲಿ ಧರ್ಮಸಭೆಯನ್ನು ಲೌಕಿಕ ಕಾರ್ಯಚಟುವಟಿಕೆಗಳ ಮಧ್ಯದಲ್ಲಿ ಪ್ರತ್ಯಕ್ಷಗೊಳಿಸಲು ಶಕ್ತರಾಗುತ್ತಾರೆ.

ಪ್ರೇಷಿತತ್ವದ ತರಬೇತಿ ಎಷ್ಟು ಬೇಗ ಪ್ರಾರಂಭವಾಗುತ್ತದೋ ಅಷ್ಟು ಫಲಕಾರಿ. ಎಳೆಯ ವಯಸ್ಸಿನಲ್ಲೇ ಮಕ್ಕಳನ್ನು ಧರ್ಮಕೇಂದ್ರದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸುವುದು ಸೂಕ್ತ. ಆಗ ಅವರು ದೇವರ ಪ್ರಜೆಗಳ ಬಗ್ಗೆ ತಮ್ಮ ಕರ್ತವ್ಯಗಳನ್ನು ಅರಿತುಕೊಳ್ಳುತ್ತಾರೆ. ಈ ಕಾರ್ಯವನ್ನು ಜನ್ಮದಾತರು ಮಾಡಬೇಕು. ಯಾಜಕರು ಸಹ ತಮ್ಮ ಧರ್ಮೋಪದೇಶ ತರಗತಿ, ಪ್ರಬೋಧನೆಗಳ ಮುಖಾಂತರ ಶಾಲಾ ಕಾಲೇಜುಗಳಲ್ಲಿ ಕಥೋಲಿಕ ಮತ್ತು ಪ್ರೇಷಿತ ಭಾವನೆಗಳನ್ನು ಯುವ ಜನರಲ್ಲಿ ಬೆಳೆಸಬೇಕು. ಯುವ ಪ್ರೇಷಿತರನ್ನು ಸಿದ್ಧಗೊಳಿಸಲು ಶಿಕ್ಷಕರಿಗೂ ಸಾಕಷ್ಟು ಸೌಲಭ್ಯಗಳಿರಬೇಕು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರೇಷಿತ ಗುಂಪಿನಲ್ಲಿ ಸಕ್ರಿಯ ಸದಸ್ಯರಾಗಿದ್ದರೆ ಎಲ್ಲಾ ವಿಧವಾದ ತರಬೇತಿಯನ್ನು ಸುಲಭವಾಗಿ ಪಡೆದುಕೊಳ್ಳಬಹುದು.

### ಹಿತನುಡಿ :

ಎಲ್ಲಾ ಶ್ರೀಸಾಮಾನ್ಯರು ಮುಖ್ಯವಾಗಿ ಯುವ ಜನರು ಕ್ರಿಸ್ತರ ಕರೆಯೋಣಕ್ಕೆ ಓಗೊಟ್ಟು ಪ್ರೇಷಿತತ್ವವನ್ನು ಕೈಗೊಳ್ಳಬೇಕೆಂದು ಉಪದೇಶಿಸುತ್ತಾ ಈ ಶಾಸನ ಅಂತ್ಯಗೊಳ್ಳುತ್ತದೆ. ತಮ್ಮ ರಕ್ಷಣಾ ನಿಯೋಗದಲ್ಲಿ ಅತಿ ನಿಕಟವಾಗಿ ಸಹಕರಿಸಬೇಕೆಂದು ನಮ್ಮ ಪ್ರಭು ವ್ಯಾಟಿಕನ್ ಸಮ್ಮೇಳನದ ಮುಖಾಂತರ ಎಲ್ಲ ಶ್ರೀ ಸಾಮಾನ್ಯರಿಗೆ ಇನ್ನೊಮ್ಮೆ ಆಮಂತ್ರಿಸುತ್ತದೆ.

# ಧಾರ್ಮಿಕ ಸ್ವಾತಂತ್ರ್ಯದ ಬಗ್ಗೆ ಸಾಮಾನ್ಯ ಹೇಳಿಕೆ

"ವ್ಯಾಟಿಕನ್ ಸಮ್ಮೇಳನ ಮಾನವನಿಗೆ ಧಾರ್ಮಿಕ ಹಕ್ಕಿದೆ ಎಂದು ಘೋಷಿಸಿದೆ. ಸ್ವಾತಂತ್ರ್ಯವೆಂದರೆ ಎಲ್ಲಾ ವೈಯಕ್ತಿಕ, ಸಾಮಾಜಿಕ ಗುಂಪು, ಮತ್ತಿತರರು ಮಾನವ ಅಧಿಕಾರಗಳ ಬಲತ್ಕಾರದಿಂದ ಮುಕ್ತರಾಗಿರುವುದು. ಮನಸ್ಸಾಕ್ಷಿಗೆ ವಿರೋಧವಾಗಿ ನಡೆಯದಂತೆ ಒತ್ತಾಯ ಪಡಿಸದೆ ಇರುವುದು. ಅಂತರಂಗ ಅಥವಾ ಬಹಿರಂಗ, ಏಕಾಂತ ಅಥವಾ ಸಾರ್ವಜನಿಕವಾಗಿ ಮನಸ್ಸಾಕ್ಷಿಗೆ ಅನುಗುಣವಾಗಿ ನ್ಯಾಯಬದ್ಧ ಪರಿಮಿತಿಯಲ್ಲಿ ನಡೆಯಲು ತಡೆತರದೆ ಇರುವುದು ಧಾರ್ಮಿಕ ಸ್ವಾತಂತ್ರ್ಯದ ಆಸ್ತಿವಾರವಿದು.

ಎ) ಮಾನವ ವ್ಯಕ್ತಿತ್ವದ ಘನತೆ ಯಾವುದೆಂದರೆ ಅವನು ಬುದ್ಧಿಶಕ್ತಿ ಮತ್ತು ಚಿತ್ತಶಕ್ತಿಯಿಂದ ಭೂಷಿತನಾಗಿರುವುದರಿಂದ ಧಾರ್ಮಿಕ ಸತ್ಯವನ್ನು ಕಂಡುಕೊಳ್ಳುವ ವೈಯಕ್ತಿಕ ಜವಾಬ್ದಾರಿಯನ್ನು ಹೊಂದಿದ್ದಾನೆ.

ಬಿ) ಮಾನವ ಜೀವನದ ಅತ್ಯುನ್ನತ ಮಾಪನ ದೈವ ನಿಯಮ. ಈ ನಿಯಮದಿಂದಲೇ ದೇವರು ಈ ವಿಶ್ವವನ್ನು ತಮ್ಮ ಸುಜ್ಞಾನ ಮತ್ತು ಪ್ರೀತಿಯಿಂದ ಯೋಜಿಸಿದ ಮಾನವ ಸಮುದಾಯವನ್ನು ಆಳುತ್ತಾರೆ.

ಮಾನವನು ಈ ದೈವ ನಿಯಮವನ್ನು ತಿಳಿದುಕೊಳ್ಳುವ, ಅಂಗೀಕರಿಸುವ ಮತ್ತು ಅದರಲ್ಲಿ ಭಾಗಿಯಾಗುವ ಜವಾಬ್ದಾರಿಯನ್ನು ಹೊಂದಿದ್ದಾನೆ. ಇದನ್ನು ಅವನು ತನ್ನ ಮನಸ್ಸಾಕ್ಷಿಯ ಮಧ್ಯಸ್ಥಿಕೆಯ ಮುಖಾಂತರ ಮಾಡುತ್ತಾನೆ. ಧಾರ್ಮಿಕ ಸತ್ಯವನ್ನು ಕಂಡುಕೊಳ್ಳಲು ಮಾನವನು ಬದ್ಧನಾಗಿದ್ದಾನೆ. ಈ ಸತ್ಯವನ್ನು ಕಂಡುಕೊಂಡ ನಂತರ ಅದರ ವಿಧಿಗನುಸಾರ ತನ್ನ ಜೀವನವನ್ನು ಕ್ರಮಬದ್ಧಗೊಳಿಸುವ ಕರ್ತವ್ಯವನ್ನೂ ಹೊಂದಿದ್ದಾನೆ. ಹೀಗೆ ತನ್ನ ಜೀವನದ ಅಂತ್ಯವೂ ಗುರಿಯೂ ಆದ ದೇವರನ್ನು ಅವನು ಸೇರಬೇಕು. ಈ ಕರ್ತವ್ಯವನ್ನು ಈಡೇರಿಸಲು ಅವನಿಗೆ ಬಾಹ್ಯ ಬಲತ್ಕಾರ ಇರಬಾರದು, ಮಾನಸಿಕ ಸ್ವಾತಂತ್ರ್ಯವುಳ್ಳವನಾಗಿರಬೇಕು.

ಧಾರ್ಮಿಕ ಕ್ರಿಯೆಗಳು ಲೌಕಿಕ ಮತ್ತು ಪ್ರಾದೇಶಿಕ ವಿಚಾರಗಳಿಗೆ ಅತೀತವಾದವು. ಆದುದರಿಂದ ಸರ್ಕಾರಗಳು ಈ ವಿಷಯಗಳನ್ನು ಗಮನಕ್ಕೆ ತಂದುಕೊಂಡು ಧಾರ್ಮಿಕ ಜೀವನಕ್ಕೆ ನೆರವಾಗಬೇಕು. ಧಾರ್ಮಿಕ ಕ್ರಿಯೆಗಳನ್ನು ವಿಧಿಸುವುದು ಅಥವಾ ನಿಷೇಧಿಸುವುದನ್ನು ಮಾಡಿದರೆ ಅದು ತನ್ನ ಅಧಿಕಾರವನ್ನು ಉಲ್ಲಂಘಿಸಿದಂತೆ.

ಧಾರ್ಮಿಕ ಸಂಸ್ಥೆಗಳು ಸಹ ಬಲತ್ಕಾರದಿಂದ ಮುಕ್ತವಾಗಿರುವ ಹಕ್ಕನ್ನು ಪಡೆದಿವೆ. ಸಾರ್ವಜನಿಕ ನ್ಯಾಯಬದ್ಧ ವಿಧಿನಿಯಮಗಳನ್ನು ಅನುಸರಿಸುವ ಸಂಸ್ಥೆಗಳನ್ನು ಈ ಕೆಳಗಿನ ವಿಷಯಗಳಲ್ಲಿ ನಿರ್ಬಂಧಿಸಬಾರದು 1) ಸೇವಾಕರ್ತರ ಆಯ್ಕೆ, ತರಬೇತಿ, ನೇಮಕಾತಿ ಮತ್ತು ವರ್ಗಾವಣೆ 2) ಹೊರ ದೇಶಗಳಲ್ಲಿರುವ ಅಧಿಕಾರಿಗಳೊಂದಿಗೆ ಸಂಪರ್ಕ 3) ಧಾರ್ಮಿಕ ಕಾರ್ಯಗಳಿಗೆ ಕಟ್ಟಡಗಳ ನಿರ್ಮಾಣ 4) ಸೂಕ್ತ ಕೆಲಸ ಕಾರ್ಯಗಳಿಗೆ ಹಣ ಮತ್ತು ಆಸ್ತಿಯ ಗಳಿಕೆ ಮತ್ತು ವಿನಿಯೋಗ 5) ವಿಶ್ವಾಸದ ಬಹಿರಂಗ ನಿವೇದನೆ ಮತ್ತು ಸಾಕ್ಷ್ಯ.



ಧಾರ್ಮಿಕ ವಿಷಯಗಳನ್ನು ಸಾರುವಾಗ ಮತ್ತು ಧಾರ್ಮಿಕ ವಿಧಿಗಳನ್ನು ಆಚರಿಸುವಾಗ ಯಾರೂ ಯಾವ ವಿಧವಾದ ಒತ್ತಡ ಅಥವಾ ಆಮಿಷವನ್ನು ಒಡ್ಡಬಾರದು. ವಿಶೇಷವಾಗಿ ಬಡವರ ಮತ್ತು ಅವಿದ್ಯಾವಂತರೊಂದಿಗೆ ಅವಮಾನಕರ ಮತ್ತು ಅಯೋಗ್ಯಕರ ರೀತಿಯಲ್ಲಿ ವರ್ತಿಸಬಾರದು.

ಧಾರ್ಮಿಕ ಸಮುದಾಯಗಳಿಗೆ ಈ ಕೆಳಗಿನ ಸ್ವಾತಂತ್ರ್ಯವಿದೆ. 1) ತಮ್ಮ ಸಂಸ್ಥೆಯ ಸ್ಥಾಪನೆಗೆ ಸಂಬಂಧ ಪಟ್ಟ ವಿಷಯಗಳಲ್ಲಿ ಧಾರ್ಮಿಕ ನೀತಿಯ ಮೌಲ್ಯವನ್ನು ವ್ಯಕ್ತಪಡಿಸುವುದು. 2) ಸಭೆ ಕೂಟಗಳನ್ನು ನಡೆಸುವುದು 3) ತಮ್ಮ ಧಾರ್ಮಿಕ ಭಾವನೆಗಳಿಗೆ ಅನುಗುಣವಾಗಿ ಶಿಕ್ಷಣ, ಸಾಂಸ್ಕೃತಿಕ, ದಾನಧರ್ಮ ಮತ್ತು ಸಾಮಾಜಸೇವಾ ಸಂಸ್ಥೆಗಳ ಸ್ಥಾಪನೆ.

ಪ್ರತಿಯೊಂದು ಕುಟುಂಬಕ್ಕೂ ತನ್ನ ಧಾರ್ಮಿಕ ಜೀವನ ನಡೆಸುವ ಸ್ವಾತಂತ್ರ್ಯವಿದೆ. ತಮ್ಮ ಮಕ್ಕಳಿಗೆ ಯಾವ ರೀತಿಯ ಧಾರ್ಮಿಕ ಶಿಕ್ಷಣ ಕೊಡಬೇಕು ಎಂದು ನಿರ್ಧರಿಸುವ ಸ್ವಾತಂತ್ರ್ಯ ಜನ್ಮದಾತರಿಗಿದೆ. ಸರ್ಕಾರವು ಅನಗತ್ಯ ಹೊರೆಯನ್ನು ಹೊರಿಸಿ ಈ ಹಕ್ಕುಗಳಿಗೆ ಧಕ್ಕೆ ತರಬಾರದು. ಮಾನವನ ಅನುಲ್ಲಂಘನೀಯ ಹಕ್ಕುಗಳನ್ನು ಕಾಪಾಡುವುದು ಮತ್ತು ಪೋಷಿಸುವುದು ಅದರ ಕರ್ತವ್ಯ. ಅಷ್ಟಲ್ಲದೆ ಸರ್ಕಾರವು ನ್ಯಾಯಬದ್ಧ ಕಾನೂನು ಮತ್ತು ಇತರ ಸೂಕ್ತ ವಿಧಾನಗಳಿಂದ ಪ್ರಜೆಗಳ ಧಾರ್ಮಿಕ ಸ್ವಾತಂತ್ರ್ಯವನ್ನು ಪರಿಣಾಮಕಾರಿಯಾಗಿ ಸಂರಕ್ಷಿಸಬೇಕು. ವಿಶೇಷ ಸನ್ನಿವೇಶಗಳ ಪ್ರಯುಕ್ತ ಒಂದು ಧಾರ್ಮಿಕ ಸಮುದಾಯಕ್ಕೆ ಪ್ರತ್ಯೇಕ ಪ್ರಾಮುಖ್ಯತೆಯನ್ನು ನೀಡಿದ್ದರೂ ಇತರ ಧಾರ್ಮಿಕ ಸಮುದಾಯದ ಹಕ್ಕುಗಳನ್ನು ಯಾವ ಕಾರಣಕ್ಕೂ ಕಡೆಗಣಿಸುವಂತಿಲ್ಲ.

ಇತರ ಎಲ್ಲಾ ಸ್ವಾತಂತ್ರ್ಯದಂತೆ ಧಾರ್ಮಿಕ ಸ್ವಾತಂತ್ರ್ಯಕ್ಕೂ ಕೆಲವು ಇತಿ ಮಿತಿ ನಿಯಮಗಳುಂಟು. ಎಲ್ಲಾ ಸಂದರ್ಭಗಳಲ್ಲೂ ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ನೈತಿಕ ಸೂತ್ರವನ್ನು ಜವಾಬ್ದಾರಿಯುತರಾಗಿ ಅನುಸರಿಸತಕ್ಕದ್ದು. ಜನರು ತಮ್ಮ ನೆರೆಹೊರೆಯವರೊಂದಿಗೆ ನ್ಯಾಯ ನೀತಿ ಮತ್ತು ಸೌಜನ್ಯ ಸಂಸ್ಕೃತಿಯಿಂದ ವರ್ತಿಸುವುದು.

ಧಾರ್ಮಿಕ ಸ್ವಾತಂತ್ರ್ಯಕ್ಕೆ ಇನ್ನೊಂದು ಗುರಿ ಉದ್ದೇಶವಿರಬೇಕು. ಅದೇನೆಂದರೆ ಸಮುದಾಯದ ಜೀವನದಲ್ಲಿ ಜನರು ಅಧಿಕ ಹೊಣೆಗಾರಿಕೆಯಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವುದು. ವ್ಯಾಟಿಕನ್ ಸಮ್ಮೇಳನ ಇತರರಿಗೆ ಶಿಕ್ಷಣ ಕೊಡುವವರಿಗೆ ಕೆಲವು ಧ್ಯೇಯ ಉದ್ದೇಶಗಳನ್ನು ಕಾರ್ಯಗತಗೊಳಿಸುವಂತೆ ಆದೇಶಿಸುತ್ತದೆ. ಜನರು ನೈತಿಕ ನಿಯಮಗಳನ್ನು ಅನುಸರಿಸಬೇಕು, ನ್ಯಾಯಬದ್ಧ ಅಧಿಕಾರಕ್ಕೆ ವಿಧೇಯರಾಗಬೇಕು. ಇಂಥಹ ವಿಷಯಗಳಲ್ಲಿ ಅವರಿಗೆ ತರಬೇತಿಯನ್ನೀಯಬೇಕು. ಸ್ವಾತಂತ್ರ್ಯವನ್ನು ನಿಜವಾಗಿ ಪ್ರೀತಿಸುವವರು ತಮ್ಮ ಸ್ವಂತ ವಿವೇಕದಿಂದ ನಿರ್ಧಾರಗಳನ್ನು ಕೈಗೊಳ್ಳುತ್ತಾ ಸತ್ಯ ನೀತಿಯ ಮಾರ್ಗವನ್ನು ಅವಲಂಬಿಸುತ್ತಾ ಇತರರ ಸಹಕಾರ ಪ್ರಯತ್ನಗಳಲ್ಲಿ ಸಹಭಾಗಿಗಳಾಗುವಂತಿರಬೇಕು.

## II ದೈವೀ ಶ್ರುತಿಯ ಬೆಳಕಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ

ಧಾರ್ಮಿಕ ಸ್ವಾತಂತ್ರ್ಯದ ಬೋಧನೆ ತನ್ನ ಬೇರು ದೈವೀ ಶ್ರುತಿಯಲ್ಲಿದೆ. ಆದುದರಿಂದ ಎಲ್ಲ ಕ್ರೈಸ್ತರು ಅದನ್ನು ಪೂರ್ಣ ವಿವೇಚನೆಯಿಂದ ಗೌರವಿಸಲೇ ಬೇಕು. ದೈವೀಶ್ರುತಿ ಮಾನವನ ಸ್ವಾತಂತ್ರ್ಯಕ್ಕೆ ವಿರುದ್ಧ ಬಾಹ್ಯ ಬಲತ್ಕಾರವಿರಬಾರದೆಂದು ಸವಿಸ್ತಾರವಾಗಿ ಹೇಳುವುದಿಲ್ಲ. ಆದರೆ ಮಾನವನ ಘನತೆಯ ಬಗ್ಗೆ ವಿಶೇಷವಾಗಿ ತಿಳಿಸುತ್ತದೆ. ಮಾನವನು ದೇವರ ವಾಕ್ಯವನ್ನು ಪೂರ್ಣ ಸ್ವಾತಂತ್ರ್ಯದಿಂದ ವಿಶ್ವಾಸಿಸಿಬೇಕೆಂದು ಪ್ರಭು ಕ್ರಿಸ್ತರು ತಿಳಿಯಪಡಿಸಿದರು.

ಕಥೋಲಿಕ ಧರ್ಮದ ಒಂದು ಸಿದ್ಧಾಂತ ಮಾನವನು ವಿಶ್ವಾಸದಿಂದ ದೇವರಿಗೆ ಕೊಡುವ ಉತ್ತರ ಸ್ವತಂತ್ರವಾಗಿರಬೇಕು ಎನ್ನುತ್ತದೆ. ಆದುದರಿಂದ ಕ್ರೈಸ್ತ ವಿಶ್ವಾಸವನ್ನು ಆಲಿಂಗಿಸಲು ಸ್ವಂತ ಚಿತ್ತಕ್ಕೆ ಪ್ರತಿಯಾಗಿ ಬಲಾತ್ಕರಿಸುವಂತಿಲ್ಲ. ಮಾನವರು ಸ್ವಂತ ಚಿತ್ತದಿಂದ ಕ್ರೈಸ್ತ ಧರ್ಮವನ್ನು ಅವಲಂಬಿಸಿ ಅದನ್ನು ತಮ್ಮ ನಡವಳಿಕೆಯಲ್ಲಿ ಸಫಲರಾಗಿ ತೋರ್ಪಡಿಸಬೇಕು. ಇದಕ್ಕೆ ಪೋಷಕವಾಗುವಂಥಹ ಪರಿಸರವನ್ನು ಕಲ್ಪಿಸಿಕೊಡಬೇಕೆನ್ನುತ್ತದೆ ಧಾರ್ಮಿಕ ಸ್ವಾತಂತ್ರ್ಯದ ಸೂತ್ರ.

ಮಾನವರು ದೇವರನ್ನು ಮನಸ್ಸಾಕ್ಷಿಗೆ ಅನುಗುಣವಾಗಿ ಸೇವೆ ಸಲ್ಲಿಸುವುದು ಕರ್ತವ್ಯವಾಗಿದ್ದರೂ ಹಾಗೆ ಮಾಡಲು ಯಾವ ಒತ್ತಡವೂ ಇರುವುದಿಲ್ಲ. ಅವರು ತಮ್ಮ ಸ್ವಂತ ವಿವೇಚನೆಗೆ ಅನುಗುಣವಾಗಿ ನಡೆದುಕೊಳ್ಳುತ್ತಾ ಸ್ವಾತಂತ್ರ್ಯವನ್ನು ಸವಿಯಬೇಕು. ಈ ಸತ್ಯವನ್ನು ಪ್ರಭು ಕ್ರಿಸ್ತರಲ್ಲಿ ಅತ್ಯುತ್ತಮ ರೀತಿಯಲ್ಲಿ ಬಿಂಬಿಸಿರುವುದನ್ನು ನಾವು ಕಾಣಬಹುದು. ಅವರು ನಮ್ಮ ಪ್ರಭು ಮತ್ತು ಬೋಧಕರಾಗಿದ್ದರೂ ಶಾಂತ ಮತ್ತು ದೀನ ಹೃದಯಿಯಾಗಿದ್ದರು. ಅವರು ಅನುಯಾಯಿಗಳನ್ನು ಆಕರ್ಷಿಸಲು ಸಹನೆಯನ್ನು ಬಳಸಿದರು. ಪ್ರೇಕ್ಷಕರಲ್ಲಿ ವಿಶ್ವಾಸವನ್ನು ಉಜ್ವಲಗೊಳಿಸಲು ಪವಾಡಗಳನ್ನು ಎಸಗಿದರು. ಇವರು "ಗೋಧಿಯ ಮಧ್ಯೆ ಬಿತ್ತಿರುವ ಕಳೆಯನ್ನು ಸುಗ್ಗಿಯ ತನಕ ಬೆಳೆಯಲು ಬಿಡಿ" ಎಂಬ ಸಹನಾ ಸೂತ್ರವನ್ನು ಅನುಸರಿಸಿದರು.

ಪ್ರಭು ಕ್ರಿಸ್ತರು ಸರ್ಕಾರದ ಅಧಿಕಾರವನ್ನು ಹಕ್ಕನ್ನು ಮಾನ್ಯ ಮಾಡಿದರು. ಸೀಜರನಿಗೆ ತೆರಿಗೆಯನ್ನು ಕಟ್ಟಬೇಕೆಂದು ಅವರು ಆಜ್ಞಾಪಿಸಿದರು. ಆದರೆ ಅದಕ್ಕೂ ಮಿಗಿಲಾದ ದೇವರ ಅವಿಭಾಜ್ಯ ಹಕ್ಕನ್ನು ಉಲ್ಲಂಘಿಸಬಾರದೆಂದು ಸ್ಪಷ್ಟವಾಗಿ ಎಚ್ಚರಿಸಿದರು. ಅವರು ಸತ್ಯಕ್ಕೆ ಸಾಕ್ಷಿಯನ್ನಿತ್ತರು, ಆದರೆ ಸತ್ಯಕ್ಕೆ ವಿರೋಧವಾಗಿ ಮಾತನಾಡಿದವರ ಮೇಲೆ ಒತ್ತಡ ತರಲಿಲ್ಲ.

ಪ್ರೇಷಿತರು ಪ್ರಭು ಕ್ರಿಸ್ತರ ಮಾದರಿಯನ್ನು ಅನುಸರಿಸಿದರು. ಧರ್ಮಸಭೆಯ ಆರಂಭದ ದಿನಗಳಿಂದಲೂ ಅವರು ಜನರ ಮನಪರಿವರ್ತನೆಗೆ ತೊಡಗಿದರು. ಅದನ್ನು ಅವರು ದೇವರ ವಾಕ್ಯದ ಶಕ್ತಿಯಿಂದ ಎಸಗಿದರೇ ವಿನ: ಬಲಾತ್ಕಾರದಿಂದಲ್ಲ. ಅವರು ಸತ್ಯಕ್ಕೆ ಸಾಕ್ಷಿಯನ್ನಿತ್ತರು. ಅವರು ನ್ಯಾಯಬದ್ಧ ಪೌರ ಅಧಿಕಾರವನ್ನು ಅಂಗೀಕರಿಸಿದರು. ಅದೇ ಸಂದರ್ಭದಲ್ಲಿ ಸರ್ಕಾರ ದೇವರ ಪವಿತ್ರ ಚಿತ್ತವನ್ನು ವಿರೋಧಿಸಿದಾಗ ಅದನ್ನು ಎದುರಿಸಿ ಧರ್ಮಬಲಿಗಳಾಗಲೂ ಹಿಂಜರಿಯಲಿಲ್ಲ.



ಧಾರ್ಮಿಕ ಸ್ವಾತಂತ್ರ್ಯದ ಸೂತ್ರ ಮಾನವ ಘನತೆಗೆ ಮಾತ್ರವಲ್ಲ ದೈವೀಶ್ರುತಿಗೂ ಅನುಗುಣವಾಗಿದೆ. ಈ ಸೂತ್ರವನ್ನು ಅಂಗೀಕರಿಸಿ ಅದನ್ನು ಅನುಸರಿಸುವಾಗ ಧರ್ಮಸಭೆ ಪ್ರಭು ಕ್ರಿಸ್ತರನ್ನು ಮತ್ತು ಅವರ ಪ್ರೇಷಿತರನ್ನು ಹಿಂಬಾಲಿಸುತ್ತದೆ. ಧರ್ಮಸಭೆಯು ತನ್ನ ಬೋಧಕರು ಮತ್ತು ಪ್ರೇಷಿತರಿಂದ ಸ್ವೀಕರಿಸಿದ ಈ ಸೂತ್ರವನ್ನು ಎಲ್ಲಾ ಕಾಲಗಳಲ್ಲೂ ಸಂರಕ್ಷಿಸುತ್ತಾ ಪಾರಂಪರ್ಯವಾಗಿ ಹಸ್ತಾಂತರಿಸಿಕೊಂಡು ಬಂದಿದೆ. ಕೆಲವು ಸಂದರ್ಭಗಳಲ್ಲಿ ದೈವಪ್ರಜೆಯ ವರ್ತನೆಯು ಶುಭ ಸಂದೇಶದ ಬೋಧನೆಗೆ ಅನುಗುಣವಾಗಿರಲಿಲ್ಲ ಮಾತ್ರವಲ್ಲ, ಅದಕ್ಕೆ ವಿರೋಧವಾಗಿರುವುದು ಕಂಡು ಬಂದಿದೆ. ಆದರೆ ಯಾರನ್ನೂ ಕಡ್ಡಾಯವಾಗಿ ವಿಶ್ವಾಸಕ್ಕೆ ತರುವುದು ನಿಷಿದ್ಧವೆಂಬ ಸೂತ್ರ ಸದಾ ಸ್ಥಿರವಾಗಿದೆ.

ಜನರ ರಕ್ಷಣೆಗಾಗಿ ಶ್ರಮಿಸುವ ಧರ್ಮಸಭೆಗೆ ತನ್ನ ಹಿತಾಸಕ್ತಿ ಮತ್ತು ಸಮಾಜದ ಅಭಿವೃದ್ಧಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದು ಅತ್ಯಗತ್ಯ. ಇದು ಪವಿತ್ರ ಸ್ವಾತಂತ್ರ್ಯ. ದೇವರ ಏಕ ಮಾತ್ರ ಪುತ್ರರು ತಮ್ಮ ರಕ್ತಧಾರೆಯಿಂದ ಕೊಂಡುಕೊಂಡು ಧರ್ಮಸಭೆಗೆ ಬಳುವಳಿಯಾಗಿ ಕೊಟ್ಟ ಹಕ್ಕಿದು. ಈ ಸೂತ್ರಕ್ಕೆ ವಿರೋಧವಾಗಿ ನಡೆಯುವುದು ದೇವರ ಚಿತ್ತವನ್ನು ವಿರೋಧಿಸಿದಂತೆ. ಧರ್ಮಸಭೆಯ ಸ್ವಾತಂತ್ರ್ಯ ಧರ್ಮಸಭೆ ಮತ್ತು ಸರ್ಕಾರಗಳ ಮಧ್ಯೆ ಇರುವ ಸಂಬಂಧವನ್ನು ಕಾಪಾಡುವ ಮಂತ್ರವಾಗಿದೆ.

ಧರ್ಮಸಭೆ ಪ್ರಭುಕ್ರಿಸ್ತರಿಂದ ಸ್ಥಾಪಿತವಾಗಿ ಆಧ್ಯಾತ್ಮಿಕ ಅಧಿಕಾರದ ಗುಣಲಕ್ಷಣವನ್ನು ಹೊಂದಿದೆ. ಈ ವಿಶಿಷ್ಟ ಗುಣದ ಪರಿಣಾಮವಾಗಿ ಸ್ವಾತಂತ್ರ್ಯದ ಹಕ್ಕು ಅದರಲ್ಲಿ ಅವಿಭಾಜ್ಯವಾಗಿದೆ. ಅದೊಂದು ಸಮಾಜವಾದುದರಿಂದ ಈ ಹಕ್ಕನ್ನು ಅದು ಪಡೆದಿದೆ. ಕ್ರೈಸ್ತ ವಿಶ್ವಾಸ ತತ್ವಗಳಿಗೆ ಸರಿಯಾಗಿ ಜನರು ಧರ್ಮಸಭೆಯಲ್ಲಿ ಜೀವಿಸುವುದರಿಂದ ಈ ಹಕ್ಕನ್ನು ಪ್ರಶ್ನಿಸುವಂತಿಲ್ಲ.

ಕೆಲವು ಸ್ಥಳಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಮಾನ್ಯ ಮಾಡಲಾಗಿದೆ ಮತ್ತು ಅದರ ನಿರ್ವಹಣೆ ವಾಸ್ತವವಾಗಿದೆ. ಇಂಥಹ ಸ್ಥಳಗಳಲ್ಲಿ ಧರ್ಮಸಭೆಯು ತನ್ನ ದೈವದತ್ತ, ಕರ್ತವ್ಯಗಳನ್ನು ಪೂರೈಸುತ್ತದೆ. ಏಕೆಂದರೆ ಅಲ್ಲಿ ಸ್ಥಿರವಾದ ಸ್ವಾತಂತ್ರ್ಯ ಪ್ರೇರಕ ಶಕ್ತಿಯಾಗಿರುತ್ತದೆ. ಆದುದರಿಂದ ಅಲ್ಲಿ ಕ್ರೈಸ್ತ ವಿಶ್ವಾಸಿಗಳು ಯಾವ ಅಡ್ಡಿ ಆತಂಕವಿಲ್ಲದೆ ತಮ್ಮ ಮನಸ್ಸಾಕ್ಷಿಗೆ ತಕ್ಕಂತೆ ಜೀವಿಸುವ ಹಕ್ಕು ಬಾಧ್ಯತೆಯನ್ನು ಹೊಂದಿರುತ್ತಾರೆ. ಇಲ್ಲಿ ಧರ್ಮಸಭೆಯ ಸ್ವಾತಂತ್ರ್ಯಕ್ಕೂ, ಸರ್ವಜನರ ಮತ್ತು ಸರ್ವ ಸಂಸ್ಥೆಗಳ ಧಾರ್ಮಿಕ ಸ್ವಾತಂತ್ರ್ಯಕ್ಕೂ, ಮಧ್ಯೆ ಪರಸ್ಪರ ಹೊಂದಾಣಿಕೆ ಇರುತ್ತದೆ.

ಯೇಸುಸ್ವಾಮಿ ತಮ್ಮ ಶಿಷ್ಯರಿಗೆ ಕೊಟ್ಟ ದೈವಿಕ ಆಜ್ಞೆಯಿದು. “ಎಲ್ಲಾ ಜನಾಂಗಗಳಿಗೆ ಬೋಧಿಸಿರಿ." ಈ ಆಜ್ಞೆಗೆ ವಿಧೇಯವಾಗಿ ನಡೆಯುವಂತೆ ಧರ್ಮಸಭೆ ಎಚ್ಚರವಹಿಸುತ್ತದೆ. ಅದು ಎಲ್ಲಾ ಜನರು ಸತ್ಯವನ್ನು ಅರಿತು, ರಕ್ಷಣೆಯನ್ನು ಪಡೆಯುವಂತೆ ಪ್ರಾರ್ಥಿಸಬೇಕೆಂದು ತನ್ನ ಮಕ್ಕಳನ್ನು ವಿನಂತಿಸುತ್ತದೆ. ಭಕ್ತರು ತಮ್ಮ ಮನಸ್ಸಾಕ್ಷಿಯನ್ನು ರೂಪಿಸಿಕೊಳ್ಳುವಾಗಲೂ ಧರ್ಮಸಭೆಯ ಪವಿತ್ರ ಮತ್ತು ನಿಖರ ಬೋಧನೆಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಏಕೆಂದರೆ ಧರ್ಮಸಭೆ ಸತ್ಯವನ್ನು ಅಧಿಕಾರ ವಾಣಿಯಿಂದ ಬೋಧಿಸುವ ಉಪದೇಶಕಿಯಾಗಿದೆ. ಕ್ರೈಸ್ತ ಭಕ್ತರು ವಿಶ್ವಾಸ ಅರಿಯದವರೊಂದಿಗೆ ವ್ಯವಹರಿಸುವಾಗ ಸುಜ್ಞಾನ, ಪ್ರೀತಿಯಿಂದಲೂ ವಿವೇಕ ಸಹನೆಯಿಂದಲೂ ನಡೆದುಕೊಳ್ಳಬೇಕು.

ಅನೇಕ ದೇಶಗಳ ಸಂವಿಧಾನಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯ ನಾಗರೀಕರ ಹಕ್ಕೆಂದು ಘೋಷಿಸಲಾಗಿದೆ. ಅಂತರ ರಾಷ್ಟ್ರೀಯ ಶಾಸನಗಳಲ್ಲೂ ಮಹತ್ವ ಪೂರ್ಣವಾಗಿ ಅದನ್ನು ಅಂಗೀಕರಿಸಲಾಗಿದೆ. ವ್ಯಾಟಿಕನ್ ಸಮ್ಮೇಳನ ಈ ಕ್ರಿಯೆಯನ್ನು ಸಂತೋಷದಿಂದ ಸ್ವಾಗತಿಸುತ್ತದೆ. ಇದೇ ಸಂದರ್ಭದಲ್ಲಿ ಇನ್ನು ಕೆಲವು ಸರ್ಕಾರಗಳು ತಮ್ಮ ಧರ್ಮ ನಿಯಮಗಳನ್ನು ಅನುಸರಿಸಲು ಅಡ್ಡಿ ತರುತ್ತಿವೆ ಮತ್ತು ಕೆಲವು ಧಾರ್ಮಿಕ ಸಂಸ್ಥೆಗಳ ಜೀವನವನ್ನು ಕಷ್ಟ ತೊಂದರೆಗಳಿಗೆ ಮಾತ್ರವಲ್ಲ ಆಪತ್ತಿಗೂ ಒಳಪಡಿಸಿವೆ. ಇಂಥಹ ಪ್ರತಿಬಂಧನೆಯನ್ನು ಸಮ್ಮೇಳನ ವಿಷಾದದಿಂದ ತನ್ನ ಆಕ್ಷೇಪಣೆಯನ್ನು ಸಲ್ಲಿಸುತ್ತದೆ.

ಪ್ರಸ್ತುತ ಪರಿಸ್ಥಿತಿಯಲ್ಲಿ ಮಾನವ ಕುಟುಂಬಗಳು, ರಾಷ್ಟಗಳು, ವಿವಿಧ ಸಂಸ್ಕೃತಿಯ ಮತ್ತು ಧರ್ಮದ ಜನರು ಜೊತೆಗೆ ಬರುತ್ತಿದ್ದಾರೆ ಮತ್ತು ಅವರ ಸಂಬಂಧಗಳು ನಿಕಟವಾಗುತ್ತಿವೆ. ವೈಯಕ್ತಿಕ ಹೊಣೆಗಾರಿಕೆಯ ಬಗ್ಗೆ ಪ್ರಜ್ಞೆ, ಅಧಿಕವಾಗುತ್ತಿದೆ. ಮಾನವ ಜನಾಂಗದ ಮಧ್ಯೆ ಶಾಂತಿ, ಸೌಹಾರ್ದ ಏರ್ಪಡಬೇಕಾದರೆ ಧಾರ್ಮಿಕ ಸ್ವಾತಂತ್ರ್ಯ ಅಂಗೀಕೃತವಾಗಬೇಕು. ಅದಕ್ಕೆ ಪ್ರಬಲವಾದ ಶಾಸನ ಭದ್ರತೆ ಮತ್ತು ಮಾನ್ಯತೆ ಇರಲೇಬೇಕು.

ಮಾನವ ಕುಟುಂಬವು ದೇವರ ಮಕ್ಕಳ ಮಹಿಮಾ ಸ್ವಾತಂತ್ರ್ಯವನ್ನು ಧಾರ್ಮಿಕ ಸ್ವಾತಂತ್ರ್ಯದ ಸೂತ್ರದ ಅನುಸರಣೆ ಮತ್ತು ಪ್ರಭು ಕ್ರಿಸ್ತರ ಪವರಪ್ರಸಾದದಿಂದ ಗಳಿಸುವಂತೆ ದೇವರು ಅನುಗ್ರಹಿಸಲಿ ಎಂದು ಸಮ್ಮೇಳನ ಆಶಿಸುತ್ತದೆ.



# XIV ಯಾಜಕರ ಜೀವನ ಮತ್ತು ಸೇವಾವೃತ್ತಿ

**(ಶಾಸನ)**

**ಪೀಠಿಕೆ**

ಯಾಜಕರು ಧರ್ಮಾಧ್ಯಕ್ಷರಿಂದ ಪವಿತ್ರಾಭಿಷೇಕವನ್ನೂ ಸುವಾರ್ತಾ ನಿಯೋಗವನ್ನು ಸ್ವೀಕರಿಸುತ್ತಾರೆ. ಇದರಿಂದ ಬೋಧಕ, ಯಾಜಕ ಮತ್ತು ಅರಸುಪದದ ಮುಖಾಂತರ ಪ್ರಭು ಕ್ರಿಸ್ತರ ಸೇವೆಗೆ ಸನ್ನದ್ದರಾಗುತ್ತಾರೆ. ಅವರು ಸೇವಾ ವೃತ್ತಿಯ ಮುಖಾಂತರ ಧರ್ಮಸಭೆಯನ್ನು ದೈವಪ್ರಜೆಯನ್ನಾಗಿ, ಪ್ರಭು ಕ್ರಿಸ್ತರ ಶರೀರವನ್ನಾಗಿ, ಪವಿತ್ರಾತ್ಮರ ಆಲಯವನ್ನಾಗಿ ಕಟ್ಟುತ್ತಾರೆ. ಅವರ ಸೇವಾವೃತ್ತಿ ಪರಿಣಾಮಕಾರಿಯೂ ಫಲಕಾರಿಯೂ ಆಗಬೇಕು. ಇಂದಿನ ಬದಲಾಗುತ್ತಿರುವ ಮಾನವ ಪರಿಸ್ಥಿತಿಯಲ್ಲಿ ಯಾಜಕರು ತಮ್ಮ ಪಾಲನಾ ಸೇವಾವೃತ್ತಿಯನ್ನು ಸಕ್ರಿಯವಾಗಿ ಮಾಡಬೇಕು. ಆದುದರಿಂದ ದ್ವಿತೀಯ ವ್ಯಾಟಿಕನ್ ಸಮ್ಮೇಳನ ಈ ಕೆಳಕಂಡವನ್ನು ಶಾಸನ ಪ್ರಕಟಿಸಿದೆ.

## ಅಧ್ಯಾಯ I
## ಧರ್ಮಸಭೆಯ ಸೇವಾವೃತ್ತಿಯಲ್ಲಿ ಯಾಜಕತ್ವ

### 1) ಯಾಜಕತ್ವದ ಲಕ್ಷಣ :

ಎಲ್ಲ ಜನರನ್ನು ಪಿತ ದೇವರೊಂದಿಗೆ ಐಕ್ಯಗೊಳಿಸಲು ಯೇಸುಕ್ರಿಸ್ತರು ಪವಿತ್ರಾತ್ಮರಿಂದ ಅಭಿಷಿಕ್ತರಾಗಿ ಕಳುಹಿಸಲ್ಪಟ್ಟರು. ಪ್ರತಿಯಾಗಿ ಅವರು ತಮ್ಮ ಆತ್ಮಿಕ ಶರೀರವಾದ ಧರ್ಮಸಭೆಯನ್ನು ತಮ್ಮ ಅಭಿಷೇಕದಲ್ಲಿ ಭಾಗಿಯಾಗುವಂತೆ ಮಾಡಿದರು. ಹೀಗೆ ಅವರಲ್ಲಿ ಎಲ್ಲ ಭಕ್ತ ವಿಶ್ವಾಸಿಗಳನ್ನು ಪುನೀತರೂ ರಾಜ ಯಾಜಕ ವರ್ಗದವರನ್ನಾಗಿ ಮಾಡಿದರು. ಪ್ರದಾನ ಯಾಜಕರಾದ ಪ್ರಭು ಕ್ರಿಸ್ತರು ಶಿಲುಬೆಯ ಮೇಲೆ ಅತ್ಯುನ್ನತ ಬಲಿಯನ್ನು ಅರ್ಪಿಸಿದರು. ಅಂತೆಯೇ ಎಲ್ಲ ಭಕ್ತವಿಶ್ವಾಸಿಗಳು ತಮ್ಮ ಸ್ನಾದೀಕ್ಷೆಯ ಪ್ರಯುಕ್ತ ದೇವರಿಗೆ ಆಧ್ಯಾತ್ಮಿಕ ಬಲಿಗಳನ್ನು ಯೇಸು ಕ್ರಿಸ್ತರ ಮುಖಾಂತರ ಅರ್ಪಿಸಬೇಕಾಗಿದೆ. ಹೀಗೆ ಅವರು ಪ್ರಭುವಿನ ಪರಿಪೂರ್ಣತೆಯನ್ನು ಈ ಲೋಕಕ್ಕೆ ಸಾರುವರು. ಪ್ರತಿಯೊಬ್ಬ ಸದಸ್ಯನೂ ಪ್ರಭುಕ್ರಿಸ್ತರ ಆತ್ಮಿಕ ಶರೀರವಾದ ಧರ್ಮಸಭೆಯ ಭಾಗವಾಗಿದ್ದಾನೆ. ಆದುದರಿಂದ ಪ್ರಭು ಕ್ರಿಸ್ತರ ಮತ್ತು ಪ್ರತಿ ಸದಸ್ಯನ ಸೇವಾ ನಿಯೋಗ ಒಂದೇ ಆಗಿದೆ.

ಪ್ರಭು ಕ್ರಿಸ್ತರು ಭಕ್ತ ವಿಶ್ವಾಸಿಗಳನ್ನು ಒಂದೇ ಶರೀರವನ್ನಾಗಿ ಒಗ್ಗೂಡಿಸಲು ಸೇವಾ ಕರ್ತರನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ಎಲ್ಲಾ ಸದಸ್ಯರು ಏಕ ರೀತಿಯ ಕೆಲಸವನ್ನು ಹೊಂದಿಲ್ಲ (ರೋಮನ 12:14). ಪವಿತ್ರ ಶಕ್ತಿಯನ್ನು ಪವಿತ್ರ ಅಭಿಷೇಕದಿಂದ ಪಡೆದ ಪುರೋಹಿತರು ಬಲಿಪೂಜೆಯನ್ನು ಅರ್ಪಿಸುತ್ತಾರೆ, ಪಾಪಗಳನ್ನು ಕ್ಷಮಿಸುತ್ತಾರೆ, ಪ್ರಭು ಕ್ರಿಸ್ತರ ನಾಮದಲ್ಲಿ ಜನರಿಗಾಗಿ ಯಾಜಕ ಸೇವೆಯನ್ನು ಬಹಿರಂಗವಾಗಿ ಸಲ್ಲಿಸುತ್ತಾರೆ. ಧರ್ಮಾಧ್ಯಕ್ಷರು ಕ್ರಿಸ್ತರ ಪ್ರತಿಷ್ಠಾಪನೆ ಮತ್ತು ಸೇವಾ ನಿಯೋಗದಲ್ಲಿ ಭಾಗಿಗಳಾಗುತ್ತಾರೆ. ಧರ್ಮಾಧ್ಯಕ್ಷರ ಸೇವಾ ನಿಯೋಗದಲ್ಲಿ ಯಾಜಕರು ಕೆಳದರ್ಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಪ್ರಭು ಕ್ರಿಸ್ತರು ಧರ್ಮಾಧ್ಯಕ್ಷರಿಗೆ ವಹಿಸಿದ

ಪ್ರೇಷಿತ ನಿಯೋಗವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಯಾಜಕರು ಧರ್ಮಾಧ್ಯಕ್ಷರೊಂದಿಗೆ ಸಹಕಾರ್ಮಿಕರಾಗಿ ದುಡಿಯುತ್ತಾರೆ. ಹೀಗೆ ಪ್ರಭು ಕ್ರಿಸ್ತರ ಶರೀರವಾದ ಧರ್ಮಸಭೆಯನ್ನು ಕಟ್ಟುವ, ಪವಿತ್ರೀಕರಿಸುವ ಮತ್ತು ಆಳುವ ಕಾರ್ಯದಲ್ಲಿ ಯಾಜಕರು ಧರ್ಮಾಧ್ಯಕ್ಷರ ಅಧಿಕಾರದಲ್ಲಿ ಭಾಗಿಗಳಾಗುತ್ತಾರೆ. ಪವಿತ್ರಾಭಿಷೇಕದ ವಿಶೇಷ ಸಂಸ್ಕಾರದಿಂದ ಪವಿತ್ರಾತ್ಮರ ಮಹಾಪೂರದಿಂದ ಯಾಜಕರು ಪ್ರತ್ಯೇಕ ಮುದ್ರೆಯನ್ನು ಪಡೆಯುತ್ತಾರೆ. ಈ ಮುದ್ರೆಯಿಂದ ಯಾಜಕರು ಕ್ರಿಸ್ತರನ್ನು ಎಷ್ಟು ಹೋಲುತ್ತಾರೆ ಎಂದರೆ ಅವರು ಶಿರಸ್ಸಾದ ಪ್ರಭು ಕ್ರಿಸ್ತರ ವ್ಯಕ್ತಿತ್ವದಲ್ಲಿ ಕ್ರಿಯಾತ್ಮಕರಾಗುತ್ತಾರೆ.

ಪ್ರೇಷಿತ ಪದದಲ್ಲಿ ಸ್ವಲ್ಪ ಮಟ್ಟಿಗೆ ಭಾಗಿಗಳಾದ ಯಾಜಕರು ಜನರ ಮಧ್ಯೆ ಪ್ರಭು ಕ್ರಿಸ್ತರ ಸೇವಾಕರ್ತರಾಗಿರುತ್ತಾರೆ. ಅವರು ದೇವರಿಂದ ವಿಶೇಷ ವರದಾನವನ್ನು ಪಡೆಯುತ್ತಾರೆ. ಅವರು ಶುಭ ಸಂದೇಶವನ್ನು ಬೋಧಿಸುವ ಪವಿತ್ರ ಕಾರ್ಯವನ್ನು ಕೈಗೊಳ್ಳುತ್ತಾರೆ. ಶುಭಸಂದೇಶ ಪ್ರಸಾರವನ್ನು ಬೋಧಿಸುವ ಪವಿತ್ರ ಕಾರ್ಯವನ್ನು ಕೈಗೊಳ್ಳುತ್ತಾರೆ. ಶುಭ ಸಂದೇಶ ಪ್ರಸಾರವನ್ನು ಪ್ರೇಷಿತರಂತೆ ನಿರ್ವಹಿಸುತ್ತಾ ಅವರು ದೈವಪ್ರಜೆಯನ್ನು ಒಗ್ಗೂಡಿಸಿ ಸಭೆ ಸೇರಿಸುತ್ತಾರೆ. ಅವರು ತಮ್ಮನ್ನೇ ದೇವರಿಗೆ ಸುಪ್ರೀತ; ಸಜೀವ, ಪವಿತ್ರ ಬಲಿಯನ್ನಾಗಿ ಅರ್ಪಿಸಲು ಶಕ್ತರಾಗುತ್ತಾರೆ (ರೋಮನ 12:1). ಯಾಜಕರ ಸೇವಾವೃತ್ತಿಯ ಮೂಲಕ ಭಕ್ತ ವಿಶ್ವಾಸಿಗಳು ಕ್ರಿಸ್ತರ ಬಲಿಯೊಂದಿಗೆ ತಮ್ಮನ್ನೇ ಆಧ್ಯಾತ್ಮಿಕ ಪರಿಪೂರ್ಣ ಬಲಿಯಾಗಿ ಅರ್ಪಿಸುತ್ತಾರೆ. ಕ್ರಿಸ್ತರೊಬ್ಬರೇ ಮಧ್ಯಸ್ಥರು. ಪರಮ ಪ್ರಸಾದದಲ್ಲಿ ಇಡೀ ಧರ್ಮಸಭೆಯ ಹೆಸರಿನಲ್ಲಿ ಅವರು ಸಂಸ್ಕಾರಿಕವಾಗಿ ಅರ್ಪಿತರಾಗುತ್ತಾರೆ. ಗುರುಗಳೂ ಸಹ ಇದೇ ಗುರಿಯನ್ನು ಹೊಂದಿದ್ದು ತಮ್ಮ ಸೇವಾವೃತ್ತಿಯಲ್ಲಿ ಈ ಗುರಿಯನ್ನು ಸಾಧಿಸುತ್ತಾ ಸಫಲರಾಗುತ್ತಾರೆ. ಶುಭಸಂದೇಶ ಪ್ರಸಾರದಿಂದ ಪ್ರಾರಂಭವಾದ ಈ ಸೇವಾ ನಿಯೋಗ ಪ್ರಭು ಕ್ರಿಸ್ತರ ಬಲಿಯಿಂದ ತನ್ನ ಶಕ್ತಿಯನ್ನು ಸಾಮರ್ಥ್ಯವನ್ನು ಗಳಿಸುತ್ತದೆ. ಈ ಬಲಿಯರ್ಪಣೆಯ ಉದ್ದೇಶವೇನೆಂದರೆ ಪ್ರಭು ಕ್ರಿಸ್ತರಿಂದ ರಕ್ಷಣೆ ಹೊಂದಿದ ಇಡೀ ಪ್ರಜಾ ಪ್ರಭುತ್ವ ಮತ್ತು ಸಂತರ ಸಮುದಾಯ ಪ್ರಧಾನ ಯಾಜಕರ ಮುಖಾಂತರ ದೇವರಿಗೆ ಅರ್ಪಿತವಾಗಬೇಕು. ಪ್ರಧಾನ ಯಾಜಕರಾದ ಅವರು ನಮ್ಮನ್ನು ಅಂತಹ ಶ್ರೇಷ್ಠ ಶಿರಸ್ಸಿನ ಶರೀರವನ್ನಾಗಿ ಮಾಡಲು ತಾವೇ ನಮಗಾಗಿ ಯಾತನೆಯನ್ನು ಅನುಭವಿಸಿದರು". (ಸಂತ ಆಗಸ್ಟಿನ್).

ಯಾಜಕರ ಸೇವಾವೃತ್ತಿ ಮತ್ತು ಜೀವನದ ಗುರಿ ದೇವರ ಮಹಿಮೆಯನ್ನು ಪ್ರವರ್ಧಿಸುವುದು. ಮಾನವರು ಪ್ರಭು ಕ್ರಿಸ್ತರಲ್ಲಿ ಸಂಪೂರ್ಣಗೊಂಡ ದೇವರ ಕಾರ್ಯವನ್ನು ತಮ್ಮಲ್ಲಿ ಸ್ವೀಕರಿಸಿ ತಮ್ಮ ಜೀವನದಲ್ಲಿ ವ್ಯಕ್ತಪಡಿಸುವುದರಲ್ಲಿ ಈ ಮಹಿಮೆ ಅಡಕವಾಗಿದೆ. ಆದುದರಿಂದ ಯಾಜಕರು ತಮ್ಮ ಸೇವಾ ಜೀವನದಲ್ಲಿ ದೇವರ ಮಹಿಮೆಯನ್ನು ಅಧಿಕರಿಸುವುದರಲ್ಲಿ ಮತ್ತು ದೈವಿಕ ಜೀವ ಮಾನವರಲ್ಲಿ ಬೆಳೆಸುವುದರಲ್ಲಿ ತಮ್ಮ ಶಕ್ತಿ ಸಾಮರ್ಥ್ಯವನ್ನು ವಿನಿಯೋಗಿಸುತ್ತಾರೆ.

### 2) ಈ ಲೋಕದಲ್ಲಿ ಯಾಜಕರ ಪರಿಸ್ಥಿತಿ :

ಯಾಜಕರು ಜನರ ಮಧ್ಯದಿಂದ ಜನರಿಗಾಗಿ ದೇವತಾ ಕಾರ್ಯಗಳನ್ನು ಮಾಡಲು ನೇಮಕಗೊಂಡಿರುತ್ತಾರೆ. ದೇವ ಕುಮಾರ ಪ್ರಭುಕ್ರಿಸ್ತರು ತಮ್ಮ ಸಹೋದರ ಸಂಗಡ



ಪಾಪವೊಂದನ್ನು ಬಿಟ್ಟು ಎಲ್ಲದರಲ್ಲಿ ಸಮನಾಗಿ ಜೀವಿಸಿದರು. ಪ್ರೇಷಿತರು ಪ್ರಭುವನ್ನು ಅನುಕರಿಸಿದರು ಮತ್ತು ಸಂತ ಪೌಲರು ಸರ್ವರನ್ನು ರಕ್ಷಿಸಲು ಸರ್ವರಿಗೂ ಸರ್ವಸ್ವರಾದರು. ಅಂತೆಯೇ ಯಾಜಕರು ಜನರ ಮಧ್ಯೆ ಸೋದರರಂತೆ ಜೀವಿಸುತ್ತಾರೆ. ಯಾಜಕರನ್ನು ದೈವಪ್ರಜೆಯಿಂದ ಪ್ರತ್ಯೇಕಿಸಲ್ಪಟ್ಟಿದ್ದರೂ ಅವರಿಂದ ಬೇರ್ಪಡಿಸಲಾಗದು. ಏಕೆಂದರೆ ದೇವರು ಅವರನ್ನು ವಿಶೇಷ ಕಾರ್ಯಕ್ಕಾಗಿ ಆಯ್ಕೆ ಮಾಡಿರುವುದರಿಂದ ಅದಕ್ಕಾಗಿ ಅವರು ತಮ್ಮನ್ನೇ ಸಮರ್ಪಿಸಿಕೊಳ್ಳುತ್ತಾರೆ. ಅವರು ಆರ್ಥಿಕವಲ್ಲದ ಜೀವನವನ್ನು ಹಂಚುವವರಾಗಿದ್ದು ಅದಕ್ಕೆ ಸಾಕ್ಷಿಗಳಾಗಿರಬೇಕಾದರೂ ಐಹಿಕ ಜೀವನದ ಸ್ಥಿತಿಯನ್ನು ಅರಿತುಕೊಳ್ಳದಿದ್ದರೆ ಸೇವೆ ಸಲ್ಲಿಸಲು ಅಶಕ್ತರಾಗುತ್ತಾರೆ. ಅವರ ಸೇವಾ ಜೀವನ ಲೌಕಿಕ ಜೀವನಕ್ಕೆ ಅನುಗುಣವಾಗಿರಬಾರದು. ಆದರೆ ಮಾನವರಿಗೆ ಸೇವೆ ಸಲ್ಲಿಸಲು ಅವರ ಮಧ್ಯೆ ಜೀವಿಸಲೇ ಬೇಕು. ಅವರು ತನ್ನ ಕುರಿಗಳನ್ನು ಚೆನ್ನಾಗಿ ತಿಳಿದಿರುವ ಕುರುಬನಂತಿರಬೇಕು. ಕುರಿಮಂದೆಗೆ ಸೇರದವರನ್ನು ಅರಸಿ ಅವರು ಪ್ರಭು ಕ್ರಿಸ್ತರ ಸ್ವರವನ್ನು ಆಲಿಸುವಂತೆ ಮಾಡಬೇಕು. ಹೀಗಾದರೆ ಒಂದೇ ಕುರಿ ಮಂದೆ ಮತ್ತು ಒಬ್ಬನೇ ಕುರುಬನಿರುತ್ತಾನೆ.

# ಅಧ್ಯಾಯ II

## ಯಾಜಕರ ಸೇವಾ ವೃತ್ತಿ

## ಭಾಗ 1

## ಯಾಜಕರ ಕಾರ್ಯಗಳು

### ಎ) ಸುವಾರ್ತಾ ಸೇವೆ :

ದೈವ ಪ್ರಜೆಯು ಪ್ರಥಮವಾಗಿ ಜೀವಂತ ದೇವರ ವಾಕ್ಯದಿಂದ ಒಂದುಗೂಡಿದೆ. ಯಾರು ವಿಶ್ವಾಸಿಸುವುದಿಲ್ಲವೋ ಅವನು ರಕ್ಷಣೆಯನ್ನು ಹೊಂದುವುದಿಲ್ಲ. ಆದುದರಿಂದ ದೇವರ ಶುಭ ಸಂದೇಶವನ್ನು ಸರ್ವರಿಗೂ ಬೋಧಿಸುವುದು ಯಾಜಕರ ಪ್ರಮುಖ ಕಾರ್ಯವಾಗಿದೆ. ಹೀಗೆ ಅವರು ಪ್ರಭುವಿನ ಆಜ್ಞೆಯನ್ನು ಅನುಷ್ಠಾನಕ್ಕೆ ತರುತ್ತಾರೆ. "ನೀವು ವಿಶ್ವದ ಎಲ್ಲೆಡೆಗಳಿಗೂ ಹೋಗಿ ಜಗತ್ತಿಗೆಲ್ಲಾ ಶುಭಸಂದೇಶವನ್ನು ಪ್ರಬೋಧಿಸಿರಿ (ಮಾರ್ಕ 16:15). ಹೀಗೆ ಅವರು ದೈವ ಪ್ರಜೆಯನ್ನು ಸ್ಥಾಪಿಸಿ ಬೆಳೆಸುತ್ತಾರೆ.

ದೇವರ ವಾಕ್ಯದ ಸೇವೆಯನ್ನು ಹಲವಾರು ವಿಧದಲ್ಲಿ ಮಾಡಬಹುದು. ಬಹಿರಂಗವಾಗಿ ಬೋಧಿಸುವುದರಿಂದ ಯಾಜರಕು ಪ್ರಭು ಕ್ರಿಸ್ತರ ರಹಸ್ಯವನ್ನು ಸಾರುತ್ತಾರೆ. ಪ್ರಯೋಜನಕಾರಿ ಸಂವಾದದಿಂದ ಅವರು ಜನರನ್ನು ದೈವಾರಾಧನೆಗೆ ಬರಮಾಡುತ್ತಾರೆ. ಪ್ರಭು ಕ್ರಿಸ್ತರ ಬೋಧನೆಯ ಬೆಳಕಿನಲ್ಲಿ ಅವರು ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸುತ್ತಾರೆ. ಕ್ರೈಸ್ತೇತ ಪ್ರದೇಶಗಳಲ್ಲಿ ಶುಭ ಸಂದೇಶದ ಬೋಧನೆ ಜನರನ್ನು ವಿಶ್ವಾಸದೆಡೆಗೆ ಮತ್ತು ರಕ್ಷಣಾ ಸಂಸ್ಕಾರಗಳಿಗೆ ಆಕರ್ಷಿಸುತ್ತದೆ. ಕ್ರೈಸ್ತ ಸಮುದಾಯಗಳಲ್ಲಿ ಅನೇಕ ಜನರು ತಾವು ವಿಶ್ವಾಸಿಸಿವುದನ್ನು ಮತ್ತು ಜೀವಿಸುವುದನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳದವರಿದ್ದಾರೆ. ಇವರು ಸಂಸ್ಕಾರಗಳನ್ನು ಸ್ವೀಕರಿಸಲು ದೇವರ ವಾಕ್ಯದ ಸೇವೆಯ ಅಗತ್ಯದಲ್ಲಿದ್ದಾರೆ. ಶುಭ ಸಂದೇಶ ಪ್ರಕಟಣೆ ಇಲ್ಲಿ ಪೂಜಾರ್ಪಣೆಯ

ದೈವವಾಕ್ಯ ವಿಧಿಯ ಮುಖಾಂತರ ವಿಶೇಷವಾಗಿ ನೆರವೇರಿಸಲಾಗುತ್ತದೆ. ಇಲ್ಲಿ ಪ್ರಭು ಕ್ರಿಸ್ತರ ಮರಣ ಮತ್ತು ಪುನರುತ್ಥಾನ ಸಾರಲಾಗುತ್ತದೆ. ಅದು ಪೂಜೆಯಲ್ಲಿ ಭಾಗವಹಿಸುವ ಭಕ್ತರ ಪ್ರತಿಸ್ಪಂದನೆಯಾಗಿದ್ದು ಪ್ರಭು ಕ್ರಿಸ್ತರು ತಮ್ಮ ರಕ್ತದೊಂದಿಗೆ ದೃಢೀಕರಿಸಿದ ಹೊಸ ಒಡಂಬಡಿಕೆಯ ಬಲಿಯೊಂದಿಗೆ ಬೇರ್ಪಡದೆ ಒಂದಾಗಿದೆ.

## ಬಿ) ಸಂಸ್ಕಾರಿಕ ಸೇವೆ, ವಿಶೇಷವಾಗಿ ಪರಮಪ್ರಸಾದ :

ಪವಿತ್ರ ಕಾರ್ಯಗಳನ್ನು ತಮ್ಮ ಸೇವಾ ಕರ್ತರಾಗಿ ಈಡೇರಿಸಲೆಂದು ದೇವರು ಯಾಜಕರನ್ನು ಪ್ರತಿಷ್ಠಾಪಿಸಿದ್ದಾರೆ. ಈ ಕಾರ್ಯಗಳು ಪಾವನತೆಯ ಪ್ರಕ್ರಿಯೆಗೆ ಅಗತ್ಯವಾಗಿದೆ. ದೈವಾರಾಧನೆಯಲ್ಲಿ ಪವಿತ್ರಾತ್ಮರ ಪ್ರಭಾವದಿಂದ ಪ್ರಭು ಕ್ರಿಸ್ತರ ಯಾಜಕ ಕಾರ್ಯವನ್ನು ಅವರು ಮುಂದುವರಿಸುತ್ತಾರೆ. ದೀಕ್ಷಾಸ್ನಾನದ ಮುಖಾಂತರ ಜನರನ್ನು ದೇವರ ನೈಜ್ಯ ಪ್ರಜೆಗಳನ್ನಾಗಿ ಮಾಡುತ್ತಾರೆ. ಪಶ್ಚಾತ್ತಾಪ ಸಂಸ್ಕಾರದಲ್ಲಿ ಪಾಪಿಗಳನ್ನು ದೇವರೊಡನೆಯೂ, ಅವರನ್ನು ಧರ್ಮಸಭೆಯೊಂದಿಗೂ ಸಂಧಾನ ಪಡಿಸುತ್ತಾರೆ. ವ್ಯಾಧಿಸ್ಥರ ತೈಲದಿಂದ ರೋಗಗ್ರಸ್ಥರಿಗೆ ಸಾಂತ್ವನವನ್ನು ತರುತ್ತಾರೆ. ದಿವ್ಯ ಬಲಿಪೂಜೆಯ ಮುಖಾಂತರ ಅವರು ವಿಶೇಷ ರೀತಿಯಲ್ಲಿ ಸಂಸ್ಕಾರಿಕವಾಗಿ ಕ್ರಿಸ್ತರ ಬಲಿಯನ್ನು ಅರ್ಪಿಸುತ್ತಾರೆ.

ಇತರ ಸಂಸ್ಕಾರಗಳು, ಧರ್ಮಸಭೆಯ ಪ್ರತಿ ಸೇವಾವೃತ್ತಿ ಮತ್ತು ಪ್ರೇಷಿತತ್ವದ ಒಂದೊಂದು ಕಾರ್ಯವೂ ಪರಮ ಪ್ರಸಾದದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದು ಅದರೆಡೆಗೆ ಅಭಿಮುಖವಾಗಿದೆ. ಅದೇ ಜೀವಂತ ರೊಟ್ಟಿಯೂ, ಪಾಸ್ಖವೂ ಸ್ವತ: ಕ್ರಿಸ್ತರೇ ಆಗಿದ್ದಾರೆ. ದಿವ್ಯ ಬಲಿಪೂಜೆಯಲ್ಲಿ ಪ್ರಭು ಕ್ರಿಸ್ತರೊಡನೆ ತಮ್ಮನ್ನೇ, ತಮ್ಮ ದುಡಿಮೆ ಸೃಷ್ಟಿ ವಸ್ತುಗಳೊಂದಿಗೆ ದೈವಪ್ರಜೆಯಾಗಿ ಸಮರ್ಪಿಸಿಕೊಳ್ಳಲು ಆಹ್ವಾನಿಸಿ ಪ್ರೋತ್ಸಾಹಿಸಲಾಗಿದೆ. ಹೀಗೆ ಪರಮ ಪ್ರಸಾದ ಕ್ರೈಸ್ತ ಸಭೆಯ ಕೇಂದ್ರವಾಗಿದೆ, ಹೃದಯವಾಗಿದೆ. ಈ ಪೂಜಾ ಕಾರ್ಯದಲ್ಲಿ ಯಾಜಕರು ಅಧ್ಯಕ್ಷತೆಯನ್ನು ವಹಿಸುತ್ತಾ ಜನರು ದೈವಿಕ ಪೂಜಾ ವಸ್ತುವಿನೊಂದಿಗೆ ತಮ್ಮ ಸ್ವಂತ ಬಾಳನ್ನು ಪಿತ ದೇವರಿಗೆ ಸಮರ್ಪಿಸಬೇಕೆಂದು ತಿಳಿಸುತ್ತಾರೆ.

ದೈವಾರಾಧನಾ ವಿಧಿಯಲ್ಲಿ ಜನರು ಭಾಗವಹಿಸಬೇಕೆಂದು ಯಾಜಕರು ತಿಳಿಸುತ್ತಾರೆ. ಹೀಗೆ ಅವರು ನೈಜ್ಯ ಪ್ರಾರ್ಥನೆಯಲ್ಲಿ ಪರಿಣತರಾಗುತ್ತಾರೆ. ಜನರು ಪರಿಪೂರ್ಣವಾಗಿ ಮತ್ತು ನಿರಂತರ ಪ್ರಾರ್ಥನೆಯಲ್ಲಿ ತೊಡಗಿ ಅಗತ್ಯ ವರಪ್ರಸಾದವನ್ನು ಗಳಿಸುವಂತೆ ಯಾಜಕರು ಅವರನ್ನು ನಡೆಸುತ್ತಾರೆ. ಅವರು ಧರ್ಮಸಭೆಯ ಅಧಿಕೃತ ಪ್ರಾರ್ಥನೆಯನ್ನು ಜಪಿಸುತ್ತಾರೆ. ಅದನ್ನು ದಿನದ ಇತರ ಸಮಯ ಸಂದರ್ಭಗಳಿಗೂ ದಿವ್ಯ ಬಲಿಪೂಜೆಯ ಸ್ತುತಿ ಮತ್ತು ಕೃತಜ್ಞತೆಯನ್ನು ವಿಸ್ತರಿಸುತ್ತಾರೆ. ಈ ಅಧಿಕೃತ ಪ್ರಾರ್ಥನೆಯನ್ನು ಧರ್ಮಸಭೆಯ ಪರವಾಗಿ ತಮ್ಮ ಪಾಲನೆಗೆ ವಹಿಸಲಾದ ಎಲ್ಲ ಜನರಿಗಾಗಿಯೂ ಇಡೀ ಪ್ರಪಂಚಕ್ಕಾಗಿಯೂ ಅರ್ಪಿಸುತ್ತಾರೆ.

## ಸಿ) ಆಡಳಿತ ಸೇವೆ :

ಒಳ್ಳೆಯ ಪಾಲಕರೂ, ಶಿರಸ್ಸೂ ಆದ ಪ್ರಭು ಕ್ರಿಸ್ತರ ಪದದಲ್ಲಿ ಯಾಜಕರು ಪಾಲ್ಗೊಳ್ಳುತ್ತಾರೆ. ಅವರು ಧರ್ಮಾಧ್ಯಕ್ಷರ ಹೆಸರಿನಲ್ಲಿ ದೈವ ಕುಟುಂಬವನ್ನು ಒಂದೇ ಪವಿತ್ರಾತ್ಮರಿಂದ ಸಜೀವಗೊಂಡ ಸಹೋದರರನ್ನಾಗಿ ಒಂದು ಗೂಡಿಸುತ್ತಾರೆ. ಅವರನ್ನು ಪವಿತ್ರಾತ್ಮರಲ್ಲಿ ಯೇಸುಕ್ರಿಸ್ತರ ಮುಖಾಂತರ



ಪಿತ ದೇವರ ಬಳಿಗೆ ನಡೆಸುತ್ತಾರೆ. ವಿಶ್ವಾಸದ ವಿಷಯದಲ್ಲಿ ಯಾಜಕರು ಭಕ್ತರ ಶಿಕ್ಷಕರು . ಭಕ್ತರು ಶುಭ ಸಂದೇಶದ ಬೋಧನೆಗೆ ಅನುಗುಣವಾಗಿ ತಮ್ಮ ಕರೆಯೋಣದಲ್ಲಿ ಮುಂದುವರೆಯುವಂತೆ ಯಾಜಕರು ನೆರವಾಗುತ್ತಾರೆ. ಅವರು ನಿಷ್ಠಾವಂತ ಮತ್ತು ಕ್ರಿಯಾತ್ಮಕ ಪರಪ್ರೀತಿಯಲ್ಲಿ ನೆಲೆಗೊಳ್ಳುವಂತೆ, ಪ್ರಭು ಕ್ರಿಸ್ತರು ಗಳಿಸಿಕೊಟ್ಟ ಸ್ವಾತಂತ್ರ್ಯದಲ್ಲಿ ಮುನ್ನಡೆಯಲು ನೆರವಾಗುತ್ತಾರೆ.

ಯಾಜಕರು ಸರ್ವರಿಗೂ ಸೇವೆ ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿದ್ದರೂ ತಮ್ಮ ಧರ್ಮಕೇಂದ್ರಕ್ಕೆ ಒಳಪಟ್ಟ ಬಡವರನ್ನು ಮತ್ತು ದುರ್ಬಲರನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ. ಅವರು ಯುವಜನರು, ವಿವಾಹಿತರು ಮತ್ತು ಜನ್ಮದಾತರ ಕಡೆ ಗಮನವೀಯಬೇಕು. ಧಾರ್ಮಿಕ ವ್ಯಕ್ತಿಗಳು ಇಡೀ ಧರ್ಮಸಭೆಯ ಒಳಿತಿಗಾಗಿ ಶ್ರಮಿಸುವುದರಿಂದ ಪ್ರತ್ಯೇಕ ಕಾಳಜಿಗೆ ಪಾತ್ರರಾಗುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ವ್ಯಾಧಿಸ್ಥರ ಮತ್ತು ಮರಣಾವಸ್ಥೆಯಲ್ಲಿರುವವರ ಬಗ್ಗೆ ಯಾಜಕರು ಹೆಚ್ಚು ಆಸಕ್ತಿಯುಳ್ಳವರಾಗಿರಬೇಕು. ಅವರಿಗೆ ಭೇಟಿಯನ್ನಿತ್ತು ಪ್ರಭುವಿನಲ್ಲಿ ಅವರನ್ನು ಬಲಾಢ್ಯರನ್ನಾಗಿ ಮಾಡಬೇಕು.

# ಭಾಗ II

## ಇತರರೊಡನೆ ಯಾಜಕರ ಸಂಬಂಧ

## ಎ) ಧರ್ಮಾಧ್ಯಕ್ಷರೊಂದಿಗೆ ಸಂಬಂಧ :

ಎಲ್ಲಾ ಯಾಜಕರು ಧರ್ಮಾಧ್ಯಕ್ಷರೊಡನೆ ಸೇರಿ ಪ್ರಭು ಕ್ರಿಸ್ತರ ಒಂದೇ ಯಾಜಕತ್ವ ಮತ್ತು ಸೇವಾ ವೃತ್ತಿಯಲ್ಲಿ ಪಾಲ್ಗೊಳ್ಳುತ್ತಾರೆ. ಒಂದೇ ಅಭಿಷೇಕ ಮತ್ತು ನಿಯೋಗದ ಪ್ರಯುಕ್ತ ಶ್ರೇಣಿಯುತ ವರ್ಗದ ಧರ್ಮಾಧ್ಯಕ್ಷರೊಡನೆ ಯಾಜಕರು ಅನ್ಯೋನ್ಯವಾಗಿರಬೇಕು. ದೈವ ಪ್ರಜೆಗೆ ಬೋಧನೆ ನೀಡುವುದು, ಅವರನ್ನು ಪವಿತ್ರೀಕರಿಸಿ ಪೋಷಿಸುವ ಕಾರ್ಯದಲ್ಲಿ ಧರ್ಮಾಧ್ಯಕ್ಷರು ಯಾಜಕರನ್ನು ಅಗತ್ಯ ಸಹಾಯಕರನ್ನಾಗಿಯೂ, ಸಲಹೆಗಾರರನ್ನಾಗಿಯೂ ಪಡೆದಿರುತ್ತಾರೆ. ವಿಶ್ವಾಸ ಮತ್ತು ಉದಾರತೆಯಿಂದ ಧರ್ಮಾಧ್ಯಕ್ಷರೊಂದಿಗೆ ಸಹಕರಿಸುತ್ತಿರುವ ಯಾಜಕರು ಒಂದು ವಿಧದಲ್ಲಿ ಸ್ಥಳೀಯ ಧರ್ಮಕೇಂದ್ರದಲ್ಲಿ ಅವರನ್ನು ಪ್ರತ್ಯಕ್ಷಗೊಳಿಸುತ್ತಾರೆ. ಜೊತೆಗೆ ಧರ್ಮಾಧ್ಯಕ್ಷರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಆದಷ್ಟು ಮಟ್ಟಿಗೆ ಹೊತ್ತುಕೊಂಡು ಅವನ್ನು ದಿನದಿಂದ ದಿನಕ್ಕೆ ಆಸಕ್ತಿಯಿಂದ ಈಡೇರಿಸುತ್ತಾರೆ. ಒಂದೇ ಯಾಜಕತ್ವ ಮತ್ತು ಸೇವಾ ಆಯೋಗದಲ್ಲಿ ಅವರು ಭಾಗಿಯಾಗಿರುವುದರಿಂದ ಧರ್ಮಾಧ್ಯಕ್ಷರು ಯಾಜಕರನ್ನು ತಮ್ಮ ಸಹೋದರರೆಂದು ಪರಿಗಣಿಸುತ್ತಾರೆ. ಅವರು ತಮ್ಮಲ್ಲಾದ ಮಟ್ಟಿಗೆ ಯಾಜಕರ ಆರ್ಥಿಕ ಮತ್ತು ವಿಶೇಷವಾಗಿ ಆಧ್ಯಾತ್ಮಿಕ ಯೋಗ ಕ್ಷೇಮದ ಬಗ್ಗೆ ಕಾಳಜಿ ವಹಿಸುತ್ತಾರೆ. ಅಂತೆಯೇ ಯಾಜಕರು ಸಹ ತಮ್ಮ ಧರ್ಮಾಧ್ಯಕ್ಷರಲ್ಲಿರುವ ಪೂರ್ಣ ಯಾಜಕತ್ವವನ್ನು ಎಂದೂ ಮರೆಯುವುದಿಲ್ಲ. ಪ್ರಧಾನ ಪಾಲಕರಾದ ಪ್ರಭು ಕ್ರಿಸ್ತರ ಅಧಿಕಾರವನ್ನು ಅವರಲ್ಲಿ ಕಂಡು ಗೌರವಿಸುತ್ತಾರೆ. ಹೀಗೆ ಅವರು ನೈಜ್ಯ ಪ್ರೀತಿ ಮತ್ತು ವಿಧೇಯತೆಯಿಂದ ಧರ್ಮಾಧ್ಯಕ್ಷರಿಗೆ ಬೆಂಬಲವಾಗಿರುತ್ತಾರೆ.

## ಬಿ) ಸಹೋದರ ಗುರುಗಳೊಂದಿಗೆ ಸಂಬಂಧ :

ಯಾಜಕಾಭಿಷೇಕದ ದೆಸೆಯಿಂದ ಎಲ್ಲಾ ಗುರುಗಳು ಒಂದೇ ಸಂಸ್ಕಾರಿಕ ಸೋದರತ್ವದಲ್ಲಿ ಅನ್ಯೋನ್ಯವಾಗಿರುತ್ತಾರೆ. ಪ್ರತಿ ಧರ್ಮಕ್ಷೇತ್ರದಲ್ಲಿ ಏಕ ಯಾಜಕತ್ವದಲ್ಲಿ ಧಮಾಧ್ಯಕ್ಷರೊಡನೆ ಅವರು ಒಂದಾಗಿದ್ದು ಜನರಿಗಾಗಿ ಯಾಜಕ ಸೇವಾ ವೃತ್ತಿಯನ್ನು ಕೈಗೊಳ್ಳುತ್ತಾರೆ. ಅವರು ಧರ್ಮಕೇಂದ್ರದ ಅಥವಾ ಇತರ ಸೇವಾಕಾರ್ಯದಲ್ಲಿ ತೊಡಗಿದ್ದರೂ ಒಂದೇ ಪ್ರೇಷಿತತ್ವದಲ್ಲಿ ಭಾಗಿಗಳಾಗುತ್ತಾರೆ. ಎಲ್ಲರೂ ಪ್ರಭು ಕ್ರಿಸ್ತರ ಆತ್ಮಿಕ ಶರೀರದ ನಿರ್ಮಾಣ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಆಧುನಿಕ ಲೋಕದಲ್ಲಿ ಈ ಕಾರ್ಯವನ್ನು ನಿರ್ವಹಿಸಲು ಹೊಸ ಜವಾಬ್ದಾರಿಗಳು ಮತ್ತು ಹೊಸ ವಿಧಾನಗಳು ಅಗತ್ಯವಾಗಿ ಕಂಡು ಬರುತ್ತವೆ.

## ಸಿ) ಶ್ರೀಸಾಮಾನ್ಯರೊಂದಿಗೆ ಸಂಬಂಧ :

ಯಾಜಕಾಭಿಷೇಕವನ್ನು ಪಡೆದ ಯಾಜಕರು ದೈವಪ್ರಜೆಗೆ ತಂದೆಯ ಮತ್ತು ಬೋಧಕರ ಸ್ಥಳದಲ್ಲಿದ್ದು ಪ್ರಮುಖ ಮತ್ತು ಅಗತ್ಯ ಸೇವಾ ಕಾರ್ಯಕ್ಕೆ ಮೀಸಲಾಗಿದ್ದಾರೆ. ಯಾಜಕರು ಇತರ ಭಕ್ತರಂತೆ ಪ್ರಭು ಕ್ರಿಸ್ತರ ಶಿಷ್ಯರು ಮತ್ತು ದೈವ ಕರೆಯ ಅನುಗ್ರಹದಿಂದ ಅವರ ಸಾಮ್ರಾಜ್ಯದಲ್ಲಿ ಭಾಗಿಗಳು. ಅವರು ದೀಕ್ಷಾಸ್ನಾನದ ತೊಟ್ಟಿಯಲ್ಲಿ ನವಜನ್ಮವನ್ನು ತಳೆದು ಇತರ ಸಹೋದರರೊಂದಿಗೆ ಸಹೋದರರಾಗಿದ್ದಾರೆ. ಅವರು ಪ್ರಭು ಕ್ರಿಸ್ತರ ಆತ್ಮಿಕ ಶರೀರದ ಅವಯವಗಳಾಗಿದ್ದು ಅದನ್ನು ಸರ್ವರೊಂದಿಗೆ ಕಟ್ಟುವ ಜವಾಬ್ದಾರಿಯನ್ನು ಹೊಂದಿದ್ದಾರೆ.

ಯಾಜಕರು ಯೇಸುಕ್ರಿಸ್ತರ ಹಿತವನ್ನು ಗಮನದಲ್ಲಿರಿಸಿ ಮುಂದಾಳುಗಳಾಗಿ ಶ್ರೀ ಸಾಮಾನ್ಯರೊಂದಿಗೆ ಶ್ರಮಿಸಬೇಕು. ಅವರು ನಿಷ್ಠೆಯಿಂದ ಅವರ ಘನತೆಯನ್ನು ಗುರುತಿಸಿ ಅದನ್ನು ಪೋಷಿಸುತ್ತಾ ಧರ್ಮಸಭೆಯ ನಿಯೋಗವನ್ನು ನಿರ್ವಹಿಸಬೇಕು. ಶ್ರೀ ಸಾಮಾನ್ಯರ ಮಾತನ್ನು ಮನಸಾರೆ ಆಲಿಸಬೇಕು, ಸೋದರ ಭಾವನೆಯಿಂದ ಅವರ ಅವಶ್ಯಕತೆಗಳನ್ನು ಕಂಡುಕೊಳ್ಳಬೇಕು. ಮಾನವ ಚಟುವಟಿಕೆಗಳಲ್ಲಿ ಅವರಿಗಿರುವ ಅನುಭವ ಮತ್ತು ಪರಿಣತಿಯನ್ನು ಅಂಗೀಕರಿಸಬೇಕು. ಹೀಗೆ ಅವರ ಸಹಕಾರದೊಂದಿಗೆ ಯಾಜಕರು ಪ್ರಸ್ತುತ ಸಮಯದ ಸಂಕೇತಗಳನ್ನು ಅರಿತುಕೊಳ್ಳಲು ಶಕ್ತರಾಗುವರು.

ಅಂತಿಮವಾಗಿ ಪರಪ್ರೀತಿ ಮತ್ತು ಐಕ್ಯಮತ್ಯದೆಡೆಗೆ ಶ್ರೀ ಸಾಮಾನ್ಯರನ್ನು ಕೊಂಡೊಯ್ಯಲು ಯಾಜಕರನ್ನು ಜನರ ಮಧ್ಯೆ ಇರಿಸಿದ್ದಾರೆ. "ಸೋದರ ಭಾವನೆಯಿಂದ ಒಬ್ಬರನ್ನೊಬ್ಬರು ಹೃತ್ಪೂರ್ವಕವಾಗಿ ಪ್ರೀತಿಸಿರಿ. ಗೌರವ ತೋರಿಸುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ (ರೋಮನ 12:10). ಜನರ ಮಧ್ಯೆ ಇರುವ ಯಾಜಕರು ವಿವಿಧ ಮನೋಭಾವದವರನ್ನು ಸಂಧಾನಗೊಳಿಸಬೇಕು. ಕ್ರೈಸ್ತ ಸಭೆಯಲ್ಲಿ ಯಾರೂ ಅಪರಿಚಿತರಲ್ಲ ಎಂಬುದನ್ನು ಸಾಕ್ಷಾತ್ಕರಿಸಬೇಕು. ಧರ್ಮಾಧ್ಯಕ್ಷರ ಹೆಸರಿನಲ್ಲಿ ಸಾರ್ವಜನಿಕ ಹಿತವನ್ನು ಅವರು ಸಂರಕ್ಷಿಸಬೇಕು. ಭಕ್ತವಿಶ್ವಾಸಿಗಳು ಎಲ್ಲಾ ವಿಧಧ ಭಿನ್ನತತ್ವ ಬೋಧನೆಗೆ ಬಲಿಯಾಗದಂತೆ ಸತ್ಯವನ್ನು ಖಡಾಖಂಡಿತವಾಗಿ ಹೇಳಬೇಕು. ಸಂಸ್ಕಾರಿಕ ಜೀವನವನ್ನು ಬಿಟ್ಟಗಲಿದವರು, ವಿಶ್ವಾಸವನ್ನು ತೊರೆದವರ ಬಗ್ಗೆ ಅವರು ವಿಶೇಷ ಕಾಳಜಿಯನ್ನು ತೋರಬೇಕು. ಅವರು ಒಳ್ಳೆಯ ಪಾಲಕನಂತೆ ಅಂಥವರನ್ನು ಹುಡುಕಿಕೊಂಡು ಹೋಗಬೇಕು.



# ಭಾಗ III

## ಯಾಜಕರ ವಿನಿಮಯ ಮತ್ತು ಯಾಜಕ ಕರೆಯೋಣಗಳು :

ಎಲ್ಲಾ ಧರ್ಮಸಭೆಗಳ ಒಳಿತು ಗುರುಗಳ ಆಸಕ್ತ ಕಾಳಜಿಯಾಗಿರಬೇಕೆಂದು ಸಮ್ಮೇಳನ ಜ್ಞಾಪಿಸುತ್ತದೆ. ವಿಫುಲ ದೈವ ಕರೆಯೋಣಗಳಿಂದ ಆಶೀರ್ವದಿಸಲ್ಪಟ್ಟ ಧರ್ಮಕ್ಷೇತ್ರದ ಗುರುಗಳು ಯಾಜಕರ ಅಭಾವವಿರುವ ಪ್ರದೇಶಗಳಿಗೆ ಹೋಗುವ ಸ್ವಚಿತ್ತ ಮತ್ತು ಸಿದ್ಧ ಮನಸ್ಸನ್ನು ತೋರಬೇಕು. ಅವರು ತಮ್ಮ ಕ್ಷೇತ್ರದ ಧರ್ಮಾಧ್ಯಕ್ಷರ ಅನುಮತಿಯನ್ನು ಪಡೆದು ಧರ್ಮಪ್ರಸಾದ ಕಾರ್ಯಗಳಿಗೆ ಸ್ವಯಂಸೇವಕರಾಗಬೇಕು.

ಪ್ರಭು ಕ್ರಿಸ್ತರ ಮನಸ್ಸನ್ನು ಅರಿತ ಮತ್ತು ಪವಿತ್ರಾತ್ಮರಿಂದ ಪ್ರೇರಿತರಾದ ಪ್ರೇಷಿತರು "ಇತರರಿಗೆ ಬೋಧಿಸಲು ಪ್ರಾಮಾಣಿಕ ವ್ಯಕ್ತಿಗಳನ್ನು" (2ತಿಮೊ 2:2) ಆರಿಸಿಕೊಳ್ಳುವುದು ತಮ್ಮ ಕರ್ತವ್ಯವೆಂದು ಭಾವಿಸಿದರು. ಇದು ಯಾಜಕ ನಿಯೋಗಕ್ಕೆ ಸಂಬಂಧ ಪಟ್ಟು ಇಲ್ಲಿ ಪ್ರತಿ ಯಾಜಕ ಇಡಿ ಧರ್ಮಸಭೆಯ ಕಾರ್ಯದಲ್ಲಿ ಭಾಗಿಯಾಗುತ್ತಾನೆ. ಹೀಗಾಗದಿದ್ದರೆ ಭೂಲೋಕದ ದೈವಪ್ರಜೆಗೆ ಯಾಜಕರ ಕೊರತೆ ನೀಗುವುದಿಲ್ಲ. ಜನ್ಮದಾತರು, ಶಿಕ್ಷಕರು, ಬಾಲಕರು, ಮತ್ತು ಯುವಜನರ ತರಬೇತಿಯಲ್ಲಿ ತೊಡಗಿರುವವರು ಅಭ್ಯರ್ಥಿಗಳನ್ನು ಸಿದ್ಧಮಾಡಬೇಕು. ಪ್ರಭುವಿನ ತಮ್ಮ ಮುಂದೆಯ ಬಗ್ಗೆ ಇರುವ ಕಾಳಜಿಯನ್ನು ಮನವರಿಕೆ ಮಾಡಬೇಕು". ಅವರು ಪ್ರಭುವಿನ ಕರೆಗೆ ಸ್ಪಂದಿಸುತ್ತಾ "ಸ್ವಾಮಿ ನಾನು ಸಿದ್ಧ, ನನ್ನನ್ನು ಕಳುಹಿಸಿ" (ಯಶಾ 4:8) ಎಂದು ಉದಾರ ಮನಸ್ಸನ್ನು ತೋರುವಂತಿರಬೇಕು.

# ಅಧ್ಯಾಯ III

## ಯಾಜಕ ಜೀವನ :

ಧರ್ಮಸಭೆಯ ಆಂತರಿಕ ನವೀಕರಣ, ಎಲ್ಲ ದೇಶಗಳಲ್ಲೂ ಶುಭ ಸಂದೇಶ ಪ್ರಸಾರ ಇಂದಿನ ಪ್ರಪಂಚದಲ್ಲಿ ಸರ್ವರೊಡನೆ ಸಂವಾದ, ಇಂಥಹ ಪಾಲನಾ ಅಭಿಲಾಷೆಗಳನ್ನು ಈಡೇರಿಸಲು ಪವಿತ್ರ ಸಮ್ಮೇಳನ ಆಶಿಸುತ್ತದೆ. ಇವನ್ನು ಅನುಷ್ಠಾನಕ್ಕೆ ತರಲು ಯಾಜಕರು ಪಾವಿತ್ರತೆಯಲ್ಲಿ ಬೆಳೆಯಬೇಕು. ಆಗ ಅವರು ಧರ್ಮಸಭೆಯ ಹಸ್ತದಲ್ಲಿ ಸ್ಥಿರ ಮತ್ತು ಉತ್ತಮ ಸಲಕರಣೆಗಳಾಗಿ ದೈವ ಪ್ರಜೆಯ ಸೇವೆಯಲ್ಲಿ ತೊಡಗಬಹುದು. ಈ ಸಾಧನೆಗೆ ಧರ್ಮಸಭೆ ಅನುಮೋದಿಸಿದ ಸಮರ್ಪಕ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.

ಯಾಜಕರನ್ನು ಪಾವಿತ್ರತೆಗೆ ಕರೆಯಲಾಗಿದೆ. ಅವರು ದೀಕ್ಷಾಸ್ನಾನವನ್ನು ಪಡೆದ ಕ್ರೈಸ್ತರು. ಆದರೂ ಅವರು ಪ್ರಭು ಕ್ರಿಸ್ತರಂತೆ ಪವಿತ್ರಾತ್ಮರಿಂದ ಅಭಿಷೇಕಿಸಲ್ಪಟ್ಟ ದೇವರ ಸಾಧನಗಳು. ಅವರು ಪಡೆದ ಬೋಧನಾ ಪದ, ಯಾಜಕ ಸೇವೆ ಮತ್ತು ಆಡಳಿತ ಹುದ್ದೆಯನ್ನು ನಿರ್ವಹಿಸಲು ಪಾವಿತ್ರತೆ ಅತ್ಯಗತ್ಯ. ಆಧ್ಯಾತ್ಮಿಕ ಪರಿಣತೆ ಮತ್ತು ಗುರು ಜೀವನವನ್ನು ಪಾವನಗೊಳಿಸಲು ಆಧ್ಯಾತ್ಮಿಕ ಅಗತ್ಯಗಳ ಬಗ್ಗೆ ವ್ಯಾಟಿಕನ್ ಸಮ್ಮೇಳನ ಪ್ರಸ್ತಾಪಿಸುತ್ತದೆ.

ಕ್ರೈಸ್ತ ಭಕ್ತ ವಿಶ್ವಾಸಿಗಳು ಯಾಜಕರ ಬಗ್ಗೆ ತಮಗಿರುವ ಕರ್ತವ್ಯಗಳನ್ನು ತಿಳಿದು ಯಾಜಕರನ್ನು ಪಾಲಕರು, ಪಿತರು ಎಂದು ಭಾವಿಸಿ ಪುತ್ರ ವಾತ್ಸಲ್ಯದಿಂಧ ಅವರನ್ನು ಪ್ರೀತಿಸಬೇಕು. ಅಂತೆಯೇ ತಮ್ಮ ಬೇನೆ ಬವಣೆಗಳನ್ನು ಹಂಚಿಕೊಳ್ಳುತ್ತಾ ಸಾಧ್ಯವಾದ ಮಟ್ಟಿಗೆ ತಮ್ಮ ಪ್ರಾರ್ಥನೆ ಮತ್ತು ಇತರೆ ಕೆಲಸಗಳಲ್ಲಿ ನೆರವಾಗಬೇಕು. ಆಗ ಯಾಜಕರು ತಮ್ಮ ಎಲ್ಲ ಜವಾಬ್ದಾರಿಗಳನ್ನು ತೊಡಕುಗಳನ್ನು ಗಮನಿಸದೆ ಮುನ್ನುಗ್ಗಿ ಮಾಡಲು ಶಕ್ತರಾಗುವರು.



# XV ಧರ್ಮಸಭೆಯ ಧರ್ಮಪ್ರಸಾರ ಕಾರ್ಯ

## (ಶಾಸನ)

## ಪೀಠಿಕೆ

### ಸುವಾರ್ತಾ ಸಂದೇಶ ಮತ್ತು ದೇವರ ಯೋಜನೆ :

ಈ ಭೂಲೋಕದಲ್ಲಿರುವ ಧರ್ಮಸಭೆ ಸ್ವಾಭಾವಿಕವಾಗಿ ಸುವಾರ್ತಾ ಪ್ರಸಾರಕ ಸಭೆ. ಎಲ್ಲಾ ಮನುಷ್ಯರು ತಮ್ಮ ಜೀವನದಲ್ಲಿ ಭಾಗಿಯಾಗಬೇಕು, ಚದುರಿ ದೂರ ದೂರಕ್ಕೆ ಸಾಗಿದವರೆಲ್ಲರೂ ಜೊತೆಗೂಡಿ ಬರಬೇಕು ಎಂಬುದು ದೇವರ ಚಿತ್ತ ಮತ್ತು ಆಹ್ವಾನ. ತಮ್ಮೊಂದಿಗೆ ಮಾನವನು ಐಕ್ಯವಾಗಿರಬೇಕು ಮತ್ತು ಪಾಪಿ ಮಾನವರಲ್ಲಿ ಸೋದರತ್ವ ಏರ್ಪಡಬೇಕು ಎಂಬುದನ್ನು ಸಾಧಿಸಲು ದೇವರು ಇತಿಹಾಸದಲ್ಲಿ ಹೊಸ ಮತ್ತು ನಿರ್ದಿಷ್ಟ ಯೋಜನೆಯನ್ನು ಕೈಗೊಂಡರು. ಅದೇ ದೇವರು ಮಾನವರಾದ ಘಟನೆ, ಮಾನವ ಅವತಾರ. ಪಿಶಾಚಿಯ ಅಧಿಪತ್ಯದಿಂದ ನಮ್ಮನ್ನು ಕಾಪಾಡಲು ಮತ್ತು ಈ ಲೋಕವನ್ನು ತಮ್ಮೊಂದಿಗೆ ಸಂಧಾನ ಪಡಿಸಿಕೊಳ್ಳಲು ತಮ್ಮ ಏಕ ಮಾತ್ರ ಪುತ್ರವನ್ನು ಕಳುಹಿಸಿದರು. ತಮ್ಮ ಸರದಿಯಲ್ಲಿ ಪ್ರಭು ಕ್ರಿಸ್ತರು ದೇವರಿಂದ ದೇವರ ಉದ್ದೇಶವನ್ನು ಈಡೇರಿಸಲು ಪವಿತ್ರಾತ್ಮರನ್ನು ಕಳುಹಿಸಿದರು. ಪರಮ ತ್ರಿತ್ವದ ಮೂರನೆಯ ವ್ಯಕ್ತಿಯಾದ ಇವರು ಪಂಚಾಶತ್ತಮ ದಿನದಿಂದ; ಅಂದಿನಿಂದ ಎಂದೆಂದಿಗೂ ನಮ್ಮೊಂದಿಗೆ ಇದ್ದಾರೆ. ಅವರು ಧರ್ಮಸಭೆಯನ್ನು ಐಕ್ಯಗೊಳಿಸುತ್ತಾರೆ ಮತ್ತು ಸಜೀವಗೊಳಿಸುತ್ತಾರೆ. ಅವರು ಭಕ್ತ ವಿಶ್ವಾಸಿಗಳ ಹೃದಯದಲ್ಲಿ ಕ್ರಿಸ್ತರಲ್ಲಿದ್ದ ಸುವಾರ್ತಾ ಪ್ರಸಾರ ಚೇತನವನ್ನು ತುಂಬುತ್ತಾರೆ.

### ಧರ್ಮಸಭೆಯ ನಿಯೋಗ :

ನಮ್ಮ ಪ್ರಭು ಯೇಸು ತಮ್ಮ ಸೇವಾ ಜೀವನದ ಪ್ರಾರಂಭದಲ್ಲಿ ಹನ್ನೆರಡು ಜನರನ್ನು ಆಯ್ಕೆ ಮಾಡಿದರು. ಅವರು ತಮ್ಮ ಮರಣ ಮತ್ತು ಪುನರುತ್ಥಾನದಿಂದ ನಮ್ಮ ರಕ್ಷಣಾ ಕಾರ್ಯದ ರಹಸ್ಯವನ್ನು ಸಂಪೂರ್ಣಗೊಳಿಸಬೇಕು. ಅವರು ಸ್ವರ್ಗಾರೋಹಣವಾಗುವ ಮೊದಲು ಧರ್ಮಸಭೆಯನ್ನು ರಕ್ಷಣಾ ಸಂಸ್ಕಾರವನ್ನಾಗಿ ಸ್ಥಾಪಿಸಿದರು. ಪಿತ ದೇವರು ತಮ್ಮನ್ನು ಕಳುಹಿಸಿದಂತೆ ಅವರು ಪ್ರೇಷಿಕರನ್ನು ಪ್ರಪಂಚದಾದ್ಯಂತ ಕಳುಹಿಸಿದರು. ಭೂಲೋಕದಾದ್ಯಂತ ಹೋಗಿ ಸರ್ವ ಸೃಷ್ಟಿಗೂ ಶುಭ ಸಂದೇಶವನ್ನು ಸಾರಿರಿ" (ಮಾರ್ಕ 16:15). ಪ್ರಭು ಕ್ರಿಸ್ತರ ಸ್ಪಷ್ಟ ಆಜ್ಞೆಯ ಪ್ರಕಾರ ಹನ್ನೆರಡು ಮಂದಿಯ ಉತ್ತಾರಾಧಿಕಾರಿಗಳು ಮತ್ತು ಇಡೀ ಧರ್ಮಸಭೆ ವಿಶ್ವಾಸ ಮತ್ತು ರಕ್ಷಣಾ ಬೋಧನೆಯನ್ನು ಸಾರುವ ಜವಾಬ್ದಾರಿಯನ್ನು ಹೊಂದಿದೆ.

ಈ ಧರ್ಮಪ್ರಸಾರ ಕರ್ತವ್ಯವನ್ನು ಪೇತ್ರರ ಉತ್ತರಾಧಿಕಾರದ ಆಳ್ವಿಕೆಗೆ ಒಳಪಟ್ಟ ಧರ್ಮಾಧ್ಯಕ್ಷ ಮಂಡಲಿ ಇಡಿ ಧರ್ಮಸಭೆಯ ಪ್ರಾರ್ಥನೆ ಮತ್ತು ಸಹಕಾರದಿಂದ ಮುಂದಕ್ಕೆ ಸಾಗಿಸುತ್ತದೆ. ಈ ಧರ್ಮಪ್ರಸಾರ ಕಾರ್ಯದ ನಿರ್ದಿಷ್ಟ ಗುರಿಯೆಂದರೆ : ಶುಭ ಸಂದೇಶವನ್ನು ಸಾರುವುದು ಮತ್ತು ಯಾವ ಯಾವ ಜನಾಂಗ ಮತ್ತು ಸಮುದಾಯದಲ್ಲಿ ಧರ್ಮಸಭೆ ಸ್ಥಾಪಿತವಾಗಿಲ್ಲವೋ ಅಲ್ಲಿ ಅದನ್ನು ಸ್ಥಾಪಿಸುವುದು.

## ಧರ್ಮಪ್ರಸಾರ ಕಾರ್ಯದ ಕಾರಣಗಳು :

ದೇವರ ಚಿತ್ತದಲ್ಲಿ ಧರ್ಮಪ್ರಸಾರ ಚಟುವಟಿಕೆಯ ಕಾರಣ ಅಡಕವಾಗಿದೆ. "ಎಲ್ಲಾ ಜನರು ಸತ್ಯವನ್ನರಿತು ರಕ್ಷಣೆಯನ್ನು ಹೊಂದಬೇಕು" ಇದು ದೈವ ಚಿತ್ತ. ಅದು ದೈವಮಾನವ ಮಧ್ಯದ ಏಕ ಮಧ್ಯಸ್ಥರಾಗಿರುವ ಯೇಸುಕ್ರಿಸ್ತರ ಮತ್ತು ಅವರ ಆತ್ಮಿಕ ಶರೀರವಾದ ಧರ್ಮಸಭೆಯ ಮುಖಾಂತರ ಆಗಬೇಕು. ಆದುದರಿಂದ ಪ್ರತಿಯೊಬ್ಬರು ಮನಪರಿವರ್ತನೆ ಹೊಂದಬೇಕು, ಪ್ರಭು ಕ್ರಿಸ್ತರೊಂದಿಗೆ ಮತ್ತು ಅವರ ಧರ್ಮಸಭೆಯೊಂದಿಗೆ ವಿಶ್ವಾಸ ಮತ್ತು ದಿಕ್ಷಾಸ್ನಾನದ ಮುಖಾಂತರ ಐಕ್ಯವಾಗಬೇಕು. ವಿಶ್ವಾಸ ಮತ್ತು ದೀಕ್ಷಾಸ್ನಾನದ ಅಗತ್ಯದ ಬಗ್ಗೆ ಪ್ರಭು ಕ್ರಿಸ್ತರೇ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿದ್ದಾರೆ. ಆದರೆ ಜನರು ತಮ್ಮ ಸ್ವಂತ ತಪ್ಪಿಲ್ಲದೆ ಶುಭ ಸಂದೇಶವನ್ನು ಅರಿಯಲು ಅಶಕ್ತರಾಗಿರಬಹುದು. ಅಂಥಹ ಸುಮನಸ್ಕರನ್ನು ದೇವರು ಮಾತ್ರ ತಮಗೆ ತಿಳಿದ ರೀತಿಯಲ್ಲಿ ವಿಶ್ವಾಸಕ್ಕೆ ಕರೆತರಬಲ್ಲರು. ಧರ್ಮಪ್ರಸಾರಕ್ಕೆ ಇನ್ನೊಂದು ಕಾರಣ ಪರಪ್ರೀತಿ. ಪ್ರೀತಿಯ ದೆಸೆಯಿಂದ ಧರ್ಮಸಭೆಯ ಸದಸ್ಯರು ದೇವರನ್ನು ಪ್ರೀತಿಸುತ್ತಾ ಅವರ ಮಹಿಮೆಯನ್ನು ಅರುಸುತ್ತಾರೆ. ಜೊತೆಗೆ ಅವರು ಇಹಪರ ಲೋಕಗಳ ಆಧ್ಯಾತ್ಮಿಕ ಒಳಿತನ್ನು ಹಂಚಿಕೊಳ್ಳಲು ಅಪೇಕ್ಷಿಸುತ್ತಾರೆ. ಅಂತಿಮವಾಗಿ ಇದೇ ಧರ್ಮಪ್ರಸಾರ ಕಾರ್ಯದಿಂದ ದೇವರಿಗೆ ಸಂಪೂರ್ಣ ಮಹಿಮೆ ಸಲ್ಲುತ್ತದೆ. ಒಂದೇ ದೈವಪ್ರಜೆಯಿಂದ ಜನರು ಪ್ರಭು ಕ್ರಿಸ್ತರಲ್ಲಿ ಪುನರ್ಜನ್ಮವನ್ನು ಪಡೆಯುತ್ತಾರೆ, ಪ್ರಭು ಕ್ರಿಸ್ತರ ಶರೀರದಲ್ಲಿ ಐಕ್ಯಗೊಳ್ಳುತ್ತಾರೆ. ಅವರು ಏಕ ಕಂಠದಿಂದ ದೇವರ ಮಹಿಮೆಯನ್ನು ಘೋಷಿಸುತ್ತಾ ಅವರನ್ನು "ನಮ್ಮ ತಂದೆ" ಎಂದು ಸಾರಿದಾಗ ಈ ಮಹಿಮೆ ಸಲ್ಲುತ್ತದೆ.

ಧರ್ಮಪ್ರಸಾರ ಕಾರ್ಯಕ್ಕೂ ಮಾನವ ಸ್ವಾಭಾವದ ಆಶೆ ಅಭಿಲಾಷೆಗಳಿಗೂ ನಿಕಟ ಸಂಬಂಧವಿದೆ. ಸೋದರ ಪ್ರೀತಿ, ನಿಷ್ಠೆ, ಶಾಂತಿ ಭಾವನೆಯಿಂದ ಸಚೇತನಗೊಂಡ ನೂತನ ಮಾನವ ಜನಾಂಗಕ್ಕೆ ಪ್ರಭು ಕ್ರಿಸ್ತರೇ ಆದರ್ಶ ಮತ್ತು ಮೂಲ. ಎಲ್ಲ ಮನುಷ್ಯರು ತಮ್ಮ ನೈಜ್ಯ ನೆಲೆ ಮತ್ತು ಪರಿಪೂರ್ಣ ಕರೆಯೋಣವೆಂದು ಹಾತೊರೆಯುವುದು ಈ ನವ ಮಾನವ ಜನಾಂಗವನ್ನೇ. ಆದರೆ ಯಾರೂ ತಮ್ಮ ದುರ್ಬಲತೆ, ಏಕಾಂತ ಮತ್ತು ದಾಸತ್ವದ ಬಂಧನಗಳಿಂದ ತಮ್ಮನ್ನೆ ಬಿಡಿಸಿಕೊಳ್ಳಲು ಅಶಕ್ತರು. ಪ್ರತಿಯೊಬ್ಬರೂ ಬೋಧಕ, ಶಿಕ್ಷಕ, ವಿಮೋಚಕ, ರಕ್ಷಕ, ಜೀವದಾಯಕ ಮಾದರಿಯಾಗಿರುವ ಪ್ರಭು ಕ್ರಿಸ್ತರ ಅಗತ್ಯದಲ್ಲಿದ್ದಾರೆ., ಪ್ರಭು ಕ್ರಿಸ್ತರ ಶುಭ ಸಂದೇಶ, ಸ್ವಾತಂತ್ರ್ಯ, ಸುಭಿಕ್ಷೆ, ಐಕ್ಯತೆ ಮತ್ತು ಶಾಂತಿಯ ಹುದುಗಾಗಿದೆ. ಪ್ರಭು ಕ್ರಿಸ್ತರು ಸರ್ವ ಜನಾಂಗಗಳ ನಿರೀಕ್ಷೆಯೂ ರಕ್ಷಣೆಯೂ ಆಗಿದ್ದಾರೆ.

## ಧರ್ಮಪ್ರಸಾರ ಕಾರ್ಯದ ಅಂತ್ಯಕಾಲಿಕ ಲಕ್ಷಣಗಳು :

ಪ್ರಭು ಕ್ರಿಸ್ತರ ದ್ವಿತೀಯ ಆಗಮನದ ಮೊದಲು ಶುಭ ಸಂದೇಶ ಪ್ರಸಾರ ಎಲ್ಲಾ ದೇಶಗಳಲ್ಲಾಗಬೇಕು. ಆಗ ಇಡೀ ಧರ್ಮಸಭೆ ಸುಗ್ಗಿ ಕಾಲದ ನಂತರ ತನ್ನ ಫಸಲನ್ನು ಒಟ್ಟುಗೂಡಿಸಿ ನಾಲ್ಕು ದಿಕ್ಕುಗಳಿಂದ ದೇವರ ಸಾಮ್ರಾಜ್ಯದಲ್ಲಿ ಒಟ್ಟು ಗೂಡಿಸುವುದು. ಶುಭ ಸಂದೇಶ ಪ್ರಸಾರ ಕಾರ್ಯವೆಂದರೆ ದೇವರ ಯೋಜನೆಯ ಪ್ರಕಟಣೆ ಮತ್ತು ಜಗತ್ತಿನ ಇತಿಹಾಸದಲ್ಲಿ ಅದರ ಅನುಷ್ಠಾನ. ಈ ಇತಿಹಾಸದಲ್ಲಿ ದೇವರು ಧರ್ಮಸಭೆಯ ಧರ್ಮಪ್ರಸಾರದ ಮುಖಾಂತರ ರಕ್ಷಣಾ ಚರಿತ್ರೆಯನ್ನು ಬಹಿರಂಗವಾಗಿ ಅಂತ್ಯಗೊಳಿಸುತ್ತಾರೆ. ಅವರು ತಮ್ಮ ಪುತ್ರರ ಅನಂತ



ಆನಂದಲ್ಲಿ ಭಾಗವಹಿಸಲು ಎಲ್ಲರನ್ನು ಆಮಂತ್ರಿಸುತ್ತಾರೆ. ಆದುದರಿಂದ ಧರ್ಮಪ್ರಸಾರ ಕಾರ್ಯದ ಅಂತ್ಯ ಕಾಲದ ನಡೆ, ದೇವರ ಸ್ವರ್ಗೀಯ ನಗರಿಯ ಪ್ರಗತಿ ಮತ್ತು ಮಹಿಮೆಯೆಡೆಗೆ ಸಾಗುತ್ತದೆ.

# ಅಧ್ಯಾಯ II

## ಧರ್ಮಪ್ರಸಾರ ಕಾರ್ಯಕ್ರಮ

ಇನ್ನೂ ಕಾರ್ಯಗತವಾಗಬೇಕಾದ ಧರ್ಮಪ್ರಸಾರ ಕಾರ್ಯವು ಅಗಾಧವಾದುದು. ಇನ್ನು ಎರಡು ಲಕ್ಷ ಕೋಟಿ ಜನರು ಶುಭ ಸಂದೇಶವನ್ನು ಪೂರ್ಣ ಅಥವಾ ಭಾಗಶಃ ಕೇಳೇ ಇಲ್ಲ.

## ಕ್ರೈಸ್ತ ಸಾಕ್ಷ್ಯ :

ಪ್ರಭು ಕ್ರಿಸ್ತರು ತಮ್ಮ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರಕ್ಕೆ ಬದ್ಧರಾಗಿ ಮಾನವ ಜನ್ಮ ತಳೆದರು. ಅಂತೆಯೇ ಧರ್ಮಸಭೆಯು ಪ್ರತಿ ಜನಸಮೂಹದ ಮಧ್ಯೆ ಜೀವಿಸುವ ಅಥವಾ ಜೀವಿಸಲು ದೇವರು ಕಳುಹಿಸಿದ ತನ್ನ ಮಕ್ಕಳ ಮುಖಾಂತರ ಸಜೀವವಾಗಿರಬೇಕು. ದೀಕ್ಷಾಸ್ನಾನದ ಮುಖಾಂತರ ನವಜನ್ಮ ಪಡೆದು ಪವಿತ್ರಾತ್ಮರಿಂದ ದೃಢೀಕರಣವನ್ನು ಸ್ವೀಕರಿಸಿದ ಪ್ರತಿಯೊಬ್ಬ ಕ್ರೈಸ್ತನು ತಾನು ಜೀವಿಸುವ ಜನ ಗುಂಪಿನ ಮಧ್ಯೆ ಪ್ರಭು ಕ್ರಿಸ್ತರಿಗೆ ಸಾಕ್ಷಿಯಾಗಿರಬೇಕು. ಅಂತಹ ವ್ಯಕ್ತಿ ತನ್ನ ತನ್ನ ಪರಿಸರದಲ್ಲಿ ಆಸಕ್ತಿ ವಹಿಸುತ್ತಾನೆ. ಅವನು ತನ್ನ ಸಂಸ್ಕೃತಿಯಲ್ಲಿ ಉಚಿತವೂ, ಸುಂದರವೂ ಆದುದನ್ನು ಮಾತ್ರವಲ್ಲ ತನ್ನ ನೆರೆಯವನ ಧರ್ಮದಲ್ಲಿರುವ ಸತ್ಯತೆಯನ್ನು ಮಾನ್ಯ ಮಾಡುತ್ತಾನೆ. ಅದೇ ಸಂದರ್ಭದಲ್ಲಿ ಅವನು ಪ್ರಭು ಕ್ರಿಸ್ತರಿಗೆ ಸಾಕ್ಷಿಯಾಗಿ ಜೀವಿಸುತ್ತಾ ತಾನಿರುವ ಜನ ಗುಂಪಿನಲ್ಲಿ ಆಗುತ್ತಿರುವ ಆಳವಾದ ಬದಲಾವಣೆಯನ್ನು ಗಮನಕ್ಕೆ ತಂದುಕೊಳ್ಳಬೇಕು. ಅವನು ತನ್ನ ಆದರ್ಶ ಬಾಳಿನಿಂದಲೂ, ಸೋದರ ಸಂವಾದದಿಂದಲೂ ತನ್ನ ನೆರೆಹೊರೆಯವರು ಅಧಿಕ ಹುರುಪಿನಿಂದ ಸತ್ಯ ಮತ್ತು ದೈವಪ್ರೇರಿತ ಪ್ರೀತಿಯನ್ನು ಪ್ರಭು ಕ್ರಿಸ್ತರಂತೆ ಅಧಿಕವಾಗಿ ಅರಸುವಂತೆ ಮಾಡಬೇಕು. ದೇವರು ನಮ್ಮನ್ನು ಯಾವ ಪ್ರೀತಿಯಿಂದ ಪ್ರೀತಿಸುತ್ತಾರೋ ಮತ್ತು ನಾವು ಯಾವ ಪ್ರೀತಿಯಿಂದ ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಆಜ್ಞಾಪಿಸಿದ್ದಾರೋ ಆ ಪ್ರೀತಿ ಕ್ರೈಸ್ತೇತರ ಸಮುದಾಯಗಳ ಮಧ್ಯೆ ಜೀವಿಸುತ್ತಿರುವ ಕ್ರೈಸ್ತರಲ್ಲಿರಬೇಕು. ಈ ಕ್ರೈಸ್ತ ಪ್ರೀತಿ ಯಾವ ದೇಶ, ಸಾಮಾಜಿಕ ಸನ್ನಿವೇಶ ಅಥವಾ ಧರ್ಮದ ತಾರತಮ್ಯವಿಲ್ಲದೆ ಸರ್ವರನ್ನು ಒಳಗೊಳ್ಳುತ್ತದೆ. ಅದು ಯಾವ ಸಂಭಾವನೆ ಅಥವಾ ಕೃತಜ್ಞತೆಯನ್ನು ನಿರೀಕ್ಷಿಸದೆ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗಾಗಿ ಎಲ್ಲರೊಡನೆ ಸಹಕರಿಸುತ್ತದೆ. ಅದು ಮಕ್ಕಳ ಮತ್ತು ಯುವಜನರ ಶಿಕ್ಷಣಕ್ಕೆ ವಿಶೇಷ ಗಮನ ಹರಿಸುತ್ತದೆ. ಅದು ಹಸಿವು, ಅಜ್ಞಾನ, ರೋಗ ರುಜಿನದ ವಿರುದ್ಧ ಹೋರಾಡಲು ನೆರವು ನೀಡುತ್ತದೆ. ಅದು ಬಡ ಬಗ್ಗರ ಮತ್ತು ಸಂಕಟಕ್ಕೊಳಗಾದವರ ಬಗ್ಗೆ ವಿಶೇಷ ಅಕ್ಕರೆಯನ್ನು ತೋರುತ್ತದೆ. ಪ್ರಭು ಕ್ರಿಸ್ತರ ಶಿಷ್ಯರು ಇತರರ ಜೀವನ ಮತ್ತು ದುಡಿಮೆಯಲ್ಲಿ ಸಹಕಾರಿಯಾಗಿರುತ್ತಾರೆ ಮತ್ತು ಪ್ರಭುವಿಗೆ ಸಾಕ್ಷಿಯಾಗಿರುತ್ತಾರೆ. ಅವರು ಪ್ರಭುವಿನ ಸಂದೇಶವನ್ನು ಬಹಿರಂಗವಾಗಿ ಸಾರದೆ ಇದ್ದರೂ ಅವರ ರಕ್ಷಣೆಗಾಗಿ ದುಡಿಯುತ್ತಾರೆ. ಅವರು ಮಾನವನ ಆರ್ಥಿಕ ಪ್ರಗತಿ ಮತ್ತು ಸಮೃದ್ಧಿಗಾಗಿ ಮಾತ್ರ ಶ್ರಮಿಸದೆ ಪ್ರಭು ಕ್ರಿಸ್ತರು ಬೋಧಿಸಿದ ಧಾರ್ಮಿಕ ಮತ್ತು ನೈತಿಕ ಸತ್ಯಗಳನ್ನು ತಿಳಿಯಪಡಿಸುತ್ತಾರೆ. ಅವರ ಮಾನವ ಘನತೆ ಮತ್ತು

ಸೋದರ ಸಂಬಂಧವನ್ನು ಅಧಿಕರಿಸಲು ಪ್ರಯತ್ನಿಸುತ್ತಾರೆ. ಹೀಗೆ ಹಂತ ಹಂತವಾಗಿ ದೇವರಲ್ಲಿಗೆ ಅವರನ್ನು ಕೊಂಡೊಯ್ಯುವ ಮಾರ್ಗವನ್ನು ವಿಸ್ತರಿಸಿ ದೈವ ಮತ್ತು ಪರಪ್ರೀತಿಯಿಂದ ಅವರ ರಕ್ಷಣೆಯನ್ನು ಅರಸುತ್ತಾರೆ.

## ಶುಭ ಸಂದೇಶ ಪ್ರಸಾರ ಮತ್ತು ದೈವಪ್ರಜೆಯ ಒಕ್ಕೂಟ

ಪವಿತ್ರಾತ್ಮರು ಕ್ರೈಸ್ತೇತರರ ಹೃದಯಗಳನ್ನು ತೆರೆಯಲು ಅವರು ಸ್ವೇಚ್ಛೆಯಿಂದ "ಮಾರ್ಗವೂ, ಸತ್ಯವೂ, ಜೀವವೂ" ಆದ ಪ್ರಭುವಿಗೆ ಅಭಿಮುಖರಾಗುವರು. ಏಕೆಂದರೆ ಪ್ರಭು ಅವರ ಆಧ್ಯಾತ್ಮಿಕ ನಿರೀಕ್ಷೆಗಳನ್ನು ಈಡೇರಿಸುವರು, ಮಾತ್ರವಲ್ಲ ಅವುಗಳನ್ನು ಅನಂತಕ್ಕೂ ಸಂಪೂರ್ಣಗೊಳಿಸುವರು. ಹೊಸದಾಗಿ ಮನಪರಿವರ್ತಿತನಾದ ವ್ಯಕ್ತಿ ವರಪ್ರಸಾದದ ನೆರವಿನಿಂದ ತನ್ನ ಆಧ್ಯಾತ್ಮಿಕ ಪಯಣವನ್ನು ಪಾಪಕ್ಕೆ ವಿಮುಖನಾಗಿ ಕೈಗೊಳ್ಳುತ್ತಾನೆ. ಅವನು ದೈವ ಪ್ರೀತಿಯ ರಹಸ್ಯದೊಡನೆ ನಿಕಟವಾಗಿ ದೇವರೊಡನೆ ಮತ್ತು ಪ್ರಭು ಕ್ರಿಸ್ತರೊಡನೆ ವೈಯಕ್ತಿಕ ಸಂಬಂಧವನ್ನು ಬೆಳೆಸಿಕೊಳ್ಳುತ್ತಾನೆ., ಈ ಮಾರ್ಪಾಟು ಅವನಲ್ಲಿ ಹಂತ ಹಂತವಾಗಿ ಹೃದಯ ಪರಿವರ್ತನೆಯನ್ನು ನೈತಿಕ ಬದಲಾವಣೆಯನ್ನು ತರುತ್ತದೆ. ಇದರ ದೆಸೆಯಿಂದ ವ್ಯಕ್ತಿಯಲ್ಲಿ ಬಿಕ್ಕಟ್ಟು ಭಿನ್ನತೆ ತಂದರೂ ನಿರೀಕ್ಷೆ ಮೀರುವ ದೈವದತ್ತ ಆನಂದ ಅವನಲ್ಲಿ ನೆಲೆಸುತ್ತದೆ. ಧರ್ಮಸಭೆ ಬಲಾತ್ಕಾರದ ಮತ ಪರಿವರ್ತನೆಯನ್ನು ಖಡಾಖಂಡಿತವಾಗಿ ನಿಷೇಧಿಸುತ್ತದೆ. ಅಂತೆಯೇ ಸ್ವಂತ ಇಚ್ಛೆಯಿಂದ ಧರ್ಮವನ್ನು ಅಪ್ಪುವವರನ್ನು ಪೀಡಿಸಿ ಆತಂಕಕ್ಕೆ ಒಳಪಡಿಸಬಾರದೆಂದು ಒತ್ತಿ ಹೇಳುತ್ತದೆ.

ಕ್ರೈಸ್ತ ದೀಕ್ಷಾಸ್ನಾನದ ವಿಧಿಗಳಲ್ಲಿ ಇಡಿ ಕ್ರೈಸ್ತ ಸಮುದಾಯ ಅಂದರೆ ಯಾಜಕರು, ಉಪದೇಶಿಗಳು, ಜನರು ಮತ್ತು ಪ್ರತ್ಯೇಕವಾಗಿ ಧರ್ಮಪೋಷಕರು ಭಾಗಿಗಳಾಗಬೇಕು. ದೀಕ್ಷಾ ಅಭ್ಯರ್ಥಿ ನೈಜ್ಯ ಕ್ರೈಸ್ತ ಜೀವನವನ್ನು ಬಾಳುವಂತೆ ತರಬೇತಿ ನೀಡಬೇಕು. ಯೇಸುಸ್ವಾಮಿಯ ಪುನರುತ್ಥಾನದ ರಹಸ್ಯವನ್ನು ಯೋಗ್ಯ ರೀತಿಯಲ್ಲಿ ದೀಕ್ಷಾ ಅಭ್ಯರ್ಥಿಗಳು ಆಚರಿಸುವಂತೆ ಅವರನ್ನು ಸಿದ್ಧಗೊಳಿಸಲು ತಪಸ್ಸು ಮತ್ತು ಪಾಸ್ಕಕಾಲದ ವಿಧಿಗಳನ್ನು ಪುನರಾಚರಣೆಗೆ ತರಬೇಕು. ಈ ಸಾಂಭ್ರಮಿಕ ರಹಸ್ಯದ ಆಚರಣೆಯ ಸಂದರ್ಭದಲ್ಲಿ ಅಭ್ಯರ್ಥಿಗಳು ದೀಕ್ಷಾಸ್ನಾನದಿಂದ ಪ್ರಭು ಕ್ರಿಸ್ತರಲ್ಲಿ ಪುನಃ ಜನಿಸಬೇಕು. ಈ ದೀಕ್ಷಾ ಅಭ್ಯರ್ಥಿಗಳು ಪ್ರಾರಂಭದಿಂದಲೇ ತಾವು ದೈವ ಪ್ರಜೆಗೆ ಸೇರಿದವರು ಎಂಬ ಭಾವನೆ ಬೆಳೆಯುವಂತೆ ಮಾಡಬೇಕು. ಧರ್ಮಸಭೆಯ ಜೀವನ ಪ್ರೇಷಿತ ಜೀವನ. ಈ ಅಭ್ಯರ್ಥಿಗಳು ತಮ್ಮ ಆದರ್ಶ ಮತ್ತು ಕ್ರಿಯಾತ್ಮಕ ಸಹಕಾರದಿಂದ ಶುಭ ಸಂದೇಶ ಪ್ರಸಾರ ಮತ್ತು ಧರ್ಮಸಭೆಯನ್ನು ಕಟ್ಟುವ ಕಾರ್ಯಕರ್ತರಾಗುತ್ತಾರೆ.

## ಕ್ರೈಸ್ತ ಸಮುದಾಯದ ರಚನೆ :

ಪ್ರಭು ಕ್ರಿಸ್ತರಲ್ಲಿ ವಿಶ್ವಾಸವಿಡುವವರಿಗೆ ಪವಿತ್ರಾತ್ಮರು ದೀಕ್ಷಾಸ್ನಾನದ ತೊಟ್ಟಿಯನ್ನು ನವಜನ್ಮವನ್ನು ಕೊಡುತ್ತಾರೆ. ಅವರನ್ನು ದೇವರು ಆಯ್ದುಕೊಂಡ ಜನಾಂಗ, ರಾಜಯಾಜರಕು, ಪವಿತ್ರ ಪ್ರಜೆಯನ್ನಾಗಿ ಸಂಘಟಿಸುತ್ತಾರೆ (1 ಪೇತ್ರ 2:9). ಸುವಾರ್ತಾ ಪ್ರಸಾರಕರು ದೇವರ ಸಹಾಯಕ ವಿಶ್ವಾಸಿಗಳ ಸಮುದಾಯಗಳನ್ನು ಸ್ಥಾಪಿಸಬೇಕು. ಅವರು ತಮ್ಮ ಕರೆಗೆ ತಕ್ಕಂತೆ ಯೋಗ್ಯರಾಗಿ ನಡೆದುಕೊಳ್ಳಬೇಕು. ನವಕೈಸ್ತರು ಬೇರ್ಪಟ್ಟ ಕ್ರೈಸ್ತ ಪಂಗಡಗಳನ್ನೂ ಗೌರವಿಸಬೇಕು.



ಅವರು ನಿರ್ಲಿಪ್ತತೆ, ಗೊಂದಲ ಮತ್ತು ನಿರರ್ಥಕ ಸ್ಪರ್ಧೆಗಳನ್ನು ತೊರೆಯಬೇಕು. ಧಾರ್ಮಿಕ ಪರಿಸರ ಪೋಷಕವಾಗಿದ್ದಲ್ಲಿ ಅವರ ಸಾಮಾನ್ಯ ಬೋಧಕರಾದ ಪ್ರಭು ಕ್ರಿಸ್ತರಿಗಾಗಿ ಬೇರ್ಪಟ್ಟ ಸಹೋದರರೊಂದಿಗೆ ಸಹಕರಿಸಬೇಕು.

ದೀಕ್ಷಾಸ್ನಾನದಿಂದ ಪ್ರಭು ಕ್ರಿಸ್ತರ ಆತ್ಮಿಕ ಶರೀರದೊಂದಿಗೆ ಒಂದಾದ, ಪ್ರಪಂಚದಲ್ಲಿ ಶ್ರೀಸಾಮಾನ್ಯರಾಗಿ ಜೀವಿಸುತ್ತಿರುವ ಕ್ರೈಸ್ತ ವಿಶ್ವಾಸಿಗಳಿಗೆ ಪ್ರಾಮುಖ್ಯತೆಯನ್ನು ವಿಶೇಷ ಗಮನವನ್ನು ಕೊಡಬೇಕು. ಪ್ರಭು ಕ್ರಿಸ್ತರ ಆತ್ಮದಿಂದ ಭೂಷಿತರಾದ ಇವರಿಗಿರುವ ವಿಶೇಷ ಪಾತ್ರ ಯಾವುದೆಂದರೆ: ಅವರು ಲೌಕಿಕ ವ್ಯವಹಾರಗಳನ್ನು ನಿರ್ವಹಿಸುತ್ತಿರುವಾಗ ಹುದುಗಿದ ಹಾಗೆ ಕ್ರಿಸ್ತರಾಗಿ ಪರಿವರ್ತಿತರಾಗಬೇಕು.

ಅವರ ಮಧ್ಯದಿಂದ ಕರೆ ಹೊಂದಿದ ಯಾಜಕರು, ಸೇವಾ ದರ್ಶಿಗಳು, ಧಾರ್ಮಿಕ ವ್ಯಕ್ತಿಗಳು ಪ್ರಭು ಕ್ರಿಸ್ತರ ಸಾಮ್ರಾಜ್ಯವನ್ನು ಮಾನವರ ಹೃದಯಗಳಲ್ಲಿ ಸ್ಥಾಪಿಸಿ ಅದನ್ನು ದೃಢಪಡಿಸುವಲ್ಲಿ ನೆರವಾಗುತ್ತಾರೆ. ವಿವಿಧ ಸಮುದಾಯಗಳು ತಮ್ಮ ಸ್ವಕೀಯ ಯಾಜಕರನ್ನು ಹೊಂದಿರುವಾಗ ಮಾತ್ರ ಅಲ್ಲಿ ಧರ್ಮಸಭೆ ಆಳವಾಗಿ ಬೇರೂರಿದೆ ಎನ್ನಬಹುದು.

ಕ್ರೈಸ್ತೇತರರ ಮಧ್ಯೆ ಧರ್ಮಪ್ರಸಾರಕ್ಕೆ ಅಧಿಕ ನೆರವನ್ನೀಯುವ ಉಪದೇಶಿಗಳು ಸ್ತುತ್ಯಾರ್ಹರು. ಅವರ ಪ್ರಯತ್ನ ಶ್ಲಾಘನೀಯ. ಶುಭ ಸಂದೇಶವನ್ನು ಅಷ್ಟೊಂದು ಜನರಿಗೆ ಸಾರಲು ಇರುವ ಯಾಜಕರ ಸಂಖ್ಯೆ ಅಲ್ಪವಾದುದರಿಂದ ಉಪದೇಶಿಗಳ ಸೇವೆ ಪ್ರಮುಖವಾದುದು. ಅವರು ಗುರುಗಳ ಸಬಲ ಸಹಾಯಕರಾಗಬೇಕಾದರೆ ಧರ್ಮಕ್ಷೇತ್ರ ಅಥವಾ ಧರ್ಮಪ್ರಾಂತ್ಯ ಮಟ್ಟದ ಸಂಸ್ಥೆಗಳಲ್ಲಿ ತರಬೇತಿಯನ್ನು ಪಡೆಯಬೇಕು. ಇವರು ಜನರ ಮಧ್ಯೆ ಅಧಿಕ ಅಧಿಕಾರದಿಂದ ಸೇವೆ ಸಲ್ಲಿಸಲು ಸಾಧ್ಯವಾಗುವಂತೆ ದೈವಾರಾಧನಾ ವಿಧಿಯ ಸಂದರ್ಭದಲ್ಲಿ ಅಧಿಕೃತ ನಿಯಮ ಬದ್ಧ ಸುವಾರ್ತಾ ನಿಯೋಗವನ್ನು ಬಹಿರಂಗವಾಗಿ ಕೊಡಬಹುದು.

ಧಾರ್ಮಿಕ ಜೀವನ ಅಧಿಕ ರಹಸ್ಯಮಯ ಸಂಪತ್ತನ್ನು ಹೊಂದಿದೆ. ಆದುದರಿಂದ ಅದನ್ನು ಪ್ರತಿ ಧರ್ಮಸಭೆಯಲ್ಲೂ ವಿಶೇಷವಾಗಿ ಅನುಬಾವಿ ಜೀವನ ಪ್ರಭುಕ್ರಿಸ್ತರ ಪರಿಪೂರ್ಣತೆಯ ಭಾಗವೆಂದು ಪ್ರೋತ್ಸಾಹಿಸಿ ಬೆಳೆಸಬೇಕು.

# ಅಧ್ಯಾಯ III

## ಪ್ರತ್ಯೇಕ ಕ್ರೈಸ್ತ ಸಭೆಗಳು

ಕ್ರೈಸ್ತ ಸಭೆಯು ಒಂದು ಪ್ರತ್ಯೇಕ ಸ್ಥಳ ಅಥವಾ ಗುಂಪಿನಲ್ಲಿ ಸ್ಥಾಪಿತವಾಗಿದೆ ಎಂದು ಹೇಳಬೇಕಾದರೆ ಅದು ಅಲ್ಲಿಯ ಸಾಮಾಜಿಕ ಜೀವನದಲ್ಲಿ ಬೇರೂರಿರಬೇಕು. ಅದು ಅಲ್ಲಿನ ಸಂಸ್ಕೃತಿಗೆ ಹೊಂದಿಕೊಂಡಿರಬೇಕು. ಅದು ಒಂದು ವಿಧವಾದ ಸ್ಥಿರತೆ ಮತ್ತು ಬಾಳಿಕೆಯನ್ನು ಬೆಳೆಸಿಕೊಳ್ಳಬೇಕು. ಅಂದರೆ ಅಲ್ಲಿ ಸ್ವಕೀಯ ಯಾಜಕರು, ಧಾರ್ಮಿಕ ವರ್ಗದವರು, ಮತ್ತು ಶ್ರೀ ಸಾಮಾನ್ಯರಿರಬೇಕು. ಅಗತ್ಯ ಸೇವೆ ನೀಡುವ ಸಂಘ ಸಂಸ್ಥೆಗಳು ಅಲ್ಲಿರಬೇಕು. ಅದು ತಮ್ಮದೇ ಧರ್ಮಾಧ್ಯಕ್ಷರ ನೇತೃತ್ವದಲ್ಲಿ ಪಸರಿಸುತ್ತಾ ಇರಬೇಕು. ಆಗ ತಾನೇ ಆ ಸಮುದಾಯದಲ್ಲಿ

ಧರ್ಮಸಭೆಯ ಸ್ಥಾಪನೆ ಒಂದು ನಿರ್ದಿಷ್ಟ ಘಟ್ಟವನ್ನು ತಲುಪಿದೆ ಎಂದು ಹೇಳಬಹುದು. ಇಂಥಹ ಸಭೆ ವಿಶ್ವಾಸ, ಪ್ರೀತಿ ಮತ್ತು ಆರಾಧನಾ ವಿಧಿಯಿಂದ ಸಚೇತನ ಸಭಾಸ್ಥಾನವನ್ನು ಪಡೆಯುತ್ತದೆ.

ಶ್ರೀ ಸಾಮಾನ್ಯರ ಕ್ರಿಯಾತ್ಮಕ ಪ್ರತ್ಯಕ್ಷತೆಯ ವಿನ: ಶುಭ ಸಂದೇಶ ಜನರ ತನು, ಮನ ಜೀವನ ಮತ್ತು ಉದ್ಯೋಗದಲ್ಲಿ ಆಳವಾಗಿ ಪ್ರವೇಶಿಸಲಾರದು. ಅವರು ಕುಟುಂಬ ಜೀವನ, ಸಾಮಾಜಿಕ ಜೀವನ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಪ್ರಭು ಕ್ರಿಸ್ತರಿಗೆ ನಡೆಯಲ್ಲೂ ನುಡಿಯಲ್ಲೂ ಸಾಕ್ಷಿಗಳಾಗುವುದು ಅತ್ಯಗತ್ಯ. ಅವರು ನ್ಯಾಯ ನೀತಿ, ಸತ್ಯ ಮತ್ತು ಪಾವಿತ್ರತೆಯ ಮುಖಾಂತರ ತಾವು ದೈವರೂಪದಲ್ಲಿರುವ ಹೊಸ ಮನುಷ್ಯರು ಎಂದು ಸಾಕ್ಷಾತ್ಕರಿಸಬೇಕು. ಈ ಹೊಸತನವನ್ನು ಅವರು ಸಮಾಜದಲ್ಲೂ ನಾಡಿನ ಸಂಸ್ಕೃತಿಯಲ್ಲೂ ಪ್ರತಿಬಿಂಬಿಸಬೇಕು. ಅವರು ತಮ್ಮ ಒಡನಾಡಿಗಳೊಂದಿಗೆ ನೈಜ್ಯ ಪ್ರೀತಿ ಭಾವನೆಯನ್ನೂ ತೋರ್ಪಡಿಸಬೇಕು. ವಿಶ್ವಾಸದ ಬೀಜವನ್ನು ನೆರೆಹೊರೆಯವರಲ್ಲೂ, ಸಹೋದ್ಯೋಗಿಗಳಲ್ಲೂ ಬಿತ್ತ ಬೇಕು. ಶ್ರೀ ಸಾಮಾನ್ಯರು ಇಂತಹ ಸಂಪರ್ಕದಿಂದಲೇ ಅನೇಕ ಜನರು ಶುಭ ಸಂದೇಶವನ್ನು ಕೇಳಲೂ, ಪ್ರಭು ಕ್ರಿಸ್ತರನ್ನೂ ಅರಿತುಕೊಳ್ಳಲೂ ಶಕ್ತರಾಗುವರು.

ಎಲ್ಲಾ ದೇಶಗಳ ಐಶ್ವರ್ಯ ಪ್ರಭು ಕ್ರಿಸ್ತರಿಗೆ ಪಿತ್ರಾರ್ಜಿತ ಸೊತ್ತಾಗಿ ಕೊಡಲಾಗಿದೆ. ಈ ಐಸಿರಿ ಸಂಪ್ರದಾಯ, ಪರಂಪರೆ, ಸುಜ್ಞಾನ, ಆಯಾಯ ದೇಶದ ಕಲೆಯಲ್ಲಿ ಅಡಕವಾಗಿದೆ. ಯುವ ಧರ್ಮಸಭೆಗಳು ಪ್ರೇಷಿತರ ಆಸ್ತಿವಾರದ ಮೇಲೆ ಕಟ್ಟಲಾಗಿ ಪ್ರಭು ಕ್ರಿಸ್ತರಲ್ಲಿ ಬೇರೂರಿವೆ. ಈ ನಿಧಿಯನ್ನು ಅವರು ಅತ್ಯಾಶ್ಚರ್ಯಕರ ರೀತಿಯಲ್ಲಿ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಅಂತಿಮವಾಗಿ ಈ ಪ್ರತ್ಯೇಕ ಧರ್ಮಸಭೆಗಳು ತಮ್ಮ ಸ್ವಂತ ಸಂಪ್ರದಾಯಗಳಿಂದ ಭೂಷಿತರಾಗಿ ಧರ್ಮಸಭೆಯ ಅನ್ಯೋನ್ಯತೆಯಲ್ಲಿ ಪಾಲ್ಗೊಳ್ಳುತ್ತವೆ. ಇವರೆಲ್ಲರೂ ಸಂತ ಪೇತ್ರರ ಪೀಠಾಧಿಕಾರದಲ್ಲಿ ಅವರ ಅಧ್ಯಕ್ಷತೆಯಲ್ಲಿ ಏರ್ಪಡುವ ಪ್ರೀತಿಯ ಸಾರ್ವತ್ರಿಕ ಸಭೆಯಲ್ಲಿ ಒಂದಾಗುತ್ತಾರೆ.

# ಅಧ್ಯಾಯ IV

## ಧರ್ಮಪ್ರಸಾದಕರು ಮತ್ತು ವ್ಯವಸ್ಥಿತ ಸುವಾರ್ತಾ ಚಟುವಟಿಕೆಗಳು

ಧರ್ಮ ಪ್ರಸಾರ ಕಾರ್ಯವನ್ನು ಕೈಗೊಳ್ಳಲು ಪ್ರಭು ಕ್ರಿಸ್ತರನ್ನು ಸುವಾರ್ತಾ ಪ್ರಸಾರದಲ್ಲಿ ಹಿಂಬಾಲಿಸಲು ಪ್ರಭು ಕ್ರಿಸ್ತರಿಂದ ಕೆಲವರು ವಿಶೇಷ ಕರೆಯನ್ನೂ ಪಡೆಯಬಹುದು. ಪವಿತ್ರಾತ್ಮರ ಪ್ರೇರಣೆ ಮತ್ತು ಶಕ್ತಿಯಿಂದ, ವಿಶ್ವಾಸ ಮತ್ತು ವಿಧೇಯತೆಯಿಂದ ದೇವರ ಕರೆಯನ್ನು ವ್ಯಕ್ತಿಯು ಸಮರ್ಪಣಾ ಭಾವದಿಂದ ಅಂಗೀಕರಿಸಬೇಕು. ಪ್ರಭು ಕ್ರಿಸ್ತರ ರಾಯಭಾರಿಗಳಂತೆ ಧರ್ಮ ಪ್ರಸಾರಕರು ಬೋಧನೆಯನ್ನು ಆತ್ಮ ಸಂತೋಷದಿಂದ ಸಾರಬೇಕು. ನಮ್ಮ ಬೋಧಕರಂತೆ ಮುಗ್ಧರೂ ದೀನರೂ ಆಗಿದ್ದು, ಶಿಲುಬೆಯ ಅನರ್ಥತೆಯ ಬಗ್ಗೆ ನಾಚಿಕೆ ಪಡದೆ ನಮ್ಮ ಪ್ರಭುವನ್ನು ಹಿಂಬಾಲಿಸಬೇಕು. ಅವರು ಪ್ರಾರ್ಥನಾ ಶೀಲರೂ ಇಂದ್ರೀಯ ನಿಗ್ರಹಿಯೂ ಆಗಿರಬೇಕು. ಧರ್ಮಪ್ರಸಾರ ಕಾರ್ಯದಲ್ಲಿ ಬಂದೊದಗುವ ಕಷ್ಟ ತೊಂದರೆಗಳನ್ನು ಎದುರಿಸಲು



ಸನ್ನದ್ಧರಾಗಿರಬೇಕು. ಸ್ವಯಂ ಸಂತೋಷ ಮತ್ತು ಪರಸ್ಪರ ಪ್ರೀತಿಯೊಂದಿಗೆ ಸಹ ಪ್ರಸಾರಕರೊಂದಿಗೆ ತಮ್ಮನ್ನೇ ಸಮರ್ಪಿಸಿಕೊಳ್ಳುವಂತಿರಬೇಕು. ಆದಿ ಧರ್ಮಸಭೆಯ ಪ್ರೇಷಿತ ಸಮುದಾಯಗಳು ಒಂದೇ ಮನಸ್ಸು ಮತ್ತು ಒಂದೇ ಆತ್ಮವುಳ್ಳವರಾಗಿದ್ದರು. ಅವರಂತೆಯೇ ಇವರೂ ಇರಬೇಕು.

ಕ್ರೈಸ್ತ ಭಕ್ತರು ವಿವಿಧ ವರದಾನಗಳನ್ನೂ ಪಡೆದಿದ್ದಾರೆ. ಆದುದರಿಂದ ಪ್ರತಿಯೊಬ್ಬರೂ ತಮ್ಮ ಶಕ್ತಿ, ಪ್ರತಿಭೆ ಮತ್ತು ಕರ್ತವ್ಯಕ್ಕೆ ಅನುಗುಣವಾಗಿ ತಮ್ಮಿಂದಾದಷ್ಟು ಸಾಧಿಸಬೇಕು. ಬಿತ್ತುವವರು, ನೆಡುವವರು, ನೀರೆರೆಯುವವರು, ಕೊಯ್ಲು ಮಾಡುವವರು ಸಹಕಾರ ಭಾವ ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡಬೇಕು. "ಒಂದೇ ಗುರಿಯನ್ನು ಮುಂದಿಟ್ಟುಕೊಂಡು ಸ್ವೇಚ್ಛೆಯಿಂದ ಸಂಘಟಿಕರಾಗಿ ದುಡಿದರೆ" ಧರ್ಮಸಭೆಯ ಬೆಳವಣಿಗೆಗೆ ಅವರು ತಮ್ಮನ್ನೇ ವ್ಯಯಿಸಿದಂತಾಗುತ್ತದೆ.

# ಅಧ್ಯಾಯ V

## ಸಹಕಾರ

ಇಡೀ ಧರ್ಮಸಭೆ ಧರ್ಮಪ್ರಸಾರದ ಸಂಸ್ಥೆ, ಶುಭ ಸಂದೇಶವನ್ನು ಸಾರುವುದು ಜವಾಬ್ದಾರಿ ದೈವ ಪ್ರಜೆಯ ಮೂಲ ಭೂತ ಕರ್ತವ್ಯ. ಪ್ರತಿಯೊಬ್ಬರೂ ಆಂತರಿಕವಾಗಿ ನವೀಕೃತರಾಗಬೇಕು. ಆಗ ತಾನೇ ಅವರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳುತ್ತಾರೆ ಮತ್ತು ಶುಭಸಂದೇಶ ಸಾರುವ ಕಾರ್ಯದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ.

ಎಲ್ಲಾ ಕ್ರೈಸ್ತ ವಿಶ್ವಾಸಿಗಳು ಶುಭ ಸಂದೇಶವನ್ನು ಸಾರುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಈ ಕರ್ತವ್ಯವನ್ನು ಕಾರ್ಯರೂಪಕ್ಕೆ ತರಲು ಪ್ರಥಮತಃ ಮತ್ತು ಎಲ್ಲಕ್ಕೂ ಮಿಗಿಲಾಗಿ ಅವರು ಕ್ರೈಸ್ತ ಉತ್ಸಾಹ ಮತ್ತು ಪರಪ್ರೀತಿಯನ್ನು ಕ್ರೈಸ್ತತ್ವಕ್ಕೆ ಅನುಗುಣವಾಗಿ ಪ್ರದರ್ಶಿಸಬೇಕು. ಹೀಗಾದರೆ ಧರ್ಮಸಭೆಯು ಲೋಕಕ್ಕೆ ಬೆಳಕಾಗಿ ಭೂಮಿಗೆ ಉಪ್ಪಾಗಿ ಕಂಡುಬರುವುದು. ಆಧುನಿಕ ಸಾಮಾಜಿಕ ಮಾಧ್ಯಮಗಳ ಮುಖಾಂತರ ಶುಭ ಸಂದೇಶವನ್ನು ಸಾರಬೇಕು. ಕ್ರೈಸ್ತ ವಿಶ್ವಾಸಿಗಳು ಇತರ ಮಾನವರ ಅಪಾರ ಮತ್ತು ಗಾಢ ಕೊರತೆಗಳಿಗೆ ತಮ್ಮ ಹೃದಯವನ್ನು ತೆರೆದು ಅವನ್ನು ಪರಿಹರಿಸಲು ತಮ್ಮಿಂದಾದಷ್ಟು ಪ್ರಯತ್ನಿಸಬೇಕು.

ಎಲ್ಲಾ ಧರ್ಮಾಧ್ಯಕ್ಷರು ಕೇವಲ ತಮ್ಮ ಧರ್ಮಕ್ಷೇತ್ರಗಳಿಗಾಗಿ ಮಾತ್ರವಲ್ಲ ಇಡೀ ಭೂಲೋಕದ ರಕ್ಷಣೆಗಾಗಿ ಅಭಿಷೇಕಿಸಲ್ಪಟ್ಟಿದ್ದಾರೆ. ಆದುದರಿಂದ ಶುಭ ಸಂದೇಶವನ್ನು ಸಾರುವ ಕೆಲಸ ಸಫಲವಾಗಲು ಅನ್ಯೋನ್ಯ ಸಂಬಂಧ ಮತ್ತು ಸಹಕಾರ ಅತ್ಯಗತ್ಯ. ಪ್ರತಿಯೊಬ್ಬ ಧರ್ಮಾಧ್ಯಕ್ಷರು ತಮ್ಮ ಧರ್ಮಕ್ಷೇತ್ರದಲ್ಲಿ ಧರ್ಮಪ್ರಸಾರ ಪ್ರಯತ್ನಗಳನ್ನು ಪ್ರೋತ್ಸಾಹಿಸಿ, ಪೋಷಿಸಬೇಕು. ಅವರು ಪ್ರಾರ್ಥನೆ ಮತ್ತು ತಪಶ್ಚರ್ಯೆಯ ನೆರವನ್ನು ಪ್ರತ್ಯೇಕವಾಗಿ ರೋಗರುಜಿನದಿಂದ ಕಷ್ಟಪಡುತ್ತಿರುವವರಿಂದ ಪಡೆದುಕೊಳ್ಳಬೇಕು. ತಮ್ಮ ಸ್ವಂತ ಯಾಜಕ ವೃಂದದಿಂದ ಧರ್ಮಪ್ರಸಾರ ಕರೆಯೋಣಗಳನ್ನು ಪೋಷಿಸಬೇಕು. ವಿವಿಧ ಧಾರ್ಮಿಕ ಸಭೆಯ ಸದಸ್ಯರೂ ಈ ಕಾರ್ಯದಲ್ಲಿ ಭಾಗಿಯಾಗುವಂತೆ ಮಾಡಬೇಕು. ಜಗದ್ಗುರುಗಳ ಧರ್ಮಪ್ರಸಾರ ಸಭೆಗಳಂತಹ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಬೇಕು.

# XVI ಆಧುನಿಕ ಪ್ರಪಂಚದಲ್ಲಿ ಧರ್ಮಸಭೆ

## (ಪಾಲನಾ ಸಂವಿಧಾನ)

### ಪೀಠಿಕೆ

ಇಂದಿನ ಯುಗದ ಮಾನವನ, ಮುಖ್ಯವಾಗಿ ಬಡಬಗ್ಗರ, ಕಷ್ಟ ತೊಂದರೆಗೊಳಗಾದವರ ಸುಖ ಸಂತೋಷ, ನಿರೀಕ್ಷೆ, ಕಷ್ಟ, ಸಂಕಟ ಆತಂಕಗಳು ಪ್ರಭು ಕ್ರಿಸ್ತರ ಧರ್ಮಸಭೆಯ ಅನುಯಾಯಿಗಳ ಪಾಲೂ ಆಗಿದೆ. ಏಕೆಂದರೆ ಧರ್ಮಸಭೆಯು ಒಂದು ಮಾನವ ಸಮುದಾಯವಾಗಿದ್ದು ಅದರ ರಕ್ಷಣಾ ಸಂದೇಶ ಸರ್ವರಿಗೂ ಅನ್ವಯಿಸುತ್ತದೆ. ಧರ್ಮಸಭೆಯು ಮಾನವ ಜನಾಂಗದೊಂದಿಗೆ ಒಂದಾಗಿರುವುದರಿಂದ ಪ್ರಸ್ತುತ ಪ್ರಪಂಚದಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ವಿವರಿಸಲು ಕಾತುರವಾಗಿದೆ ಮತ್ತು ಈ ಲೋಕವನ್ನು ದೇವರ ಯೋಜನೆಗೆ ತಕ್ಕಂತೆ ರೂಪಿಸಲು ಹಾತೊರೆಯುತ್ತದೆ.

ಕಳೆದ ದಶಕಗಳಲ್ಲಿ ಬೆಳಕಿಗೆ ಬಂದ ಮಹಾ ಅನ್ವೇಷಣೆಗಳಿಂದ ಅನೇಕ ಜನರು ಸಂತುಷ್ಟರಾಗಿಲ್ಲ. ಇಂದಿನ ಪ್ರಪಂಚದ ಪ್ರಸ್ತುತ ಪರಿಸ್ಥಿತಿಯಿಂದ ಅವರು ಆತಂಕಕ್ಕೆ ಒಳಗಾಗಿದ್ದಾರೆ. ಮಾನವನು ಜೀವನದ ಅರ್ಥ ಮತ್ತು ಭವಿಷ್ಯದ ಬಗ್ಗೆ ಕಳವಳಗೊಂಡಿದ್ದಾನೆ. ಧರ್ಮಸಭೆ ಈ ಜನರೊಂದಿಗೆ ಸಹಮತವನ್ನು ವ್ಯಕ್ತಪಡಿಸುತ್ತದೆ. ಅದು ದೈವಿಕ ಶ್ರುತಿಯಿಂದ ಪ್ರೇರಣೆ ಪಡೆದು ಪವಿತ್ರಾತ್ಮರ ಮಾರ್ಗ ಸೂಚಿಯಂತೆ ಈ ಸಮಸ್ಯೆಗಳ ಬಗ್ಗೆ ಧೀರ್ಘ ಆಲೋಚನೆ ಮಾಡಿ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸುತ್ತಿದೆ. ಹೀಗೆ ಧರ್ಮಸಭೆ ಎಲ್ಲಾ ಜನರ ಮಧ್ಯೆ ಸೋದರತ್ವವನ್ನು ಸ್ಥಾಪಿಸುತ್ತಾ ಸತ್ಯಕ್ಕೆ ಸಾಕ್ಷಿ ನೀಡಿ ಮಾನವನನ್ನು ರಕ್ಷಿಸಲು ಬಂದ ಪ್ರಭು ಕ್ರಿಸ್ತರ ಕಾರ್ಯವನ್ನು ಮುಂದುವರಿಸುತ್ತದೆ.

### ಪ್ರಾರಂಭಿಕ ಹೇಳಿಕೆ

### ಅಧುನಿಕ ಪ್ರಪಂಚದಲ್ಲಿ ಮಾನವನ ಪರಿಸ್ಥಿತಿ

ಪ್ರಭು ಕ್ರಿಸ್ತರ ಕಾರ್ಯವನ್ನು ಧರ್ಮಸಭೆಯು ಈಡೇರಿಸಬೇಕಾದರೆ ತನ್ನನ್ನು ಕಳುಹಿಸಿದ ಜಗತ್ತನ್ನೂ ಜನರನ್ನು ಅದು ತಿಳಿದುಕೊಳ್ಳಬೇಕು. ಆದುದರಿಂದ ಈ ಶಾಸನ ಅಧುನಿಕ ಪ್ರಪಂಚದ ಪ್ರಮುಖ ಗುಣಲಕ್ಷಣಗಳನ್ನೂ ಗುರುತಿಸುತ್ತದೆ.

ಇತ್ತೀಚಿನ ತ್ವರಿತ ಬದಲಾವಣೆಗಳು ಇತಿಹಾಸದಲ್ಲಿ ಒಂದು ಹೊಸ ಘಟ್ಟವನ್ನು ನಿರ್ಮಿಸಿದೆ. ಜಡ ಪರಿಕಲ್ಪನೆಯ ಭೂಲೋಕ ಬದಲಾಗಿ ಕ್ರಿಯಾತ್ಮಕ ವಿಕಾಸಪರ ಭೂಲೋಕದ ಭಾವನೆ ಬಲಿಯುತ್ತಾ ಇದೆ. ಈ ಭಾವನೆ ಮಾನವನ ಚಿಂತನೆ ಮತ್ತು ವರ್ತನೆಯ ಮೇಲೆ ಅಗಾಧ ಪರಿಣಾಮವನ್ನು ಬೀರುತ್ತಾ ಅವನಲ್ಲಿ ಸಾಂಸ್ಕೃತಿಕ, ಸಾಮಾಜಿಕ ಮತ್ತು ಧಾರ್ಮಿಕ ಬದಲಾವಣೆಯನ್ನು ತಂದಿದೆ. ಈ ಬದಲಾವಣೆ ಹಲವರಲ್ಲಿ ಸಂದಿಗ್ಧತೆ ಮತ್ತು ಅನಿರ್ಧಿಷ್ಟತೆಗೆ ಕಾರಣವಾಗಿದೆ.

ಅಧುನಿಕ ಪ್ರಪಂಚದಲ್ಲಿ ಒಂದು ಕಡೆ ಅಪಾರ ಸಂಪತ್ತು, ಆರ್ಥಿಕ ಶಕ್ತಿ ಕೇಂದ್ರಿಕೃತವಾಗಿದೆ.



ಯಾಜಕರು ಸಹ ತಮ್ಮ ಜೀವನ ಧರ್ಮಪ್ರಸಾರ ಸೇವೆಗೆ ಮೀಸಲು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಪ್ರಭು ಕ್ರಿಸ್ತರನ್ನು ಭೂಲೋಕಕ್ಕೆಲ್ಲಾ ಸಾರಬೇಕು ಎಂಬುದನ್ನು ಪ್ರಬೋಧಿಸಿದರೆ ಸಾಲುವುದಿಲ್ಲ, ಅವರು ಯುವಜನರಲ್ಲಿ ಧರ್ಮಪ್ರಸಾರದ ಚೇತನವನ್ನು ತುಂಬಿಸಬೇಕು. ತಮ್ಮ ಮಕ್ಕಳಲ್ಲಿ ಧರ್ಮಪ್ರಸಾರ ಕರೆಯಿದ್ದರೆ ಅದೊಂದು ಸೌಭಾಗ್ಯ ಎಂಬುದನ್ನು ಕ್ರೈಸ್ತ ಕುಟುಂಬಗಳಿಗೆ ಮನವರಿಕೆ ಮಾಡಬೇಕು. ಉದಾರ ಮನಸ್ಸಿನಿಂದ ಅವರು ಧರ್ಮಪ್ರಸಾರ ಕಾರ್ಯಗಳಿಗೆ ದಾನ ಕೊಡುವಂತೆ, ಪ್ರಾರ್ಥನೆ ಮಾಡುವಂತೆ ತಿಳಿಸಬೇಕು.

ಧಾರ್ಮಿಕ ಸಭೆ ಸಂಸ್ಥೆಗಳಿಗೆ ಧರ್ಮಪ್ರಸಾರ ಕಾರ್ಯದಲ್ಲಿ ಪ್ರಮುಖ ಪಾತ್ರವಿದೆ. ಅನುಭಾವಿ, ಧ್ಯಾನಪರ ಸಭೆಗಳು ತಮ್ಮ ಪ್ರಾರ್ಥನೆ ಮತ್ತು ತಪಶ್ಚರ್ಯೆಯ ಮುಖಾಂತರ ಆತ್ಮಗಳ ಮನಪರಿವರ್ತನೆಗೆ ನೆರವಾಗಬಹುದು.

ಶುಭ ಸಂದೇಶವನ್ನು ಪ್ರಸಾರ ಮಾಡುವ ಕಾರ್ಯದಲ್ಲಿ ಶ್ರೀ ಸಾಮಾನ್ಯರು ಸಾಕ್ಷ್ಯ ಮತ್ತು ಸಜೀವ ಸಾಧನಗಳಾಗಿ ಸಹಕರಿಸಬೇಕು. ಅವರು ಧರ್ಮಪ್ರಸಾರದ ಬಗ್ಗೆ ಅರಿವು ಮತ್ತು ಪ್ರೀತಿಯುಳ್ಳವರಾಗಿ ಅದನ್ನು ಇತರರಲ್ಲೂ ಬೆಳೆಸುವಂತಾಗಬೇಕು. ದೈವ ಕರೆಗೆ ಅಗತ್ಯವಾದ ಪ್ರೋತ್ಸಾಹ ಮಾತ್ರವಲ್ಲ ಆರ್ಥಿಕ ನೆರವನ್ನೂ ನೀಡಬೇಕು. ಧರ್ಮಪ್ರಸಾರದ ಪ್ರದೇಶಗಳಲ್ಲಿ ಶ್ರೀಸಾಮಾನ್ಯರು ಪಾಠಶಾಲೆ ಮತ್ತು ವಿಶ್ವ ವಿದ್ಯಾಲಯಗಳಲ್ಲಿ ಉಪನ್ಯಾಸಕರಾಗಬೇಕು. ಅವರು ಲೌಕಿಕ ಮತ್ತು ಧಾರ್ಮಿಕ ವ್ಯವಹಾರಗಳಲ್ಲಿ ತಮ್ಮನ್ನೇ ತೊಡಗಿಸಿಕೊಳ್ಳಬೇಕು. ಶ್ರೀಸಾಮಾನ್ಯರಿಗೆ ಸಂಬಂಧಿತವಾದ ವಿವಿಧ ಪ್ರೇಷಿತತ್ವ ಶಾಖೆಗಳನ್ನು ಸ್ಥಾಪಿಸಬೇಕು. ಅಭಿವೃದ್ಧಿ ಹೊಂದುತ್ತಿರುವ ಹಿಂದುಳಿದ ದೇಶಗಳಿಗೆ ಆರ್ಥಿಕ ಮತ್ತು ಸಾಮಾಜಿಕ ಸಹಾಯವನ್ನು ನೀಡಬೇಕು. ಈ ಎಲ್ಲಾ ಅಗತ್ಯಗಳನ್ನು ಪೂರೈಸಲು ಶ್ರೀ ಸಾಮಾನ್ಯರು ತಾಂತ್ರಿಕ ಮತ್ತು ಆಧ್ಯಾತ್ಮಿಕ ತರಬೇತಿಯನ್ನು ಪಡೆಯಬೇಕು. ಅದನ್ನು ಪ್ರತ್ಯೇಕ ಸಂಸ್ಥೆಗಳಲ್ಲಿ ನೀಡಬೇಕು. ಹೀಗಾದರೆ ಮಾತ್ರ ಅವರ ಜೀವನ ಕ್ರೈಸ್ತರಿಗೆ ಸ್ಫೂರ್ತಿದಾಯವಾಗುತ್ತದೆ.

### ಸಮಾಪ್ತಿ

ಪ್ರೇಷಿತರ ರಾಣಿಯಾದ ಕನ್ಯಾಮರಿಯಮ್ಮನವರ ಮುಖಾಂತರ ದೇವರ ಸಾಮ್ರಾಜ್ಯ ಈ ಲೋಕದಲ್ಲಿ ಪಸರಿಸುವಂತೆ ಜಗದ್ಗುರು, ಶ್ರೇಣಿಯುತ ಅಧಿಕಾರ ವರ್ಗ ಮತ್ತು ಕ್ರೈಸ್ತ ಜನರೊಡನೆ ಪ್ರಾರ್ಥಿಸೋಣ. ದೇವರ ವರಪ್ರಸಾದದಿಂದ ಮಾತ್ರ ಮಾನವರ ಮನಸ್ಸನ್ನು ಬೆಳಗಿಸಲು ಮತ್ತು ಅವರ ಹೃದಯ ಪರಿವರ್ತನೆ ಸಾಧ್ಯ. ಯೇಸುಕ್ರಿಸ್ತರ ಮುಖ ಕಮಲದಲ್ಲಿ ಬೆಳಗುವ ದೈವ ಮಹಿಮೆಯು ತನ್ನ ಪ್ರಕಾಶವನ್ನು ಪವಿತ್ರಾತ್ಮರ ಮುಖಾಂತರ ಎಲ್ಲಾ ಜನರ ಮೇಲೆ ಬೀರಲಿ.

ಇನ್ನೊಂದೆಡೆ ಹಸಿವು, ಬಡತನ ಮತ್ತು ಅನಕ್ಷರತೆ ಅಗಾಧ ಜನಸ್ತೋಮವನ್ನು ಕಾಡುತ್ತಿದೆ.  ಒಂದುಕಡೆ ಸರ್ವ ಸ್ವಾತಂತ್ರ್ಯವಿದ್ದರೆ ಇನ್ನೊಂದೆಡೆ ಸಾಮಾಜಿಕ ಮತ್ತು ಮಾನಸಿಕ ಗುಲಾಮಗಿರಿ ತಂಡವಾಡುತ್ತಿದೆ. ಒಂದು ಮುಖದಲ್ಲಿ ವಿಶ್ವವ್ಯಾಪಿ ಸೋದರತ್ವ ಅಸ್ತಿತ್ವದಲ್ಲಿದ್ದರೆ ಇನ್ನೊಂದು ಮುಖದಲ್ಲಿ ಸಾಮಾಜಿಕ, ರಾಜಕೀಯ, ಜಾತೀಯ ಸಿದ್ಧಾಂತಗಳು, ಒಳಜಗಳ ಮತ್ತು ನಿರಂತರ ಯುದ್ಧದ ಭೀತಿಗೆ ಅವಕಾಶ ಮಾಡಿಕೊಟ್ಟಿದೆ. ವಿಕಾಸಗೊಳ್ಳುತ್ತಿರುವ ಮಾನವ ಸಾಮರ್ಥ್ಯ ಮತ್ತು ವಿಶ್ವದ ಮೇಲೆ ಅಧಿಪತ್ಯ ಮಾನವ ಜನಾಂಗಕ್ಕೆ ಉಪಯುಕ್ತವಾಗಿದ್ದರೂ ಅದು ಅನೇಕ ಘನ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ.

ಈಗ ಅರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಅಧಿಕ ಮುಂದುವರೆದ ದೇಶಗಳಲ್ಲಿ ಮಾತ್ರವಲ್ಲ, ಹಿಂದುಳಿದ ರಾಷ್ಟ್ರಗಳಲ್ಲೂ ಅತ್ಯಧಿಕ ಸಾಮಾಜಿಕ ಪ್ರಭಾವ ಬೀರುತ್ತಿರುವುದು ಕುಟುಂಬ, ಹಳ್ಳಿ, ಬುಡಕಟ್ಟು ಮತ್ತು ಕುಲಗೋತ್ರವಲ್ಲ. ಈ ಪ್ರಭಾವಕ್ಕೆ ಕಾರಣ ಸಮಾಜದ ಕೈಗಾರಿಕಾ ಕೇಂದ್ರವಾಗಿರುವ ಪಟ್ಟಣಗಳು. ಇಂದಿನ ಚಿಂತನೆ ಮತ್ತು ಭಾವನಾ ರೀತಿ ನೀತಿ ವಿಶ್ವವ್ಯಾಪಿಯಾಗುತ್ತಿದ್ದು ಈ ಬದಲಾವಣೆ ಎಲ್ಲರ ಮೇಲೆ ಪ್ರಮುಖವಾಗಿ  ಯುವ ಜನಾಂಗದ ಮೇಲೆ ಪ್ರಭಾವವನ್ನು ಬೀರುತ್ತಿದೆ. ಇದು ಜನರ ಧಾರ್ಮಿಕ ಮನೋದೃಷ್ಟಿಯನ್ನು ನಿಚ್ಚಳಗೊಳಿಸಿದ್ದರೂ ಹಲವಾರು ಜನರು ಧರ್ಮವನ್ನು ಬಿಟ್ಟು ದೇವರ ವಿನಃ ಜೀವನ ಸಾಗಿಸುತ್ತಿದ್ದಾರೆ.

ಸಮತೋಲನದ ಧೋರಣೆ ಕಷ್ಟಕರವಾದುದರಿಂದ ಮಾನವನು ಒಂದು ವಿಷಮ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾನೆ. ಒಂದು ಕಡೆ ಅವನು ವಾಸ್ತವತೆ ಮತ್ತು ಪರಿಣತೆಯಿಂದ ಆಕರ್ಷಿತನಾಗಿದ್ದರೆ ಮತ್ತೊಂದೆಡೆ ನೈತಿಕ ಮನಸ್ಸಾಕ್ಷಿ ಅವನನ್ನು ನಿಯಂತ್ರಿಸುತ್ತದೆ. ಸಮಾಜದ ಅಗತ್ಯಗಳು ಮತ್ತು ವೈಯಕ್ತಿಕ ಅನುಕೂಲತೆಗಳೂ ಅವನನ್ನು ಸೆಳೆಯುತ್ತವೆ. ಅವನು ಯಾವುದಾದರೂ ಒಂದು ವೃತ್ತಿಯಲ್ಲಿ ಪಾಂಡಿತ್ಯಗಳಿಸಲೇಬೇಕು, ಆದರೆ ಅವನು ಎಲ್ಲ ವಿಷಯಗಳ ಮೇಲೆ ಸಮಗ್ರ ದೃಷ್ಠಿಯನ್ನು ಬೀರಬೇಕಾಗಿದೆ. ಕುಟುಂಬ ಜೀವನವು ಅರ್ಥಿಕ ಮತ್ತು ಸಾಮಾಜಿಕ ಒತ್ತಡ, ಜನಾಂಗದಿಂದ ಜನಾಂಗಗಳ ನಡುವಿನ ಅಂತರ, ಸ್ತ್ರೀ ಪುರುಷರ ಸಂಬಂಧದ ಬಗ್ಗೆ ಹೊಸ ಪರಿಕಲ್ಪನೆ ಇವು ಮಾನವರನ್ನು ತಲ್ಲಣಗೊಳಿಸುತ್ತಿವೆ. ಕೆಲವು ದೇಶಗಳು ಅಗರ್ಭ ಶ್ರೀಮಂತವಾಗಿವೆ, ಆದರೆ ಇತರ ದೇಶಗಳು ಬಡತನದ ಬೇಗೆಯಲ್ಲಿವೆ. ಆದುದರಿಂದ ಅವುಗಳ ಮಧ್ಯೆ ಬಿಗು ವಾತಾವರಣವಿದೆ. ಹಲವರು ತಮ್ಮ ಸಿದ್ದಾಂತ ಮತ್ತು ಪ್ರಭಾವವನ್ನು ಇತರರ ಮೇಲೆ ಬೀರಲು ತವಕಪಡುವುದರಿಂದ ಪರಿಸ್ಥಿತಿ ಇನ್ನಷ್ಟು ಜಟಿಲವಾಗುತ್ತಿದೆ.

ಪರಿಸ್ಥಿತಿ ಹೀಗಿದ್ದರೂ ಎಲ್ಲರೂ ಸಾರ್ವಜನಿಕರ ಕಲ್ಯಾಣಕ್ಕಾಗಿ ಶ್ರಮಿಸಬೇಕು ಎಂಬ ಮನವರಿಕೆ ಎಲ್ಲರಿಗೂ ಆಗುತ್ತಿದೆ. ವಿಶ್ವವ್ಯಾಪಿ ಜವಾಬ್ದಾರಿಯ ಪ್ರಜ್ಞೆ ಮಾನವನಲ್ಲಿ ಮೂಡಿ ಬಂದಿದೆ. ಮಾನವನು ತನ್ನ ಬಗ್ಗೆ ಸಂಪೂರ್ಣ ಅರಿವನ್ನು ಪಡೆಯದೇ ಇದ್ದರೂ ಭವಿಷ್ಯವು ಅವನ ಕೈಯಲ್ಲಿದೆ. ಅವನು ತನ್ನ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಕೇಳುತ್ತಾ ಬಂದಿದ್ದಾನೆ. ಮಾನವ ಎಂದರೆ ಯಾರು? ದುಃಖ, ಕೆಡುಕು, ಮರಣ ಎಂದರೇನು?  ತಡೆ ರಹಿತವಾಗಿ ಸಾಗುತ್ತಿರುವ ಪ್ರಗತಿಯ ಅರ್ಥವೇನು? ಸಮಾಜಕ್ಕೆ ಅವನ ಮತ್ತು ಅವನಿಗೆ ಸಮಾಜ ಸಲ್ಲಿಸಬೇಕಾದ ಸಾಲ ಏನು? ಈ ಅರ್ಥಿಕ ಜೀವನದ ನಂತರ ಮುಂದೇನು?



ಈ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಮಾನವ ಜನಾಂಗಕ್ಕೆ ಕೊಟ್ಟು ಅದರ ಸೇವೆ ಮಾಡುವ ನಂಬಿಕೆ ಧರ್ಮಸಭೆಗಿದೆ. ಮಾನವ ಮತ್ತು ಮಾನವ ಇತಿಹಾಸದ ಬೀಗದ ಕೈ, ಮಾನವನ ಕೇಂದ್ರಬಿಂದು ಮತ್ತು ಅಂತಿಮ ಗುರಿಯಾದ ಪ್ರಭು ಕ್ರಿಸ್ತರು ಮಾತ್ರ ಸಮರ್ಪಕ ಉತ್ತರ ಕೊಡಬಲ್ಲರು ಎಂದು ಧರ್ಮಸಭೆ ನಂಬುತ್ತದೆ.  ಏಕೆಂದರೆ ಪ್ರಭು ಕ್ರಿಸ್ತರು ಅಗೋಚರ ದೇವರ ಪ್ರತಿರೂಪವು, ಸೃಷ್ಟಿಗೆಲ್ಲಾ ಜೇಷ್ಠಪುತ್ರರೂ ಆಗಿದ್ದಾರೆ. ಪಿತ ದೇವರು ತಮ್ಮ ಅಂತಿಮ ವಾರ್ತೆಯನ್ನು ಉಚ್ಚರಿಸಿರುವುದು ಅವರಲ್ಲೇ. ಇಡೀ ಲೋಕವನ್ನು ಅವರಲ್ಲಿ ಪ್ರೀತಿಯಿಂದ ಐಕ್ಯಗೊಳಿಸುವ ಅನಂತ ಯೋಜನೆಯನ್ನು ಶ್ರುತುಪಡಿಸಿರುವುದು ಅವರಲ್ಲೇ.

# ಭಾಗ I
# ಧರ್ಮಸಭೆ ಮತ್ತು ಮಾನವನ ಕರೆಯೋಣ
## ಅಧ್ಯಾಯ I
## ಮಾನವನ ವ್ಯಕ್ತಿತ್ವದ ಘನತೆ

### ಮಾನವನ ಮಹತ್ವ

ಭೂಲೋಕದ ಎಲ್ಲ ಸೃಷ್ಟಿಗಳಲ್ಲಿ ಮಾನವನೇ ಕೇಂದ್ರ ಬಿಂದುವೆಂದು ವಿಶ್ವಾಸಿಗಳೂ ಅವಿಶ್ವಾಸಿಗಳೂ ಅಂಗೀಕರಿಸುತ್ತಾರೆ. ಮಾನವ ಎಂದರೆ ಯಾರು?  ಎಂಬ ಪ್ರಶ್ನೆಗೆ ಉತ್ತರ ಕಂಡು ಹಿಡಿಯಲು ಈ ಲೋಕ ಕತ್ತಲೆಯಲ್ಲಿ ತಡಕಾಡುತ್ತಿದೆ. ಆದರೆ ಧರ್ಮಸಭೆ ಪವಿತ್ರ ಗ್ರಂಥದಿಂದ ಜ್ಞಾನೋದಯ ಪಡೆದು ದೃಢ ವಿಶ್ವಾಸ ಮತ್ತು ಮನವರಿಕೆಯಿಂದ ಬೋಧಿಸುವುದು ಏನೆಂದರೆ : ದೇವರು ಸೃಷ್ಟಿಸಿದೆಲ್ಲವೂ ಒಳ್ಳೆಯದು ; ಮಾನವನು ದೇವರ ಸ್ವರೂಪದಲ್ಲಿ ಸೃಷ್ಟಿಸಲಾಗಿದ್ದಾನೆ. ದೇವರು ಅವನನ್ನು ಸೃಷ್ಟಿಯ ಅಧಿಪತಿಯನ್ನಾಗಿ ನೇಮಕಮಾಡಿ ಇಡೀ ಸೃಷ್ಟಿಯನ್ನು ತನ್ನ ಅಧೀನ ಮಾಡಿ ದೈವ ಮಹಿಮೆಗಾಗಿ ಅದನ್ನು ಬಳಸುವಂತೆ ಆದೇಶಿಸಿದ್ದಾರೆ. ಅಂತಿಮವಾಗಿ ಮಾನವನು ಸಾಮಾಜಿಕ ಜೀವಿ, ಅವನು ತನ್ನಷ್ಟಕ್ಕೆ ಜೀವಿಸಿ ಅಭಿವೃದ್ಧಿ ಹೊಂದಲಾರ, ಅವನು ಸಹಮಾನವರೊಂದಿಗೆ ಮತ್ತು ಜಗತ್ತಿನೊಂದಿಗೆ ಸಹಕರಿಸಲೇಬೇಕು.

### ಮಾನವನ ದುರ್ಬಲತೆ

ಮಾನವನದು ಬಿರುಕುಬಿಟ್ಟ ವ್ಯಕ್ತಿತ್ವ. ಆದಿಯಿಂದ ಅವನು ದೇವರನ್ನು ವಿರೋಧಿಸುತ್ತಾ ಬಂದಿದ್ದಾನೆ. ಅವರನ್ನು ತನ್ನ ಸೃಷ್ಟಿಕರ್ತ ಮತ್ತು ಪ್ರಭುವೆಂದು ಅಂಗೀಕರಿಸಲು ನಿರಾಕರಿಸಿದ್ದಾನೆ. ತನ್ನ ಅಂತಿಮ ಗುರಿಯಾದ ದೇವರಿಗೂ, ನೆರೆಯವನಿಗೂ, ಎಲ್ಲಾ ಸೃಷ್ಟಿಗೂ ಇರುವ ಸಂಬಂಧವನ್ನು ಪಲ್ಲಟಗೊಳಿಸಿದ್ದಾನೆ. ದೈವೀಶ್ರುತಿ ಮತ್ತು ಅನುಭವ ತಿಳಿಸುವಂತೆ ಈ ಬಿರುಕು ಬಾಳಿನ ದೆಸೆಯಿಂದ ಅವನು ಪಾಪದ ದಾಸನಾಗಿದ್ದಾನೆ.  ಪ್ರಭು ಕ್ರಿಸ್ತರು ಮಾತ್ರ ಈ ಬಂಧನದಿಂದ  ಅವನನ್ನು ಬಿಡಿಸಲು ಶಕ್ತರು ; ಅವರು ಬಿಡುಗಡೆಯನ್ನೂ ಮಾಡಿದ್ದಾರೆ.

**ಮಾನವ ಶರೀರ :**

ಪಾಪದಿಂದ ಜರ್ಜರಿತಗೊಂಡ ಮಾನವ ಶರೀರದಲ್ಲಿ ಆಶಾಪಾಶಗಳು ಭುಗಿಲೇಳುತ್ತವೆ. ಆದರೂ ಅದನ್ನು ಅವನು ಗೌರವಿಸಬೇಕು. ಏಕೆಂದರೆ ಅದರ ಮುಖಾಂತರವೇ ಈ ಭೌತಿಕ ಪ್ರಪಂಚದ ಅಂಶಗಳನ್ನು ತನ್ನಲ್ಲಿ ಶೇಖರಿಸುತ್ತಾನೆ. ಅವನ ಮುಖಾಂತರವೇ ಈ ಅಂಶಗಳು ಉನ್ನತ ಹಂತವನ್ನು ತಲುಪಿ ಸೃಷ್ಟಿಕರ್ತ ದೇವರನ್ನು ಮುಕ್ತವಾಗಿ ಹರಸುತ್ತವೆ. ಆದರೆ ಮಾನವನು ತನ್ನ ದೈಹಿಕ ಅಗತ್ಯಗಳನ್ನು ಮಾತ್ರ ಗಮನಿಸಬೇಕೆಂದಲ್ಲ ಅವನು ಆಧ್ಯಾತ್ಮಿಕ ಜೀವಿಯೂ ಆಗಿರುವುದರಿಂದ ಎಲ್ಲಾ ಸೃಷ್ಟಿಗಳಿಗಿಂತ ಉನ್ನತನು ಆದುದರಿಂದ ಅವನು ದೇವರನ್ನೂ ಅವರ ಪ್ರೀತಿಯ ಯೋಜನೆಯನ್ನು ಅರಿತು ಅವರೊಡನೆ ಸಹಕರಿಸಲು ಶಕ್ತನು.

ತನ್ನ ಬುದ್ಧಿಶಕ್ತಿಯಿಂದ ಮಾನವನು ದೇವರ ಜ್ಞಾನ ಜ್ಯೋತಿಯಲ್ಲಿ ಭಾಗಿಯಾಗುತ್ತಾನೆ. ಆದರಿಂದ ಅವನು ಇಡೀ ಭೌತಿಕ ಪ್ರಪಂಚವನ್ನು ಸ್ವಾಧೀನಪಡಿಸಿಕೊಳ್ಳಲು ಶಕ್ತನು ಮಾತ್ರವಲ್ಲ ವಿಶ್ವದ ಗೂಢ ಸತ್ಯಗಳನ್ನು ಕಂಡುಕೊಳ್ಳಲೂ ಬಲ್ಲನು.

ತನ್ನ ಜ್ಞಾನದಿಂದ ಮಾನವನ ಬುದ್ಧಿಶಕ್ತಿ ಸತ್ಯವನ್ನು ಒಳಿತನ್ನು ಕಂಡುಕೊಂಡು ಅದನ್ನು ಪ್ರೀತಿಸುತ್ತದೆ. ನೈಜ್ಯಜ್ಞಾನ ಪವಿತ್ರಾತ್ಮರ ವರದಾನ. ಈ ಪ್ರಸ್ತುತ ಕಾಲದಲ್ಲಿ ಈ ಜ್ಞಾನದ ಅಗತ್ಯ ಬಹಳಷ್ಟಿದೆ. ಆದರಿಂದ ಇತ್ತೀಚೆಗೆ ಅನ್ವೇಷಣೆ ಮಾಡಿದವುಗಳನ್ನು ಮಾನವೀಕರಿಸಬೇಕಾಗಿದೆ. ಈ ದಿಸೆಯಲ್ಲಿ ಆರ್ಥಿಕ ವಸ್ತುಗಳಲ್ಲಿ ಹಿಂದುಳಿದ ಅನೇಕ ದೇಶಗಳು ಜ್ಞಾನದಲ್ಲಿ ಮುನ್ನಡೆ ಸಾಧಿಸಿವೆ. ಆದುದರಿಂದ ಅವು ಇತರ ರಾಷ್ಟ್ರಗಳಿಗೆ ಅಗತ್ಯ ನೆರವನ್ನು ನೀಡಬಲ್ಲವು. ಅಂತಿಮವಾಗಿ ಪವಿತ್ರಾತ್ಮರ ವರದಾನದಿಂದ ಮಾನವನು ದೈವಾನುಭವಿಯಾಗಿ ದೈವ ಯೋಜನೆಯ ಮಹತ್ವವನ್ನು ತಿಳಿಯಬಲ್ಲನು.

ಮನಸ್ಸಾಕ್ಷಿ ಒಳಿತನ್ನು ಪ್ರೀತಿಸಿ ಕೆಡುಕನ್ನು ತ್ಯಜಿಸಲು ತಿಳಿಸುತ್ತದೆ. ಅದು ಪ್ರತಿ ವ್ಯಕ್ತಿಯ ಹೃದಯದಲ್ಲಿ ದೇವರು ಬರೆದಿರುವ ನಿಯಮವನ್ನು ತಿಳಿಯಪಡಿಸುತ್ತದೆ. ಈ ನಿಯಮ ದೈವಪ್ರೀತಿ ಮತ್ತು ಪರಪ್ರೀತಿಯನ್ನು ಅನುಸರಿಸುವಂತೆ ಆದೇಶಿಸುತ್ತದೆ. ಅದು ಸತ್ಯವನ್ನು ವೈಯಕ್ತಿಕ ಮತ್ತು ಸಾಮಾಜಿಕ ಜೀವನದಲ್ಲಿ ನೈತಿಕ ನಿಯಮವನ್ನು ಅರಸುವ ಎಲ್ಲ ಮಾನವರೊಂದಿಗೆ ಕ್ರೈಸ್ತರನ್ನು ಒಂದುಗೂಡಿಸುತ್ತದೆ. ಪ್ರತಿಯೊಬ್ಬರಿಗೂ ತನ್ನ ಮನಸ್ಸಾಕ್ಷಿಯನ್ನು ಅನುಸರಿಸುವ ಹಕ್ಕು ಮತ್ತು ಕರ್ತವ್ಯವಿದೆ ಜೊತೆಗೆ ಸತ್ಯವನ್ನೂ, ಒಳಿತನ್ನೂ ಪ್ರಾಮಾಣಿಕವಾಗಿ ಕಂಡುಕೊಂಡು ನೇರ ಮನಸ್ಸಾಕ್ಷಿಯನ್ನು ರೂಪಿಸಿಕೊಳ್ಳುವ ಜವಾಬ್ದಾರಿಯಿದೆ.

ಇಂದು ಎಲ್ಲರೂ ಸ್ವಾತಂತ್ರ್ಯವನ್ನೂ ಅರಸುತ್ತಾರೆ, ಆದರೆ ಅದು ಕೆಟ್ಟದ್ದಾಗಿದ್ದರೂ ಸರಿ. ಮನಸಂತೋಷಕ್ಕಾಗಿ ಮಾಡುವುದು ಸ್ವಾತಂತ್ರ್ಯವಲ್ಲ. ನೈಜ್ಯ ಸ್ವಾತಂತ್ರ್ಯವೆಂದರೆ ಮನುಷ್ಯನು ಸ್ವಂತ ಚಿತ್ತದಿಂದ ಸೃಷ್ಟಿಕರ್ತನನ್ನು ಅರಸುವುದು. ಅವರಿಗೆ ನಿಷ್ಠಾವಂತನಾಗಿ ನಡೆಯುತ್ತಾ ತನ್ನ ಜೀವನದಲ್ಲಿ ಪರಿಪೂರ್ಣತೆಯನ್ನು ಸಾಧಿಸುವುದು. ಈ ಸ್ವಾತಂತ್ರ್ಯ ಪಾಪದಿಂದ ಶಿಥಿಲಗೊಂಡಿದೆ. ದೇವರ ಸಹಾಯದಿಂದ ಮಾತ್ರ ಅವನು ಒಳಿತನ್ನು ಅರಸಬಲ್ಲ ಮತ್ತು ಜೀವನದ ಅಂತ್ಯದಲ್ಲಿ ತನ್ನ ಜೀವನದ



ಬಗ್ಗೆ ಒಳ್ಳೆಯ ವರದಿಯನ್ನೂ ಸಲ್ಲಿಸಬಲ್ಲ. ಮಾನವ ಏನೇ ಸಾಧಿಸಿದರೂ, ಎಷ್ಟೇ ಪ್ರಗತಿ ಮಾಡಿದರೂ ಘೋರವಾಗಿರುವ ಮರಣದಿಂದ ಯಾರೂ ತಪ್ಪಿಸಿಕೊಳ್ಳುವಂತಿಲ್ಲ. ಮಾನವನಲ್ಲಿ ತಾನು ಅನಂತಕ್ಕೂ ಜೀವಿಸಬಲ್ಲ ಬೀಜವಿರುವುದರಿಂದ ಅವನನ್ನು ಬೂದಿಯಂತೆ ಭಸ್ಮ ಮಾಡಲಾಗದು. ಅವನು ದೈವಿಕ ಜೀವನದಲ್ಲಿ ಭಾಗಿಯಾಗಬೇಕು ಎಂದೇ ದೇವರು ಅವನನ್ನು ಸೃಷ್ಟಿಸಿದರು ಮತ್ತು ಈ ಆಶೆಯನ್ನು ಅವರು ಈಡೇರಿಸುವರು ಎಂದು ಧರ್ಮಸಭೆ ದೃಢವಾಗಿ ಬೋಧಿಸುತ್ತದೆ. ದೇವರ ಯೋಜನೆಯನ್ನು ತಡೆಗಟ್ಟಲು ಪಾಪದಿಂದಾಗಲಿಲ್ಲ. ಮರಣದಿಂದ ಪುನರುತ್ಥಾನರಾದ ಪ್ರಭುಕ್ರಿಸ್ತರು ಮಾನವನನ್ನು ಮರಣದಿಂದ ಮುಕ್ತಗೊಳಿಸಿದರು. ಆದುದರಿಂದ ಕ್ರೈಸ್ತರು ಭವಿಷ್ಯದ ಜೀವನದಲ್ಲಿ ಭರವಸೆಯಿಡಬಹುದು.

ಎಲ್ಲಾ ಮನುಷ್ಯರು ದೇವರೊಡನೆ ಅನ್ಯೋನ್ಯದಿಂದಿರಲು ಕರೆಯನ್ನು ಪಡೆದಿದ್ದಾರೆ. ಇದೇ ಮಾನವನ ಘನತೆಯ ಅಸ್ತಿವಾರ. ದೇವರ ಪ್ರೀತಿ ಮಾನವನಿಗೆ ಅಸ್ತಿತ್ವವನ್ನು ಕೊಟ್ಟು ಪರಿಪಾಲಿಸುತ್ತಿದೆ. ಆದುದರಿಂದ ಅವರೊಂದಿಗೆ ಸಜೀವ ಸಂಪರ್ಕವಿಟ್ಟುಕೊಳ್ಳುವುದು ಅಗತ್ಯ, ಆದರೆ ಈಗೀಗ ಅನೇಕ ಜನರು ಈ ಸಂಬಂಧವನ್ನು ಉಪೇಕ್ಷಿಸುತ್ತಾರೆ ಮತ್ತು ಸೃಷ್ಟಿಕರ್ತನನ್ನೇ ತಿರಸ್ಕರಿಸುತ್ತಾರೆ. ಕೆಲವರು ಅವರ ಅಸ್ತಿತ್ವವನ್ನೇ ಕಡೆಗಣಿಸುತ್ತಾರೆ. ಹೀಗೆ ಅವರು ಒಂದಲ್ಲ ಇನ್ನೊಂದು ವಿಧದ ನಿರೀಶ್ವರವಾದಿಗಳಾಗಿದ್ದಾರೆ. ಇಂದು ಇದೊಂದು ಗಂಭೀರ ಸಮಸ್ಯೆಯಾಗಿದೆ. ಇವರು ಮಾನವ ಸ್ವಾತಂತ್ರ್ಯಕ್ಕೆ ಮಿತಿಮೀರಿದ ಪ್ರಾಮುಖ್ಯತೆಯನ್ನು ಕೊಟ್ಟು ದೇವರ ಅಸ್ತಿತ್ವವನ್ನು ಮತ್ತು ಮರುಲೋಕ ಜೀವನವನ್ನು ವಾಸ್ತವವಾಗಿ ಮತ್ತು ತಾತ್ವಿಕವಾಗಿ ನಿರಾಕರಿಸುತ್ತಾರೆ. ಅವರ ಧೋರಣೆಯನ್ನು ಖಂಡಿಸಿ ಅದರ ಮೂಲ ಕಾರಣವನ್ನು ಕಂಡುಹಿಡಿದು ಪರಿಹಾರ ಕಂಡುಕೊಳ್ಳುವುದು ಭಕ್ತ ವಿಶ್ವಾಸಿಗಳ ಕರ್ತವ್ಯ.

ಈ ಬಗ್ಗೆ ಧರ್ಮಸಭೆಯ ಬೋಧನೆ ಇದು: ದೇವರ ಅಸ್ತಿತ್ವವನ್ನು ಅಂಗೀಕರಿಸುವುದರಿಂದ ಮಾನವ ಘನತೆಗೆ ಕುಂದಾಗುವುದಿಲ್ಲ, ಪ್ರತಿಯಾಗಿ ಅದನ್ನು ಅಧಿಕರಿಸುತ್ತದೆ. ಅಂತೆಯೇ ಭವಿಷ್ಯ ಜೀವನದಲ್ಲಿ ಭರವಸೆಯಿಡುವುದರಿಂದ ಪ್ರಪಂಚದ ಪ್ರಗತಿ ಕಾರ್ಯಕ್ಕೆ ಕುಂದಾಗುವುದಿಲ್ಲ, ಪ್ರತಿಯಾಗಿ ಅದಕ್ಕೆ ಹೊಸ ಚೇತನ ನೀಡುತ್ತದೆ.

ನಿರೀಶ್ವರವಾದಿಗಳಿಗೆ ಧರ್ಮಸಭೆಯ ಬೋಧನೆಯನ್ನು ಸಮರ್ಪಕವಾಗಿ ತಿಳಿಸುವುದು ಅಗತ್ಯ. ಅದಲ್ಲದೆ ಅದರ ಸದಸ್ಯರೆಲ್ಲರ ಸಮಗ್ರ ಜೀವನ ಮಾದರಿಯಾಗಿರಬೇಕು. ಹೀಗೆ ದೇವರ ಪ್ರೀತಿ ಪ್ರಪಂಚದಲ್ಲಿ ಎದ್ದು ಕಾಣಿಸಿಕೊಳ್ಳುವಂತಿರಬೇಕು. ಎಲ್ಲರೂ ಸಮಗ್ರ ಸತ್ಯ, ಪ್ರಾಮಾಣಿಕತೆ ನ್ಯಾಯನೀತಿ ಮತ್ತು ಸೋದರ ಪ್ರೀತಿಗೆ ಬದ್ಧರಾಗಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಈ ಪಾರದರ್ಶಕ ಉತ್ತರದಿಂದ ನಿರೀಶ್ವರವಾದಿಗಳು ಪ್ರಭುಕ್ರಿಸ್ತರ ಸಂದೇಶವನ್ನು ಮುಕ್ತ ಮನಸ್ಸಿನಿಂದ ಪರಿಶೋಧಿಸಲು ಅದು ಭರವಸೆ-ಬೆಳಕು, ಜೀವ-ಸ್ವಾತಂತ್ರ್ಯ ತರುತ್ತದೆ ಎಂಬುದನ್ನು ಅರಿತುಕೊಳ್ಳುವರು. ಧರ್ಮಸಭೆ ದೃಢವಾಗಿ ನಿರೀಶ್ವರವಾದವನ್ನೂ ತಿರಸ್ಕರಿಸುತ್ತದೆ, ಆದರೆ ನಾಸ್ತಿಕರನ್ನೂ ಪ್ರೀತಿಸುತ್ತದೆ.

ದೇವರ ಪ್ರೀತಿ ಪ್ರಭು ಕ್ರಿಸ್ತರಲ್ಲಿ ಗೋಚರವಾಗಿದೆ. ಪ್ರಭು ಕ್ರಿಸ್ತರನ್ನು ಕಂಡರಿಯದೆ ಇದ್ದರೆ ಮಾನವರನ್ನು ಅರ್ಥಮಾಡಿಕೊಳ್ಳಲು ನಮ್ಮಿಂದ ಸಾಧ್ಯವಾಗುವುದಿಲ್ಲ. ದೇವ ಸ್ವರೂಪಿಯಾದ ಪ್ರಭು ಕ್ರಿಸ್ತರು ದೇವರು ಮಾತ್ರವಲ್ಲ, ಸಂಪೂರ್ಣ ಮಾನವರೂ ಹೌದು. ಅವರಲ್ಲಿ ಮಾನವನು ತನ್ನನ್ನು ತನ್ನ ಉನ್ನತ ಕರೆಯೋಣವನ್ನು ಕಂಡುಕೊಳ್ಳುತ್ತಾನೆ. ಪ್ರಥಮ ಪಾಪದಿಂದ ವಿರೂಪವಾದ ಮಾನವನ ದೈವಿಕ ರೂಪವನ್ನು ಪ್ರಭು ಕ್ರಿಸ್ತರು ಮರುಕಳಿಸಿದರು. ಕನ್ಯಾ ಮರಿಯಮ್ಮನವರಲ್ಲಿ ಜನಿಸಿದ ಅವರು ನಿಜವಾಗಿ ನಮ್ಮಲ್ಲಿ ಒಬ್ಬರಾದರು. ಅವರು ಮಾನವ ಕೈಗಳಿಂದ ದುಡಿದರು, ಮಾನವರಂತೆ ಯೋಚಿಸಿದರು, ಮಾನವರಂತೆ ಆಯ್ಕೆಮಾಡಿದರು, ಮಾನವ ಹೃದಯದಿಂದ ಪ್ರೀತಿಸಿದರು.

ಪ್ರಭು ಕ್ರಿಸ್ತರು ಸ್ವಂತ ಚಿತ್ತದಿಂದ ತಮ್ಮ ಪ್ರಾಣಾರ್ಪಣೆ ಮಾಡಿ ನಮಗೆ ಜೀವವನ್ನು ಸಂಪಾದಿಸಿ ನಮ್ಮನ್ನು ತಂದೆ ದೇವರ ಮಕ್ಕಳೂ ತಮ್ಮ ಸೋದರರನ್ನಾಗಿಯೂ ಮಾಡಿದರು. ಅವರ ಪವಿತ್ರಾತ್ಮರು ನಮ್ಮಲ್ಲಿ ನೆಲೆಸಿ ಆಂತರಿಕವಾಗಿ ನಮ್ಮ ನವೀಕರಿಸಿ ಪ್ರೀತಿಯಿಂದ ನಾವು ನಡೆದುಕೊಳ್ಳುವಂತೆ ಮಾಡುತ್ತಾರೆ. ನಾವು ಈ ಭೂಲೋಕದಲ್ಲಿ ಹೋರಾಡಬೇಕಿದ್ದರೂ ಪುನರುತ್ಥಾನಿ ಪ್ರಭುವಿನೊಂದಿಗೆ ಇರುವ ನಮ್ಮ ಸಂಬಂಧ ನಾವು ಅವರ ಉತ್ಥಾನದಲ್ಲಿ ಅಧಿಕ ಅಧಿಕವಾಗಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಪ್ರಭು ಕ್ರಿಸ್ತರು ಎಲ್ಲರಿಗಾಗಿ ಪ್ರಾಣಾರ್ಪಣೆ ಮಾಡಿದ್ದರಿಂದ ಪವಿತ್ರಾತ್ಮರು ಎಲ್ಲಾ ಸುಮನಸ್ಕರಲ್ಲಿ ನೆಲೆಸುತ್ತಾರೆ. ಅವರು ದೇವರಿಗೆ ಮಾತ್ರ ತಿಳಿದಿರುವಂತೆ ಯೇಸುಕ್ರಿಸ್ತರೊಡನೆ ಮೃತರಾಗಿ ಪುನರುತ್ಥಾನವಾಗುವಂತೆ ಮಾಡುತ್ತಾರೆ.

ಕ್ರೈಸ್ತ ಶ್ರುತಿಯ ಬೆಳಕಿನಲ್ಲಿ ಕ್ರೈಸ್ತ ವಿಶ್ವಾಸಿ ಮಾನವನನ್ನು ಈ ರೀತಿ ಈಕ್ಷಿಸುತ್ತಾನೆ. ಪ್ರಭು ಕ್ರಿಸ್ತರು ಮರಣವನ್ನು ತಮ್ಮ ಮರಣದಿಂದ ಜಯಿಸಿ ಪುನರುತ್ಥಾನರಾದರು. ಅವರು ನಮ್ಮನ್ನು ಸಜೀವಗೊಳಿಸಿರುವುದರಿಂದ ದೇವ ಪುತ್ರನಲ್ಲಿ ನಾವು ದೇವರ ಮಕ್ಕಳಾಗಿ ಪವಿತ್ರಾತ್ಮರೊಡನೆ ದೇವರನ್ನು ''ಅಪ್ಪಾ, ತಂದೆಯೇ'' ಎಂದು ಕರೆಯಲು ಶಕ್ತರಾಗುತ್ತೇವೆ.

# ಅಧ್ಯಾಯ II

## ಮಾನವ ಸಮುದಾಯ

### ಪರಸ್ಪರ ಅವಲಂಭನೆ :

ಅಧುನಿಕ ತಾಂತ್ರಿಕ ಅನ್ವೇಷಣೆಗಳು ಜನರ ಮಧ್ಯೆ ಅಧಿಕಾಧಿಕ ಸಂಪರ್ಕಗಳನ್ನು ಏರ್ಪಡಿಸಿದೆ. ಆದರೆ ಜನರ ಮಧ್ಯೆ ಸೋದರ ಸಂವಾದ ತನ್ನ ಸಂಪೂರ್ಣತೆಯನ್ನು ತಲುಪುವುದು, ಈ ಸಂವಾದ ವೈಯಕ್ತಿಕ ಮಟ್ಟದಲ್ಲಿ ನಡೆದಾಗ ಮಾತ್ರ. ಈ ಪ್ರಕ್ರಿಯೆ ಯಶಸ್ವಿಯಾಗಬೇಕಾದರೆ ಮಾನವನಲ್ಲಿ ಅಧ್ಯಾತ್ಮಿಕ ಘನತೆ ಇರಲೇಬೇಕು. ಈ ದಿಸೆಯಲ್ಲಿ ಕ್ರೈಸ್ತ ಧರ್ಮದ ಸಿದ್ಧಾಂತ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಅನ್ಯೋನ್ಯತೆಯನ್ನು ಪ್ರೋತ್ಸಾಹಿಸುತ್ತದೆ. ಸೃಷ್ಟಿಕರ್ತರು ಮಾನವನ ನೈತಿಕ ಮತ್ತು ಸಾಮಾಜಿಕ ಸ್ವಭಾವದ ಮೇಲೆ ಬರೆದಿರುವ ನಿಯಮಗಳನ್ನು ಬೆಳಕಿಗೆ ತರುತ್ತದೆ. ದೇವರು ಎಲ್ಲಾ ಮಾನವರ ತಂದೆ ಮಾನವರನ್ನು



ಅವರು ತಮ್ಮ ಸ್ವರೂಪದಲ್ಲಿ ಸೃಷ್ಟಿಸಿದ್ದಾರೆ. ಅವರು ಎಲ್ಲರನ್ನು ಒಂದು ಕುಟುಂಬವಾಗಿ ಅವರ ದೈವ ಸ್ವಭಾವದಲ್ಲಿ ಭಾಗಿಯಾಗಲು ಕರೆ ಕೊಟ್ಟಿದ್ದಾರೆ. ಆದುದರಿಂದಲೇ ದೈವಪ್ರೀತಿ ಮತ್ತು ಪರಪ್ರೀತಿ ಪರಸ್ಪರ ಬಂಧಿತವಾಗಿದೆ. ಸಂಬಂಧಗಳು ನಿಕಟವಾಗುತ್ತಿರುವ ಈ ಅಧುನಿಕ ಪ್ರಪಂಚಕ್ಕೆ ಈ ಸತ್ಯ ಕಾಲೋಚಿತವಾಗಿದೆ. ಇಷ್ಟು ಮಾತ್ರವಲ್ಲದೆ ಪ್ರಭು ಕ್ರಿಸ್ತರು ತಮ್ಮ ಪಿತನಿಗೆ ಮಾಡಿದ ವಿನಂತಿ ಏನೆಂದರೆ ''ನಾವು ಒಂದಾಗಿರುವಂತೆ,.....ಅವರೆಲ್ಲರು ಒಂದಾಗಿರಲಿ.'' ಆದುದರಿಂದ ಪರಮತ್ರಿತ್ವದ ಐಕ್ಯಕ್ಕೂ ಮಾನವನ ಐಕ್ಯಕ್ಕೂ ನಿಕಟ ಸಂಬಂಧವಿದೆ. ಆದುದರಿಂದ ಮಾನವನು ತನ್ನನ್ನು ತಾನೇ ದೇವರಿಗೆ ಸಮರ್ಪಿಸಿಕೊಂಡರೆ ತನ್ನನ್ನು ಅರಿತುಕೊಳ್ಳಬಲ್ಲನು. ಎಲ್ಲಾ ಸಾಮಾಜಿಕ ಸಂಸ್ಥೆಗಳು ಈ ಕಾರಣ ಮಾನವ ವ್ಯಕ್ತಿ ಪ್ರಗತಿಯನ್ನು ತಮ್ಮ ಗುರಿಯನ್ನಾಗಿಸಿಕೊಳ್ಳಬೇಕು. ಮಾನವರು ಪರಸ್ಪರ ಕರ್ತವ್ಯ ಮತ್ತು ಸೋದರ ಸಂವಾದದ ಮುಖಾಂತರ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬೆಳೆಸಿಕೊಂಡು ತನ್ನ ಅಂತಿಮ ಗುರಿಯನ್ನು ತಲುಪಬೇಕು.

ಈ ಸಾಮಾಜಿಕ ಸಂಬಂಧದ ಮಧ್ಯೆ ಕೌಟುಂಬಿಕ ಮತ್ತು ರಾಜಕೀಯ ಸಮುದಾಯಗಳನ್ನು ನಾವು ಹೆಸರಿಸಬಹುದು. ಇವು ಮಾನವನ ಅಂತರ್ಗತ ಸ್ವಭಾವದೊಂದಿಗೆ ತಕ್ಷಣಿಕವಾಗಿ ಸಂಬಂಧಿತವಾಗಿವೆ. ಇದರ ಸಂಘ ಸಂಸ್ಥೆಗಳು ಅವನ ಸ್ವ ಇಚ್ಛೆಯಿಂದ ಸ್ಥಾಪಿತವಾದವು. ಸಮಾಜೀಕರಣಕ್ಕೆಂದು ಸ್ಥಾಪಿತವಾದ ಸಂಘ ಸಂಸ್ಥೆಗಳು ಕೆಲವು ತೊಂದರೆ ತೊಡಕು ಅಪಾಯವನ್ನು ಎದುರಿಸಬೇಕಾಗುತ್ತದೆ. ಅವು ಮಾನವ ಗುಣಲಕ್ಷಣಗಳನ್ನು ಅವಲಂಭಿಸಿದ್ದರೂ ಅವನ ಹಕ್ಕು ಬಾಧ್ಯತೆಗಳ ಮುಖಾಂತರ ಸಂರಕ್ಷಿಸಲ್ಪಡುತ್ತವೆ.

ಅಹಂಭಾವ ಮತ್ತು ಸ್ವಾರ್ಥದ ದೆಸೆಯಿಂದ ಹದಗೆಟ್ಟಿರುವ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಪರಿಸರಕ್ಕೆ ಮಾನವನು ಬಲಿಯಾಗುವ ಸಾಧ್ಯತೆಯಿದೆ. ಹುಟ್ಟಿನಿಂದ ಸ್ವಾಭಾವಿಕವಾಗಿ ಕೆಡುಕಿನತ್ತ ವಾಲುವ ಮನೋಭಾವ ಮಾನವನದು. ಅವನು ಪಾಪದಲ್ಲಿ ಬೀಳಲು ಅನೇಕ ಹೊಸ ಆಕರ್ಷಣೆಗಳನ್ನು ಎದುರಿಸುತ್ತಾನೆ. ಅವುಗಳನ್ನು ಜಯಿಸಲು ಪ್ರಯಾಸದಾಯಕ ಪ್ರಯತ್ನ ಮತ್ತು ದೇವರ ವರಪ್ರಸಾದದ ಅತ್ಯಗತ್ಯ. ಈ ಲೋಕವು ಹಂತಹಂತವಾಗಿ ಒಂದಾಗುತ್ತಿರುವುದರಿಂದ ಇಡೀ ಮಾನವ ಜನಾಂಗದ ಕಲ್ಯಾಣವನ್ನು ಗಮನಕ್ಕೆ ತಂದುಕೊಳ್ಳಬೇಕು. ಪ್ರತಿ ಸಾಮಾಜಿಕ ಸಮುದಾಯ ಇತರ ಸಮುದಾಯಗಳ ನ್ಯಾಯಬದ್ಧ ಅಗತ್ಯ ಮತ್ತು ಅಭಿಲಾಷೆಗಳನ್ನು ಗೌರವಿಸಬೇಕು.

ಮಾನವನು ಎಲ್ಲಕ್ಕಿಂತ ಮೇಲಾಗಿರುವುದರಿಂದ ಅವನ ಹಕ್ಕು ಬಾಧ್ಯತೆಗಳು ಸಾರ್ವತ್ರಿಕ ಮತ್ತು ಅಭೇದ್ಯವಾದವು. ನೈಜ್ಯ ಮಾನವ ಜೀವನಕ್ಕೆ ಅಗತ್ಯವಾದುದೆಲ್ಲವು ಅವನಿಗೆ ಲಭಿಸುವಂತೆ ಮಾಡಬೇಕು ! ಊಟ, ವಸ್ತ್ರ, ವಸತಿ, ಉದ್ಯೋಗದ ಆಯ್ಕೆ, ಕುಟುಂಬ ಜೀವನ, ವಿದ್ಯಾಭ್ಯಾಸ, ಕೆಲಸ, ಒಳ್ಳೆಯ ಹೆಸರು, ಗೌರವ, ಸುದ್ದಿ ಸಮಾಚಾರ, ನೇರ ಮನಸ್ಸಾಕ್ಷಿಗೆ ತಕ್ಕಂತೆ ನಡೆಯುವ ಅವಕಾಶ, ವಿವಿಕ್ತತೆ, ನ್ಯಾಯಬದ್ಧ ಸ್ವಾತಂತ್ರ್ಯ, ಅದು ಧಾರ್ಮಿಕವೂ ಆಗಿರಬೇಕು. ಇವುಗಳೆಲ್ಲವು ಮಾನವನ ಹಕ್ಕುಗಳು.

ಸಾಮಾಜಿಕ ವ್ಯವಸ್ಥೆ ಸತ್ಯಪರವಾಗಿರಬೇಕು, ನ್ಯಾಯನೀತಿಯಲ್ಲಿ ಬೇರೂರಿರಬೇಕು. ಪ್ರೀತಿಯಿಂದ ಪ್ರೇರಿತವಾಗಿರಬೇಕು. ಸ್ವಾತಂತ್ರ್ಯದಲ್ಲಿ ನಡೆಯುತ್ತಾ ಮಾನವ ಸಮಾನತೆಯತ್ತ ಸಾಗಬೇಕು. ದೇವರ ಆತ್ಮರು ಈ ಪ್ರಗತಿಗೆ ನೆರವಾಗುತ್ತಾರೆ. ದಮನಿಸಲಾಗದ ಮಾನವ ಹಕ್ಕುಗಳನ್ನು ಶುಭಸಂದೇಶ ಮಾನವನ ಹೃದಯದಲ್ಲಿ ಜಾಗೃತಗೊಳಿಸುತ್ತದೆ.

**ಈ ಸೂತ್ರಗಳ ವಿಶಿಷ್ಟ ಮತ್ತು ತ್ವರಿತ ಪರಿಣಾಮಗಳು**

ಮಾನವನಿಗೆ ಗೌರವ ಸಲ್ಲಬೇಕು ಎಂದು ಸಮ್ಮೇಳನ ಆದೇಶಿಸುತ್ತದೆ. ನಾವು ಪ್ರತಿಯೊಬ್ಬ ವ್ಯಕ್ತಿಗೂ ನೆರೆಯವನಾಗಬೇಕು, ಸಕ್ರಿಯವಾಗಿ ಸಹಾಯಮಾಡಬೇಕು; ಆ ವ್ಯಕ್ತಿ ವಯೋವೃದ್ಧ, ಸರ್ವರಿಂದ ತಿರಸ್ಕೃತ, ವಿದೇಶಿ ಕಾರ್ಮಿಕ, ನಿರಾಶ್ರಿತ, ಕಾನೂನು ಬಾಹಿರ ನಿವಾಹದ ಫಲ, ಹಸಿದ ವ್ಯಕ್ತಿ, ಇವರೆಲ್ಲರು ಸಹಾಯಕ್ಕೆ ಪಾತ್ರರು.

ಮಾನವ ಜೀವಕ್ಕೆ ಪ್ರತಿಕೂಲವಾದದ್ದು, ಮಾನವ ಜೀವಿಯ ಸಮಗ್ರತೆಯನ್ನು ಕುಂಟಿತಗೊಳಿಸುವಂಥದ್ದು. ಮಾನವ ಘನತೆ ಭಂಗಪಡಿಸುವಂಥದ್ದು, ಮಾನವ ಸಮಾಜವನ್ನು ವಿಷಮಗೊಳಿಸುತ್ತದೆ. ಈ ಕೃತ್ಯಗಳು ಕೆಡುಕನ್ನು ಅನುಭವಿಸುವ ವ್ಯಕ್ತಿಗಳಿಗಿಂತ ಅದನ್ನು ಎಸಗುವ ವ್ಯಕ್ತಿಗಳಿಗೆ ಅಧಿಕ ಹಾನಿಯನ್ನು ಮಾಡುತ್ತದೆ. ಅವು ಸೃಷ್ಟಿಕರ್ತ ದೇವರಿಗೆ ಅಪಾರ ಅಗೌರವ ತರುತ್ತವೆ.

ನಮ್ಮ ನಡೆನುಡಿಯಿಂದ ಭಿನ್ನ ರೀತಿಯಲ್ಲಿ ಯೋಚಿಸುವ ವ್ಯಕ್ತಿಗಳೊಂದಿಗೆ ಸಂವಾದ ನಡೆಸುವಾಗ ಗೌರವ ಮತ್ತು ಸೌಜನ್ಯವನ್ನು ತೋರಬೇಕು. ನಾವು ತಪ್ಪು ಮತ್ತು ವ್ಯಕ್ತಿ, ಇದರ ಮಧ್ಯದ ವ್ಯತ್ಯಾಸವನ್ನು ಗುರುತಿಸಬೇಕು. ತಪ್ಪನ್ನು ಖಂಡಿಸಬೇಕು ವ್ಯಕ್ತಿಯನ್ನು ಯಾವಾಗಲೂ ಪ್ರೀತಿಸಬೇಕು. ನಾವು ಯಾರೊಬ್ಬರ ಆಂತರಿಕ ಅಪರಾದದ ಮೇಲೆ ತೀರ್ಪಿಡಬಾರದೆಂದು ದೇವರೇ ತಿಳಿಸಿದ್ದಾರೆ. ಶತ್ರು ಪ್ರೀತಿಯ ಬಗ್ಗೆ ಪ್ರಭು ಕ್ರಿಸ್ತರ ಮಾತುಗಳನ್ನು ನಾವು ಪಾಲಿಸಬೇಕು. ಶಾರೀರಿಕ, ಮಾನಸಿಕ, ನೈತಿಕ ವಿಷಯಗಳಲ್ಲಿ ಭಿನ್ನತೆ ಇದ್ದರೂ ನಮ್ಮೆಲ್ಲರ ಮಾನವ ಸ್ವಭಾವ ಒಂದೇ, ಎಲ್ಲರೂ ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾರೆ, ಒಬ್ಬರೇ ಪ್ರಭು ಕ್ರಿಸ್ತರಿಂದ ರಕ್ಷಿಸಲ್ಪಟ್ಟಿದ್ದಾರೆ, ನಮ್ಮೆಲ್ಲರ ಗುರಿಯೂ ಒಂದೇ, ಆದುದರಿಂದ ಸಾಮಾಜಿಕ ಅಥವಾ ಸಾಂಸ್ಕೃತಿಕ, ಲಿಂಗ ಬುಡಕಟ್ಟು ಬಣ್ಣ, ಸಾಮಾಜಿಕ ಪರಿಸ್ಥಿತಿ, ಭಾಷೆ ಅಥವಾ ಧರ್ಮದ ಆದರದ ಮೇಲೆ ತಾರತಮ್ಯ ಸಲ್ಲದು, ಅದನ್ನು ನಿರ್ಮೂಲ ಮಾಡಬೇಕು. ಖಾಸಗಿ ಮತ್ತು ಸಾರ್ವಜನಿಕ ಮಾನವ ಸಂಸ್ಥೆಗಳು ಮಾನವ ಘನತೆ ಮತ್ತು ಅವನ ಗುರಿಸಾಧನೆಗಾಗಿ ನೆರವು ನೀಡಬೇಕು. ತ್ವರಿತ ಬದಲಾವಣೆಯನ್ನು ಕಾಣುತ್ತಿರುವ ಈ ಪ್ರಪಂಚದಲ್ಲಿ ವ್ಯಕ್ತಿಯು ದ್ವೀಪದಂತೆ ಒಂಟಿಯಾಗಿರಲಾಗದು. ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ಇತರರ ಅಗತ್ಯಕ್ಕೆ ಅನುಗುಣವಾಗಿ ದುಡಿಯಬೇಕು. ಮಾನವ ಜೀವನವನ್ನು ಉತ್ತಮಗೊಳಿಸಲು ಪ್ರಯತ್ನಿಸುತ್ತಿರುವ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳೊಂದಿಗೆ ಸಹಕರಿಸಬೇಕು. ಆಗತಾನೇ ನ್ಯಾಯನೀತಿ ಮತ್ತು ಪರಪ್ರೀತಿಯ ಜವಾಬ್ದಾರಿಯನ್ನು ಈಡೇರಿಸಲು ಸಾಧ್ಯವಾಗುತ್ತದೆ.



ಈ ಉದ್ದೇಶ ಈಡೇರಬೇಕಾದರೆ ಇಂದು ಮಾನವ ಜನಾಂಗಕ್ಕೆ ಲಭ್ಯವಿರುವ ಅಪಾರ ಸಂಪನ್ಮೂಲಗಳನ್ನು ಬಳಸಿಕೊಂಡು ಜನರನ್ನು ಎಚ್ಚರಿಕೆಯಿಂದ ಉನ್ನತ ಮಟ್ಟದ ಸಂಸ್ಕೃತಿಯಲ್ಲಿ ತರಬೇತಿ ನೀಡಬೇಕು. ಎಲ್ಲಕ್ಕೂ ಮಿಗಿಲಾಗಿ ಸಾಮಾಜಿಕ ಹಿನ್ನೆಲೆಯನ್ನು ಪರಿಗಣಿಸಿ ಯುವಜನರಿಗೆ ಶಿಕ್ಷಣವನ್ನೀಯಬೇಕು. ಹೀಗೆ ಸುಸಂಸ್ಕೃತ ಪ್ರತಿಭೆಗಳುಳ್ಳ ಸ್ತ್ರೀ ಪುರುಷರನ್ನು ಸಿದ್ಧ ಮಾಡಬಹುದು. ಇಂಥಹ ವ್ಯಕ್ತಿಗಳ ಅಗತ್ಯ ಇಂದಿನ ಕಾಲಕ್ಕೆ ಅತಿಯಾಗಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ಆಶಿಸುವ ವ್ಯಕ್ತಿಗಳಿಗೆ ಪ್ರೋತ್ಸಾಹ ನೀಡಬೇಕು. ಅನೇಕ ದೇಶಗಳು ಈ ಕ್ಷೇತ್ರದಲ್ಲಿ ಜನರಿಗೆ ಭಾಗವಹಿಸಲು ಸ್ವಾತಂತ್ರ್ಯವನ್ನು ನೀಡುತ್ತಿವೆ. ಈ ದೇಶಗಳು ಅಭಿನಂದನೆಗೆ ಪಾತ್ರವಾಗಿದೆ. ಒಂದು ದೇಶದ ಭವಿಷ್ಯವಿರುವುದು ಮುಂದಿನ ಜನಾಂಗದ ಪ್ರಜೆಗಳ ಹಸ್ತದಲ್ಲಿ, ಆದುದರಿಂದ ಅವರಿಗೆ ಈಗ ಸೂಕ್ತ ಸೌಲಭ್ಯವನ್ನು ಒದಗಿಸುವುದು ಅಗತ್ಯ.

ಮಾನವನು ಒಂಟಿಯಾಗಿ ಜೀವಿಸಲಾಗದು ; ರಕ್ಷಣಾ ಚರಿತ್ರೆ ಜನಾಂಗದ ಆಯ್ಕೆಯಿಂದ ಪ್ರಾರಂಭವಾಯಿತು. ಪ್ರಭುಯೇಸು ಜನರೊಂದಿಗೆ ಇಟ್ಟುಕೊಂಡ ಸಂಬಂಧ, ಅವರ ಬೋಧನೆ, ನಮ್ಮ ಮೇಲಿನ ಪ್ರೀತಿಗಾಗಿ ಶಿಲುಬೆಯಲ್ಲಿ ತಾವು ಕೊಡುಗೆಯಾಗಿ ಕೊಟ್ಟ ಪ್ರಾಣ, ಇವೆಲ್ಲವೂ ದೇವರು ನಮ್ಮನ್ನು ಸೃಷ್ಟಿಸಿದ್ದು ಮತ್ತು ವಿಮೋಚಿಸಿದ್ದು ನಾವೊಂದು ಕುಟುಂಬವಾಗಿ ಜೀವಿಸಲೆಂದು ಎಂಬುದನ್ನು ಸಾಕ್ಷಾತ್ಕರಿಸುತ್ತದೆ. ಪ್ರಭುಕ್ರಿಸ್ತರ ಶರೀರವಾದ ಧರ್ಮಸಭೆ ಪವಿತ್ರಾತ್ಮರ ಕೃಪೆಯಿಂದ ಜೀವಿಸುತ್ತಿದ್ದು ಒಬ್ಬರಿಗೊಬ್ಬರು ಸೋದರಭಾವದಿಂದ ಬೆಳೆಯುವ ಸಮುದಾಯವಾಗಿದೆ.

ಈ ಸೌಹಾರ್ದ ಸಂಪೂರ್ಣತೆಯನ್ನು ತಲುಪುವ ಗಳಿಗೆಯವರೆಗೂ ನಿರಂತರವಾಗಿ ಅದನ್ನು ಬೆಳೆಯಲು ಬಿಡಬೇಕು. ಆಗ ದೇವರ ವರಪ್ರಸಾದದಿಂದ ಮುಕ್ತರಾದ ಮಾನವರು ಅವರ ಮತ್ತು ಸಹೋದರ ಪ್ರಭು ಕ್ರಿಸ್ತರ ಪ್ರೀತಿಯ ಕುಟುಂಬವಾಗಿ ದೇವರಿಗೆ ಸ್ತುತಿ ಸ್ತೋತ್ರ ಸಲ್ಲಿಸುವರು.

## ಅಧ್ಯಾಯ III

### ಮಾನವನ ವಿಶ್ವವ್ಯಾಪಿ ಚಟುವಟಿಕೆ

ವಿಶ್ವವನ್ನು ಸ್ವಾಧೀನಪಡಿಸಿಕೊಳ್ಳಬೇಕು ಎನ್ನುವ ಮಾನವನ ಅಹರ್ನಿಶಿ ಪ್ರಯತ್ನದಲ್ಲಿ ಅನೇಕ ಹೃದಯ ತಲ್ಲಣಗೊಳಿಸುವ ಸಮಸ್ಯೆಗಳನ್ನು ಅವನು ಎದುರಿಸುತ್ತಾನೆ. ಉದಾ.: ಈ ತಡೆರಹಿತ ಚಟುವಟಿಕೆಯ ಅರ್ಥವೇನು? ಮೌಲ್ಯವೇನು? ಇಂಥಹ ಪ್ರತ್ಯೇಕ ಸಮಸ್ಯೆಗಳಿಗೆ ಧರ್ಮಸಭೆಯಲ್ಲಿ ಉತ್ತರವಿಲ್ಲದಿದ್ದರೂ ಅದು ಮಾನವನ ಅನುಭವದ ಮೇಲೆ ದೈವೀ ಶ್ರುತಿಯ ಬೆಳಕನ್ನು ಹರಿಸಲು ಆಶಿಸುತ್ತದೆ.

ಜನರು ತಮ್ಮ ಬಾಳಿನ ಪರಿಸ್ಥಿತಿಯನ್ನು ಉತ್ತಮಗೊಳಿಸಲು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಈ ಚಟುವಟಿಕೆಯನ್ನು ಅದರ ಮಟ್ಟದಲ್ಲೇ ವಿಶ್ಲೇಷಿಸಿದ ಭಕ್ತವಿಶ್ವಾಸಿ ಅದು ದೇವರ ಚಿತ್ತಕ್ಕೆ ಅನುಗುಣವಾಗಿದೆ ಎಂದು ತೀರ್ಮಾನಿಸುತ್ತಾನೆ. ದೇವರ

ಸ್ವರೂಪದಲ್ಲಿ ಸೃಷ್ಟಿಸಲಾದ ಮನುಷ್ಯನು ಪ್ರಪಂಚವನ್ನು ಅದರಲ್ಲಿರುವ ಎಲ್ಲವನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂಬುದನ್ನು ಅರಿತಿದ್ದಾನೆ. ಈ ಲೋಕವನ್ನು ನೀತಿ ಮತ್ತು ಪಾವಿತ್ರತೆಯಿಂದ ನಿರ್ವಹಿಸಿ ಅದರ ಒಡೆಯರೂ ಸೃಷ್ಟಿಕರ್ತರೂ ಆದ ದೇವರಿಗೆ ಸಮರ್ಪಿಸಬೇಕು ಎಂಬ ದೈವನಿಯಮವನ್ನೂ ತಿಳಿದಿದ್ದಾನೆ.

ಮಾನವನು ತನ್ನ ದೈನಂದಿನ ಕೆಲಸಕಾರ್ಯಗಳ ಮುಖಾಂತರ ದೈವ ಯೋಜನೆಯನ್ನು ಈಡೇರಿಸುತ್ತಾನೆ. ಹೀಗೆ ಅವನು ತನ್ನ, ತನ್ನ ಕುಟುಂಬಕ್ಕೆ ಅಗತ್ಯ ಜೀವನಾಂಶವನ್ನು ಒದಗಿಸಿ ಸಮಾಜದ ಕಲ್ಯಾಣವನ್ನು ಮಾಡುತ್ತಾನೆ. ಮಾನವ ಜನಾಂಗದ ಯಶಸ್ಸು ದೇವರ ವರಪ್ರಸಾದದ ಫಲ ಮತ್ತು ದೇವರ ವಿಶಿಷ್ಠ ಯೋಜನೆಯ ಫಲಶ್ರುತಿಯಾಗಿದೆ. ಮಾನವನ ಮತ್ತು ಸಮಾಜದ ಶಕ್ತಿ ಸಾಮರ್ಥ್ಯ ಅಧಿಕವಾದಂತೆ ಅವನ ಜವಾಬ್ದಾರಿಗಳು ವಿಸ್ತರಿಸುತ್ತವೆ.

ಮಾನವನ ಚಟುವಟಿಕೆ ಅವನಿಂದಲೇ ಪ್ರಾರಂಭವಾಗಿ ಅವನಲ್ಲಿಯೇ ಅಂತ್ಯಗೊಳ್ಳುತ್ತದೆ. ಅದು ಅವನನ್ನು ಪರಿಣತನನ್ನಾಗಿ ಮಾಡುತ್ತದೆ. ಅವನಲ್ಲಿ ಈಗ ಇರುವುದೆಲ್ಲಕ್ಕಿಂತ ಅವನ ಇರುವೇ ಅತ್ಯಮೂಲ್ಯವಾದುದು. ನೀತಿ, ಸೋದರತ್ವ, ಮಾನವ ಸಾಮಾಜಿಕ ಸಂಬಂಧ ಇವುಗಳನ್ನು ಅಧಿಕಾಧಿಕವಾಗಿ ಗಳಿಸಿಕೊಳ್ಳುವುದರಲ್ಲಿ ಅವನು ಮಾಡುವ ಪ್ರಯತ್ನ ಎಲ್ಲಾ ತಾಂತ್ರಿಕ ಬೆಳವಣಿಗೆಕ್ಕಿಂತ ಉತ್ತಮವಾದುದು.

ಆದುದರಿಂದ ಮಾನವ ಚಟುವಟಿಕೆಯ ನಿಯಮವಿದು: ದೈವಯೋಜನೆ ಮತ್ತು ದೈವ ಚಿತ್ತದ ಪ್ರಕಾರ ಅದು ಮಾನವ ಜನಾಂಗದ ನೈಜ್ಯ ಕಲ್ಯಾಣಕ್ಕೆ ಪೋಷಕವಾಗಿರಬೇಕು. ಜನರು ವೈಯಕ್ತಿಕವಾಗಿ ಮತ್ತು ಸಂಘ ಸಂಸ್ಥೆಗಳ ಸದಸ್ಯರಾಗಿ ತಮ್ಮ ಸಂಪೂರ್ಣ ಕರೆಯೋಣವನ್ನು ಅನುಸರಿಸಲು ಮತ್ತು ಸಫಲಗೊಳಿಸಲು ಅನುವಾಗಬೇಕು.

ಮಾನವನ ಚಟುವಟಿಕೆಗೂ ಧರ್ಮಕ್ಕೂ ನಡುವೆ ನಿಕಟ ಸಂಬಂಧವಿಟ್ಟುಕೊಂಡರೆ ಮಾನವನ ಸಮಾಜದ ಮತ್ತು ವೈಜ್ಞಾನಿಕ ಸ್ವಾತಂತ್ರ್ಯಕ್ಕೆ ದಕ್ಕೆಯುಂಟಾಗುತ್ತದೆ ಎಂಬುದು ಹಲವಾರು ಸಮಕಾಲೀನರ ಭೀತಿ. ಇದು ಸುಳ್ಳು ಬೆದರಿಕೆ, ಏಕೆಂದರೆ ಪ್ರತಿ ನೈಜ್ಯ ಅಧಿಪತ್ಯದ ಅಂದರೆ ತನ್ನದೇ ಆದ ನೀತಿ ನಿಯಮ, ಮೌಲ್ಯಗಳುಳ್ಳ ಕಾರ್ಯಕ್ಷೇತ್ರವು ಧರ್ಮಕ್ಕೆ ವಿರುದ್ಧವಾಗಿರಲು ಸಾಧ್ಯವಿಲ್ಲ. ಏಕೆಂದರೆ ಲೌಕಿಕ ವಿಷಯಗಳು ಮತ್ತು ಧರ್ಮದ ಕಾರ್ಯಗಳು ಒಬ್ಬ ದೇವರಿಂದಲೇ ಉಗಮಿಸುತ್ತವೆ. ಸೃಷ್ಟಿಯ ವಸ್ತುಗಳ ಸ್ವಾಮ್ಯ ದೇವರನ್ನು ಅವಲಂಬಿಸಿಲ್ಲವೆಂದು ಹೇಳುವುದಾದರೆ ಈ ವಾದ ಶುದ್ಧ ದೋಷ ಪೂರಿತವಾದುದು. ಸೃಷ್ಟಿಕರ್ತನಿಲ್ಲದೆ ಸೃಷ್ಟಿ ನಶ್ವರವಾಗುವುದು. ಎಲ್ಲಾ ಧರ್ಮಗಳ ವಿಶ್ವಾಸಿಗಳು ದೇವರ ಸ್ವರವನ್ನು ಅವರ ಸೃಷ್ಟಿಯಲ್ಲಿ ಶ್ರುತಿ ಸುತ್ತಿರುವುದನ್ನು ಕೇಳುತ್ತಾರೆ.

ಪವಿತ್ರ ಗ್ರಂಥಗಳು ಮಾನವನ ಅನುಭವವನ್ನು ದೃಢೀಕರಿಸುತ್ತವೆ. ಮಾನವ ಪ್ರಗತಿ ಅವನಿಗೆ ಅಪಾರ ಅನುಕೂಲ ಮಾಡಿಕೊಟ್ಟರೂ ಅದರೊಂದಿಗೆ ಪ್ರಬಲ ಪ್ರಚೋದನೆಯು ಇರುವುದು ಅಷ್ಟೆ ಸತ್ಯ. ಮಾನವ ಪ್ರಗತಿ ಅವನಿಗೆ ನೈಜ್ಯ ಆನಂದ ಕೊಡಬಹುದು. ಆದರೆ ಇದರಿಂದ ಜನರು ವೈಯಕ್ತಿಕವಾಗಿ ಅಥವಾ ಗುಂಪಾಗಿ ಬೆಳಕಿಗೂ ಕತ್ತಲಿಗೂ ಇರುವ ಹೋರಾಟದಲ್ಲಿ ಸಿಲುಕಿ ಅಹಂಭಾವ



ಮತ್ತು ದ್ವೇಷಕ್ಕೆ ಬಲಿಯಾಗಬಹುದು. ಈ ಕಲಹದಲ್ಲಿ ಈ ಪ್ರಗತಿ ಪಾಪದ ಸಲಕರಣೆಯಾಗಬಲ್ಲದು. ದೇವರ ಸೇವೆಗೆಂದು ಮೀಸಲಾಗಿಟ್ಟ ಶಕ್ತಿ ಸಾಮರ್ಥ್ಯಗಳು ನಿಷ್ಫಲವಾಗಬಹುದು. ಆದುದರಿಂದ ದೇವರ ವರಪ್ರಸಾದದ ನೆರವಿನಿಂದ ಅವರು ಸತತ ಹೋರಾಡುತ್ತಾ ಒಳಿತನ್ನು ಕಾಪಾಡಬೇಕು, ಕೆಡುಕನ್ನು ತ್ಯಜಿಸಬೇಕು. ಮಾನವನ ಅಹಂಭಾವ ಮತ್ತು ಸ್ವಾರ್ಥಪರತೆಯಿಂದ ಸದಾ ಅಪಾಯಕ್ಕೀಡಾಗಿರುವ ಚಟುವಟಿಕೆಯನ್ನು ಪ್ರಭು ಕ್ರಿಸ್ತರ ಶಿಲುಬೆ ಮತ್ತು ಪುನರುತ್ಥಾನದ ಫಲದಿಂದ ಶುದ್ಧೀಕರಿಸಿ ಸಂಪೂರ್ಣಗೊಳಿಸಬೇಕು.

ಪರಿಪೂರ್ಣ ಮಾನವರಾಗಿ ಈ ಲೋಕಕ್ಕೆ ಬಂದ ಪ್ರಭು ಕ್ರಿಸ್ತರು ''ದೇವರು ಪ್ರೀತಿ ಸ್ವರೂಪಿ'' (1 ಯೊವಾ 4:8) ಎಂಬ ಸತ್ಯವನ್ನು ಅರುಹಿದರು. ಪ್ರೀತಿಯ ಈ ಹೊಸ ನಿಯಮ ಮಾನವನ ಪರಿಪೂರ್ಣತೆ ಮತ್ತು ಪ್ರಪಂಚದ ಮಾರ್ಪಾಡಿಗೆ ಅತ್ಯಗತ್ಯವೆಂದರು.

ಈಗ ಪವಿತ್ರಾತ್ಮರು ನಾವೆಲ್ಲರೂ ಹೊಸ ಸೃಷ್ಟಿಗಳು, ನಮ್ಮಲ್ಲಿರುವ ಪವಿತ್ರಾತ್ಮರ ವರದಾನಗಳು ವಿಭಿನ್ನವಾದವು. ಕೆಲವರು ಸ್ವರ್ಗಾಭಿಲಾಷೆಗೆ ಸಾಕ್ಷಿಕೊಡಲು ಕರೆಯಲ್ಪಟ್ಟಿದ್ದಾರೆ ಮತ್ತು ಈ ಅಭಿಲಾಷೆಯನ್ನು ಅವರು ಮಾನವರ ಹೃದಯದಲ್ಲಿ ಸಜೀವವಾಗಿಡುತ್ತಾರೆ. ಇತರರು ತಮ್ಮನ್ನೇ ಮಾನವ ಕಲ್ಯಾಣ ಕಾರ್ಯಕ್ಕೆ ಕರೆಯಲ್ಪಟ್ಟಿದ್ದಾರೆ.

ಈ ಭೂಲೋಕದ ಮತ್ತು ಮಾನವ ಜನಾಂಗದ ಅಂತ್ಯ ಮತ್ತು ವಿಧಾನದ ಬಗ್ಗೆ ನಮಗೆ ತಿಳಿದಿಲ್ಲ. ಆದರೆ ಸಮಸ್ತವೂ ಪರಿವರ್ತನೆಗೊಂಡು ದೇವರ ಮಕ್ಕಳು ಪ್ರಭು ಕ್ರಿಸ್ತರಲ್ಲಿ ಪುನರುತ್ಥಾನಗೊಂಡು ನಿರ್ಲಯರೆಯನ್ನು ಧರಿಸುವುದಂತು ನಿಶ್ಚಯ. ಪರಿವರ್ತನೆಯ ಈ ನಿರೀಕ್ಷೆ ಭವ್ಯ ಪ್ರಪಂಚವನ್ನೂ ನಿರ್ಮಾಣದಲ್ಲಿ ತೊಡಗಿರುವ ನಮ್ಮನ್ನು ನಿರುತ್ಸಾಹಗೊಳಿಸಬಾರದು. ಮಾನವ ಜನಾಂಗವನ್ನು ಉತ್ತಮಗೊಳಿಸಬೇಕು ಎಂಬ ಆಶೆ ಪ್ರಭುಕ್ರಿಸ್ತರ ಸಾಮ್ರಾಜ್ಯದಿಂದ ಭಿನ್ನವಾಗಿದ್ದರೂ ದೇಶದ ಬೆಳವಣಿಗೆಗೂ ನೆರವಾಗುತ್ತದೆ.

## ಅಧ್ಯಾಯ IV

### ಅಧುನಿಕ ವಿಶ್ವದಲ್ಲಿ ಧರ್ಮಸಭೆಯ ಪಾತ್ರ

**ಧರ್ಮಸಭೆ ಮತ್ತು ಪ್ರಪಂಚ :** ಧರ್ಮಸಭೆ ಸದಸ್ಯರನ್ನೊಳಗೊಂಡ ಒಂದು ಕುಟುಂಬ ಅದು ಪಿತ ದೇವರ ಪ್ರೀತಿಯಿಂದ, ಸುತದೇವರಲ್ಲಿ ಪವಿತ್ರಾತ್ಮರ ಮೂಲಕ ಸ್ವರ್ಗರಾಜ್ಯದ ಮೌಲ್ಯಗಳಿಗಾಗಿ ಒಂದುಗೂಡಿರುವ ಕುಟುಂಬ. ಇದನ್ನು ಪ್ರಭು ಕ್ರಿಸ್ತರು ಗೋಚರ ಸಭೆಯನ್ನಾಗಿ ಈ ಭೂಲೋಕದಲ್ಲಿ ರೂಪಿಸಿ ಸ್ಥಾಪಿಸಿದರು. ಹೀಗೆ ಧರ್ಮಸಭೆ ಗೋಚರ ಸಭೆಯ ಆಧ್ಯಾತ್ಮಿಕ ಸಮುದಾಯವೂ ಆಗಿದೆ. ಪ್ರಪಂಚದೊಡನೆ ಅದು ಸಂಪರ್ಕವಿಟ್ಟುಕೊಂಡಿರುವುದರಿಂದ ಪರಸ್ಪರ ಸಂವಾದವಿಟ್ಟುಕೊಳ್ಳುವ ಅಗತ್ಯವೂ ಇದೆ. ವೈಯಕ್ತಿಕ ಮತ್ತು ಸಾಮಾಜಿಕ ಅಸ್ತಿತ್ವ ಮತ್ತು ಜಗತ್ತಿನಲ್ಲಿ ಮಾನವನ ಚಟುವಟಿಕೆ, ಇವೆಲ್ಲವೂ ಈ ಸಂವಾದಕ್ಕೆ ಆಧಾರವಾಗಿವೆ. ಧರ್ಮಸಭೆ ಮಾನವನ ಅಸ್ತಿತ್ವವನ್ನು ಮತ್ತು ಚಟುವಟಿಕೆಯನ್ನು ಪ್ರಭುಕ್ರಿಸ್ತರಲ್ಲಿ ನೂತನಗೊಳಿಸಿ ಮಾನವ ಜನಾಂಗವನ್ನು ದೇವರ ಕುಟುಂಬವನ್ನಾಗಿ

ಪರಿವರ್ತಿಸುತ್ತದೆ ಮಾತ್ರವಲ್ಲ ಹುದುಗಿನಂತೆ ಅವುಗಳನ್ನು ಅಧಿಕ ಅಧಿಕವಾಗಿ ಮಾನವೀಕರಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಧರ್ಮಸಭೆ ಒಬ್ಬೊಬ್ಬ ವ್ಯಕ್ತಿಯ ಮತ್ತು ಇಡೀ ಮಾನವ ಸಮಾಜದ ನೆರವನ್ನು ಅದರ ಪ್ರತಿಭೆ ಮತ್ತು ದುಡಿಮೆಯೊಂದಿಗೆ ತನ್ನ ನಿಯೋಗಕ್ಕೆ ಬಳಸಿಕೊಳ್ಳುತ್ತವೆ.

**ಧರ್ಮಸಭೆ ಮತ್ತು ವೈಯಕ್ತಿಕ ಮಾನವರು :** ಆಧುನಿಕ ಮಾನವನು ತನ್ನ ವ್ಯಕ್ತಿತ್ವದ ಪೂರ್ಣ ವಿಕಾಸ ಮತ್ತು ತನ್ನ ಹಕ್ಕು ಬಾಧ್ಯತೆಗಳನ್ನು ಪೂರ್ಣವಾಗಿ ಅರಿತು ಅವುಗಳ ಸಂರಕ್ಷಣಾ ಹಾದಿಯಲ್ಲಿ ನಡೆದಿದ್ದಾನೆ. ಧರ್ಮಸಭೆಯು ತನ್ನ ವಶದಲ್ಲಿರುವ ಶುಭಸಂದೇಶದ ಆಧಾರದ ಮೇಲೆ ಮಾನವನ ಹಕ್ಕುಗಳನ್ನು ಸಾರುತ್ತದೆ. ಶುಭಸಂದೇಶ ದೇವರ ಮಕ್ಕಳ ಸ್ವಾತಂತ್ರ್ಯವನ್ನು ಸಾರುತ್ತದೆ. ಅದು ಪಾಪದ ಪರಿಣಾಮವಾದ ಎಲ್ಲಾ ದಾಸ್ಯವನ್ನು ಅಂತಿಮವಾಗಿ ಖಂಡಿಸುತ್ತದೆ (ನೋಡಿ ರೋಮನ 8:14). ಧರ್ಮಸಭೆ ಮನಸ್ಸಾಕ್ಷಿಯ ಪಾವಿತ್ರತೆಯನ್ನೂ ಗೌರವಿಸುತ್ತಾ ಮನುಷ್ಯನ ಆಯ್ಕೆಮಾಡುವ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. ಮಾನವನು ತನ್ನಲ್ಲಿರುವ ಪ್ರತಿಭೆಗಳನ್ನು ದೇವರ ಮತ್ತು ಮಾನವರ ಕಲ್ಯಾಣಕ್ಕಾಗಿ ಬಳಸಬೇಕೆಂದು ಸತತ ಬೋಧಿಸುತ್ತದೆ. ಮಾನವ ಹಕ್ಕು ಬಾಧ್ಯತೆಗಳ ಬಗ್ಗೆ ಎಲ್ಲೆಲ್ಲೂ ನಡೆಯುವ ಚಳುವಳಿಗಳ ಬಗ್ಗೆ ಧರ್ಮಸಭೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಅವು ಶುಭಸಂದೇಶದ ಸತ್ವದಿಂದ ಪ್ರೇರಿತವಾಗಿ ಎಲ್ಲಾ ವಿಧವಾದ ಅಬದ್ಧ ಸ್ವಾಮ್ಯದಿಂದ ರಕ್ಷಿಸಲ್ಪಟ್ಟಿರಬೇಕು. ಇದು ಧರ್ಮಸಭೆಯ ಯುಕ್ತ ನಿಯೋಗ. ಜಗತ್ತಿನಲ್ಲಿ ಹುದುಗಿ ನಂತಿದ್ದು ದೇವರ ರಹಸ್ಯವನ್ನು ಮಾನವರಿಗೆ ಪ್ರಕಟಪಡಿಸುವ ಕರ್ತವ್ಯ ಧರ್ಮಸಭೆಗಿದೆ. ಈ ಕರ್ತವ್ಯವನ್ನು ನಿರ್ವಹಿಸುತ್ತಿರುವಾಗ ಧರ್ಮಸಭೆ ಮಾನವನ ಅಸ್ತಿತ್ವದ ಅರ್ಥವನ್ನು ಅಂದರೆ ಅಂತರಿಕ ಸತ್ಯವನ್ನು ಅರಹುತ್ತದೆ. ಮಾನವನ ಅಂತಿಮ ಗುರಿ ದೇವರೆಂದು ಧರ್ಮಸಭೆ ನಂಬುತ್ತದೆ. ತಮ್ಮ ಪುತ್ರ ಪ್ರಭು ಕ್ರಿಸ್ತರಲ್ಲಿ ತಮ್ಮನ್ನೇ ಪ್ರಕಟಿಸಿದ ದೇವರು ಮಾನವ ಹೃದಯದ ಗಾಢ ಅಭಿಲಾಷೆಯನ್ನೂ ಈಡೇರಿಸಬಲ್ಲರು. ಪರಿಪೂರ್ಣ ಮನುಷ್ಯರಾದ ಪ್ರಭುಕ್ರಿಸ್ತರನ್ನು ಅನುಸರಿಸುವವನು ಮಾತ್ರ ಸಂಪೂರ್ಣ ಮಾನವನಾಗಬಹುದು. ಅವರು ತಮ್ಮ ದೇಹಾಂಭರತೆಯಿಂದ ಆತ್ಮಶರೀರದ ಇಡೀ ಮಾನವನನ್ನು, ಅವನಿಗಾಗಿ ದೇವರು ಸೃಷ್ಟಿಸಿದ ಸಮಸ್ತ ಸೃಷ್ಟಿಯನ್ನೂ ತಮ್ಮ ಮರಣ ಮತ್ತು ಪುನರುತ್ಥಾನದ ಮುಖಾಂತರ ಪುನೀತಗೊಳಿಸಿದರು.

**ಧರ್ಮಸಭೆ ಮತ್ತು ಮಾನವ ಕುಟುಂಬ :** ದೇವರ ಮಕ್ಕಳ ಕುಟುಂಬವು ಪ್ರಭು ಕ್ರಿಸ್ತರ ಐಕ್ಯದ ಅಸ್ತಿವಾರದ ಮೇಲೆ ಕಟ್ಟಲಾಗಿದೆ. ಆದುದರಿಂದ ಮಾನವ ಜನಾಂಗದ ಒಗ್ಗಟ್ಟು ಮತ್ತು ರಕ್ಷಣೆ ಸಾಧ್ಯವಾಗುತ್ತದೆ. ಪ್ರಭು ಕ್ರಿಸ್ತರು ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಕ್ಷೇತ್ರಗಳ ಬಗ್ಗೆ ಯಾವ ನಿರ್ದಿಷ್ಟ ನಿರ್ದೇಶನವನ್ನು ನೀಡಲಿಲ್ಲ. ಆದರೂ ತನ್ನ ಧಾರ್ಮಿಕ ನಿಯೋಗದ ಆಧಾರದ ಮೇಲೆ ಮಾನವ ಸಮುದಾಯ ದೈವ ನಿಯಮದ ಪ್ರಕಾರ ರೂಪಿತಗೊಂಡು ಸ್ಥಿರವಾಗಿರುವಂತೆ ಧರ್ಮಸಭೆ ನೋಡಿಕೊಳ್ಳಬೇಕು. ಅಷ್ಟು ಮಾತ್ರವಲ್ಲದೆ ಅಗತ್ಯ ಸಂದರ್ಭಗಳಲ್ಲಿ ಮಾನವರ ಪ್ರಮುಖವಾಗಿ ಬಡಬಗ್ಗರ ಹಿತಾಸಕ್ತಿ ಕಾರ್ಯಗಳನ್ನು ಕೈಗೊಳ್ಳುವಂತೆ ಮಾಡಬೇಕು. ಧರ್ಮಸಭೆಯು ಇಂದಿನ ಸಾಮಾಜಿಕ ಚಳುವಳಿಗಳಲ್ಲಿರುವ ಯೋಗ್ಯ ಅಂಶಗಳನ್ನು ಅತಿ ಗೌರವದಿಂದ ಮಾನ್ಯ ಮಾಡುತ್ತದೆ. ಪ್ರಮುಖವಾಗಿ ಐಕ್ಯಮತ್ಯಕ್ಕಾಗಿ ಕೈಗೊಂಡ ಕಾರ್ಯಗಳು, ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿರುವ ಸಂಘ ಸಂಸ್ಥೆಗಳ ಸುವ್ಯವಸ್ಥಿತ ಸಮಾಜೀಕರಣವನ್ನು ಬೆಂಬಲಿಸುತ್ತದೆ. ಐಕ್ಯಮತ್ಯವನ್ನು



ಪ್ರೋತ್ಸಾಹಿಸುವುದು ಧರ್ಮಸಭೆಯ ಆದ್ಯ ಗುಣಲಕ್ಷಣ. ಧರ್ಮಸಭೆ ಮಾನವ ಸಮುದಾಯಗಳನ್ನು ಒಳಗೊಂಡ ಕುಟುಂಬ. ಅದು ಯೇಸು ಕ್ರಿಸ್ತರೊಂದಿಗೂ ಪವಿತ್ರಾತ್ಮರಿಂದ ನಿಕಟವಾಗಿ ಬಂಧಿಸಲ್ಪಟ್ಟಿದೆ. ತನ್ನ ನಿಯೋಗ ಮತ್ತು ಸ್ವಭಾವದ ದೆಸೆಯಿಂದ ಅದು ಯಾವ ಮಾನವ ಸಂಸ್ಕೃತಿಗೂ, ಯಾವ ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ನೀತಿಗೂ ಸೇರಿಲ್ಲ. ತನ್ನ ಈ ಸಾರ್ವತ್ರಿಕ ಲಕ್ಷಣದ ದೆಸೆಯಿಂದ ಅದು ವಿವಿಧ ಸಮುದಾಯ ಮತ್ತು ದೇಶಗಳನ್ನು ಅನ್ಯೋನ್ಯತೆಯ ಬಂಧನದಲ್ಲಿ ತರಬಲ್ಲದು. ಜನರು ತಮಗಾಗಿ ಸ್ಥಾಪಿಸಿರುವ ಮತ್ತು ನಿರಂತರ ಸ್ಥಾಪಿಸುತ್ತಿರುವ ಸಂಘ ಸಂಸ್ಥೆಗಳನ್ನು ಧರ್ಮಸಭೆ ಮಾನ್ಯಮಾಡುತ್ತದೆ. ಈ ಸಂಘ ಸಂಸ್ಥೆಗಳು ದೇವರ ಮಕ್ಕಳಿಗೆ ಸಹಜವಾದ ಮನೋಭಾವದಿಂದ ಕಷ್ಟತೊಂದರೆಗಳನ್ನು ಜಯಿಸಬೇಕು, ಅವುಗಳಿಗೆ ನ್ಯಾಯಬದ್ಧ ಆಂತರಿಕ ಬೆಂಬಲವನ್ನು ಅವುಗಳಿಗೆ ಕೊಡಬೇಕೆಂದು ಬೋಧಿಸುತ್ತದೆ. ಸರ್ವರ ಹಿತವನ್ನು ಬಯಸುವ ಧರ್ಮಸಭೆ ಸಾರ್ವಜನಿಕ ಅಗತ್ಯಗಳನ್ನೂ, ತನ್ನ ನಿಯೋಗವನ್ನು ಮಾನ್ಯ ಮಾಡಿದ ಎಲ್ಲ ಸರ್ಕಾರಗಳಿಂದ ಸ್ವಯಂ ಪ್ರಗತಿಗೆ ಅಗತ್ಯವಾದ ಸ್ವಾತಂತ್ರ್ಯವನ್ನು ನಿರ್ಭಯದಿಂದ ಎದುರು ನೋಡುತ್ತದೆ.

**ಕ್ರೈಸ್ತ ಭಕ್ತರ ಕರ್ತವ್ಯಗಳು :** ಪರಲೋಕದಲ್ಲಿ ಪರಿಪೂರ್ಣತೆಯನ್ನು ಗಳಿಸುವ ಜೀವನಕ್ಕೆ ಕ್ರೈಸ್ತರು ಕರೆಯಲ್ಪಟ್ಟಿದ್ದಾರೆ. ಆದರೆ ಅವರು ಈ ಲೋಕದಲ್ಲಿ ಜೀವಿಸಬೇಕು. ಅವರ ಪರಿಪೂರ್ಣತೆ ಈ ಲೋಕದ ಬಾಳಿನೊಂದಿಗೆ ಹೆಣೆಯಲ್ಪಟ್ಟಿದೆ. ಅವರು ಈ ಬಾಳಿನ ಕರ್ತವ್ಯಗಳನ್ನು ಮನಸ್ಸಾಕ್ಷಿಗೆ ತಕ್ಕಂತೆ ಶುಭ ಸಂದೇಶದ ಮನೋಭಾವನೆಗೆ ಅನುಗುಣವಾಗಿ ಅನುಷ್ಠಾನಕ್ಕೆ ತರಬೇಕು. ಅವರ ಲೌಕಿಕ ಕೆಲಸ ಕಾರ್ಯಗಳು ಧಾರ್ಮಿಕ ಕರ್ತವ್ಯಗಳೊಂದಿಗೆ ಸೇರ್ಪಡೆಯಾಗಿರಬೇಕೇ ವಿನಃ ಬಾಹಿರವಾಗಿರಬಾರದು. ಕರಕುಶಲ ಕೆಲಸಮಾಡಿ ದೇವರನ್ನು ಪ್ರಭು ಕ್ರಿಸ್ತರು ಮಹಿಮೆಪಡಿಸಿದರು ಎಂಬುದರಲ್ಲಿ ಕ್ರೈಸ್ತರು ಹೆಮ್ಮೆಪಡಬೇಕು. ಎಲ್ಲ ಲೌಕಿಕ ಕಾರ್ಯಕಲಾಪಗಳನ್ನು, ಮಾನವೀಯ, ಗ್ರಹಸ್ಥ, ಔದ್ಯೋಗಿಕ, ಸಾಮಾಜಿಕ ಮತ್ತು ತಾಂತ್ರಿಕ ಉದ್ದಿಮೆಗಳನ್ನು ಕೈಗೊಳ್ಳುವಾಗ ಅವುಗಳನ್ನು ಧಾರ್ಮಿಕ ಮೌಲ್ಯಗಳೊಂದಿಗೆ ಸಮ್ಮಿಳಿತಗೊಳಿಸುವ ಅವಕಾಶವಿದೆ. ಹೀಗೆ ಅವರು ಎಲ್ಲಾ ಚಟುವಟಿಕೆಗಳನ್ನು ದೇವರ ಮಹಿಮೆಗಾಗಿ ಸೌಹಾರ್ದಯುತವಾಗಿ ಮಾಡಬಹುದಾಗಿದೆ. ಲೌಕಿಕ ಕರ್ತವ್ಯ ಕೆಲಸ ಕಾರ್ಯಗಳು ನಿಖರವಾಗಿ ಅಲ್ಲದಿದ್ದರೂ ಸಾಮಾನ್ಯವಾಗಿ ಶ್ರೀ ಸಾಮಾನ್ಯರಿಗೇ ಸೇರುತ್ತವೆ. ಅವುಗಳನ್ನು ಶುಭ ಸಂದೇಶದ ಮನೋಭಾವದಿಂದ ನಿಷ್ಠೆಯಿಂದ ನಿರ್ವಹಿಸುವಂತೆ ಯಾಜಕವರ್ಗ ಅವರಿಗೆ ಬೋಧಿಸಬೇಕು. ಯಾಜಕರ ಮತ್ತು ಶ್ರೀಸಾಮಾನ್ಯರ ಪಾತ್ರ ಭಿನ್ನವಾಗಿದ್ದರೂ ಸೂಕ್ತ ಸಂವಾದದಿಂದ ಒಬ್ಬರಿಗೊಬ್ಬರು ಸಾರ್ವಜನಿಕ ಹಿತಾಸಕ್ತಿಯಿಂದ ನೆರವಾಗಬಹುದು.

**ಧರ್ಮಸಭೆಗೆ ಜಗತ್ತಿನ ನೆರವು :** ಧರ್ಮಸಭೆಯು ಇತಿಹಾಸದಲ್ಲಿ ಕ್ರಿಯಾತ್ಮಕವಾಗಿ ಪ್ರತ್ಯಕ್ಷವಾಗಿರುವುದನ್ನು ಜಗತ್ತು ಅಂಗೀಕರಿಸಬೇಕು. ಧರ್ಮಸಭೆಯು ಈ ಇತಿಹಾಸದಿಂದ ಮತ್ತು ಮಾನವ ವಿಕಾಸದಿಂದ ಅಪಾರ ಲಾಭವನ್ನು ಗಳಿಸಿದೆಯೆಂದು ಮನಪೂರ್ವಕವಾಗಿ ಒಪ್ಪಿಕೊಳ್ಳುತ್ತದೆ. ಕಳೆದ ಯುಗಗಳ ಅನುಭವ, ವಿಜ್ಞಾನದ ಪ್ರಗತಿ, ವಿವಿಧ ಮಾನವ ಸಂಸ್ಕೃತಿಗಳಲ್ಲಿ ಅಡಗಿರುವ ಸಂಪತ್ತು ಇವೆಲ್ಲವೂ ಮಾನವ ಸ್ವಭಾವವನ್ನು ಬೆಳಕಿಗೆ ತಂದಿವೆ, ಸತ್ಯಾನ್ವೇಷಣೆಗೆ ಹೊಸಹೊಸ ಮಾರ್ಗವನ್ನು ತೋರಿಸಿಕೊಟ್ಟಿದೆ. ಇದರಿಂದ ಧರ್ಮಸಭೆಯೂ ಲಾಭವನ್ನು ಗಳಿಸಿದೆ. ಧರ್ಮಸಭೆಯು

ಆದಿಯಿಂದಲೂ ವಿವಿಧ ಸಂಸ್ಕೃತಿಗಳಿಗೆ ಅನುಗುಣವಾಗಿ ಶುಭಸಂದೇಶವನ್ನು ಬೋಧಿಸುತ್ತಾ ಬಂದಿದೆ. ಧರ್ಮಸಭೆಗೂ ಇತರೆ ಸಂಸ್ಕೃತಿಗಳಿಗೂ ನಿಕಟ ಸಂಬಂಧ ಏರ್ಪಟ್ಟಿದೆ. ಈ ಸಂಬಂಧವನ್ನು ಪೋಷಿಸಬೇಕಾದರೆ ಈ ಪ್ರಪಂಚದಲ್ಲಿ ಜೀವಿಸುತ್ತಿರುವ ಮತ್ತು ವಿವಿಧ ಸಂಘ ಸಂಸ್ಥೆಗಳ ವಿಶಿಷ್ಠತೆಯನ್ನೂ ಅರಿತವರ ಸಹಾಯ ಅಗತ್ಯ. ಅವರು ಇವುಗಳ ಗೂಡಾರ್ಥವನ್ನು ಭಕ್ತ ವಿಶ್ವಾಸಿಗಳ ಮತ್ತು ಅವಿಶ್ವಾಸಿಗಳ ದೃಷ್ಟಿಕೋನದಿಂದ ಕಂಡುಹಿಡಿದಿರುವ ವಿಚಾರವನ್ನು ಧರ್ಮಸಭೆ ಎದುರು ನೋಡುತ್ತದೆ. ಜಗತ್ತಿನ ಜನರ ಸಾಮಾಜಿಕ ಅಭಿವೃದ್ಧಿಯಿಂದ ಧರ್ಮಸಭೆಗೆ ಉಪಯೋಗವಾಗುತ್ತದೆ. ಅದನ್ನು ವಿರೋಧಿಸಿ ಹಿಂಸಿಸುವವರಿಂದಲೂ ಧರ್ಮಸಭೆ ಪ್ರಯೋಜನವನ್ನು ಪಡೆದುಕೊಂಡಿದೆ. ಇವೆಲ್ಲವುಗಳಿಂದ ಧರ್ಮಸಭೆ ತನ್ನ ಸಂವಿಧಾನವನ್ನು ಆಳವಾಗಿ ಅರ್ಥಮಾಡಿಕೊಳ್ಳಲೂ, ಚೆನ್ನಾಗಿ ತಿಳಿಯಪಡಿಸಲೂ, ಪ್ರಸುತ್ತ ಸಮಯಕ್ಕೆ ತಕ್ಕಂತೆ ಹೊಂದಿಸಿಕೊಳ್ಳಲೂ ಶಕ್ತವಾಗುತ್ತದೆ.

**ಧರ್ಮಸಭೆಯ ಏಕೈಕ ಗುರಿ :** ಈ ಭೂಲೋಕಕ್ಕೆ ನೆರವಾಗಿ ಅದರಿಂದ ಪ್ರಯೋಜನ ಪಡೆಯುತ್ತಿರುವ ಧರ್ಮಸಭೆ ಒಂದೇ ಗುರಿಯನ್ನು ಹೊಂದಿದೆ. ಅದೇ ದೇವರ ಸಾಮ್ರಾಜ್ಯದ ಆಗಮನ. ಇದರ ಮುಖಾಂತರ ಇಡೀ ಮಾನವ ಜನಾಂಗದ ರಕ್ಷಣೆಯಾಗಬೇಕು. ಪರಲೋಕ ಮತ್ತು ಇಹಲೋಕದಲ್ಲಿರುವ ಸಮಸ್ತವೂ ಪ್ರಭು ಕ್ರಿಸ್ತರಿಂದ ಪುನಸ್ಥಾಪನೆಯಾಗಬೇಕು (ನೋಡಿ ಎಫೆಸ 11:10). ಅವರೇ 'ಅ'ಕಾರವೂ 'ಳ'ಕಾರವೂ, ಆದಿಯೂ ಅಂತ್ಯವೂ, ಪ್ರಾರಂಭವೂ ಸಮಾಪ್ತಿಯೂ ಆಗಿದ್ದಾರೆ (ನೋಡಿ ಪ್ರಕಟಣೆ 22:12-13)

## ಭಾಗ II

### ಕೆಲವು ತುರ್ತು ಗಮನಾರ್ಹ ಸಮಸ್ಯೆಗಳು

ಮಾನವ ಜೀವಿಯ ಘನತೆ ಮತ್ತು ಅವನು ವೈಯಕ್ತಿಕವಾಗಿ ಹಾಗೂ ಸಮಾಜದ ಸದಸ್ಯನಾಗಿ ಕೈಗೊಳ್ಳಬೇಕಾದ ಕರ್ತವ್ಯಗಳನ್ನು ಸಮ್ಮೇಳನ ಪ್ರಸ್ಥಾಪಿಸಿತು. ಆನಂತರ ಪ್ರಸ್ತುತ ಯುಗದ ತುರ್ತು ಅಗತ್ಯಗಳ ಬಗ್ಗೆ ಗಮನ ಹರಿಸುತ್ತಾ ಅವುಗಳನ್ನು ಶುಭ ಸಂದೇಶದ ಬೆಳಕಿನಲ್ಲಿ ಮತ್ತು ಮಾನವ ಅನುಭವದ ಆಧಾರದ ಮೇಲೆ ಪರಿಹರಿಸುವಂತೆ ಆದೇಶಿಸಿತು.

1) ವಿವಾಹ ಮತ್ತು ಕುಟುಂಬದ ಮಹತ್ವ
2) ಸಂಸ್ಕೃತಿಯ ಸೂಕ್ತ ಬೆಳವಣಿಗೆ
3) ಅರ್ಥಿಕ ಮತ್ತು ಸಾಮಾಜಿಕ ಜೀವನ
4) ರಾಜಕೀಯ ಸಮುದಾಯದ ಜೀವನ
5) ಶಾಂತಿಪಾಲನೆ ಮತ್ತು ರಾಷ್ಟ್ರಗಳ ಸಮುದಾಯ



## ಅಧ್ಯಾಯ I

### ವಿವಾಹ ಮತ್ತು ಕುಟುಂಬದ ಮಹತ್ವ

**ವಿವಾಹ ಮತ್ತು ಕುಟುಂಬದ ಸಮಸ್ಯೆಗಳು :** ಮಾನವ ಜೀವಿಯ ಹಿತ ಮತ್ತು ಇಡೀ ಮಾನವ ಜನಾಂಗದ ಕಲ್ಯಾಣ ವಿವಾಹ ಮತ್ತು ಕುಟುಂಬ ಜೀವನದೊಂದಿಗೆ ಸಂಬಂಧಿತವಾಗಿದೆ. ಆದುದರಿಂದ ವಿವಾಹ ಮತ್ತು ಕುಟುಂಬದ ಸಮಸ್ಯೆ ಎಲ್ಲಕ್ಕಿಂತಲೂ ಮಿಗಿಲಾಗಿ ಭೂಲೋಕದ ಜನರನ್ನು ಇಂದು ಕಾಡುತ್ತಿದೆ. ಬಹು ಪತ್ನಿತ್ವ, ಮುಕ್ತ ಪ್ರೀತಿ, ವಿಚ್ಛೇದನೆ, ಇವು ವಿವಾಹದ ಆಸ್ತಿವಾರಕ್ಕೆ ಅಪಾಯಕಾರಿಯಾಗಿವೆ. ಕೆಲವೆಡೆ ವಿವಾಹದ ಮುಖ್ಯ ಗುಣಲಕ್ಷಣವನ್ನು ಹೊರನೋಟಕ್ಕೆ ಮಾತ್ರ ಕಾಪಾಡಲಾಗಿದ್ದು ಅಲ್ಲಿ ಸ್ವಾರ್ಥ, ಸುಖ ಭೋಗ, ಅನೈತಿಕ ವೈವಾಹಿಕ ನಡವಳಿಕೆಗಳು ವಿವಾಹದ ನೈಜ್ಯ ಪ್ರೀತಿಗೆ ದಕ್ಕೆ ತಂದಿವೆ. ಬಾಹ್ಯ ಅರ್ಥಿಕ ಮತ್ತು ಸಾಮಾಜಿಕ ಒತ್ತಡಗಳು ಪ್ರತಿಕೂಲ ಪರಿಣಾಮವನ್ನು ಬೀರಿವೆ. ಜನಸಂಖ್ಯಾ ಸ್ಫೋಟವೂ ಕೆಲವು ದೇಶಗಳಲ್ಲಿ ಪರಿಸ್ಥಿತಿಯನ್ನು ಹದಗೆಡಿಸಿದೆ. ಇಂಥಹ ದುಸ್ಥಿತಿಯಲ್ಲಿ ವಿವಾಹದ ಪಾವಿತ್ರತೆ ಮತ್ತು ಮಹತ್ವವನ್ನು ಕಾಪಾಡಲು ಮತ್ತು ಪ್ರೋತ್ಸಾಹಿಸಲು ಪ್ರಯತ್ನಪಡುವವರಿಗೆ ಧರ್ಮಸಭೆ ತನ್ನ ಸಲಹೆ ಮತ್ತು ಸಹಕಾರ ನೀಡಲು ಅಪೇಕ್ಷಿಸುತ್ತದೆ.

**ವಿವಾಹದ ಬಗ್ಗೆ ದೈವಿಕ ಯೋಜನೆ:** ದೇವರೇ ವಿವಾಹದ ಕರ್ತರು. ಅವರು ವಿವಾಹವನ್ನು ಪತಿ ಪತ್ನಿಯರ ಜೀವನ ಮತ್ತು ಪ್ರೀತಿಯ ಮಧ್ಯೆ ನಿಕಟ ಬಾಂಧವ್ಯವನ್ನು ಏರ್ಪಡಿಸಲು ಸ್ಥಾಪಿಸಿದರು. ವಧುವರರು ಪರಸ್ಪರ ಸಮ್ಮತಿಯೊಂದಿಗೆ ವಿವಾಹವಾಗುತ್ತಾರೆ. ಅದೊಂದು ವಿಭಜಿಸಲಾಗದ ಪವಿತ್ರ ಬಂಧನವಾಗುತ್ತದೆ. ಮಾನವನಿಂದ ಅದನ್ನು ಬಿಡಿಸಲಾಗುವುದಿಲ್ಲ. ಮಕ್ಕಳ ಜನನ ಮತ್ತು ಶಿಕ್ಷಣ ಈ ಬಂಧನದ ಜವಾಬ್ದಾರಿಯಾಗಬೇಕೆಂದು ಧರ್ಮಸಭೆ ಅಪೇಕ್ಷಿಸುತ್ತದೆ. ಹೀಗೆ ಸಂತಾನ ಭಾಗ್ಯವನ್ನು ಪಡೆದ ದಂಪತಿಗಳು ಸೃಷ್ಟಿಕರ್ತ ದೇವರೊಡನೆ ಸಹಕರಿಸುತ್ತಾರೆ. ಅವರು ದೇವರ ಕುಟುಂಬವನ್ನು ದಿನದಿಂದ ದಿನಕ್ಕೆ ಬೆಳೆಸುತ್ತಾ ಅದನ್ನು ಸಂಪತ್ಭರಿತಗೊಳಿಸುತ್ತಾರೆ. ಈ ಕಾರಣ ಮಾನವ ಜನಾಂಗದ ಬೆಳವಣಿಗೆಗೆ ವಿವಾಹ ನಿರ್ಮಿಸಲಾಗಿದೆ. ಅದು ವ್ಯಕ್ತಿಯ ಸ್ವ ಬೆಳವಣಿಗೆ ಅನಂತ ಗುರಿ ಮಾತ್ರವಲ್ಲ, ಸಮಾಜ ಮತ್ತು ಕುಟುಂಬದ ಸದಸ್ಯರ ಘನತೆ, ಸ್ಥಿರತೆ ಶಾಂತಿ ಮತ್ತು ಸಮೃದ್ಧಿಯನ್ನು ಕಾದಿರಿಸುತ್ತದೆ.

**ಕ್ರೈಸ್ತ ವಿವಾಹ :** ಪ್ರಭು ಕ್ರಿಸ್ತರು ವಿವಾಹವನ್ನು ಸಂಸ್ಕಾರದ ಅಂತಸ್ಥಿಗೆ ಏರಿಸಿದರು. ಅವರು ದಾಂಪತ್ಯ ಪ್ರೀತಿಯನ್ನು ಹರಸಿ ಅದು ದೈವಿಕ ಪ್ರೀತಿಯಿಂದ ಉಗಮಿಸುತ್ತದೆ, ಅದು ತಮಗೂ ಧರ್ಮಸಭೆಗೂ ಇರುವ ನಿಕಟ ಸಂಬಂಧವನ್ನು ಸೂಚಿಸುತ್ತದೆ ಎಂದರು. ಪ್ರಭು ಕ್ರಿಸ್ತರು ಧರ್ಮಸಭೆಯನ್ನು ಪ್ರೀತಿಸಿ ಅದಕ್ಕಾಗಿ ನಮ್ಮ ಪರವಾಗಿ ಪ್ರಾಣಾರ್ಪಣೆ ಮಾಡಿದರು. ಆದುದರಿಂದ ದಂಪತಿಗಳೂ ಸಹ ಪರಸ್ಪರರನ್ನು ಪ್ರಾಮಾಣಿಕತೆ ಮತ್ತು ನಿಸ್ವಾರ್ಥದಿಂದ ನಿತ್ಯ ಪ್ರೀತಿಸಬೇಕು. ಈ ಸಂಸ್ಕಾರದ ನಿಮಿತ್ತ ಅವರು ವಿವಾಹದ ಮತ್ತು ಕುಟುಂಬದ ಜವಾಬ್ದಾರಿಗಳನ್ನು ಈಡೇರಿಸುವಾಗ ಕ್ರೈಸ್ತ ಮನೋಭಾವದಿಂದ ಪ್ರೇರಿತರಾಗಬೇಕು. ಈ ಮನೋಭಾವ ಅವರ ಇಡೀ ಜೀವನವನ್ನು ವಿಶ್ವಾಸ, ಭರವಸೆ ಮತ್ತು ಪ್ರೀತಿಯಿಂದ ಆವರಿಸುತ್ತದೆ. ಮಾನವ ಮತ್ತು ದೈವೀ ಪ್ರೀತಿ ಸಮ್ಮಿಳಿತಗೊಂಡಾಗ ದಂಪತಿಗಳು ತಮ್ಮನ್ನೇ ಪರಸ್ಪರರಿಗೆ ಸ್ವಂತ ಇಚ್ಛೆಯಿಂದ ಸಮರ್ಪಿಸಿಕೊಳ್ಳಲು ಶಕ್ತರಾಗುತ್ತಾರೆ. ಅವರು ದೇಹಾತ್ಮದೊಂದಿಗೆ ಸುಖ ಸಂಕಟದಲ್ಲಿ, ಸರ್ವ ಕಾಲದಲ್ಲಿ ನಿಷ್ಠೆಯಿಂದ ಸಾಗುತ್ತಾರೆ. ಅವರ ಸಂಬಂಧ ಪ್ರಾಮಾಣಿಕವಾಗಿದ್ದು ಪರಸ್ಪರ

ಹೊಂದಾಣಿಕೆಯಿಂದ ಮಕ್ಕಳ ಶಿಕ್ಷಣದಲ್ಲೂ ಅವರು ಅಪರೂಪ ಸಾಕ್ಷಿಗಳಾಗಿ ನಡೆದುಕೊಳ್ಳುತ್ತಾರೆ.

**ಮಕ್ಕಳ ಜನನ ಮತ್ತು ಶಿಕ್ಷಣ :** ಮಕ್ಕಳಿಗೆ ಜನ್ಮಕೊಡುವುದು, ಶಿಕ್ಷಣವನ್ನೀಯುವುದು ತಮ್ಮ ನಿರ್ದಿಷ್ಟ ಕರ್ತವ್ಯವೆಂದು ಜನ್ಮಧಾತರು ತಿಳಿಯಬೇಕು. ಈ ಕಾರ್ಯವನ್ನು ಒಮ್ಮನಸ್ಸಿನಿಂದ ಮತ್ತು ಸ್ವಪ್ರಯತ್ನದಿಂದ ಈಡೇರಿಸುವಾಗ ತಮ್ಮ ಮತ್ತು ಮಕ್ಕಳ ಹಿತವನ್ನು ಗಮನದಲ್ಲಿಡಬೇಕು. ಪ್ರಸ್ತುತ ಕಾಲವನ್ನು ಗಣನೆಗೆ ತಂದುಕೊಂಡು ಭೌತಿಕ ಮತ್ತು ಆಧ್ಯಾತ್ಮಿಕ ಪರಿಸ್ಥಿತಿಯನ್ನೂ ಜೊತೆಗೆ ಕುಟುಂಬದ, ಸಮಾಜದ ಮತ್ತು ಧರ್ಮಸಭೆಯ ಒಳಿತನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಜನ್ಮಧಾತರು ಹೊರತು ಮತ್ಯಾರೂ ಅಂತಿಮವಾಗಿ ಮಕ್ಕಳ ಸಂಖ್ಯೆಯನ್ನು ನಿರ್ಧರಿಸುವಂತಿಲ್ಲ. ಈ ತೀರ್ಮಾನ ದೇವರ ನಿಯಮಕ್ಕೆ ತಕ್ಕಂತಿದ್ದು ಅದನ್ನು ಅಧಿಕೃತವಾಗಿ ಅರ್ಥೈಸುವ ಧರ್ಮಸಭೆಯ ಬೋಧನೆಗೆ ಅನುಗುಣವಾಗಿರಬೇಕು. ಸುಜ್ಞಾನ ಮತ್ತು ಪರಸ್ಪರ ವಿಚಾರ ವಿನಿಮಯ ಮಾಡಿ ದೊಡ್ಡ ಕುಟುಂಬವನ್ನು ಸಾಕಿ ಸಲಹುವ ಜವಾಬ್ದಾರಿಯನ್ನು ಹೊರುವ ಜನ್ಮದಾತರು ವಿಶೇಷ ಪುಣ್ಯಫಲಗಳಿಗೆ ಪಾತ್ರರು.

**ಅಧುನಿಕ ಪರಿಸರದ ಒತ್ತಡ :** ಕುಟುಂಬದಲ್ಲಿ ಮಕ್ಕಳ ಸಂಖ್ಯೆಯನ್ನು ಮಿತಗೊಳಿಸುವಂತೆ ಒತ್ತಡ ಹೇರುತ್ತಿರುವ ಅಧುನಿಕ ಪರಿಸರದ ಬಗ್ಗೆ ಧರ್ಮಸಭೆ ಚೆನ್ನಾಗಿ ತಿಳಿದಿದೆ. ಈ ಒತ್ತಡದ ಪರಿಣಾಮವಾಗಿ ಸ್ವಾಭಾವಿಕ ದಾಂಪತ್ಯ ಜೀವನದ ನಿಕಟತೆಗೆ ತೊಡಕು ಉಂಟಾಗುತ್ತದೆ. ಇದರಿಂದ ದಾಂಪತ್ಯ ಜೀವನದಲ್ಲಿ ನಿಷ್ಠೆ ಮತ್ತು ಫಲಪ್ರದತೆಗೆ ದಕ್ಕೆಯುಂಟಾಗಬಹುದು. ಹೀಗಿರುವಲ್ಲಿ ಮಕ್ಕಳಿಗೆ ಜನ್ಮವೀಯಬೇಕು ಮತ್ತು ನೈಜ್ಯ ದಾಂಪತ್ಯ ಜೀವನ ಪ್ರೀತಿಯಲ್ಲಿ ಮುನ್ನಡೆಸಬೇಕು ಎಂಬುದು ದೈವ ನಿಯಮ. ಈ ನಿಯಮ ತದ್ವಿರುದ್ಧವಾಗಿಸಲು ಸಾಧ್ಯವಿಲ್ಲ. ಗರ್ಭಧಾರಣೆಯಿಂದ ಜೀವವನ್ನು ಅತೀವ ಕಾಳಜಿಯಿಂದ ಕಾಪಾಡಬೇಕು. ಸಂತಾನ ನಿಯಂತ್ರಣದ ವಿಧಾನಗಳ ನೈತಿಕತೆಯನ್ನು ಮಾನವನ ವ್ಯಕ್ತಿತ್ವ ಮತ್ತು ಕ್ರಿಯೆಗಳ ನೈಜ್ಯ ಗುಣಗಳ ಆಧಾರದ ಮೇಲೆ ಪರಿಶೀಲಿಸಬೇಕು. ಪರಸ್ಪರ ಸಮರ್ಪಣೆ ಮತ್ತು ಮಾನವ ಸಂತಾನದ ನಿಜ ಅರ್ಥಕ್ಕೆ ತೊಡಕುಂಟಾಗಬಾರದು. ಈ ಗುರಿಯನ್ನು ತಲುಪಬೇಕಾದರೆ ದಾಂಪತ್ಯ ಜೀವನದಲ್ಲಿ ವಿರಕ್ತತ್ವವನ್ನು ನಿಷ್ಠೆಯಿಂದ ಅನುಸರಿಸಬೇಕು.

**ಮಕ್ಕಳ ತರಬೇತಿಯಲ್ಲಿ ಜನ್ಮದಾತರ ಪಾತ್ರ :** ಕುಟುಂಬ ಜೀವನ ಮತ್ತು ಕುಟುಂಬ ನಿಯೋಗ ಫಲಪ್ರದವಾಗಬೇಕಾದರೆ ತಂದೆಯ ಕ್ರಿಯಾತ್ಮಕ ಪ್ರಭಾವ, ತಾಯಿಯ ಪಾಲನೆ ಅತ್ಯಗತ್ಯ. ಸ್ತ್ರೀಯರ ನಿಯಮಬದ್ಧ ಸಾಮಾಜಿಕ ಪ್ರಗತಿಗೆ ದಕ್ಕೆಯಾಗದಂತೆ ತಾಯಂದಿರು ಮನೆ ಕೆಲಸವನ್ನು ನಿಯಂತ್ರಿಸಬೇಕು. ಮಕ್ಕಳು ತಮ್ಮ ಜೀವನದ ಅಂತಸ್ತನ್ನು ಪೂರ್ಣ ಜವಾಬ್ದಾರಿಯಿಂದ ಆಯ್ಕೆ ಮಾಡಲು ಶಕ್ತರಾಗುವಂತೆ ಅವರಿಗೆ ಸೂಕ್ತ ಶಿಕ್ಷಣವನ್ನು ಕೊಡಬೇಕು. ಅವರು ವಿವಾಹವಾಗಲು ಅಪೇಕ್ಷಿಸುವಾಗ ಸೂಕ್ತ ನೈತಿಕ, ಸಾಮಾಜಿಕ, ಅರ್ಥಿಕ ಪರಿಸರದಲ್ಲಿ ಕುಟುಂಬ ಜೀವನವನ್ನು ಪ್ರಾರಂಭಿಸಲು ಅಗತ್ಯವಾದ ಮಾರ್ಗದರ್ಶನ ಬುದ್ಧಿಮತಿಯನ್ನು ಜನ್ಮಧಾತರು ಕೊಡಬೇಕು. ಅದನ್ನು ಮಕ್ಕಳು ಸುಮನಸ್ಸಿನಿಂದ ಸ್ವೀಕರಿಸಿ ಅನುಸರಿಸಬೇಕು.

**ಕುಟುಂಬ ಜೀವನ ಸಂರಕ್ಷಣೆಯಲ್ಲಿ ಇತರೆ ವ್ಯಕ್ತಿಗಳ ಜವಾಬ್ದಾರಿ :** ಮೇಲೆ ಕಾಣಿಸಿದ ವಿಧಿ ನಿಯಮಗಳಿಗೆ



ಅನುಗುಣವಾಗಿ ಸಂಘಟಿತವಾದ ಕುಟುಂಬಗಳು ಆರೋಗ್ಯಕರ ಸಮಾಜವನ್ನು ಅಸ್ತಿತ್ವಕ್ಕೆ ತರುತ್ತವೆ. ಅಧಿಕಾರದಲ್ಲಿರುವ ವ್ಯಕ್ತಿಗಳು ಮತ್ತು ಪ್ರಭಾವಶಾಲಿಗಳು ಇಂಥಹ ಕುಟುಂಬಗಳ ಸ್ಥಾಪನೆಗೆ ಸೂಕ್ತ ಪರಿಸರವನ್ನು ನಿರ್ಮಿಸುವ ಜವಾಬ್ದಾರಿಯನ್ನೂ ಹೊಂದಿದ್ದಾರೆ. ಈ ಬಗ್ಗೆ ಭಕ್ತ ವಿಶ್ವಾಸಿಗಳು ತಮ್ಮ ಆದರ್ಶ ಜೀವನ ಮತ್ತು ಸುಮನಸ್ಕರೊಂದಿಗೆ ಸಹಕರಿಸುವುದರ ಮುಖಾಂತರ ಕ್ರಿಯಾತ್ಮಕರಾಗಬೇಕು. ವಿವಿಧ ವಿಷಯಗಳಲ್ಲಿ ಪರಿಣತರಾದ ವ್ಯಕ್ತಿಗಳು ಜೊತೆಗೂಡಿ ಸಂತಾನವನ್ನು ಸೂಕ್ತ ರೀತಿಯಲ್ಲಿ ನಿಯಂತ್ರಿಸಲು ಅಗತ್ಯವಾದ ಮಾಹಿತಿಯನ್ನು ಸಾಮಾನ್ಯ ಜನರಿಗೆ ನೀಡಬೇಕು. ಇದರ ಮುಖಾಂತರ ಕುಟುಂಬಗಳ ಕಲ್ಯಾಣ ಮತ್ತು ಮನಸ್ಸಾಕ್ಷಿಯ ನೆಮ್ಮದಿಗೆ ನೆರವಾಗುವುದು ಅಗತ್ಯ. ಸಮರ್ಪಕ ತರಬೇತಿಯನ್ನು ಪಡೆದ ಯಾಜಕರು ದೈವ ವಾಕ್ಯದ ಬೋಧನೆ, ದೈವಾರಾಧನಾ ವಿಧಿ, ಸಹನೆ ಮತ್ತು ಸಹಾನುಭೂತಿಯ ಆಧ್ಯಾತ್ಮಿಕ ಮಾರ್ಗದರ್ಶನವನ್ನೀಯಬೇಕು. ಇವುಗಳ ಜೊತೆಗೆ ಇತರ ಸೇವಾಕಾರ್ಯಗಳ ಮುಖಾಂತರವೂ ಯಾಜಕರು ಕುಟುಂಬಗಳ ಕಲ್ಯಾಣಕ್ಕಾಗಿ ನೆರವಾಗಬೇಕು. ಪತಿ ಪತ್ನಿಯರಿಗೆ ಮತ್ತು ಮಕ್ಕಳಿಗೆ ಕುಟುಂಬ, ಸಾಮಾಜಿಕ ಮತ್ತು ಪ್ರೇಷಿತ ಜೀವನದ ಬಗ್ಗೆ ತರಬೇತಿಯನ್ನು ಕೊಡಲು ಪರಿಣತ ಸಂಘ ಸಂಸ್ಥೆಗಳು ಶಿಕ್ಷಣಾ ಕಾರ್ಯಕ್ರಮವನ್ನು ಏರ್ಪಡಿಸಬೇಕು. ಹೀಗೆ ವಾಸ್ತವ ಪ್ರಯತ್ನ ಮತ್ತು ಆದರ್ಶ ಜೀವನದ ಮುಖಾಂತರ ಕ್ರೈಸ್ತ ವಿಶ್ವಾಸಿಗಳು ಪ್ರಭು ಕ್ರಿಸ್ತರು ತಮ್ಮ ಮರಣ ಮತ್ತು ಪುನರುತ್ಥಾನದ ಮುಖಾಂತರ ಈ ಲೋಕಕ್ಕೆ ಪ್ರತ್ಯಕ್ಷಗೊಳಿಸಿದ ಪ್ರೀತಿಯ ಜೀವನಕ್ಕೆ ಸಾಕ್ಷಿಗಳಾಗಬೇಕು.

## ಅಧ್ಯಾಯ II

## ಸೂಕ್ತ ಸಾಂಸ್ಕೃತಿಕ ಬೆಳವಣಿಗೆ

ಸಂಸ್ಕೃತಿ ಎಂದರೆ ಮಾನವನು ತನ್ನ ದೈಹಿಕ ಮತ್ತು ಆತ್ಮಿಕ ಗುಣಲಕ್ಷಣಗಳನ್ನು ಬೆಳೆಸಿಕೊಂಡು ಇಡೀ ಪ್ರಪಂಚವನ್ನು ತನ್ನ ಸ್ವಾಮ್ಯಕ್ಕೆ ತಂದು ಕುಟುಂಬ ಮತ್ತು ನಾಗರೀಕ ಜೀವನವನ್ನು ಅತ್ಯಧಿಕವಾಗಿ ಮಾನವೀಕರಿಸುವ ಪೂರ್ಣ ಪ್ರಕ್ರಿಯೆ. ಈ ಪ್ರಯತ್ನದಲ್ಲಿ ಮಾನವ ತನ್ನ ಅನುಭವದ ಭಂಡಾರವನ್ನು ವಿಸ್ತರಿಸುತ್ತಾನೆ ಮತ್ತು ಅದನ್ನು ಅವನು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಹಸ್ತಾಂತರಿಸುತ್ತಾನೆ.

ಸಾಂಸ್ಕೃತಿಗೆ ಚಾರಿತ್ರಿಕ ಮತ್ತು ಸಾಮಾಜಿಕ ಹಿನ್ನೆಲೆಯಿದೆ. ಅದು ಪ್ರತಿ ದೇಶದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಮತ್ತು ಕಲಾತ್ಮಕ ಮೌಲ್ಯವನ್ನು ಹೊಂದಿದೆ. ಅದು ಪ್ರತಿಯೊಂದು ದೇಶದ ಆಯಾ ಕಾಲದ ಮಾನವನ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ ಮತ್ತು ನಾಗರೀಕತೆಯನ್ನು ಅಭಿವೃದ್ಧಿಪಡಿಸುತ್ತದೆ.

**ನವ ಜೀವನ ಶೈಲಿ**

ನಾವು ಈಗ ಮಾನವನ ಇತಿಹಾಸದಲ್ಲಿ ಹೊಸ ಯುಗವನ್ನು ತಲುಪಿದ್ದೇವೆ. ಈ ಯುಗದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ನವ ನವೀನ ಮಾರ್ಗಗಳು ತೆರೆದಿವೆ. ನೈಸರ್ಗಿಕ, ಮಾನವೀಯ ಮತ್ತು

ಸಾಮಾಜಿಕ ಶಾಸ್ತ್ರಗಳು ಅಪಾರ ಪ್ರಗತಿಯನ್ನು ಸಾಧಿಸಿರುವುದರಿಂದ ವಾಣಿಜ್ಯ ಮಾರುಕಟ್ಟೆ ಮತ್ತು ವೈಜ್ಞಾನಿಕ ಪ್ರಗತಿ ತೀವ್ರಗತಿಯಲ್ಲಿ ಸಾಗಿದೆ. ಹೊಸ ಹೊಸ ಸಂಪರ್ಕ ಸಾಧನಗಳ ದೆಸೆಯಿಂದ ಇಂದಿನ ಸಂಸ್ಕೃತಿ ಹೊಸ ಪ್ರಜ್ಞೆಯನ್ನೂ ಮೂಡಿಸಿದೆ. ಅದು ಅಧಿಕ ವಿಮರ್ಶೆಗೆ ಒಳಪಟ್ಟು ಉತ್ತಮ ಗುಣಮಟ್ಟದೊಂದಿಗೆ ಜನತೆಗೆ ಲಭ್ಯವಾಗಿದೆ. ಇದರ ಪರಿಣಾಮವಾಗಿ ವಿಶ್ವವ್ಯಾಪಿ ಸಂಸ್ಕೃತಿಯೊಂದು ಕ್ರಿಯಾತ್ಮಕವಾಗುತ್ತಿದೆ. ಅದು ವಿವಿಧ ಸಂಸ್ಕೃತಿಗಳಲ್ಲಿರುವ ಉತ್ತಮ ಗುಣಗಳನ್ನು ಉಳಿಸಿಕೊಂಡು ಮಾನವ ಜನಾಂಗದ ಐಕ್ಯತೆಯನ್ನು ಬೆಳೆಸಲು ಸಹಾಯಕವಾಗಿದೆ.

**ಮಾನವ, ಸಂಸ್ಕೃತಿಯ ನೇತಾರ**

ನಾವೇ ವೈಯಕ್ತಿಕವಾಗಿ ನಮ್ಮ ಸಮುದಾಯದ ಸಂಸ್ಕೃತಿಯನ್ನು ನಿರ್ಧರಿಸುವ ಕರ್ತೃಗಳು. ಈ ಸ್ವಾಯತ್ತತೆಯ ಜೊತೆಯಲ್ಲಿ ಉತ್ತಮ ಸಮಾಜವನ್ನು ಕಟ್ಟುವ ಜವಾಬ್ದಾರಿ ನಮ್ಮ ಮೇಲಿದೆ. ಅದನ್ನು ಸತ್ಯ ಮತ್ತು ನ್ಯಾಯದ ಅಸ್ತಿವಾರದ ಮೇಲೆ ಸ್ಥಾಪಿಸಿ ಮಾನವ ಜನಾಂಗದ ಆಧ್ಯಾತ್ಮಿಕ ಮತ್ತು ನೈತಿಕ ಫಲಪ್ರಧತೆಯನ್ನು ಸಾಧಿಸಬೇಕಾಗಿದೆ.

**ಸಮಸ್ಯೆಗಳು :**

ಈ ಹೊಸ ವಿಚಾರಗಳು ಹೊಸ ಸಮಸ್ಯೆಗಳನ್ನು ತಂದಿವೆ. ವಿಭಿನ್ನ ಅಭಿಪ್ರಾಯಗಳನ್ನು ನಾವು ಎದುರಿಸಿ ಅವುಗಳನ್ನು ಸಮಜಾಯಿಸಬೇಕಾಗಿದೆ.

ಅಂತರ ರಾಷ್ಟ್ರೀಯ ಸಂವಾದ ಮತ್ತು ರಾಷ್ಟ್ರೀಯ ಸಂಸ್ಕೃತಿಯ ನಡುವೆ ದ್ವಂದ್ವ

ಸಾಂಸ್ಕೃತಿಕ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ನಿಷ್ಠೆಯ ಮಧ್ಯೆ ದ್ವಂದ್ವ

ಶಿಕ್ಷಣ ಕ್ಷೇತ್ರದಲ್ಲಿ ತೀವ್ರವಾಗುತ್ತಿರುವ ಪರಿಣತೆ ಮತ್ತು ಸುಜ್ಞಾನ ತರುವ ಸಾಮಾನ್ಯ ಸಮನ್ವತೆಯ ಮಧ್ಯೆ ದ್ವಂದ್ವ

ಸಾಂಸ್ಕೃತಿಕ ಸ್ವಾಯತ್ತತೆ ಮತ್ತು ಆಧ್ಯಾತ್ಮಿಕ ಪ್ರಾಮುಖ್ಯತೆಯ ನಡುವೆ ದ್ವಂದ್ವ

ಮಾನವ ಸಂಸ್ಕೃತಿ ಇಂದು ಈ ದ್ವಂದ್ವಗಳ ಮಧ್ಯೆ ಇಡೀ ಮಾನವ ವ್ಯಕ್ತಿತ್ವವನ್ನು ವಿಕಾಸಗೊಳಿಸಬೇಕಾಗಿದೆ. ಜೊತೆಗೆ ಮಾನವನು ಸಮಾಜದಲ್ಲಿ ಜವಾಬ್ದಾರಿಯುತನಾಗಿ ಜೀವಿಸಲು ನೆರವು ನೀಡಬೇಕು.

**ಸಂಸ್ಕೃತಿಯ ಬೆಳವಣಿಗೆಗೆ ಕೆಲವು ಸೂತ್ರಗಳು**

ಸ್ವರ್ಗ ಸಂಬಂಧಿತವಾದವುಗಳನ್ನು ಅರಸುವುದು ಪ್ರತಿ ಕ್ರೈಸ್ತ ಭಕ್ತನ ಕರ್ತವ್ಯವಾಗಿದ್ದು ಅದರಲ್ಲಿ ಯಾವ ರಿಯಾಯಿತಿಯೂ ಇರುವುದಿಲ್ಲ. ಅವನು ಉತ್ತಮ ಜಗತ್ತನ್ನು ನಿರ್ಮಿಸುವ ಕಾರ್ಯದಲ್ಲಿ ಇತರರೊಡನೆ ಸಹಕರಿಸುವ ಚಟುವಟಿಕೆಯನ್ನು ಅಧಿಕಗೊಳಿಸಬೇಕು, ಈ ಭೂಲೋಕವನ್ನು ಸ್ವಾಧೀನಪಡಿಸಿಕೊಂಡು ಅದನ್ನು ಪರಿಪೂರ್ಣಗೊಳಿಸಬೇಕು. ಅದು ಮಾನವ ಜನಾಂಗಕ್ಕೆ ಜೀವನೋಪಾಯವನ್ನು ಒದಗಿಸಬೇಕು. ಇದೆಲ್ಲವು ದೈವಾಜ್ಞೆಗೆ ತಕ್ಕಂತೆ ಪ್ರಭು ಕ್ರಿಸ್ತರು ಕೊಟ್ಟ ಪರಸೇವಾ ನಿಯಮಕ್ಕೆ ಅನುಗುಣವಾಗಿರಬೇಕು.



ತತ್ವಶಾಸ್ತ್ರ, ವಿಜ್ಞಾನ ಮತ್ತು ಕಲಾಶಾಸ್ತ್ರಗಳನ್ನು ಅಧ್ಯಯನ ಮಾಡುವುದರ ಮುಖಾಂತರ ಮಾನವ ಜನಾಂಗ ಸತ್ಯ ಒಳಿತು ಮತ್ತು ಸೌಂದರ್ಯವನ್ನು ಗ್ರಹಿಸಲು ಶಕ್ತನಾಗುತ್ತಾನೆ. ಹೀಗೆ ಅವನು ಧ್ಯಾನಾಸಕ್ತನಾಗಿ ಸೃಷ್ಟಿಕರ್ತ ದೇವರನ್ನು ಆರಾಧಿಸಲು ಶಕ್ತನಾಗುತ್ತಾನೆ. ಯೇಸುಕ್ರಿಸ್ತರು ಸರ್ವರನ್ನು ರಕ್ಷಿಸಲು ಸಕಲವನ್ನು ತಮ್ಮಲ್ಲೇ ಐಕ್ಯಗೊಳಿಸಲು ಬಂದರು. ಈ ಪರಮ ಸುಜ್ಞಾನವನ್ನು ಸ್ವೀಕರಿಸಲೂ ಸನ್ನದ್ಧನಾಗುತ್ತಾನೆ.

ವಿಜ್ಞಾನ ಮತ್ತು ತಾಂತ್ರಿಕತೆಯ ಪ್ರಗತಿಯಿಂದ ಮಾನವನು ಇಂದ್ರೀಯಗಳಿಗೆ ನಿಲುಕುವ ವಿಷಯಗಳಿಗೆ ಮಾತ್ರ ಪ್ರಾಮುಖ್ಯತೆಯನ್ನು ಕೊಟ್ಟು ವಿಜ್ಞಾನದಿಂದ ಸಾಕ್ಷಾತ್ಕರಿಸಲು ಅಸಾಧ್ಯವಾದುದೆಲ್ಲವನ್ನು ತಿರಸ್ಕರಿಸುವ ಮಟ್ಟಕ್ಕೆ ಇಳಿಯುವ ಸಾಧ್ಯತೆಯುಂಟು. ಜೊತೆಗೆ ತಾನು ಸ್ವಯಂ ಸಂಪೂರ್ಣ ಎಂದು ಭಾವಿಸುವ ಸಾಧ್ಯತೆಯೂ ಉಂಟು. ಆದರೆ ಈ ಶೋಚನೀಯ ಪರಿಸ್ಥಿತಿ ಅಧುನಿಕ ಸಂಸ್ಕೃತಿಯ ಪರಿಣಾಮವಲ್ಲ. ಆದುದರಿಂದ ಸಂಸ್ಕೃತಿಯ ಸತ್ಪಾರಿಣಾಮಗಳಿಗೆ, ನಾವು ಅಂಧರಾಗಿರಬಾರದು. ಸತ್ಯಾನ್ವೇಷಣೆ, ಅಂತರ ರಾಷ್ಟ್ರೀಯ ಐಕ್ಯತೆ, ಸಾರ್ವಜನಿಕ ಕಲ್ಯಾಣಕ್ಕಾಗಿ ಒಗ್ಗಟ್ಟಿನ ಸಹಕಾರ, ಹಿಂದುಳಿದ ವರ್ಗದ ಅಭಿವೃದ್ಧಿ ಇಂಥಹ ಗುಣಗಳು ಪ್ರಭುಕ್ರಿಸ್ತರ ಶುಭ ಸಂದೇಶವನ್ನು ಸ್ವೀಕರಿಸಲು ಪ್ರಪಂಚವನ್ನು ಸಿದ್ಧಗೊಳಿಸುತ್ತವೆ.

ತಮ್ಮನ್ನೇ ಈ ಲೋಕಕ್ಕೆ ಶ್ರುತಿಸಲು ದೇವರು ಆಯಾಯುಗಕ್ಕೆ ಒಪ್ಪುವಂತಹ ಸಂಸ್ಕೃತಿಗೆ ತಕ್ಕಂತೆ ಮಾತನಾಡಿದರು. ಅಂತೆಯೇ ಧರ್ಮಸಭೆಯೂ ವಿವಿಧ ಸಂಸ್ಕೃತಿಗಳ ಅನ್ವೇಷಣೆಗಳನ್ನು ಬಳಸಿಕೊಂಡು ಪ್ರಭು ಕ್ರಿಸ್ತರ ಶುಭ ಸಂದೇಶವನ್ನು ಎಲ್ಲಾ ಜನಾಂಗಗಳಿಗೆ ಸಾರುತ್ತದೆ. ಅದನ್ನು ಆರಾಧನಾ ವಿಧಿಯಲ್ಲೂ ಭಕ್ತರ ವಿಭಿನ್ನ ಸಮುದಾಯ ಜೀವನದಲ್ಲೂ ವ್ಯಕ್ತ ಪಡಿಸುತ್ತದೆ. ಆದರೂ ಧರ್ಮಸಭೆ ಯಾವ ಪ್ರತ್ಯೇಕ ಜಾತಿ ಅಥವಾ ಜನಾಂಗಕ್ಕೆ ಅವಿಭಾಜ್ಯವಾಗಿ ಸೇರಿಲ್ಲ. ಅದು ಪರಸ್ಪರ ಫಲಭರಿತ ಸಂವಾದದೊಂದಿಗೆ ಎಲ್ಲ ಸಂಸ್ಕೃತಿಗಳೊಂದಿಗೆ ಬೆರೆಯುತ್ತದೆ.

ಧರ್ಮಸಭೆಯು ಪ್ರಭು ಕ್ರಿಸ್ತರ ಶುಭ ಸಂದೇಶದ ಮುಖಾಂತರ ಪಾಪಕ್ಕೆ ಆಧೀನನಾದ ಮಾನವನ ಪಾಪಾಕರ್ಷಣೆಯನ್ನು ತೆಗೆದು ಅವನ ನೈತಿಕ ಜೀವನವನ್ನು ಪಾವನಗೊಳಿಸಿ ನವೀಕರಿಸುತ್ತದೆ. ಅವರು ಪಾಪಿ ಮಾನವನ ಜೀವನ ಮತ್ತು ಸಂಸ್ಕೃತಿಯನ್ನು ಸತತ ನವೀಕರಿಸತ್ತಾರೆ, ಕ್ರಿಸ್ತರಲ್ಲಿ ಪುನರೀಕರಿಸುತ್ತಾರೆ. ಧರ್ಮಸಭೆ ತನ್ನ ಚಟುವಟಿಕೆ ಮತ್ತು ದೈವಾರಾಧನೆಯ ಮುಖಾಂತರ ಭಕ್ತರನ್ನು ಅಂತರಿಕ ಸ್ವಾತಂತ್ರ್ಯಕ್ಕೆ ಕೊಂಡೊಯ್ಯುತ್ತದೆ.

ಎಲ್ಲಾ ಸಂಸ್ಕೃತಿಗಳು ಮಾನವನ ಮತ್ತು ಮಾನವ ಸಮಾಜದ ಪರಿಪೂರ್ಣತೆಗೆ ಆಧೀನವಾಗಿರಬೇಕು. ಆ ಪ್ರತಿಭಾಶಕ್ತಿ, ಆಂತರಿಕ ದೃಷ್ಟಿ, ಧ್ಯಾನಪರತ, ವೈಯಕ್ತಿಕ ತೀರ್ಮಾನ, ಸೂಕ್ತ ಧಾರ್ಮಿಕ ಮತ್ತು ಸಾಮಾಜಿಕ ಮನೋಭಾವ ಇಂಥದನ್ನು ಬೆಳೆಸಿಕೊಳ್ಳಲು ಮಾನವನ ಮನಸ್ಸು ತರಬೇತಿಯನ್ನು ಪಡೆಯಬೇಕು.

ಸಂಸ್ಕೃತಿಯ ಬೆಳವಣಿಗೆಗೆ ನ್ಯಾಯಬದ್ಧ ಮತ್ತು ಉಲ್ಲಂಘನಾತೀತ ಸ್ವಾತಂತ್ರ್ಯವಿರಬೇಕು. ಅದು ನೀತಿ ನಿಯಮಕ್ಕೆ, ಸಾರ್ವಜನಿಕ ಹಿತಕ್ಕೆ ಒಳಪಟ್ಟಿರಬೇಕು. ನಾವು ವಿಶ್ವಾಸ ಮತ್ತು ಬುದ್ಧಿ ಎಂಬ ಇಬ್ಬಗೆಯ ಮಾಧ್ಯಮಗಳ ಮೂಲಕ ತಿಳುವಳಿಕೆಯನ್ನೂ ಪಡೆಯುತ್ತೇವೆ. ಈ ಎರಡು ಬಗೆಯ ತಿಳುವಳಿಕೆ ವಿಭಿನ್ನ ವರ್ಗಕ್ಕೆ ಸೇರಿವೆ ಎಂದು ಈ ಸಮ್ಮೇಳನ ಸಾರುತ್ತದೆ. ಸಂಸ್ಕೃತಿಯ ವಿಶೇಷವಾಗಿ ವಿಜ್ಞಾನ ಶಾಸ್ತ್ರದ ಸ್ವಾಯತ್ತತೆ ನ್ಯಾಯ ಸಮ್ಮತವೆಂದು ತಿಳಿಸುತ್ತದೆ. ಮಾನವನು ಸ್ವತಂತ್ರವಾಗಿ ಸತ್ಯವನ್ನು ನುಡಿಯಬೇಕು, ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕು ಮತ್ತು ಪ್ರಕಟಿಸಬೇಕು.

ಒಂದು ದೇಶದ ಸಾರ್ವಜನಿಕ ಅಧಿಕಾರಿಗೆ ಆ ನಾಡಿನ ಸಂಸ್ಕೃತಿ ಹೇಗಿರಬೇಕೆಂದು ನಿರ್ಧರಿಸುವ ಅಧಿಕಾರವಿಲ್ಲ. ಅವರು ಆ ಸಂಸ್ಕೃತಿಯನ್ನು ಪೋಷಿಸಲು ಬೇಕಾದ ಪೋಷಣೆ ಪ್ರೋತ್ಸಾಹ ಕೊಡಬೇಕು, ಅಲ್ಪ ಸಂಖ್ಯಾತರನ್ನೂ ಆದರಿಸಬೇಕು. ಸಂಸ್ಕೃತಿಯನ್ನು ರಾಜಕೀಯ ಅಥವಾ ಆರ್ಥಿಕ ಸಲಕರಣೆಯನ್ನಾಗಿ ಬಳಸಿಕೊಳ್ಳಲಾಗದು.

**ಸಂಸ್ಕೃತಿಯ ಬಗ್ಗೆ ಕ್ರೈಸ್ತರ ಕೆಲವು ತುರ್ತು ಕರ್ತವ್ಯಗಳು :**

ಪ್ರತಿಯೊಬ್ಬ ವ್ಯಕ್ತಿಯ ಮಾನವೀಯ ಹಕ್ಕುಗಳನ್ನು ಕಾಪಾಡುವಂತೆ ಪ್ರತಿಯೊಬ್ಬ ಕ್ರೈಸ್ತನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲಾ ಹಂತಗಳಲ್ಲೂ ಪರಿಣಾಮ ಬೀರಬೇಕು. ಎಲ್ಲಾ ಜನರಿಗೂ ತಮ್ಮ ಮೂಲ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶವಿರಬೇಕು. ಈ ನಿಟ್ಟಿನಲ್ಲಿ ಪ್ರತಿಭಾವಂತರಿಗೆ ತಮ್ಮ ಪ್ರತಿಭೆಗಳನ್ನೂ ಬೆಳೆಸಿಕೊಳ್ಳಲೂ, ಸಮಾಜ ಕಲ್ಯಾಣ ಕಾರ್ಯದಲ್ಲಿ ಸೂಕ್ತ ಪಾತ್ರವಹಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಕಾರ್ಮಿಕರಿಗೆ ತಮ್ಮ ಸಂಸ್ಕೃತಿಯನ್ನು ಪೋಷಿಸಿಕೊಳ್ಳಲು ಸೂಕ್ತ ಅನುಕೂಲಕರ ಪರಿಸರವನ್ನು ಒದಗಿಸಿಕೊಡಬೇಕು. ಮಹಿಳೆಯರು ಸಮಾಜದ ಸಾಂಸ್ಕೃತಿಕ ಜೀವನದಲ್ಲಿ ನ್ಯಾಯಬದ್ಧ ಪಾತ್ರವನ್ನು ನಿರ್ವಹಿಸುವಂತೆ ನೆರವಾಗಬೇಕು.

ಅತ್ಯಧಿಕ ಪರಿಣತೆಯನ್ನು ಅರಸುವ ಈ ಕಾಲದಲ್ಲಿ ಮನುಷ್ಯನನ್ನು ಪೂರ್ಣ ಪ್ರಮಾಣದ ಮನುಷ್ಯನನ್ನಾಗಿ ಕಾಣುವ ದೃಷ್ಟಿಯನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ನಾವು ವ್ಯಕ್ತಿಯ ಪೂರ್ಣ ವಿಕಾಸಕ್ಕೆ ಅಗತ್ಯವಾದ ಶಿಕ್ಷಣದ ಗುರಿಯನ್ನು ಇಟ್ಟುಕೊಳ್ಳಬೇಕು ಈ ಶಿಕ್ಷಣದಲ್ಲಿ ದೈವದತ್ತ ಜ್ಞಾನ, ಚಿತ್ತ, ಮನಸ್ಸಾಕ್ಷಿ ಮತ್ತು ಸೋದರ ಪ್ರೀತಿ ಪ್ರಮುಖವಾದವು. ಸಾಂಸ್ಕೃತಿಕ ತರಬೇತಿ ಕುಟುಂಬದಲ್ಲಿ ಪ್ರಾರಂಭವಾಗುತ್ತದೆ. ಅಲ್ಲಿ ಮಕ್ಕಳು ಮತ್ತು ಯುವಜನರು ಮೌಲ್ಯಗಳ ಗುಣಮಟ್ಟದ ಬಗ್ಗೆ ಸೂಕ್ತ ಪರಿಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಪುಸ್ತಕ ಪಠಣ ಮತ್ತು ಆಧುನಿಕ ಸಂಪರ್ಕ ಸಾಧನಗಳಿಂದ ಹೆಚ್ಚಿನ ಜ್ಞಾನಗಳಿಸುವ ಸಾಧ್ಯತೆ ಇದೆ. ವಿರಾಮ ಕಾಲವನ್ನು ವೈಯಕ್ತಿಕ ಅಭ್ಯಾಸ, ಸ್ವಚ್ಛಂದ ಆಟ ಮತ್ತಿತರ ಚಟುವಟಿಕೆಗಳಿಗೆ ಬಳಸಿಕೊಳ್ಳಬೇಕು. ಇವು ದೇಹಾತ್ಮವನ್ನು ವಿಕಾಸಗೊಳಿಸುತ್ತವೆ. ದೇಶ ಪರ್ಯಟಣೆ ಮನೋದೃಷ್ಟಿಯನ್ನು ವಿಸ್ತೃತಗೊಳಿಸುವುದಲ್ಲದೆ ಅನುತಾಪದಂಥಹ ಭಾವನೆಗಳನ್ನು ದೃಢಪಡಿಸುತ್ತದೆ.

ಕ್ರೈಸ್ತರು ಪ್ರಸ್ತುತ ವಿವಿಧ ಸಾಂಸ್ಕೃತಿಕ ಯೋಜನೆಗಳಲ್ಲಿ ಪಾಲ್ಗೊಂಡು ಅವುಗಳಿಗೆ ಕ್ರಿಸ್ತೀಯ ಮತ್ತು ಮಾನವೀಯ ರಂಗನ್ನು ಕೊಡಲು ಪ್ರಯತ್ನಿಸಬೇಕು. ಇತ್ತೀಚಿನ ಹೊಸ ಅನ್ವೇಷಣೆಗಳು ಕೆಲವು ಬಾರಿ



ಕ್ರೈಸ್ತ ಧಾರ್ಮಿಕ ಬೋಧನೆಯೊಂದಿಗೆ ಹೊಂದಿಸಿಕೊಳ್ಳುವುದು ಕಷ್ಟವೆಂದು ತೋರಬಹುದು. ಆದರೆ ಅದು ನಮ್ಮ ವಿಶ್ವಾಸೀ ಜೀವನಕ್ಕೆ ಹಾನಿಕಾರಕವಾಗಬೇಕಿಲ್ಲ. ಪ್ರತಿಯಾಗಿ ದೈವಶಾಸ್ತ್ರಜ್ಞರು ಈ ವೈಜ್ಞಾನಿಕ ಅನ್ವೇಷಣೆಗಳನ್ನು ಬಳಸಿಕೊಂಡು ಅವುಗಳನ್ನು ಜನರಿಗೆ ಮನಮುಟ್ಟುವಂತೆ ಧಾರ್ಮಿಕ ಸತ್ಯಗಳನ್ನು ವಿವರಿಸಲು ಪ್ರಯತ್ನಿಸಬೇಕು.

ಮಾನವ ಸ್ವಭಾವ ಮತ್ತು ಅಂತಿಮ ಗುರಿಯನ್ನು ಅರ್ಥಮಾಡಿಕೊಳ್ಳಲು ನೆರವಾಗುವ ಸಾಹಿತ್ಯ ಮತ್ತು ಕಲೆಯನ್ನು ನಾವು ಕಡೆಗಣಿಸಬಾರದು. ಧರ್ಮಸಭೆ ಕಲಾವಿದರ ಕೃತಿಗಳನ್ನು ಅವರ ವಿನೂತನ ಕಲಾ ವಿಧಾನಗಳನ್ನೂ ಮೆಚ್ಚುತ್ತವೆ. ದೈವಾರಾಧನೆಯಲ್ಲಿ ಅವುಗಳನ್ನು ಬಳಸಿದಾಗ ದೈವ ಪ್ರತಿಷ್ಠಾಪನೆಯನ್ನು ಪಡೆಯುತ್ತವೆ. ಆಗ ಅವು ನಮ್ಮ ಹೃದಯವನ್ನು ದೇವರೆಡೆಗೆ ಎತ್ತಿ ಶುಭ ಸಂದೇಶದ ವಾಸ್ತವಿಕತೆಯನ್ನು ವ್ಯಕ್ತಪಡಿಸುತ್ತವೆ.

ನಾವು ಈ ಕಾಲ ಮತ್ತು ಇಂದಿನ ಜನರಿಗೆ ನಿಕಟವಾಗಿ ಜೀವಿಸಬೇಕು ಅವರ ಮನೋಭಾವ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ ಹೆಜ್ಜೆಯಿಡುತ್ತಾ ಮುನ್ನಡೆಯಬೇಕು. ಆಗ ಎಲ್ಲವನ್ನು ಕ್ರಿಸ್ತೀಯ ಮನೋಭಾವದಿಂದ ಮೌಲ್ಯಮಾಪನ ಮಾಡುತ್ತಾ ಸಾರ್ವತ್ರಿಕ ಸಂಸ್ಕೃತಿಗೆ ನಮ್ಮ ದೇಣಿಗೆ ಕೊಡಲು ಶಕ್ತರಾಗುತ್ತೇವೆ. ದೈವಶಾಸ್ತ್ರಜ್ಞರು ಲೌಕಿಕ ಶಾಸ್ತ್ರಗಳೊಂದಿಗೆ ಸಂಪರ್ಕವಿಟ್ಟುಕೊಳ್ಳುವುದು ಶ್ರೇಯಸ್ಕರ. ಶ್ರೀ ಸಾಮಾನ್ಯರು ದೈವ ಶಾಸ್ತ್ರಗಳನ್ನು ವೃತ್ತಿಯಂತೆ ಅಭ್ಯಾಸ ಮಾಡಿ ಸಂಸ್ಕೃತಿಯ ವಿಕಾಸಕ್ಕೆ ನೆರವಾಗಬೇಕು. ಹೀಗೆ ಎಲ್ಲಾ ಭಕ್ತರು, ಯಾಜಕರು ಅಥವಾ ಶ್ರೀ ಸಾಮಾನ್ಯರು ತಮ್ಮ ತಮ್ಮ ಪರಿಣಿತೆಯ ವಿಷಯಗಳಲ್ಲಿ ವಿಚಾರಿಸುವ, ಆಲೋಚಿಸುವ ಮತ್ತು ಮಾತನಾಡುವ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ.

## ಅಧ್ಯಾಯ III

## ಅರ್ಥಿಕ ಮತ್ತು ಸಾಮಾಜಿಕ ಜೀವನ

ಅರ್ಥಿಕ ಪ್ರಗತಿ, ಅರ್ಥಿಕ ಮತ್ತು ಸಮಾಜಿಕ ಜೀವನದ ಸಂಘಟನೆಯ ಬಗ್ಗೆ ಈ ಭಾಗ ಪ್ರಸ್ತಾಪಿಸುತ್ತದೆ. ಈ ಅಧ್ಯಾಯದಲ್ಲಿ ಪಾಲನಾ ಸಂವಿಧಾನ ಆಧುನಿಕ ಮಾನವನನ್ನೂ ಕಾಡುತ್ತಿರುವ ಸಮಸ್ಯೆಗಳಲ್ಲಿ ಪ್ರಮುಖವಾದವುಗಳ ಬಗ್ಗೆ ಗಮನ ಹರಿಸುತ್ತದೆ.

ಈ ವಿಷಯಗಳನ್ನು ನಿಯಂತ್ರಿಸುತ್ತಿರುವ ಮೂಲ ತತ್ವ ಇದು : ಮಾನವನೇ ಅರ್ಥಿಕ ಮತ್ತು ಸಾಮಾಜಿಕ ಜೀವನದ ಮೂಲ, ಕೇಂದ್ರ ಮತ್ತು ಗುರಿ. ಆದುದರಿಂದ ಈ ಸಮಸ್ಯೆಗಳಿಗೆ ಸಂಬಂಧಪಟ್ಟ ಎಲ್ಲ ಕಾರ್ಯ ಚಟುವಟಿಕೆಗಳನ್ನು ಮಾನವನ ಘನತೆ ಮತ್ತು ಸಮಾಜದ ಅಭಿವೃದ್ಧಿಗೆ ಅನುಗುಣವಾಗಿರಬೇಕು.

ಆಧುನಿಕ ತಾಂತ್ರಿಕತೆ ಮಾನವನಿಗೆ ನಿಸರ್ಗದ ಮೇಲಿರುವ ಆಧಿಪತ್ಯವನ್ನು ಅಧಿಕರಿಸುತ್ತಿದೆ. ಇಂದಿನ ಆರ್ಥಿಕ ವ್ಯವಸ್ಥೆ ಮಾನವನ ಅಗತ್ಯಗಳನ್ನು ಪೂರೈಸಲು ಉತ್ತಮ ಸಾಧನವಾಗಿದೆ. ಈ ಎಲ್ಲಾ

ಅಭಿವೃದ್ಧಿಯ ಮಧ್ಯೆ ಅಸಮಾಧಾನ ತರುವ ಚಿಹ್ನೆಗಳೂ ಇವೆ. ದಿನದಿಂದ ದಿನಕ್ಕೆ ಜನರು ಆರ್ಥಿಕ ಜೀವನಕ್ಕೆ ದಾಸರಾಗಿ ತಮ್ಮ ಇಡೀ ಬಾಳನ್ನೇ ಅದಕ್ಕೆ ಆಧೀನಪಡಿಸುತ್ತಾರೆ. ಒಂದೇ ದೇಶದ ಗುಂಪು ಗುಂಪುಗಳಲ್ಲಿ ಮತ್ತು ದೇಶದೇಶಗಳ ಮಧ್ಯೆ ಐಶ್ವರ್ಯ ಮತ್ತು ಬಡತನದ ಅಂತರ ಕಣ್ಣಿಗೆ ಕೊರೈಸುವಂತಿದೆ. ದುಂದುತನ ಮತ್ತು ದಟ್ಟ ದಾರಿದ್ರ್ಯ ಪಕ್ಕ ಪಕ್ಕದಲ್ಲೇ ಕಾಣಬಹುದು. ಬಡ ದೇಶಗಳಲ್ಲೂ ಬಹು ಸಂಖ್ಯಾತರು ಜೀವನಕ್ಕೆ ಅಗತ್ಯವಾದುದನ್ನು ಹೊಂದದೆ ಇರುವಾಗ ಕೆಲವರು ಮಾತ್ರ ಸುಖದ ಸುಪ್ಪತ್ತಿಗೆಯಲ್ಲಿ ಮೈಮರೆತಿರುತ್ತಾರೆ. ಇದರ ಪರಿಣಾಮವಾಗಿ ಸಾಮಾಜಿಕ ಬಿಕ್ಕಟ್ಟು ಮತ್ತು ಬಿಗಿ ವಾತಾವರಣ ಅಧಿಕವಾಗುತ್ತಿದೆ. ವಾಸ್ತವವಾಗಿ ಈ ಪರಿಸ್ಥಿತಿ ಉದ್ಭವಿಸಲೇ ಬಾರದಾಗಿತ್ತು. ಈ ದುಸ್ಥಿತಿಯನ್ನೂ ನಿವಾರಿಸಬೇಕಾದರೆ ಸಾಮಾಜಿಕ ಆರ್ಥಿಕ ಸುಧಾರಣೆ ಮತ್ತು ಮನೋದೃಷ್ಟಿಯ ಬದಲಾವಣೆ ಅತ್ಯಗತ್ಯ. ಈ ದಿಸೆಯಲ್ಲಿ ವ್ಯಾಟಿಕನ್ ಸಮ್ಮೇಳನ ಮಾರ್ಗದರ್ಶಿ ಸೂಚಿಗಳನ್ನು ಕೊಡುತ್ತಾ ಆರ್ಥಿಕ ಪ್ರಗತಿಯನ್ನೂ ಬಲಪಡಿಸುತ್ತದೆ.

## ಭಾಗ I

### ಆರ್ಥಿಕ ಪ್ರಗತಿಗೆ ಕೆಲವು ಮಾರ್ಗಸೂಚಿಗಳು

1) ಆಧುನಿಕ ಮಾನವ ಕೃಷಿ ಮತ್ತು ಕೈಗಾರಿಕಾ ಉತ್ಪನ್ನಗಳನ್ನು ಅಧಿಕಗೊಳಿಸುವ ಸಮಸ್ಯೆಯಲ್ಲಿ ಮಗ್ನನಾಗಿದ್ದಾನೆ. ಇದಕ್ಕೆ ಸಾಕಷ್ಟು ಶಕ್ತಿ ಮತ್ತು ಆಧುನಿಕ ಸಲಕರಣೆಗಳ ಬಳಕೆ ಅಗತ್ಯ. ಆದರೆ ಆರ್ಥಿಕ ಲಾಭಕ್ಕಾಗಿ ಉತ್ಪನ್ನಗಳೇ ಜೀವನದ ಗುರಿಯಾಗಬಾರದು. ದೇವರ ಯೋಜನೆಯ;ಲ್ಲಿ ಭೌತಿಕ ಉತ್ಪನ್ನಗಳ ಉದ್ದೇಶ ಮಾನವ ಕಲ್ಯಾಣ. ಅದು ಮಾನವ ಜನಾಂಗದ ಭೌತಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ನೆರವಾಗಬೇಕು. ಈ ಕಾರಣ ಆರ್ಥಿಕ ಚಟುವಟಿಕೆಗಳು ನೈತಿಕ ಸೂತ್ರಗಳಿಗೆ ಅನುಗುಣವಾಗಿರಬೇಕು.

2) ಆರ್ಥಿಕ ಅಭಿವೃದ್ಧಿಯನ್ನು ಕೆಲವು ಪ್ರಬಲ ವ್ಯಕ್ತಿಗಳ ಅಥವಾ ದೇಶಗಳ ಸ್ವಾಮ್ಯಕ್ಕೆ ಕಾದಿರಿಸಬಾರದು. ಇತಿಮಿತಿಯಿಲ್ಲದ ಆರ್ಥಿಕ ಸ್ವಾತಂತ್ರ್ಯ ಅಥವಾ ಸಂಪೂರ್ಣ ಸರ್ಕಾರಿ ಸ್ವಾಮ್ಯವನ್ನು ಬೋಧಿಸುವ ಸಿದ್ಧಾಂತಗಳು ಅಬದ್ಧವಾದವು. ಸಾಧ್ಯವಾದ ಮಟ್ಟಿಗೆ ಅಧಿಕ ಸಂಖ್ಯೆಯಲ್ಲಿ ವ್ಯಕ್ತಿಗಳು ಮತ್ತು ದೇಶಗಳು ಅಭಿವೃದ್ಧಿ ಕಾರ್ಯದ ವಿವಿಧ ಹಂತಗಳಲ್ಲಿ ಭಾಗಿಗಳಾಗಬೇಕು. ಆರ್ಥಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಸರ್ಕಾರ ಹೆಚ್ಚಿನ ಜವಾಬ್ದಾರಿ ಇದ್ದರೂ ವೈಯಕ್ತಿಕ ಮತ್ತು ಖಾಸಗಿ ಗುಂಪುಗಳ ಸ್ವಾತಂತ್ರ್ಯ ಮತ್ತು ಪ್ರಯತ್ನವನ್ನು ಮಾನ್ಯ ಮಾಡಬೇಕು. ಪ್ರಜೆಗಳು ಸಾರ್ವಜನಿಕ ಕಲ್ಯಾಣಕ್ಕಾಗಿ ತಮ್ಮ ಶಕ್ತಿ ಸಾಮರ್ಥ್ಯವನ್ನು ತಡೆಹಿಡಿಯಬಾರದು. ಪ್ರತ್ಯೇಕವಾಗಿ ಜಗತ್ತಿನ ಹಿಂದುಳಿದ ದೇಶಗಳ ಅಭಿವೃದ್ಧಿಗಾಗಿ ಅವನ್ನು ವಿನಿಯೋಗಿಸಬೇಕು. ಇದು ಅವರ ಕರ್ತವ್ಯ ಎಂಬುದನ್ನು ಗಮನದಲ್ಲಿಡಬೇಕು.

3) ನ್ಯಾಯ ನೀತಿ ಮತ್ತು ಸಮಾನತೆಯ ಸೂತ್ರಕ್ಕೆ ಅನುಗುಣವಾಗಿ ಈ ಜಗತ್ತಿನಲ್ಲಿರುವ ಅಸಮಾನತೆ ಆದಷ್ಟು ಬೇಗ ನಿರ್ಮೂಲವಾಗಬೇಕು. ದೇಶದಲ್ಲಿ ಕೆಳ ದರ್ಜೆಯ ನಾಗರೀಕರು ಎಂದಿರಬಾರದು. ಈ ದಿಸೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಜನರ ಸಮಸ್ಯೆಗಳಿಗೆ ವಿಶೇಷ



ಗಮನ ಕೊಡಬೇಕು. ರೈತಾಪಿ ಜನರು ಕೃಷಿ ಉತ್ಪನ್ನಗಳನ್ನು ಅಧಿಕರಿಸುವಂತೆ, ಮಾರುಕಟ್ಟೆ ಸೌಕರ್ಯ ಲಭಿಸುವಂತೆ, ಸೂಕ್ತ ಲಾಭ ಪಡೆದು ಇತರ ನಾಗರೀಕರಿಗಿಂತ ಹಿಂದುಳಿಯದಂತೆ ಎಚ್ಚರವಹಿಸಬೇಕು. ರೈತರು ತಮ್ಮ ವೃತ್ತಿ ಕೌಶಲ್ಯವನ್ನು ಅಭಿವೃದ್ಧಿ ಪಡಿಸಿಕೊಂಡು ಕೃಷಿ ಉತ್ಪನ್ನಗಳನ್ನು ಅಧಿಕರಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ.

4) ಅಭಿವೃದ್ಧಿಗೊಳ್ಳುತ್ತಿರುವ ಆರ್ಥಿಕ ಕ್ಷೇತ್ರದಲ್ಲಿ ಕಾರ್ಮಿಕರು ಊರಿಂದೂರಿಗೆ ಹೋಗಬೇಕಾಗುತ್ತದೆ. ಆದರೆ ಇದರಿಂದ ಕಾರ್ಮಿಕನಿಗಾಗಲಿ ಅವನ ಕುಟುಂಬಕ್ಕಾಗಲಿ ಹಾನಿಯಾಗದಾಂತೆ ನೋಡಿಕೊಳ್ಳಬೇಕು. ವಲಸೆ ಹೋಗುವ ಕೆಲಸಗಾರರು ತಮ್ಮ ಕುಟುಂಬಗಳನ್ನು ತಮ್ಮೊಡನೆ ಕರೆದುಕೊಂಡು ಹೋಗುವ ಸೌಲಭ್ಯವಿರಬೇಕು. ಅವರಿಗೆ ವಸತಿ ಸೌಲಭ್ಯವನ್ನು ಒದಗಿಸಬೇಕು. ಅವರನ್ನು ಉತ್ಪತ್ತಿಯ ಸಲಕರಣೆಗಳೆಂದು ಪರಿಗಣಿಸಬಾರದು. ಅವರು ಇತರ ದೇಶಿಯರು ಅಥವಾ ಪ್ರದೇಶದವರು ಎಂದು ತಾರತಮ್ಯ ಮಾಡಬಾರದು. ಸಾಧ್ಯವಾದ ಮಟ್ಟಿಗೆ ಅವರವರ ಪ್ರದೇಶಗಳಲ್ಲಿ ಉದ್ಯೋಗದ ಅವಕಾಶಗಳನ್ನು ಕಲ್ಪಿಸಿ ಕೊಡಬೇಕು.

5) ಅಂತಿಮವಾಗಿ ಕಾರ್ಮಿಕರಿಗೆ ಆರ್ಥಿಕ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗೆ ಅವರು ಹೊಂದಿಕೊಳ್ಳುವಂತೆ ಅಗತ್ಯ ಉದ್ಯೋಗದ ಮತ್ತು ತಾಂತ್ರಿಕ ತರಬೇತಿಯನ್ನು ಕೊಡಬೇಕು. ರೋಗಗ್ರಸ್ಥರ ಮತ್ತು ವಯೋವೃದ್ಧರ ಜೀವನೋಪಾಯಕ್ಕೆ ಅಗತ್ಯವಾದುದನ್ನು ಕಾದಿರಿಸಬೇಕು. ಅಂತೆಯೇ ಅವರ ಮಾನವ ಘನತೆಯನ್ನು ಕಾಪಾಡಬೇಕು.

## ಭಾಗ II

### ಸಾಮಾಜಿಕ – ಆರ್ಥಿಕ ಜೀವನವನ್ನು ನಿಯಂತ್ರಿಸುವ ಸೂತ್ರಗಳು

ಮಾನವನ ಘನತೆಗೆ ದಕ್ಕೆಯಾಗದಂತೆ ಆರ್ಥಿಕ ಪ್ರಗತಿಯನ್ನು ಸಾಧಿಸಲು ಮಾರ್ಗದರ್ಶನ ನೀಡಲಾಯಿತು. ಅನಂತರ ಈ ಸಂವಿಧಾನ ಸಾಮಾಜಿಕ ಆರ್ಥಿಕ ಜೀವನದ ಬಗ್ಗೆ ಧರ್ಮಸಭೆಯ ಬೋಧನೆಯಲ್ಲಿರುವ ಸಾಮಾನ್ಯ ಮೂಲ ಅಂಶಗಳನ್ನು ಪುನ: ದೃಢೀಕರಿಸುತ್ತದೆ. ಇದರ ಬಗ್ಗೆ ಅದು ಮೂರು ಮೂಲ ಭೂತ ಅಂಶಗಳನ್ನು ಪ್ರಸ್ತಾಪಿಸುತ್ತದೆ. ಮಾನವ ದುಡಿಮೆಯ ಅರ್ಥ ಮತ್ತು ಘನತೆ, ಉತ್ಪನ್ನ ಕಾರ್ಯದಲ್ಲಿ ಸಂಘಟನೆ ಮತ್ತು ಸ್ಥಿರಾಸ್ತಿ.

### 1) ಮಾನವ ದುಡಿಮೆಯ ಅರ್ಥ ಮತ್ತು ಘನತೆ :

ಎಲ್ಲಾ ಭೌತಿಕ ವಸ್ತು ಮತ್ತು ಯಾಂತ್ರಿಕ ಕ್ರಿಯೆಗಳಿಗಿಂತ ಮಾನವನು ಮಾಡುವ ಕೆಲಸಕ್ಕೆ ಅಧಿಕ ಮೌಲ್ಯವಿದೆ, ಘನತೆಯಿದೆ. ದುಡಿಮೆಯ ಮುಖಾಂತರ ಅವನು ತನ್ನನ್ನು ಮತ್ತು ತನ್ನ ಕುಟುಂಬವನ್ನು ಕಾಪಾಡುತ್ತಾನೆ. ದಾನಧರ್ಮ ಮಾಡುತ್ತಾನೆ. ದೈವ ಸೃಷ್ಟಿಯನ್ನು ಪರಿಪೂರ್ಣತೆಗೆ ತರುತ್ತಾನೆ. ಹೀಗೆ ಯೇಸುಕ್ರಿಸ್ತರ ವಿಮೋಚನಾ ಕಾರ್ಯದಲ್ಲಿ ಐಕ್ಯವಾಗುತ್ತಾನೆ. ಇದರಿಂದ ಪ್ರತಿ ವ್ಯಕ್ತಿಯೂ ಪ್ರಾಮಾಣಿಕನಾಗಿ ದುಡಿಯಬೇಕು ಎಂಬ ಕರ್ತವ್ಯಕ್ಕೆ ಬದ್ಧ ಎಂದು ತಿಳಿದುಬರುತ್ತದೆ. ಪ್ರಜೆಗಳಿಗೆ ಕೆಲಸ ದೊರಕಿಸುವ ಕರ್ತವ್ಯ ಸರ್ಕಾರಕ್ಕಿದೆ. ಕಾರ್ಮಿಕರಿಗೆ ಕೊಡುವ ವೇತನ ಅವರಿಗೆ ಅವರನ್ನು ಅವಲಂಭಿಸಿರುವವರ ಭೌತಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ

ಸಾಲುವಂತಾಗಬೇಕು. ಸಂಬಳವನ್ನು ನಿರ್ಧರಿಸುವಾಗ ಒಂದೊಂದು ಸಂದರ್ಭದಲ್ಲೂ ಕೆಲಸಗಾರನ ಉತ್ಪನ್ನ ಶಕ್ತಿ, ಕಾರ್ಖಾನೆಯ ಪರಿಸ್ಥಿತಿ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಗಮನಕ್ಕೆ ತಂದುಕೊಳ್ಳಬೇಕು.

## 2) ಉತ್ಪನ್ನ ಕಾರ್ಯದಲ್ಲಿ ಸಂಘಟನೆ :

ಎ) ಮಾನವನ ದುಡಿಮೆಯನ್ನು ಅವನ ಅಂತಸ್ತಿಗನುಗುಣವಾಗಿ ಸಂಘಟಿಸಿ ವ್ಯವಸ್ಥಿತಗೊಳಿಸಬೇಕು. ಆರ್ಥಿಕ ಕಾನೂನಿನ ನೆಪದಲ್ಲಿ ಕಾರ್ಮಿಕರನ್ನು ತಮ್ಮ ವೃತ್ತಿಯ ದಾಸರನ್ನಾಗಿ ಮಾಡುವುದು ಎಂದೂ ನ್ಯಾಯ ಸಮ್ಮತವಲ್ಲ. ಇದಕ್ಕೆ ಪ್ರತಿಯಾಗಿ ಉತ್ಪನ್ನಗಳು ಕಾರ್ಮಿಕನ ಮಾನವೀಯ ಅಗತ್ಯಗಳಿಗೆ ಅನುಗುಣವಾಗಿರಬೇಕು. ಕಾರ್ಮಿಕರು ತಮ್ಮ ಕೆಲಸದ ಮುಖಾಂತರ ತಮ್ಮ ವಿಶಿಷ್ಠ ಪ್ರತಿಭೆ ಮತ್ತು ವ್ಯಕ್ತಿತ್ವವನ್ನು ಬೆಳೆಸಲು ಸರ್ವ ಪ್ರಯತ್ನ ಮಾಡಬೇಕು. ಸಾಕಷ್ಟು ಬಿಡುವು ಸಮಯ, ವಿಶ್ರಾಂತಿ, ಕೌಟುಂಬಿಕ, ಸಾಮಾಜಿಕ ಮತ್ತು ಧಾರ್ಮಿಕ ಜೀವನಕ್ಕೆ ಲಭ್ಯವಾಗಬೇಕು. ದುಡಿಯುತ್ತಿರುವ ತಾಯಂದಿರ ಅಗತ್ಯಗಳ ಬಗ್ಗೆ ಪ್ರತ್ಯೇಕ ಗಮನವನ್ನು ಹರಿಸಬೇಕು.

ಬಿ) ಅಂತಿಮವಾಗಿ ಪ್ರತಿ ಆರ್ಥಿಕ ಚಟುವಟಿಕೆಯ ಪರಿಣಾಮ ಏನೆಂದರೆ ಪ್ರತಿ ವೃತ್ತಿ ದೇವರ ಮುಂದೆ ಸಂಘಟಿತನಾದ ಸರಿಸಮಾನನು. ಆದುದರಿಂದ ಕಾರ್ಮಿಕರು ಕಾರ್ಯನಿರ್ವಹಣೆಯಲ್ಲಿ ಭಾಗವಹಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಕಾರ್ಯ ಚಟುವಟಿಕೆ ಸಂಘಟನೆಗೆ ಸರಿಯಾಗಿ ಈ ಕ್ರಮವನ್ನು ಕೈಗೊಳ್ಳಬೇಕು.

ಸಿ) ಯಾವ ಭಯಭೀತಿಯಿಲ್ಲದೆ ಕಾರ್ಮಿಕರು ಕಾರ್ಮಿಕ ಸಂಘಗಳನ್ನು ಸ್ಥಾಪಿಸಿ ನಡೆಸುವ ಮೂಲಭೂತ ಹಕ್ಕನ್ನು ಚಲಾಯಿಸಲು ಯಾವ ಪ್ರತಿಬಂಧವಿರಬಾರದು. ಸೂಕ್ತ ರೀತಿಯಲ್ಲಿ ಸಂಘಟಿತವಾದ ಜವಾಬ್ದಾರಿಯುತರಾಗಿ ಕೆಲಸ ಮಾಡುತ್ತಿರುವ ಕಾರ್ಮಿಕ ಸಂಘಗಳ ಆರ್ಥಿಕ ಜೀವನದ ಸುಗಮ ನಿರ್ವಹಣೆ ಮತ್ತು ಮಾನವ ಸೌಹಾರ್ದಕ್ಕೆ ಸಹಾಯಕವಾಗಿವೆ. ಕೈಗಾರಿಕಾ ಕಲಹಗಳನ್ನು ಶಾಂತಿಯುತರಾಗಿ ಪರಿಹರಿಸಲು ಪ್ರಯತ್ನಿಸಬೇಕು. ಮುಷ್ಕರವನ್ನು ಎಲ್ಲಾ ಪರಿಹಾರ ಕ್ರಮಗಳು ವಿಫಲಗೊಂಡಾಗ ಅಂತಿಮ ಅಸ್ತ್ರವನ್ನಾಗಿ ಕೈಗೊಳ್ಳಬೇಕು.

## 3) ಆಸ್ತಿ :

ಎ) ದೇವರು ಈ ಭೂಲೋಕವನ್ನು ಎಲ್ಲಾ ಮಾನವ ಜೀವಿಗಳಿಗಾಗಿ ಕೊಟ್ಟರು. ಆದುದರಿಂದ ಪ್ರತಿ ವ್ಯಕ್ತಿ ತನಗೂ ತನ್ನ ಕುಟುಂಬಕ್ಕೂ ಅಗತ್ಯವಿರುವಷ್ಟು ಆಸ್ತಿಯನ್ನು ಪಡೆಯುವ ಹಕ್ಕುಳ್ಳವನಾಗಿದ್ದಾನೆ. ಆಸ್ತಿ ಖಾಸಗಿಯಾದರೂ ಅದಕ್ಕೆ ದೈವದತ್ತವಾದ ಸಾಮಾಜಿಕ ಉದ್ದೇಶವಿದೆ. ಆದುದರಿಂದ ಜಮೀನ್ದಾರರು ತಮ್ಮ ಆಸ್ತಿಪಾಸ್ತಿ ಸ್ವಪ್ರಯೋಜನಕ್ಕಾಗಿ ಮಾತ್ರ ಎಂದು ಭಾವಿಸುವಂತಿಲ್ಲ. ಅದನ್ನು ಅವರು ಇತರರ ಉಪಯೋಗಕ್ಕೂ ಬಳಸಲು ಪ್ರಯತ್ನಿಸಬೇಕು. ಎಷ್ಟೋ ಜನರು ಹಸಿವಿನಿಂದ ಪರಿತಪಿಸುತ್ತಿರುವಾಗ ಈ ಸೂತ್ರ ಪ್ರಾಮುಖ್ಯತೆಯನ್ನು ಹೊಂದಿದೆ. ಧರ್ಮಸಭೆಯ ಆದಿ ಪಿತರ ಹೇಳಿಕೆಯನ್ನು ಈ ಸಮ್ಮೇಳನ ಸ್ಮರಣೆಗೆ ತರುತ್ತದೆ. "ಹಸಿವಿನಿಂದ ಸಾಯುತ್ತಿರುವ



ಮನಷ್ಯನಿಗೆ ಆಹಾರವನ್ನು ಕೊಡಿ; ಇಲ್ಲದಿದ್ದರೆ ನೀವೇ ಅವನ ಕೊಲೆ ಪಾತಕರಾಗುತ್ತೀರಿ". ಜನರನ್ನು ಸ್ವಾವಲಂಭಿಗಳನ್ನಾಗಿ ಮಾಡುವ ಚಟುವಟಿಕೆಗಳಿಗೆ ವಿಶೇಷ ಗಮನ ಹರಿಸಬೇಕು.

ಕೆಲವು ಭಾಗಶ: ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಾಮಾನ್ಯವಾಗಿ ಆಸ್ತಿ ಸ್ವಾಧೀನದಿಂದ ದೊರಕುವ ಭದ್ರತೆಯನ್ನು ಆ ದೇಶದ ಸಾರ್ವಜನಿಕ ಸಂಪ್ರದಾಯ ಮತ್ತು ಆಚಾರ ಒದಗಿಸುತ್ತದೆ. ಭಾರತದಲ್ಲಿ ಇಂಥಹ ವ್ಯವಸ್ಥೆಯನ್ನು ಅವಸರದಲ್ಲಿ ಬದಲಿಸಲು ಹೋಗಬಾರದು. ಅಗತ್ಯವಿದ್ದಾಗ ಮಾತ್ರ ಬದಲಿಸಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಆರ್ಥಿಕ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಸಾಮಾಜಿಕ ಭದ್ರತಾ ನಿಯಮಗಳು ಸಾರ್ವಜನಿಕ ಆಸ್ತಿಪಾಸ್ತಿ ಮತ್ತು ಒಳಿತನ್ನು ಕಾಪಾಡುತ್ತದೆ. ಇಂತಹ ಕ್ರಮಗಳನ್ನು ಪ್ರೋತ್ಸಾಹಿಸಬೇಕು. ಆದರೆ ಭದ್ರತೆಯಿಂದ ಪ್ರಜೆಗಳು ನಿರ್ಲಿಪ್ತರಾಗದಂತೆ ಕ್ರಮವನ್ನು ಕೈಗೊಳ್ಳಬೇಕು.

## ಬಿ) ಬಂಡವಾಳ ಹೂಡಿಕೆ ನೀತಿ :

ಲಾಭಕ್ಕಾಗಿ ಬಂಡವಾಳವನ್ನು ತೊಡಗಿಸುವಾಗ ಈ ನೀತಿ ಇಂದಿನ ಜನಾಂಗದ ಉದ್ಯೋಗ ಖಾತರಿ ಮತ್ತು ಅಧಿಕಗೊಂಡ ಬಳಕೆಯ ಪ್ರಮಾಣವನ್ನು ಮುಂದಿನ ಜನಾಂಗದ ಅಗತ್ಯಗಳನ್ನು ಗಮನಕ್ಕೆ ತಂದುಕೊಳ್ಳಬೇಕು. ಇಂದಿನ ಖರ್ಚಿಗೂ ಮುಂದಿನ ಪೀಳಿಗೆಯ ಅಗತ್ಯಗಳಿಗೆ ಮಧ್ಯ ಸಮತೋಲನವಿರಬೇಕು. ಇಂಥಹ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವವರು ಅಭಿವೃದ್ಧಿಗೊಳ್ಳುತ್ತಿರುವ ದೇಶಗಳ ಕೊರತೆಗಳಿಗೆ ಅಧಿಕ ಗಮನ ಕೊಡಬೇಕು. ಇಂಥಹ ಆರ್ಥಿಕ ನೀತಿ ದೇಶದ ಆರ್ಥಿಕ ಪರಿಸ್ಥಿತಿಯನ್ನು ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ದೇಶಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು.

ಸಿ) ಸಾಮಾಜಿಕ ಭದ್ರತಾ ವ್ಯವಸ್ಥೆ ಮತ್ತಿತರ ಸಮಾಜ ಕಲ್ಯಾಣ ಕಾರ್ಯಕ್ರಮಗಳು ಇದ್ದರೂ ಇಂದು ಆಸ್ತಿ ಪಾಸ್ತಿಯ ಸ್ವಾಮ್ಯ ಮಾನವನ ಸ್ವಾತಂತ್ರ್ಯ ಮತ್ತು ಭದ್ರತೆಗೆ ಅಗತ್ಯ. ಈ ಒಡೆತನ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಲು ಪ್ರೋತ್ಸಾಹ ನೀಡುತ್ತದೆ. ಆದುದರಿಂದ ಅದನ್ನು ಆದಷ್ಟು ಅಧಿಕ ಜನರು ಪಡೆದುಕೊಳ್ಳುವಂತೆ ಕ್ರಮ ಕೈಗೊಳ್ಳಬೇಕು. ಖಾಸಗಿ ಆಸ್ತಿ ದುರುಪಯೋಗವಾಗದಂತೆ ನೋಡಿಕೊಳ್ಳುವಾಗ ನ್ಯಾಯಬದ್ಧ ಪರಿಹಾರವನ್ನು ಅವರು ಕೊಡಲೇಬೇಕು.

ಡಿ) ಕೆಲವು ಅಲ್ಪ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕೃಷಿ ಉತ್ಪಾದನೆ ಅಗತ್ಯವಾಗಿ ಆಗಬೇಕಾಗಿದೆ. ಅಲ್ಲಿನ ಬಹುತೇಕ ಜನರು ಜಮೀನು ರಹಿತರಾಗಿದ್ದಾರೆ ಅಥವಾ ಅಲ್ಪ ಜಮೀನನ್ನು ಹೊಂದಿದ್ದಾರೆ. ಆದರೆ ಅದೇ ದೇಶಗಳಲ್ಲಿ ವಿಶಾಲ ಭೂಮಿ ಕೃಷಿ ಕಾಣದೆ ಅಥವಾ ಅಲ್ಪ ಕೃಷಿಗೆ ಒಳಪಟ್ಟಿದೆ. ಅಧಿಕ ಜನರು ಹಿಡುವಳಿದಾರರಾಗಿ ಜಮೀನ್ದಾರರಿಂದ ಅಮಾನುಷ ಕೂಲಿಯನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಅವರು ಗೌರವಾನ್ವಿತ ಜೀವನ ನಡೆಸಲಾಗದು; ಸಾಮಾಜಿಕ, ನಾಗರೀಕ ಮತ್ತು ರಾಜಕೀಯ ವಿಷಯಗಳಲ್ಲಿ ಭಾಗವಹಿಸಲಾಗದು. ಇಂಥಹ ಪರಿಸ್ಥಿತಿಯ ಸುಧಾರಣೆ ತುರ್ತಾಗಿ ಆಗಬೇಕು. ಪೂರ್ಣವಾಗಿ ಸಾಗುವಳಿಗೆ ಒಳಪಡದ ಜಮೀನನ್ನು ಸಾಗುವಳಿದಾರರಿಗೆ ಹಂಚಿ ಅವನ್ನು ಫಲಭರಿತಗೊಳಿಸಬೇಕು. ಇಂಥಹ ಪರಿಸ್ಥಿತಿಯಲ್ಲಿ ಜಮೀನ್ದಾರರಿಗೆ ಸೂಕ್ತ ಪರಿಹಾರವನ್ನು ಕೊಟ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು.

## ಸಮಾಪ್ತಿ

ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನ್ಯಾಯ ಮತ್ತು ಪ್ರೀತಿ ಆಳುವಂತೆ ಮಾಡಲು ಕ್ರೈಸ್ತರು ಮುಂದೆ ನಿಂತು ಹೋರಾಟವನ್ನು ಮಾಡಬೇಕು. ಈ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಮಾನವ ಜನಾಂಗದ ಅಭಿವೃದ್ಧಿ ಮತ್ತು ವಿಶ್ವ ಶಾಂತಿಗೆ ನೆರವಾಗಬಹುದು. ಅವರು ನಮ್ಮ ಬಾಳಿನಲ್ಲಿ ಅಷ್ಟ ಭಾಗ್ಯಗಳ ಭಾವನೆಗಳನ್ನು ತುಂಬಿಸಿಕೊಳ್ಳಲು ಸಾಧ್ಯವಾಗುತ್ತದೆ. ಯಾರ್ಯಾರು ಪ್ರಭು ಕ್ರಿಸ್ತರಿಗೆ ವಿಧೇಯರಾಗುತ್ತಾರೋ ಅವರೆ ಸ್ವರ್ಗ ಸಾಮ್ರಾಜ್ಯವನ್ನು ಪ್ರಮುಖವಾಗಿ ಅರಸುತ್ತಾರೆ. ಅವರು ತನ್ನ ನೆರೆಹೊರೆಯವರಿಗೆ ನೆರವನ್ನು ನೀಡುವ ದೃಢ ಮತ್ತು ಶುದ್ಧ ಪ್ರೀತಿ ಭಾವನೆಯನ್ನು ಗಳಿಸುತ್ತಾರೆ. ಹೀಗೆ ಅವರು ನ್ಯಾಯ ನೀತಿಯ ಕಾರ್ಯಗಳನ್ನೂ ಪರಿಪೂರ್ಣಗೊಳಿಸುತ್ತಾರೆ.

# ಅಧ್ಯಾಯ IV

## ರಾಜಕೀಯ ಸಮುದಾಯ ಜೀವನ

### ಪ್ರಸ್ತುತ ಸಾರ್ವಜನಿಕ ಜೀವನ :

ಇತ್ತೀಚಿನ ತ್ವರಿತ ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಳು ಸಾರ್ವಜನಿಕ ಜೀವನದಲ್ಲಿ ಬದಲಾವಣೆಯನ್ನು ತಂದಿವೆ. ಅನೇಕ ದೇಶಗಳಲ್ಲಿ ಅಧಿಕಾರದ ದುರುಪಯೋಗವಾಗುತ್ತಿದೆ. ಜನರು ಹಿಂಸೆಗೆ ಒಳಗಾಗುತ್ತಿದ್ದಾರೆ. ಎಲ್ಲರೂ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಸಾರ್ವಜನಿಕ ಜೀವನದಲ್ಲಿ ಭಾಗವಹಿಸಬಹುದು ಮತ್ತು ಸಾರ್ವಜನಿಕ ಕಲ್ಯಾಣಕ್ಕಾಗಿ ದುಡಿಯುವ ಹಕ್ಕನ್ನು ಪಡೆದಿದ್ದಾರೆ ಎಂದು ಎಲ್ಲರೂ ಅಂಗೀಕರಿಸುತ್ತಾರೆ. ಅನೇಕ ದೇಶಗಳು ಪ್ರಜೆಗಳ ವೈಯಕ್ತಿಕ ಮತ್ತು ಸಾಮೂಹಿಕ ಹಕ್ಕುಗಳಲ್ಲಿ ಮಾನವನ ಘನತೆಯನ್ನು ಮಾನ್ಯ ಮಾಡುತ್ತಿವೆ. ಉದಾ : ವ್ಯಕ್ತಿಯು ತನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಬಹುದು, ಸಂಘ ಸಂಸ್ಥೆಗಳನ್ನು ಸ್ಥಾಪಿಸಬಹುದು, ತನ್ನ ಧರ್ಮವನ್ನು ವೈಯಕ್ತಿಕವಾಗಿ ಅಥವಾ ಬಹಿರಂಗವಾಗಿ ಅನುಸರಿಸಬಹುದು. ವಾಸ್ತವವಾಗಿ ಅಲ್ಪ ಸಂಖ್ಯಾತರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ತಮ್ಮ ಧರ್ಮವನ್ನು ಸ್ವತಂತ್ರವಾಗಿ ಅನುಸರಿಸುವ ಹಕ್ಕನ್ನು ಕಾಪಾಡಿದಂತಾಯಿತು. ಈ ಹಕ್ಕು ಕೆಲವರಿಗೆ ಮಾತ್ರವಲ್ಲ ಸರ್ವರಿಗೂ ಲಭಿಸುವಂತೆ ಮಾಡಲು ಒಗ್ಗಟ್ಟಿನ ಪ್ರಯತ್ನಗಳು ನಡೆಯುತ್ತಾ ಇವೆ. ಆದರೆ ಕೆಲವು ರಾಜಕೀಯ ಪಕ್ಷಗಳು ಇಂಥಹ ನಾಗರೀಕ ಮತ್ತು ಧಾರ್ಮಿಕ ಹಕ್ಕುಗಳನ್ನು ತಡೆಗಟ್ಟುತ್ತಿವೆ. ತಮ್ಮ ಸ್ವಾರ್ಥಪರತೆ ಮತ್ತು ರಾಜಕೀಯ ಹಿಂಸೆಯ ಮುಖಾಂತರ ಕೆಲವರ ಪ್ರಯೋಜನಕ್ಕಾಗಿ ತಮ್ಮ ಅಧಿಕಾರದ ದುರ್ಬಳಕೆ ಮಾಡುತ್ತಿದ್ದಾರೆ. ಇಂಥಹ ವ್ಯವಸ್ಥೆ ಖಂಡನೀಯ.

ಈ ಪ್ರಯತ್ನಗಳು ಫಲಕೊಡಬೇಕಾದರೆ ಜನರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವ ತರಬೇತಿಯನ್ನು ಪಡೆಯಬೇಕು. ಅವರು ನ್ಯಾಯ ನೀತಿ ಮತ್ತು ಸಾರ್ವಜನಿಕ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಅವರು ಸಾರ್ವಜನಿಕ ಅಧಿಕಾರಿಗಳ ಅಗತ್ಯ, ಉದ್ದೇಶ ಮತ್ತು ಇತಿಮಿತಿಯನ್ನು ಅರಿತವರಾಗಬೇಕು.



### ರಾಜಕೀಯ ಸಮುದಾಯದ ಮೂಲ ಮತ್ತು ಉದ್ದೇಶ :

ವ್ಯಕ್ತಿಗಳು, ಕುಟುಂಬಗಳು ಮತ್ತು ವಿವಿಧ ಗುಂಪುಗಳು ಸಮಾಜವನ್ನು ರಚಿಸುತ್ತಾರೆ. ಆದರೆ ಅವರು ತಮ್ಮ ಸ್ವಂತ ಶಕ್ತಿಯಿಂದ ಜೀವನ ನಡೆಸಲು ಅಶಕ್ತರಾಗಿರುತ್ತಾರೆ. ಆದುದರಿಂದಲೇ ಅವರು ವಿಶಾಲವಾದ ರಾಜಕೀಯ ಸಮುದಾಯ ಅಥವಾ ರಾಜ್ಯವನ್ನು ಸ್ಥಾಪಿಸಿಕೊಳ್ಳುತ್ತಾರೆ. ಹೀಗೆ ಅವರು ಸಾರ್ವಜನಿಕ ಕಲ್ಯಾಣಕ್ಕಾಗಿ ತಮ್ಮಿಂದಾದ ಸಹಾಯ ಮಾಡಿ ತಮಗೆ ಅಗತ್ಯವಾದ ಪ್ರಯೋಜನವನ್ನು ಪಡೆಯುತ್ತಾರೆ. ಹೀಗೆ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವುದು; ಅಂದರೆ ವ್ಯಕ್ತಿಗಳ, ಕುಟುಂಬಗಳ ಮತ್ತು ಸಂಘ ಸಂಸ್ಥೆಗಳ ಯೋಗ ಕ್ಷೇಮವನ್ನು ನೋಡಿಕೊಳ್ಳುವುದು ರಾಜ್ಯದ ಕರ್ತವ್ಯವಾಗಿದೆ. ಹೀಗೆ ಅವರು ಸಂಪೂರ್ಣತೆಯನ್ನು ಗಳಿಸಬಹುದಾಗಿದೆ.

ವಿವಿಧ ಜನರು, ವಿಭಿನ್ನ ಮೂಲದವರು ಸೇರಿ ಒಂದು ದೇಶವಾಗುತ್ತಾರೆ. ಅವರು ವಿಭಿನ್ನ ರೀತಿಯಲ್ಲಿ ಯೋಚಿಸುತ್ತಾರೆ ಮತ್ತು ಸಾಮಾನ್ಯ ಸಮಸ್ಯೆಗೆ ವಿವಿಧ ಪರಿಹಾರಗಳನ್ನು ಸೂಚಿಸುತ್ತಾರೆ. ಆದುದರಿಂದ ಅವರ ಶಕ್ತಿ ಸಾಮರ್ಥ್ಯಗಳನ್ನು ಜೊತೆಗೂಡಿಸಿ ಸಮಾಜ ಕಲ್ಯಾಣಕ್ಕಾಗಿ ನಿರ್ದೇಶಿಸಲು ಒಬ್ಬ ಅಧಿಕಾರಿಯ ಅಗತ್ಯವಿದೆ. ಈ ಅಧಿಕಾರ ಯಾಂತ್ರಿಕ ಅಥವಾ ಸರ್ವಾಧಿಕಾರಿಯಾಗಿರದೆ ಪ್ರತಿಯೊಬ್ಬರಲ್ಲೂ ಅವನ ಸ್ವಾತಂತ್ರ್ಯ ಮತ್ತು ಜವಾಬ್ದಾರಿಯನ್ನು ಪ್ರೇರೇಪಿಸುವ ನೈತಿಕ ಅಧಿಕಾರವಾಗಿರಬೇಕು.

ಒಂದು ಸರಕಾರದ ರಚನೆ ನಾಗರೀಕರಿಂದಾಗಬೇಕು. ಆದರೆ ಅವರ ಐತಿಹಾಸಿಕ ಸಂಪ್ರದಾಯ, ಪ್ರಗತಿಯ ಮಟ್ಟ, ಸಾರ್ವಜನಿಕ ಅಧಿಕಾರ ಅವರ ಮಾನವ ಸ್ವಭಾವವನ್ನು ಅವಲಂಭಿಸಿದ್ದು ಅದು ದೇವರಿಂದಲೇ ನಿಯೋಜಿಸಿದ್ದಾಗಿರುತ್ತದೆ. ಈ ಅಧಿಕಾರವನ್ನು ಸೂಕ್ತ ರೀತಿಯಲ್ಲಿ ಅಂದರೆ ನೈತಿಕ ನಿಯಮಗಳಿಗೆ ಅನುಸಾರವಾಗಿ, ಮಾನವನ ಕಲ್ಯಾಣಕ್ಕಾಗಿ ಚಲಾಯಿಸಿದಾಗ ನಾಗರೀಕರು ಅದಕ್ಕೆ ವಿಧೇಯರಾಗಲೇ ಬೇಕು. ಅದೇ ಅಧಿಕಾರವನ್ನು ದುರುಪಯೋಗ ಪಡಿಸಿದಾಗ ನಾಗರೀಕರು ತಮ್ಮ ಹಕ್ಕನ್ನು ನೈಸರ್ಗಿಕ ಮತ್ತು ಶುಭ ಸಂದೇಶದ ನಿಯಮಾನುಸಾರ ಎದುರಿಸಬಹುದು.

### ಸಾರ್ವತ್ರಿಕ ಸಹಕಾರ :

ಮಾನವ ಸ್ವಭಾವಕ್ಕೆ ಅನುಗುಣವಾಗಿ ಎಲ್ಲಾ ನಾಗರೀಕರು ಜೊತೆಗೂಡಿ ಕ್ರಿಯಾತ್ಮಕವಾಗಿ ತಮ್ಮ ಆಯ್ಕೆಗೆ ತಕ್ಕಂತೆ ಸರಕಾರವನ್ನು ರಚಿಸಬೇಕು. ಅವರೇ ರಾಜಕೀಯ ನೀತಿಯನ್ನು ನಿರ್ಧರಿಸಿ ತಮ್ಮ ಮುಖಂಡರನ್ನು ಚುನಾಯಿಸಬೇಕು. ದೇಶ ಸೇವೆಗಾಗಿ ತಮ್ಮನ್ನೇ ಮುಡುಪಾಗಿಡುವ ವ್ಯಕ್ತಿಗಳ ಸೇವೆಯನ್ನು ಧರ್ಮಸಭೆ ಶ್ಲಾಘಿಸುತ್ತದೆ. ಸಾರ್ವ;ಜನಿಕ ಹಿತವನ್ನು ಗಮನದಲ್ಲಿರಿಸಿ ಪ್ರತಿ ನಾಗರೀಕನು ಚುನಾವಣೆಯಲ್ಲಿ ಮತ ಚಲಾಯಿಸಬೇಕೆಂದು ಧರ್ಮಸಭೆ ಆದೇಶಿಸುತ್ತದೆ. ಇದುವ ಅವರ ಹಕ್ಕು ಮತ್ತು ಕರ್ತವ್ಯ.

ನಾಗರಿಕ ಹೊಣೆಗಾರಿಕೆ ಪರಿಣಾಮಕಾರಿ ಮತ್ತು ಫಲದಾಯಕವಾಗಬೇಕಾದರೆ ವಿವಿಧ ಸರಕಾರಿ ಮತ್ತು ಖಾಸಗಿ ಸಂಘ ಸಂಸ್ಥೆಗಳ ಅಧಿಕಾರಿಗಳು ಮತ್ತು ಕರ್ತವ್ಯಗಳು ಸರಿಸಮವಾಗಿ ಹಂಚಿಕೆಯಾಗಬೇಕು. ಅವು ಕಾನೂನು ಬದ್ಧವಾಗಿರಬೇಕು. ಅಭಿವೃದ್ಧಿಕಾರ್ಯದಲ್ಲಿ ವ್ಯಕ್ತಿ, ಕುಟುಂಬ ಮತ್ತು ಸಂಘ ಸಂಸ್ಥೆಗಳ ಮಧ್ಯೆ ತೊಡಕು ಉಂಟಾಗಬಾರದು. ಸರಕಾರದ ಬಗ್ಗೆ

ಅವರಿಗಿರುವ ಕರ್ತವ್ಯಗಳು ನಿರ್ದಿಷ್ಟವಾಗಿರಬೇಕು. ಸ್ವಪ್ರಯತ್ನದಿಂದ ನ್ಯಾಯ ಸಮ್ಮತ ರೀತಿಯಲ್ಲಿ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಅವರಿಗೆ ಪ್ರೋತ್ಸಾಹ ಲಭಿಸುವಂತಿರಬೇಕು. ನಾಗರಿಕರೂ ಸಹ ಸರಕಾರಕ್ಕೆ ಇತಿಮಿತಿಯಿಲ್ಲದೆ ಅಧಿಕಾರವನ್ನು ನೀಡುವ ಅಗತ್ಯವಿಲ್ಲ. ಕುಟುಂಬ ಮತ್ತು ಸಾಮಾಜಿಕ ಸಂಸ್ಥೆ ಮಾಡಬಹುದಾದ ಕೆಲಸವನ್ನು ಸರಕಾರವೇ ಮಾಡಬೇಕೆಂದು ಪಟ್ಟು ಹಿಡಿಯಬಾರದು.

ಅನೇಕ ಸಂದರ್ಭಗಳಲ್ಲಿ ನಾಗರಿಕರಿಗೆ ಮತ್ತು ಗುಂಪುಗಳಿಗೆ ಹಿತಕರವಾಗುವಂಥಹ ಪರಿಸ್ಥಿತಿಯನ್ನು ಉಂಟುಮಾಡಲು ಸರಕಾರವು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹಸ್ತಕ್ಷೇಪ ಮಾಡಬೇಕಾಗಬಹುದು. ಸಮಾಜೀಕರಣದ ನ್ಯಾಯಬದ್ದತೆ, ವಿವಿಧ ವಿಭಾಗಗಳಲ್ಲಿ ವಿಭಿನ್ನವಾಗಿರಬಹುದು. ಆದರೆ ಸಾರ್ವಜನಿಕ ಹಿತಕ್ಕಾಗಿ ಹೇರುವ ಪ್ರತಿಬಂಧನೆ ತಾತ್ಕಾಲಿಕವಾಗಿದ್ದು ಪರಿಸ್ಥಿತಿ ಸುಧಾರಿಸಿದಾಕ್ಷಣ ಅದನ್ನು ತೆಗೆದು ಹಾಕಬೇಕು. ಅದಲ್ಲದೆ ವೈಯಕ್ತಿಕ ಮತ್ತು ಗುಂಪುಗಳ ಹಕ್ಕು ಬಾಧ್ಯತೆಗಳಿಗೆ ವಿರುದ್ಧವಾದ ಸರ್ವಾಧಿಕಾರಿ ಅಥವ ನಿರಂಕುಶ ನೀತಿಯನ್ನು ಎಂದೂ ಸರಕಾರ ಹೇರಬಾರದು.

ನಾಗರೀಕರು ದೇಶಭಕ್ತರಾಗಿರಬೇಕು. ಅವರು ಇಡೀ ಮಾನವ ಜನಾಂಗದ ಕುಟುಂಬಗಳ ಬಗ್ಗೆ ಕಾಳಜಿಯನ್ನು ಎಂದು ಮರೆಮಾಡಬಾರದು.

ಎಲ್ಲಾ ಕ್ರೈಸ್ತರು ರಾಜಕೀಯ ಸಮುದಾಯದ ಬಗ್ಗೆ ತಮ್ಮ ಕರೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಅವರು ಜವಾಬ್ದಾರಿಯುತ ಮತ್ತು ಸಾರ್ವಜನಿಕ ಸೇವೆಗೆ ಸಮರ್ಪಿತರಾಗಿದ್ದು ಮಾದರಿ ಪೌರರಾಗಿರಬೇಕು. ಅವರು ನ್ಯಾಯಬದ್ಧವಾಗಿ ವ್ಯಕ್ತಿಗಳ ಮತ್ತು ಸಮುದಾಯಗಳ ಬಿನ್ನ ಅಭಿಪ್ರಾಯಗಳನ್ನು ಹೊಂದಿದ್ದರೂ ಅವುಗಳಿಗಾಗಿ ಹೋರಾಡುತ್ತಿದ್ದರೂ ಅವರನ್ನು ಗೌರವಿಸಬೇಕು. ರಾಜಕೀಯ ಪಕ್ಷಗಳು ತಮ್ಮ ಸ್ವಹಿತಕ್ಕಿಂತ ಸಾರ್ವಜನಿಕ ಹಿತವನ್ನು ಅಧಿಕವಾಗಿ ಬಯಸಬೇಕು.

ಎಲ್ಲರೂ, ವಿಶೇಷವಾಗಿ ಯುವಜನರು ರಾಜಕೀಯ ಜೀವನದಲ್ಲಿ ಭಾಗವಹಿಸುವಂತೆ ಅಗತ್ಯ ತರಬೇತಿಯನ್ನು ಪಡೆಯಬೇಕು. ಅರ್ಹತೆಯುಳ್ಳವರು, ಕಷ್ಟವಾದರೂ ಅಷ್ಟೇ ಪ್ರಸಿದ್ಧವಾದ ರಾಜಕೀಯ ಜೀವನವನ್ನು ಅಂಗೀಕರಿಸಲು ಸಿದ್ಧರಿರಬೇಕು. ಅದನ್ನು ಸಮುದಾಯದ ಹಿತವನ್ನು ಗಮನದಲ್ಲಿಟ್ಟುಕೊಂಡು ಅಭ್ಯಾಸ ಮಾಡಬೇಕು. ಪ್ರಾಮಾಣಿಕತೆ ಮತ್ತು ಸುಜ್ಞಾನದಿಂದ ಅನ್ಯಾಯ ಅಥವಾ ಅಕ್ರಮ ಅಸಹನೆ ಮತ್ತು ಸ್ವೇಚ್ಛಾ ಶೋಷಣೆಯಂಥಹ ಕ್ರಮಗಳಿಗೆ ಕೈಹಾಕುವವರ ವಿರುದ್ಧ ಹೋರಾಡಬೇಕು.

### ದೇಶ ಮತ್ತು ಧರ್ಮಸಭೆ :

ಕ್ರೈಸ್ತರು ವೈಯಕ್ತಿಕವಾಗಿ ಅಥವಾ ಒಂದು ಗುಂಪಾಗಿ ಸ್ವಯಂಚಿತ್ತದಿಂದ ತಾವು ನಾಗರಿಕರಾಗಿ ಕೈಗೊಳ್ಳುವ ಕೆಲಸಗಳಿಗೂ ಧರ್ಮಸಭೆಯ ಹೆಸರಿನಲ್ಲಿ ಮಾಡುವ ಕೆಲಸಗಳಿಗೂ ಇರುವ ವ್ಯತ್ಯಾಸವನ್ನು ಗಮನದಲ್ಲಿ ಇಟ್ಟುಕೊಳ್ಳುವುದು ಅಗತ್ಯ. ಧರ್ಮಸಭೆ ಯಾವ ದೇಶಕ್ಕೂ ಪ್ರತ್ಯೇಕ ರಾಜಕೀಯ ಪಕ್ಷಕ್ಕೂ ಸೇರಿದ್ದಲ್ಲ. ಅದು ಪಾರಮಾರ್ಥಿಕವಾಗಿದ್ದು ಮಾನವ ಜೀವಿಗಳ ಪರವಾಗಿರುತ್ತದೆ.



ಧರ್ಮಸಭೆ ಮತ್ತು ರಾಜ್ಯ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸ್ವಾಯತ್ತತೆ ಮತ್ತು ಸ್ವತಂತ್ರವನ್ನು ಹೊಂದಿರುತ್ತವೆ. ಆದರೂ ಅವು ಪರಸ್ಪರ ಸಹಕರಿಸಬೇಕು. ಏಕೆಂದರೆ ಈ ಜಗತ್ತಿನಲ್ಲಿ ಜೀವಿಸುತ್ತಿರುವ ವ್ಯಕ್ತಿ ಅನಂತ ಜೀವನದ ಕರೆಯನ್ನು ಹೊಂದಿರುವುದರಿಂದ ಅವನ ಮೇಲೆ ಅಧಿಕಾರಿವನ್ನು ಚಲಾಯಿಸಲೇ ಬೇಕು. ಶುಭ ಸಂದೇಶದ ಬೆಳಕನ್ನು ಪ್ರಸ್ತುತ ಪರಿಸ್ಥಿತಿಯ ಮೇಲೆ ಬೀರುವುದರಿಂದ ಧರ್ಮಸಭೆ ಕ್ರೈಸ್ತ ನಾಗರಿಕರ ರಾಜಕೀಯ ಜವಾಬ್ದಾರಿಗೆ ಅಧಿಕ ಮಹತ್ವವನ್ನು ವ್ಯಕ್ತಪಡಿಸುತ್ತದೆ.

ಧರ್ಮಸಭೆ ತನ್ನ ನಿಯೋಗವನ್ನು ಕ್ರಿಯಾತ್ಮಕಗೊಳಿಸಲು ಲೌಕಿಕ ವಸ್ತುಗಳನ್ನು ಬಳಸಿಕೊಳ್ಳುತ್ತದೆ. ಆದರೆ ಶುಭ ಸಂದೇಶವನ್ನು ಸಾರುವಾಗ ಅದಕ್ಕೆ ಅನುಗುಣವಾದ ಸಾಧನಗಳನ್ನು ಬಳಸಿಕೊಳ್ಳಬೇಕಾಗುತ್ತದೆ. ಅವು ಆರ್ಥಿಕ ಸಾಧನೆಗಳಿಗಿಂತ ಬಹುತೇಕ ಭಿನ್ನವಾಗಿರಲೂಬಹುದು. ಶುಭ ಸಂದೇಶಕ್ಕೆ ಸಾಕ್ಷಿಯನ್ನು ನೀಡುವಾಗ ಅದಕ್ಕೆ ಅಡ್ಡಿ ಆತಂಕ ತರುವ ಯಾವ ವಿಶೇಷ ವಿನಾಯತಿಗಳನ್ನು ಅದು ಕೋರುವುದಿಲ್ಲ. ಆದರೂ ತನ್ನ ವಿಶ್ವಾಸವನ್ನು ಸಾರಲು, ಸಾಮಾಜಿಕ ತತ್ವಗಳನ್ನು ಬೋಧಿಸಲು, ತನ್ನ ಮಕ್ಕಳಿಗೆ ಮಾರ್ಗದರ್ಶನ ಮಾಡಲು ಮತ್ತು ಅಗತ್ಯವಿದ್ದರೆ ಸಾರ್ವಜನಿಕ ವಿಷಯಗಳ ಮೇಲೆ ತನ್ನ ನೈತಿಕ ತೀರ್ಪನ್ನು ನೀಡಲು ಅದಕ್ಕೆ ಸ್ವಾತಂತ್ರ್ಯವಿರಬೇಕು. ಈ ಸಂದರ್ಭದಲ್ಲಿ ವ್ಯಕ್ತಿಯ ಮೂಲಭೂತ ಹಕ್ಕುಗಳು ಅನಂತ ರಕ್ಷಣೆಗೆ ಅಪಾಯ ತರದಂತಿರಬೇಕು. ಈ ಕಾರ್ಯಗಳನ್ನು ಧರ್ಮಸಭೆ ಕೈಗೊಳ್ಳುವಾಗ ಅದು ಶುಭಸಂದೇಶದ ಬೋಧನೆಯನ್ನು ಸಾರ್ವಜನಿಕ ಹಿತರಕ್ಷಣೆಗಾಗಿ ತನ್ನ ಸನಿಹದಲ್ಲಿರುವ ಸರ್ವ ಸಾಧನಗಳನ್ನು ಬಳಸುತ್ತದೆ.

ಶುಭ ಸಂದೇಶಕ್ಕೆ ತನ್ನನ್ನೇ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಧರ್ಮಸಭೆ ಮಾನವ ಸಮುದಾಯದಲ್ಲಿ ಸತ್ಯವಾದುದ್ದನ್ನು ಆಯ್ಕೆ ಮಾಡಿ ಅದನ್ನು ಪೋಷಿಸುತ್ತದೆ. ಹೀಗೆ ಪ್ರಜೆಗಳ ಮಧ್ಯೆ ತನ್ನ ನಿಯೋಗವನ್ನು ಶುಭ ಸಂದೇಶಕ್ಕೆ ನಿಷ್ಠೆಯನ್ನು ಸಲ್ಲಿಸುತ್ತಾ ದೇವರ ಮಹಿಮೆಯನ್ನು ಅರಸುತ್ತಾ ಪ್ರಜೆಗಳ ಮಧ್ಯೆ ಶಾಂತಿ, ಸೌಹಾರ್ದ ದೃಢವಾಗಿ ನೆಲೆಸುವಂತೆ ಮಾಡುತ್ತದೆ.

## ಅಧ್ಯಾಯ V

## ರಾಷ್ಟ್ರೀಯ ಸಮುದಾಯಗಳಲ್ಲಿ ಶಾಂತಿ ಸ್ಥಾಪನೆ ಮತ್ತು ಪರಿಪಾಲನೆ

**ಮುನ್ನುಡಿ :** ಮಾನವ ಜನಾಂಗ ತನ್ನ ಐಕ್ಯಮತ್ಯದ ಬಗ್ಗೆ ಹಿಂದಿಗಿಂತ ಇಂದು ಅಧಿಕ ಜಾಗೃತವಾಗಿದೆ. ಅದೇ ಸಂದರ್ಭದಲ್ಲಿ ಅದು ಯುದ್ಧ ಅಥವಾ ಯುದ್ಧ ಭೀತಿಯಿಂದ ಆತಂಕವನ್ನು ಅನುಭವಿಸುತ್ತದೆ. ಈ ಭೀತಿ ಮಾನವ ಜನಾಂಗ ತನ್ನ ಗುರಿಯನ್ನು ತಲುಪುವ ನಡೆಯಲ್ಲಿ ತೊಡಕನ್ನು ಎದುರಿಸುತ್ತದೆ. ಆದುದರಿಂದ ವ್ಯಾಟಿಕನ್ ಸಮ್ಮೇಳನ ಹೇಳುವುದೇನೆಂದರೆ: ಕ್ರೈಸ್ತರು ಭೂಲೋಕದಲ್ಲಿ ಶಾಂತಿ ನೆಲಸುವಂತೆ ಎಲ್ಲ ಜನರೊಂದಿಗೆ ಸಹಕರಿಸಬೇಕು. ಈ ಗುರಿಗಾಗಿ ಶ್ರಮಿಸುವವರೆಲ್ಲರೂ ಭಾಗ್ಯವಂತರು. ಏಕೆಂದರೆ ಅವರನ್ನು ದೇವರ ಮಕ್ಕಳೆಂದು ಕರೆಯಲಾಗಿದೆ.

**ಸಂಪೂರ್ಣ ಯುದ್ಧ :** ಇಂದಿನ ವೈಜ್ಞಾನಿಕ ಶಸ್ತ್ರಾಸ್ತ್ರಗಳು ಯುದ್ಧದ ಭೀಕರತೆಯನ್ನು ತೀವ್ರಗೊಳಿಸುತ್ತಿವೆ. ಅವನ್ನು ಒಮ್ಮೆ ಪ್ರಯೋಗಿಸಿದರೆ ತಾರತಮ್ಯವಿಲ್ಲದ ವಿನಾಶವೂ ಅಪಾರ ಹಾನಿಯೂ ಆಗುವುದರಲ್ಲಿ ಅನುಮಾನವಿಲ್ಲ. ಪಟ್ಟಣ ಪಟ್ಟಣಗಳನ್ನು ವಿಶಾಲ ಪ್ರದೇಶಗಳನ್ನು ಅವುಗಳ ಜನ ಸಂಖ್ಯೆಯೊಂದಿಗೆ ನಿರ್ನಾಮಗೊಳಿಸುವ ಗುರಿ ಯುದ್ಧಕ್ಕಿರುತ್ತದೆ. ಈ ದುಷ್ಕೃತ್ಯ ದೇವರಿಗೆ ವಿರುದ್ಧ ದ್ರೋಹವಾಗಿದೆ. ಮಾನವ ಜನಾಂಗದ ವಿರುದ್ಧ ಪಾಪವಾಗಿದೆ. ಆದುದರಿಂದ ಅದನ್ನು ವ್ಯಾಟಿಕನ್ ಸಮ್ಮೇಳನ ಖಂಡಿಸುತ್ತದೆ. ಅಧಿಕಾರದಲ್ಲಿರುವ ಎಲ್ಲ ಮುಖಂಡರು ಇದನ್ನು ಕುರಿತು ಪರ್ಯಾಲೋಚಿಸಬೇಕು, ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು.

**ಶಸ್ತ್ರ ಸ್ಪರ್ಧೆ :** ಶಸ್ತ್ರ ಸ್ಪರ್ಧೆ ಮಾನವ ಜನಾಂಗದ ಮೋಸಕರ ಉರುಳಾಗಿದೆ. ಅದು ಬಡಬಗ್ಗರನ್ನು ಊಹಿಸಲಾಗದಂಥಹ ಕಷ್ಟ ಪರಿಸ್ಥಿತಿಗೆ ಒಳಪಡಿಸುತ್ತದೆ. ಮಾರಕ ಶಸ್ತ್ರಾಸ್ತ್ರಗಳನ್ನು ಅಧಿಕ ಸಂಖ್ಯೆಯಲ್ಲಿ ಸಂಗ್ರಹಿಸಿದರೆ ಶತ್ರುದಾಳಿಯನ್ನು ತಡೆಗಟ್ಟಬಹುದು ಎಂಬುದು ಕೆಲವರ ವಾದ. ಆದರೆ ಇದು ಶಾಂತಿಗೆ ನಿರಂತರ ಬೆದರಿಕೆಯಾಗಿದೆ. ಈ ಶಸ್ತ್ರ ಸ್ಪರ್ಧೆ ಆಕಸ್ಮಿಕ ಯುದ್ಧದ ಸಂದರ್ಭಗಳನ್ನು ಅಧಿಕಗೊಳಿಸುತ್ತದೆ. ಅಪಾರ ಹಣ ಮತ್ತು ಸಂಪನ್ಮೂಲಗಳು ವ್ಯಯವಾಗುವುದರಿಂದ ಬಡತನ ನಿರ್ಮೂಲ ಮಾಡುವ ಬದಲು ಕಷ್ಟ ಸಂಕಟವನ್ನು ಅಧಿಕೊಗಳಿಸುತ್ತದೆ.

**ಯುದ್ಧ ನಿಷೇಧ :** ಅಂತರ ರಾಷ್ಟ್ರೀಯ ಸಮ್ಮತಿಯಿಂದ ಯುದ್ಧವನ್ನು ಶಾಸನಬದ್ಧವಾಗಿ ನಿಷೇಧಿಸಬೇಕು. ಸರ್ವರ ಸಮ್ಮತಿಯನ್ನು ಪಡೆದಿರುವ ಸಾರ್ವತ್ರಿಕ ಅಧಿಕಾರ ಸಂಸ್ಥೆಯನ್ನು ರಚಿಸಿ ಅದಕ್ಕೆ ವಿಶ್ವ ಶಾಂತಿಯನ್ನು ಕಾಪಾಡುವ ಕರ್ತವ್ಯವನ್ನು ವಹಿಸಬೇಕು. ಅಲ್ಲಿಯ ತನಕ ಈಗಾಗಲೇ ಅಸ್ತಿತ್ವದಲ್ಲಿರುವ ಅಂತರ ರಾಷ್ಟ್ರೀಯ ಸಂಸ್ಥೆಗಳು ಶಾಂತಿಗಾಗಿ ಶ್ರಮಿಸುತ್ತಾ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ತಡೆಹಿಡಿಯಬೇಕು. ಈ ನಡುವೆ ರಾಷ್ಟ್ರರಾಷ್ಟ್ರಗಳ ಮಧ್ಯೆ ಇರುವ ಭಿನ್ನ ಅಭಿಪ್ರಾಯಗಳನ್ನು ತಿಳಿಗೊಳಿಸಿ ಯುದ್ಧಗಳನ್ನು ನಿರ್ಮೂಲಗೊಳಿಸಲು ಪ್ರಯತ್ನಿಸುವ ಅಂತರ ರಾಷ್ಟ್ರೀಯ ಸಂಘ ಸಂಸ್ಥೆಗಳಿಗೂ ಅವುಗಳ ಮುಖ್ಯಸ್ಥರಿಗೆ ಬೆಂಬಲ ಪ್ರೋತ್ಸಾಹ ನೀಡಬೇಕು. ಇದೊಂದು ಅನುಪಮ ಪ್ರೀತಿಯ ಕಾರ್ಯ. ಪರಸ್ಪರ ದ್ವೇಷಾಸೂಹೆ, ವಿರೋಧ, ಅಪನಂಬಿಕೆ ಇರುವವರೆಗೆ ಶಾಂತಿಯ ಪ್ರಯತ್ನಗಳು ಫಲಕಾರಿಯಾಗುವುದಿಲ್ಲ. ಆದುದರಿಂದ ಶಾಂತಿಯ ಬಗ್ಗೆ ಪುನರಾವಲೋಕಿಸುವುದು ಅಗತ್ಯ. ಎಲ್ಲಕ್ಕೂ ಮಿಗಿಲಾಗಿ ಹೃದಯ ಪರಿವರ್ತನೆ ಅತ್ಯಗತ್ಯ.

**ವೈಮನಸ್ಸಿಗೆ ಕಾರಣಗಳು :** ಸಾಮಾನ್ಯವಾಗಿ ಅನ್ಯಾಯ, ಆರ್ಥಿಕ ಅಸಮಾನತೆ, ಅಸೂಯೆ, ಅಪನಂಬಿಕೆ ಮತ್ತು ಅಹಂಕಾರ ಇವು ವೈಮನಸ್ಸಿನ ಕಾರಣಗಳು. ಈ ತೊಡಕುಗಳನ್ನು ಅಂತರ ರಾಷ್ಟ್ರೀಯ ವಿಶ್ವಶಾಂತಿ ಸ್ಥಾಪನೆಗಾಗಿ ಮೀಸಲಾದ ಸಂಸ್ಥೆಗಳಿಗೆ ವಹಿಸಿಕೊಟ್ಟರೆ ಸಮಸ್ಯೆಗಳನ್ನು ಪರಿಹರಿಸಬಹುದು.

**ರಾಷ್ಟ್ರಗಳ ಸಮುದಾಯ :** ಅಂತರ ರಾಷ್ಟ್ರೀಯ ಸಂಸ್ಥೆಗಳು ಪ್ರಜೆಗಳಿಗೆ ಅಗತ್ಯ ಆಹಾರ, ಆರೋಗ್ಯ ಮತ್ತು ವಿದ್ಯಾಭ್ಯಾಸವನ್ನು ವಿಶೇಷವಾಗಿ ಪ್ರಗತಿಪರ ದೇಶಗಳಿಗೆ ಕೊಡುವುದರ ಬಗ್ಗೆ ಗಮನಹರಿಸಬೇಕು. ಹೀಗೆ ದೇಶ ದೇಶಗಳ ಮಧ್ಯೆ ಇರುವ ತೀವ್ರ ಅಸಮಾನತೆಯನ್ನು ಕಿತ್ತೊಗೆಯಲು



**ಶಾಂತಿಯ ಲಕ್ಷಣ :** ಕೇವಲ ಯುದ್ಧರಹಿತ ಸ್ಥಿತಿ ಶಾಂತಿಯಲ್ಲ. ಶಾಂತಿ ಎಂಬುದು ದೇಶಗಳ ಶಕ್ತಿಯ ಸಮತೋಲನದಿಂದ ಉಗಮಿಸುತ್ತದೆ. ಅದು ನ್ಯಾಯ ನೀತಿಯಿಂದ ಬರಬೇಕು, ಅದರ ಫಲವಾಗಿರಬೇಕು. ಸೃಷ್ಟಿಕರ್ತರಾದ ದೇವರು ಮಾನವ ಸಮಾಜದಲ್ಲಿ ಒಂದು ಕ್ರಮವನ್ನು ಹೆಣೆದಿದ್ದಾರೆ. ನ್ಯಾಯನೀತಿಗಾಗಿ ಹಾತೊರೆಯುವ ಮಾನವರು ಈ ಕ್ರಮವನ್ನು ಕ್ರಿಯಾತ್ಮಕಗೊಳಿಸಿದಾಗ ಶಾಂತಿಯು ಉದ್ಭವಿಸುತ್ತದೆ. ಸಾರ್ವಜನಿಕ ಹಿತಾಸಕ್ತಿಗಳು ಆಗಿಂದಾಗ್ಗೆ ಬದಲಾಗುವುದರಿಂದ ಶಾಂತಿಯನ್ನು ಏಕಕಾಲದಲ್ಲಿ ಗಳಿಸಲಾಗದು. ಅದನ್ನು ನಿರಂತರವಾಗಿ ನಿರ್ಮಿಸುತ್ತಿರಬೇಕು.

ನೀತಿಯೇ ಶಾಂತಿಯ ತಳಹದಿಯಾಗಿದ್ದು ಪ್ರೀತಿಯಿಂದ ಅದು ಪೋಷಣೆಯನ್ನು ಪಡೆಯುತ್ತದೆ. ಮಾನವರು ಇತರ ಜನರ ಸಂಪ್ರದಾಯ ಮತ್ತು ಹಕ್ಕುಗಳನ್ನು ಗೌರವಿಸಬೇಕು. ಶಾಂತಿಯ ಅರಸರು ಮಾನವರಿಗಾಗಿ ಶಿಲುಬೆಯಲ್ಲಿ ಸತ್ತರು. ಮಾನವರ ಮೇಲಿನ ಪ್ರೀತಿಗಾಗಿ ಅವರನ್ನು ದೇವರೊಡನೆ ಸಂಧಾನಗೊಳಿಸಿದರು. ಈ ಸಂಬಂಧ ವ್ಯಾಟಿಕನ್ ಸಮ್ಮೇಳನ ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಪ್ರೀತಿ ಪೂರ್ವಕವಾಗಿ ಹಿಂಸಾ ಮಾರ್ಗವನ್ನು ತೊರೆದು ಹೋರಾಡುವವರನ್ನು ಹೊಗಳುತ್ತದೆ. ಅವರು ತಮ್ಮ ಕತ್ತಿಗಳನ್ನು ನೇಗಿಲ ಗುಳಗಳನ್ನಾಗಿಯೂ ತಮ್ಮ ಈಟಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು. ಜನಾಂಗವು ಜನಾಂಗದ ಮೇಲೆ ಕತ್ತಿಯನ್ನು ಎತ್ತುವುದಿಲ್ಲ. ಯಾರು ಯುದ್ಧಾಭ್ಯಾಸ ಮಾಡುವುದಿಲ್ಲ (ಯೆಶಾಯ 2:4).

**ಯುದ್ಧ ಭೀಕರತೆ :** ಆಧುನಿಕ ವೈಜ್ಞಾನಿಕ ಯುದ್ಧ ಹಿಂದಿನ ಕಾಲದ ಯುದ್ಧಕ್ಕಿಂತ ಅನಾಗರಿಕವಾದುದು. ಅದು ಹೊಸ ವಿಧದ ಮೋಸ, ವಂಚನೆ, ಹಿಂಸಾಚಾರ, ಗೆರಿಲ್ಲಾ ಕಾಳಗಗಳಿಂದ ಇನ್ನಷ್ಟು ಜಟಿಲವಾಗಿದೆ. ಈ ಬಗ್ಗೆ ನೈಸರ್ಗಿಕ ನಿಯಮಕ್ಕೆ ವಿರುದ್ಧವಾದ, ಅದಕ್ಕೆ ಅನುಗುಣವಲ್ಲದ ಎಲ್ಲ ಕಾರ್ಯಗಳನ್ನು ಈ ಸಮ್ಮೇಳನ ಖಂಡಿಸುತ್ತದೆ. ಜನಾಂಗ, ದೇಶ, ಅಲ್ಪ ಸಂಖ್ಯಾತ ಸಮುದಾಯಗಳನ್ನು ಕ್ರಮವಾಗಿ ನಿರ್ಮೂಲಗೊಳಿಸುವ ವಿಧಾನಗಳನ್ನು ಪ್ರತಿಬಂಧಿಸುತ್ತದೆ. ಇಂಥಹ ಆಜ್ಞೆಗಳ ಅಂಧ ಅನುಸರಣೆಯನ್ನು ನಿಷೇಧಿಸುವುದಲ್ಲದೆ ಅವುಗಳ ಭಯಭೀತಿಯನ್ನು ತೊರೆದು ಬಹಿರಂಗವಾಗಿ ವಿರೋಧಿಸುವವರ ಶ್ಲಾಘನೆ ಮಾಡುತ್ತದೆ.

ಯುದ್ಧದ ಭೀಕರತೆಯನ್ನು ತಗ್ಗಿಸಲು ಮಾಡಲಾಗುವ ಅಂತರ ರಾಷ್ಟ್ರೀಯ ಒಪ್ಪಂದಗಳು, ಗಾಯಾಳುಗಳ ಶುಶ್ರೂಷೆ, ಯುದ್ಧ ಖೈದಿಗಳ ಸಂರಕ್ಷಣೆ ಇತ್ಯಾದಿಗಳನ್ನು ಗೌರವಿಸತಕ್ಕದ್ದು ಮತ್ತು ಪರಿಸ್ಥಿತಿಯನ್ನು ಉತ್ತಮಗೊಳಿಸತಕ್ಕದ್ದು. ಮನಸ್ಸಾಕ್ಷಿಯ ಕಾರಣದಿಂದ ಸೈನ್ಯವನ್ನು ಸೇರಲು ನಿರಾಕರಿಸುವವರನ್ನು ಬಲಾತ್ಕರಿಸಬಾರದು. ಅಂಥವರನ್ನು ಇತರೆ ವಿಧಾನಗಳಲ್ಲಿ ಸಮಾಜ ಸೇವೆಯಲ್ಲಿ ತೊಡಗಿಸುವುದು. ಎಲ್ಲಾ ಶಾಂತಿಯ ಮಾರ್ಗಗಳು ವಿಫಲವಾದಾಗ ಸರ್ಕಾರಗಳು ಸ್ವರಕ್ಷಣೆಗಾಗಿ ಯುದ್ಧದಲ್ಲಿ ತೊಡಗಬೇಕಾಗಬಹುದು. ಆದರೆ ಇತರ ದೇಶಗಳನ್ನು ತನ್ನ ಸ್ವಾಧೀನ ತೆಗೆದುಕೊಳ್ಳುವುದು, ಈದಿಸೆಯಲ್ಲಿ ಬಲಪ್ರಯೋಗ ಮಾಡುವುದು ಅಕ್ಷಮ್ಯ ಅಪರಾಧ.

ಪ್ರಯತ್ನಿಸಬೇಕು. ಇಂದು ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಸಂಘ ಸಂಸ್ಥೆಗಳಲ್ಲಿ ಕ್ರಿಯಾತ್ಮಕವಾಗಿರುವ ಕ್ರೈಸ್ತ ಮತ್ತು ಕ್ರೈಸ್ತೇತ ಸೇವೆಸಲ್ಲಿಸುತ್ತಿರುವ ವ್ಯಕ್ತಿಗಳ ಬಗ್ಗೆ ಧರ್ಮಸಭೆ ಸಂತೋಷಿಸುತ್ತದೆ.

**ಆರ್ಥಿಕ ವಲಯದಲ್ಲಿ ಅಂತರ ರಾಷ್ಟ್ರೀಯ ಸಹಕಾರ :** ರಾಜಕೀಯ ವಿಷಯಗಳಲ್ಲಿ ಬಹುತೇಕ ದೇಶಗಳು ಸ್ವತಂತ್ರವಾಗಿದ್ದರೂ ಆರ್ಥಿಕ ವಿಷಯದಲ್ಲಿ ಅವು ಯಾವಾಗಲೂ ಪರಸ್ಪರ ಅವಲಂಬಿಯಾಗಿರಬೇಕಾಗುತ್ತದೆ. ಹಿಂದುಳಿದ ದೇಶಗಳು ಮುಂದುವರೆದ ದೇಶಗಳಿಂದ ನೆರವನ್ನು ಪಡೆಯಬೇಕಾಗುತ್ತದೆ. ಈ ಸಹಾಯ ತಾಂತ್ರಿಕ ನೆರವು, ದಾನಧರ್ಮ, ಸಾಲ, ಬಂಡವಾಳ ಹೂಡಿಕೆ ಆಗಿರಬಹುದು. ಇಂಥಹ ಅಂತರ ರಾಷ್ಟ್ರೀಯ ನೆರವು ತ್ವರಿತವಾಗಿ ಉದಾರ ಮನಸ್ಸಿನಿಂದ ಕೊಡಬೇಕು, ಪ್ರಾಮಾಣಿಕತೆಯಿಂದ ಪಡೆಯಬೇಕು ಮತ್ತು ಸೂಕ್ತ ರೀತಿಯಲ್ಲಿ ಉಪಯೋಗಿಸಬೇಕು.

**ಕೆಲವು ಉಪಯುಕ್ತ ಮಾರ್ಗಸೂಚಿಗಳು : ಆರ್ಥಿಕ ಸಹಕಾರದ ವಿಷಯದಲ್ಲಿ ಕೆಲವು ನಿಯಮಗಳು ಅವಶ್ಯಕ**

ಎ) ಪ್ರಗತಿಯತ್ತ ಸಾಗುತ್ತಿರುವ ದೇಶಗಳು ಅಂತಿಮವಾಗಿ ತಮ್ಮ ತಮ್ಮ ಸಂಪನ್ಮೂಲಗಳಲ್ಲೇ ನಂಬಿಕೆಯಿಟ್ಟು ಅವುಗಳನ್ನು ಅವಲಂಭಿಸಬೇಕು.

ಬಿ) ಮುಂದುವರೆದ ದೇಶಗಳು ಹಿಂದುಳಿದ ದೇಶಗಳಿಗೆ ಸಹಾಯ ಮಾಡುವುದು ತಮ್ಮ ಕರ್ತವ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು.

ಸಿ) ಅಂತರ ರಾಷ್ಟ್ರೀಯ ಸಮುದಾಯ ಪ್ರಗತಿಪರ ಕಾರ್ಯಗಳನ್ನು ಸಂಘಟಿಸಿ ನ್ಯಾಯನೀತಿಗೆ ಅನುಗುಣವಾಗಿ ಅನುಷ್ಠಾನಕ್ಕೆ ತರಬೇಕು.

ಡಿ) ಕೆಲವು ಸಂದರ್ಭಗಳಲ್ಲಿ ದೇಶಗಳ ಸಾಮಾಜಿಕ ಮತ್ತು ಆರ್ಥಿಕ ಯೋಜನೆಯಲ್ಲಿ ಸುಧಾರಣೆ ಅಗತ್ಯವೆನಿಸಬಹುದು.

ಇಂಥಹ ಸುಧಾರಣೆಗಳು ಮಾನವನ ಆಧ್ಯಾತ್ಮಿಕ ಸ್ವಭಾವ ಮತ್ತು ಪೂರ್ವ ಪರಂಪರೆಗೆ ವಿರುದ್ಧವಾಗಿದಂತೆ ಕಾಳಜಿ ವಹಿಸಬೇಕು.

**ಜನಸಂಖ್ಯಾ ಸಮಸ್ಯೆಗೆ ಅಂತರ ರಾಷ್ಟ್ರೀಯ ಸಹಕಾರ :** ಎಲ್ಲಾ ದೇಶಗಳು ಪ್ರತ್ಯೇಕವಾಗಿ ಶ್ರೀಮಂತ ರಾಷ್ಟ್ರಗಳು ಜಗತ್ತಿನಲ್ಲಿ ಬೆಳೆಯುತ್ತಿರುವ ಜನಸಂಖ್ಯೆಗೆ ಬೇಕಾದ ಆಹಾರವನ್ನು ಒದಗಿಸಲು ಕ್ರಮಗಳನ್ನು ಕಂಡು ಹಿಡಿಯಬೇಕು. ಕೆಲವು ದೇಶಗಳಲ್ಲಿ ಇದನ್ನು ಉತ್ತಮ ಸಾಮಾಜಿಕ ಸುಧಾರಣೆ, ಆಧುನಿಕ ಕೃಷಿ ವಿಧಾನ ಮತ್ತು ಜಮೀನಿನ ಸೂಕ್ತ ಹಂಚಿಕೆಯ ಮುಖಾಂತರ ಸಾಧಿಸಲು ಸಾಧ್ಯವಾಗುತ್ತದೆ. ಬೆಳೆಯುತ್ತಿರುವ ಜನ ಸಂಖ್ಯೆಯನ್ನು ತಡೆಯುವುದರಲ್ಲಿ, ಮಕ್ಕಳ ಸಂಖ್ಯೆಯನ್ನು ನಿಯಂತ್ರಿಸುವುದರಲ್ಲಿ ವೈಜ್ಞಾನಿಕ ವಿಧಾನಗಳನ್ನು ಕಂಡುಹಿಡಿಯಬೇಕು. ಆದರೆ ಅವು ಧರ್ಮಸಭೆಯ ನೈತಿಕ ನಿಯಮಗಳಿಗೆ ಅನುಸಾರವಾಗಿದ್ದರೆ ಈ ಪರಿಹಾರಗಳನ್ನು ಪ್ರೋತ್ಸಾಹಿಸುತ್ತದೆ. ಅಷ್ಟು ಮಾತ್ರವಲ್ಲದೆ ಜನ್ಮಧಾತರು ತಮಗೆ ಎಷ್ಟು ಮಕ್ಕಳು ಅಗತ್ಯ ಎಂಬುದನ್ನು ನಿರ್ಧರಿಸುವುದು ಅಗತ್ಯ. ಅವರ ಹಕ್ಕನ್ನು ಈ ಸಮ್ಮೇಳನ ಅನುಮೋದಿಸುತ್ತದೆ.



**ಪರಸ್ಪರ ಸಹಕಾರದ ಬಗ್ಗೆ ಕ್ರೈಸ್ತರ ಕರ್ತವ್ಯ :** ದಾರಿದ್ರ್ಯ ಮತ್ತು ಪರ ಪ್ರೀತಿ ಭಾವನೆ ಇವು ಪ್ರಭು ಕ್ರಿಸ್ತರ ಧರ್ಮಸಭೆಯ ಮಹಿಮೆ ಮತ್ತು ಸಾಕ್ಷ್ಯ. ಆದುದರಿಂದ ಕಥೋಲಿಕರು ಇತರೆ ಕ್ರೈಸ್ತ ಸಹೋದರರೊಡಗೂಡಿ ಅಂತರ ರಾಷ್ಟ್ರೀಯ ಸಂಸ್ಥೆಗಳೊಂದಿಗೆ ದುಡಿಯಬೇಕು. ಅವರು ಜನರ ನೋವನ್ನು ನೀಗಿಸಲು, ಆರ್ಥಿಕ ಸಮೃದ್ಧಿಯನ್ನು ಅಧಿಕರಿಸಲು ಮತ್ತು ಮಾನವ ಐಕ್ಯ ಸೌಹಾರ್ದ ಪೋಷಿಸಲು ಜೊತೆಗೂಡಬೇಕು.

**ಧರ್ಮಸಭೆಯ ಕ್ರಿಯಾತ್ಮಕ ಪ್ರತ್ಯಕ್ಷತೆ :** ಧರ್ಮಸಭೆಯು ದೇವರ ಮತ್ತು ಪ್ರಕೃತಿಯ ನಿಯಮಗಳ ಬಗ್ಗೆ ನೈಜ್ಯ ಜ್ಞಾನವನ್ನು ಪಸರಿಸುತ್ತದೆ. ಹೀಗೆ ಜಗತ್ತಿನಲ್ಲಿ ಶಾಂತಿಯನ್ನು ಪೋಷಿಸುತ್ತದೆ ಮತ್ತು ಜನಜನರ ಮಧ್ಯೆ ಸೋದರತ್ವವನ್ನು ಬೆಳೆಸುತ್ತದೆ. ಈ ಕಾರ್ಯವನ್ನು ಧರ್ಮಸಭೆಯು ದೇಶಗಳ ಸಮುದಾಯದ ಮಧ್ಯೆ ತನ್ನ ಅಧಿಕೃತ ಪ್ರತಿನಿಧಿಗಳ ಮುಖಾಂತರ ಮತ್ತು ಎಲ್ಲ ಕ್ರೈಸ್ತರ ಸಹಕಾರದಿಂದ ಸಾಧಿಸಲು ಶಕ್ತವಾಗುತ್ತದೆ. ಈ ಕಾರ್ಯ ಯಶಸ್ಸು ಕಾಣಬೇಕಾದರೆ ಭಕ್ತ ವಿಶ್ವಾಸಿಗಳು ತಮ್ಮ ತಮ್ಮ ವಿಭಾಗದಲ್ಲಿರುವ ಅಂತರ ರಾಷ್ಟ್ರೀಯ ಸಮುದಾಯದೊಂದಿಗೆ ಜನರು ಸಹಕರಿಸುವಂತೆ ಮಾಡಬೇಕು. ಅವರು ತಮ್ಮ ಪ್ರಭಾವವನ್ನು ಬೀರಬೇಕಾದರೆ ಅವರಿಗೆ ಅಗತ್ಯ ಧಾರ್ಮಿಕ ಮತ್ತು ನಾಗರಿಕ ಶಿಕ್ಷಣ ನೀಡಬೇಕು.

**ಅಂತರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಕ್ರೈಸ್ತರ ಪಾತ್ರ :** ಪ್ರಸ್ತುತ ಅಂತರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಕ್ರೈಸ್ತರು ಭಾಗವಹಿಸಬೇಕು. ಇವುಗಳ ಜೊತೆಗೆ ಈಗಿರುವ ಕಥೋಲಿಕ ಅಂತರ ರಾಷ್ಟ್ರೀಯ ಸಂಸ್ಥೆಗಳನ್ನು ಬಲಪಡಿಸಬೇಕು. ಅಷ್ಟು ಮಾತ್ರವಲ್ಲದೆ ಶಾಂತಿ ಸೌಹಾರ್ದವನ್ನು ಅರಸುವ ಬೇರ್ಪಟ್ಟ ಕ್ರೈಸ್ತ ಸಹೋದರರೊಡನೆ ಕಥೋಲಿಕರು ಸಹಕರಿಸುವುದು ಅಪೇಕ್ಷಣೀಯ. ಹಿಂದುಳಿದ ದೇಶಗಳಲ್ಲಿ ಪ್ರಗತಿಯನ್ನು ಸಾಧಿಸಲು ಮತ್ತು ಅಂತರ ರಾಷ್ಟ್ರೀಯ ನ್ಯಾಯನೀತಿಯನ್ನು ಪ್ರೋತ್ಸಾಹಿಸಲು ಪ್ರತ್ಯೇಕ ಸಂಸ್ಥೆ ಇರುವುದು ಅಗತ್ಯ. ಕಥೋಲಿಕರಿಗೆ ಉತ್ತೇಜನವನ್ನೀಯುವ ಈ ಸಂಸ್ಥೆಯ ಸ್ಥಾಪನೆಯಾಗಬೇಕು ಎಂಬುದು ವ್ಯಾಟಿಕನ್ ಸಮ್ಮೇಳನದ ಅಭಿಪ್ರಾಯ.

❖ ❖ ❖ ❖ ❖